₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಸೋಮವಾರ 03.03.2025 ಸಂಪುಟ: 10 ಸಂಚಿಕೆ: 48 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮೂರನೇ ಬಾರಿ ರಣಜಿ ಗೆದ್ದ ವಿದರ್ಭ

ಸೊಂಪಾದ ಪುಟಗಳು

ಡಿಕೆಶಿ ಅಂದ್ರೆ ಅಮಿತ್ ಶಾ ಅವರಿಗಿಷ್ಟ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ದುಡ್ಡೇ ದೊಡ್ಡಪ್ಪ; ಜಾಹೀರಾತು ಅದರಪ್ಪ!
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಎಷ್ಟೇ ನಿಧಾನವಾಗಿಯಾದರೂ ಪರವಾಗಿಲ್ಲ, ಯಾರಾದರೂ ನಡೆಯುತ್ತಿದ್ದಾರೆ ಅಂದ್ರೆ ಅವರು ತಡವಾಗಿಯಾದರೂ ಗುರಿ ತಲುಪುತ್ತಾರೆ. ಕೆಲವು ಸಲ ಜೀವನದಲ್ಲಿ ವೇಗಕ್ಕಿಂತ ಕ್ರಿಯೆ ಮುಖ್ಯ.

ವಕ್ರತುಂಡೋಕ್ತಿ

ಕೆಲವು ಸಲ ನಮ್ಮ ಪಾಲಿಗೆ ಜೀವನ ಸೂಪ್ ಆಗಿದೆ ಎಂದು ಸಮಾಧಾನಪಡುತ್ತೇವೆ. ಆದರೆ ಆಗ ನಾವು ಫೋರ್ಕ್ ಆಗಿರುತ್ತೇವೆ.

ಉಕ್ರೇನ್‌ಗೆ ಬ್ರಿಟನ್ ಬೆಂಬಲ ಅಮೆರಿಕಕ್ಕೆ ಟಾಂಗ್

ಲಂಡನ್: ಅಮೆರಿಕ ಜತೆಗಿನ ದ್ವಿಪಕ್ಷೀಯ ಸಂಬಂಧ ಹಳಸಿದ ಬೆನ್ನಲ್ಲೇ ಉಕ್ರೇನ್ ನೆರವಿಗೆ ಧಾವಿಸಿರುವ ಬ್ರಿಟನ್, 226 ಕೋಟಿ ಪೌಂಡ್ ಸಾಲ ನೀಡುವ ಐತಿಹಾಸಿಕ ಒಪ್ಪಂದಕ್ಕೆ ಸಹಿ ಮಾಡಿದೆ. ಅಮೆರಿಕ ನ್ಯಾಟೋ ಸಂಘಟನೆಯಿಂದ ಹೊರಬರಲು ಚಿಂತನೆ ನಡೆಸಿರುವಂತೆಯೇ, ಐರೋಪ್ಯ ರಾಷ್ಟ್ರಗಳು ದೊಡ್ಡಣ್ಣನ ವಿರುದ್ಧ ತಿರುಗಿ ಬೀಳಲು ಮುಂದಾಗಿರುವ ಸೂಚನೆ ಇದು ಎಂದು ವಿಶ್ಲೇಷಿಸಲಾಗಿದೆ. ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್ಸ್ಕಿ ಲಂಡನ್‌ನಲ್ಲಿ ಮಾತುಕತೆ ನಡೆಸುತ್ತಿದ್ದಂತೆಯೇ ವರ್ಚುವಲ್ ಸಮಾರಂಭದಲ್ಲಿ ಉಭಯ ದೇಶಗಳ ಹಣಕಾಸು ಸಚಿವರಾದ ರಚೆಲ್ ರೀವ್ ಮತ್ತು ಸೆರ್ಗೀ ಮರ್ಚೆಂಕೊ ಅವರು ಈ ಸಾಲ ಒಪ್ಪಂದವನ್ನು ಅಂತಿಮಗೊಳಿಸಿದರು.

ಮಾತಂದ್ರೆ ಮಾತು

ಸಿದ್ದರಾಮಯ್ಯನವರನ್ನು ನೋಡಿದರೆ ನಮಗೆ ಅಯ್ಯೋ ಪಾಪ ಅನಿಸುತ್ತೆ. ಗ್ಯಾರೆಂಟಿಗಳಿಂದ ತಮ್ಮ ಕೈ ತಾವೇ ಕಟ್ಟಿ ಹಾಕಿಕೊಂಡಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಸರಕಾರ ವಿದ್ಯುತ್ ಬಿಲ್ ಕೂಡ ಕಟ್ಟಲು ಸಾಧ್ಯವಿಲ್ಲದ ಪರಿಸ್ಥಿತಿಗೆ ಬಂದು ನಿಂತಿದೆ. ವಿವಿಧ ಇಲಾಖೆಗಳು 6,000 ಕೋಟಿ ರೂಪಾಯಿ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿವೆ. ಇದು ಸರಕಾರದ ಆಡಳಿತ ವೈಖರಿಗೆ ಹಿಡಿದ ಕೈಗನ್ನಡಿ.

- ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ

ಫನ್‌ತರಂಗ

- ರಘುಪತಿ ಶೃಂಗೇರಿ -



ಬೆಳಿಗ್ಗೆ ಜಂಟಿ ಸದನವನ್ನು ಉದ್ದೇಶಿಸಿ ರಾಜ್ಯಪಾಲರ ಭಾಷಣ, ಆಡಳಿತ ಪಕ್ಷ, ಪ್ರತಿಪಕ್ಷ ಮುಖಾಮುಖಿಗೆ ಸಜ್ಜು, ಮಾರ್ಚ್ 7ಕ್ಕೆ ಬಜೆಟ್ ಮಂಡನೆ

ಇಂದಿನಿಂದ ಬಜೆಟ್ ಅಧಿವೇಶನ ಆರಂಭ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ವಿಧಾನ ಮಂಡಲದ ಜಂಟಿ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಭಾಷಣ ಮಾಡುವ ಮೂಲಕ 2025ನೇ ಸಾಲಿನ ಮುಂಗಡಪತ್ರ ಅಧಿವೇಶನಕ್ಕೆ ಸೋಮವಾರ ಚಾಲನೆ ಸಿಗಲಿದೆ.

ಸೋಮವಾರ ಉಭಯ ಸದನಗಳ ಕಲಾಪ ರಾಜ್ಯಪಾಲರ ಭಾಷಣ ಹಾಗೂ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸುವ ನಿರ್ಣಯಕ್ಕೆ ಸೀಮಿತವಾಗಲಿದ್ದು ಮಂಗಳವಾರದಿಂದ ಆಡಳಿತ-ಪ್ರತಿಪಕ್ಷಗಳ ನಡುವೆ ವಾಕ್ಸಮರ ನಡೆಸುವ ಸಾಧ್ಯತೆಯಿದೆ. ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 16ನೇ ಬಜೆಟ್ ಅನ್ನು ಮಂಡಿಸಲಿದ್ದಾರೆ.

ಪ್ರಮುಖವಾಗಿ ಬೆಲೆ ಏರಿಕೆ, ಗ್ಯಾರಂಟಿ ಯೋಜನೆಯ ಹಣ ಬಿಡುಗಡೆಯಲ್ಲಿ ವಿಳಂಬ ಸೇರಿದಂತೆ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ಸರಕಾರದ ವಿರುದ್ಧ ವಾಕ್ಸಮರ ನಡೆಸಲು ಪ್ರತಿಪಕ್ಷಗಳು ಸಜ್ಜಾಗಿದ್ದರೆ, ಕೋವಿಡ್ ಹಗರಣ, ಕೇಂದ್ರದಿಂದ ಸಿಗದ ಅನುದಾನ ಸೇರಿದಂತೆ ವಿವಿಧ ವಿಷಯಗಳು ಆಡಳಿತ ಪಕ್ಷದ ಬತ್ತಳಿಕೆಯಲ್ಲಿವೆ. ಇದರೊಂದಿಗೆ ಕಳೆದ ಅಧಿವೇಶನದ ಅವಧಿಯಲ್ಲಿ ಸಿ.ಟಿ.ರವಿ-ಲಕ್ಷ್ಮೀ ಹೆಬ್ಬಾಳ್ಕರ್ ನಡುವಿನ 'ಅಶ್ಲೀಲ ಪದ' ಬಳಕೆಯ ಫೈಟ್ ವಿಧಾನಪರಿಷತ್‌ನಲ್ಲಿ ಮತ್ತೆ ಮುಂದುವರೆಯುವ ಸಾಧ್ಯತೆಯಿದೆ. ಸಭಾಪತಿ ಈ ವಿವಾದವನ್ನು ಸೌಹಾರ್ದದಿಂದ ಮುಗಿಸುವ ಇಂಗಿತ ವ್ಯಕ್ತಪಡಿಸಿದದ್ದರೂ, ಆಡಳಿತ ಪಕ್ಷದಿಂದ ಇದಕ್ಕೆ ಪೂರಕ ಸ್ಪಂದನೆ ಸಿಕ್ಕಿಲ್ಲ.

→ 4

ಅಧಿವೇಶನಕ್ಕೆ ಮುನ್ನಾ ದಿನ ವಿಧಾನಸೌಧ ಮೊದಲ ಮಹಡಿಯನ್ನು ಕಂಡು ಸಂಭ್ರಮಿಸಿದ ಜನತೆ.

ಕೇಂದ್ರ ನಡೆ ವಿರುದ್ಧ ಟೀಕೆ?

ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿರುವ ಥಾವರ್ ಚಂದ್ ಗೆಹ್ಲೋಥ್ ಅವರ ಭಾಷಣದಲ್ಲಿ ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯಗಳನ್ನು ಪ್ರಸ್ತಾಪಿಸುವ ಸಾಧ್ಯತೆಯಿದೆ. ಕೇಂದ್ರದ ವಿರುದ್ಧ ಟೀಕಿಸುವ ಜತೆಗೆ ರಾಜ್ಯ ಸರಕಾರ ಗ್ಯಾರಂಟಿ ಯೋಜನೆಗಳನ್ನು ಸಮರ್ಥಿಸಿಕೊಳ್ಳುವ ಅಂಶಗಳನ್ನು ಭಾಷಣದಲ್ಲಿ ಸೇರಿಸುವ ಮೂಲಕ, ಪ್ರತಿಪಕ್ಷ ಬಿಜೆಪಿಗೆ ಟಾಂಗ್ ಕೊಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಫೈನಾನ್ಸ್ ವಿಧೇಯಕ ಮಂಡನೆಗೆ ಸಿದ್ಧ

ಸುಗ್ರೀವಾಜ್ಞೆ ಮೂಲಕ ಜಾರಿಗೊಂಡಿರುವ ಮೈಕ್ರೋ ಫೈನಾನ್ಸ್ ವಿಧೇಯಕ, ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜಿಸುವ ಗ್ರೇಟರ್ ಬೆಂಗಳೂರು ವಿಧೇಯಕ ಸೇರಿದಂತೆ ಹಲವು ವಿಧೇಯಕಗಳು ಬಜೆಟ್ ಅಧಿವೇಶನದಲ್ಲಿ ಮಂಡನೆಯಾಗಲಿವೆ. ಇದರ ಜತೆಗೆ ರಾಜ್ಯಪಾಲರು ವಾಪಸ್ ಕಳುಹಿಸಿರುವ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ವಿಧೇಯಕ, ಸಹಕಾರ ಸಂಘಗಳ ವಿಧೇಯಕ ಸೇರಿದಂತೆ ಕೆಲ ವಿಧೇಯಕಗಳನ್ನು ಮರು ಮಂಡನೆ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಸಿಟ್ಟಿಂಗ್ ಬಜೆಟ್

ಮಂಡಿ ಚಿಪ್ಪು ನೋವಿನಿಂದ ಬಳಲುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೆಚ್ಚು ಹೊತ್ತು ನಿಲ್ಲುವುದಕ್ಕೆ ಈಗಲೂ ಸಮಸ್ಯೆಯಿರುವುದರಿಂದ ಇದೇ ಮೊದಲ ಬಾರಿಗೆ ಕುಳಿತು ಕೊಂಡೇ ಬಜೆಟ್ ಮಂಡಿಸಲಿದ್ದಾರೆ ಎನ್ನಲಾಗಿದೆ. ಇದರೊಂದಿಗೆ ಸಿಎಂ ಸಿದ್ದರಾಮಯ್ಯ ಅವರಿಗೆ ವಿಧಾನಸೌಧದಲ್ಲಿ ವಿಶೇಷ ರ‍್ಯಾಂಪ್ ಸಿದ್ಧಗೊಳ್ಳುತ್ತಿದೆ. ಕಳೆದ ಅನೇಕ ದಿನಗಳಿಂದ ಮಂಡಿ ಚಿಪ್ಪು ನೋವಿನಿಂದ ಬಳಲುತ್ತಿರುವ ಸಿದ್ದರಾಮಯ್ಯ ಅವರಿಗೆ ವೈದ್ಯರು ಆರು ವಾರಗಳ ವಿಶ್ರಾಂತಿಗೆ ಸೂಚಿಸಿದ್ದಾರೆ.

ವಿಧಾನಸೌಧದ ಮುಂದೆ ಕಳೆಗಟ್ಟಿದ ಅಕ್ಷರ ಜಾತ್ರೆ

ಪುಸ್ತಕ ಪ್ರಿಯರ ಬಲಪ್ರದರ್ಶನ

ಕೊನೆಯ ದಿನ ಪುಸ್ತಕ ಮೇಳಕ್ಕೆ ಜನಸಾಗರ, ವಿಧಾನಸೌಧದಲ್ಲಿ ಹೊಸ ಕಲರವ

- ಸಹಸ್ರೋಪಾದಿಯಲ್ಲಿ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು
- ಪುಸ್ತಕ ಮೇಳ ವೀಕ್ಷಿಸಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್
- ವಿಧಾನಸೌಧದ ಒಳಹೊಕ್ಕು ಸಂಭ್ರಮಿಸಿದ ಸಾರ್ವಜನಿಕರು

ಬೆಂಗಳೂರು: ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರ ವಿಶೇಷ ಆಸಕ್ತಿಯಿಂದ ಇದೇ ಮೊದಲ ಬಾರಿಗೆ ವಿಧಾನ ಸೌಧದ ಆವರಣದಲ್ಲಿ ಆಯೋಜಿಸಿದ್ದ ಪುಸ್ತಕದ ಮೇಳ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದ್ದು, ಭಾನುವಾರ ಹಿಂದೆಂದೂ ಕಾಣದ ಜನಸಾಗರಕ್ಕೆ ಶಕ್ತಿಸೌಧ ಸಾಕ್ಷಿಯಾಯಿತು.

ಐದು ದಿನಗಳ ಪುಸ್ತಕ ಮೇಳ ಸೋಮವಾರ ಕೊನೆಯಾದರೂ, ಸಾರ್ವಜನಿಕ ವೀಕ್ಷಣೆಗೆ ಭಾನುವಾರ ಅಂತಿಮ ದಿನವಾಗಿತ್ತು. ಇದರೊಂದಿಗೆ ವಿಧಾನಸಭೆಯ ಮೊದಲ ಮಹಡಿಯನ್ನು ವೀಕ್ಷಿಸಲು ಸಾರ್ವಜನಿಕರಿಗೆ ಅವಕಾಶ ನೀಡಿದ್ದರಿಂದ, ಸಾವಿರಾರು ಸಂಖ್ಯೆಯಲ್ಲಿ ಜನರು ವಿಧಾನಸೌಧ ಪ್ರವೇಶಿಸಲು ಮುಗಿಬಿದ್ದರು. ಇದರಿಂದ ಭಾರಿ ಜನದಟ್ಟಣೆ ಉಂಟಾದರೂ, ಎಲ್ಲರಿಗೂ ವಿಧಾನಸಭೆಯನ್ನು ವೀಕ್ಷಿಸಲು ಸಚಿವಾಲಯ ಅವಕಾಶ ನೀಡಿದ್ದು ಸಾರ್ವಜನಿಕ ಪ್ರಶಂಸೆಗೆ ಕಾರಣವಾಯಿತು. ಪುಸ್ತಕ ಪ್ರಿಯರು ಪುಸ್ತಕ ಮೇಳದಲ್ಲಿ ತಮಗೆ ಬೇಕಾದ ಪುಸ್ತಕಗಳನ್ನು ಖರೀದಿಸಿ ಖುಷಿಪಟ್ಟರೆ, ಕುಟುಂಬಸ್ಥರು, ಪ್ರವಾಸಿಗರು ಇದೇ ಮೊದಲ ಬಾರಿಗೆ ಅಮೃತ ಶಿಲೆಯಲ್ಲಿ ಕಟ್ಟಿದ ವಿಧಾನಸೌಧದ ಸೌಂದರ್ಯವನ್ನು ಹತ್ತಿರದಿಂದ ಕಂಡು ಸಂಭ್ರಮಿಸಿದರು. ಯುವ ಜೋಡಿಗಳು ಸೆಲ್ಫಿ ತೆಗೆದುಕೊಂಡು ಖುಷಿಪಟ್ಟರು. ಆದರೆ ನಿರೀಕ್ಷೆಗೂ ಮೀರಿದ ಜನಸಾಗರವನ್ನು ನಿಯಂತ್ರಿಸಲು ಭದ್ರತಾ ಸಿಬ್ಬಂದಿ ಹರಸಾಹಸಪಟ್ಟರು.

ವರುಣ್ ಮ್ಯಾಜಿಕ್ 5/42
ವಿರಾಟ್‌ಗೆ 300ನೇ ಪಂದ್ಯ
ಸ್ಪಿನ್‌ಗೆ ಉರುಳಿದ ಕಿವೀಸ್

ಭಾರತ	ಕಿವೀಸ್
249/9	205
50 ಓವರ್	45.3 ಓವರ್

- ಭಾರತಕ್ಕೆ ಕಿವೀಸ್ ಎದುರು 44 ಅಂತರದ ರನ್ ಜಯ
- 79 ರನ್ (98 ಬಾಲ್) ಬಾರಿಸಿ ಭಾರತಕ್ಕೆ ಶ್ರೇಯಸ್ ಆಸರೆ
- 42 ರನ್ ನೀಡಿ 5 ವಿಕೆಟ್ ಪಡೆದ ವರುಣ್ ಚಕ್ರವರ್ತಿ
- ಮಂಗಳವಾರ ಭಾರತ-ಆಸ್ಟ್ರೇಲಿಯಾ ಸೆಮಿಫೈನಲ್ ಪಂದ್ಯ

ವಿಧಾನಸೌಧಕ್ಕೂ ಆಸ್ತಿ ತೆರಿಗೆ ಬಾಕಿ ನೋಟಿಸ್

ಬೆಂಗಳೂರು: ಆಸ್ತಿ ತೆರಿಗೆ ಮತ್ತು ವಿದ್ಯುತ್ ಬಿಲ್ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಸರಕಾರಿ ಕಟ್ಟಡಗಳಿಗೆ ಬಿಬಿಎಂಪಿ ನೋಟಿಸ್ ಜಾರಿ ಮಾಡಿದ್ದು, ವಿಧಾನಸೌಧ, ವಿಕಾಸ ಸೌಧ, ರಾಜಭವನ ಸೇರಿದಂತೆ 258 ಸರಕಾರಿ ಕಟ್ಟಡಗಳಿಗೆ ನೋಟಿಸ್ ನೀಡಲಾಗಿದೆ.

ರಾಜ್ಯಾದ್ಯಂತ ಬಹುತೇಕ ಸರಕಾರಿ ಇಲಾಖೆಗಳು 8 ಸಾವಿರ ಕೋಟಿ ರು. ವಿದ್ಯುತ್ ಬಿಲ್ ಬಾಕಿಯುಳಿಸಿಕೊಂಡಿದ್ದು, ಜತೆಗೆ ತೆರಿಗೆ ಬಾಕಿಯುಳಿಸಿಕೊಂಡಿದೆ. ವಿಧಾನಸೌಧ, ವಿಕಾಸಸೌಧ, ರಾಜಭವನ ಸೇರಿದಂತೆ ಅನೇಕ ಸರ್ಕಾರಿ ಕಟ್ಟಡಗಲು ಕೋಟಿಗಟ್ಟಲೆ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿವೆ. ಈಗಾಗಲೇ ನೋಟಿಸ್ ನೀಡಲಾಗಿದೆ. ಅವುಗಳಲ್ಲಿ ಕೆಲ ಕಟ್ಟಡಗಳು 17 ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಆಯಾ ಇಲಾಖೆ ಮುಖ್ಯಸ್ಥರಿಗೆ ತೆರಿಗೆ ಪಾವತಿಸುವಂತೆ ಪಾಲಿಕೆ ನೋಟಿಸ್ ನೀಡಿದೆ. ತೆರಿಗೆ ಪಾವತಿ ಮಾಡದಿದ್ದರೆ ಈ ಬಗ್ಗೆ ಸರಕಾರದ ಗಮನಕ್ಕೆ ತರಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಚುನಾವಣೆ ಸಮಯದಲ್ಲಿ ಎಚ್ಚೆತ್ತುಕೊಳ್ಳಬೇಡಿ: ಎಚ್‌ಡಿಕೆ ಎಚ್ಚರಿಕೆ, ಜಿಟಿಡಿ ಗೈರು

ಜೆಡಿಎಸ್ ಬಲವರ್ಧನೆಗೆ ಗೌಡರ ಪಣ

ಬೆಂಗಳೂರು: ಚುನಾವಣೆ ಬಂದಾಗ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ಮೊದಲು ಈಗಿನಿಂದಲೇ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳಿ. ಪಕ್ಷದ ಸದಸ್ಯತ್ವ, ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಗೆ ಈಗಿನಿಂದಲೇ ತಯಾರಿ ಆರಂಭಿಸಿ ಎಂದು ಜೆಡಿಎಸ್ ನಾಯಕರಿಗೆ ದೇವೇಗೌಡರು, ಕೇಂದ್ರ ಸಚಿವ ಕುಮಾರಸ್ವಾಮಿ ಸೂಚನೆ ನೀಡಿದ್ದಾರೆ.

ಭಾನುವಾರ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಪಕ್ಷದ ದ್ವೈವಾರ್ಷಿಕ ಚುನಾವಣೆ, ಸದಸ್ಯತ್ವ ಅಭಿಯಾನ ಹಾಗೂ ಮುಂಬರುವ ತಾಲ್ಲೂಕು-ಜಿಲ್ಲಾ ಪಂಚಾಯಿತಿ ಚುನಾವಣೆ, ವಿಧಾನಮಂಡಲ ಕಲಾಪದಲ್ಲಿ ಅನುಸರಿಸಬೇಕಾದ ಕಾರ್ಯತಂತ್ರಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಯಿತು.

→ 4

ನಾಯಕನಾಗುವ ಕನಸು ಕಟ್ಟಿಕೊಂಡರೆ ಸಾಲದು. ಅದಕ್ಕೆ ಮೂಲ ಬಂಡವಾಳ ಎಂದರೆ ಪಕ್ಷ ಸಂಘಟನೆ. ನಿಮ್ಮ ಕ್ಷೇತ್ರ, ಮತಗಟ್ಟೆ, ತಾಲೂಕು, ಜಿಲ್ಲಾ ಕೇಂದ್ರಗಳಲ್ಲಿ ಸಂಘಟನೆಯನ್ನು ಬಲವಾಗಿ ಕಟ್ಟಿ. ಸದಸ್ಯತ್ವ ಅಭಿಯಾನವನ್ನು ವೇಗವಾಗಿ ನಡೆಸಬೇಕು. ಲೋಕಸಭೆ, ವಿಧಾನಸಭೆ ಅಥವಾ ಇನ್ನಾವುದೇ ಚುನಾವಣೆ ಬಂದಾಗ ಎಚ್ಚೆತ್ತುಕೊಂಡರೆ ಉಪಯೋಗ ಇಲ್ಲ. ಈಗಲೇ ನಾವು ಸಂಘಟನೆಗೆ ಶಕ್ತಿ ತುಂಬಿ ಜನರ ಜತೆ ನಿಂತರೆ ಚುನಾವಣೆಯಲ್ಲಿ ಪ್ರಬಲ ಪೈಪೋಟಿ ನೀಡಬಹುದು. ಇಲ್ಲವಾದರೆ ನಮ್ಮ ಶ್ರಮ ವ್ಯರ್ಥವಾಗುತ್ತದೆ.
- ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಕಾಪು ಮಾರಿಗುಡಿ ಬ್ರಹ್ಮಕಲಶೋತ್ಸವದಲ್ಲಿ ಭಾಗಿ, ಬಿಜೆಪಿ ವಿರುದ್ಧ ಕಿಡಿ

ಕಾಂಗ್ರೆಸ್ ಒಗ್ಗಟ್ಟಿನ ಮನೆ: ಡಿಕೆಶಿ

ಬೆಂಗಳೂರು: ಬಿಜೆಪಿಯವರು ಮೊದಲು ತಮ್ಮ ಮನೆಯನ್ನು ಕ್ರಮವಾಗಿ ಇಟ್ಟುಕೊಳ್ಳುವುದನ್ನು ನೋಡಲಿ. ಕಾಂಗ್ರೆಸ್‌ನ ಕೆಲವು ಶಾಸಕರು ಹೇಳಿರುವಂತೆ ಹಲವಾರು ಬಿಜೆಪಿ ಶಾಸಕರು ನಮ್ಮೊಂದಿಗೆ ಸಂಪರ್ಕ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ನಾನು ಆ ಬಗ್ಗೆ ಚರ್ಚಿಸಲು ಬಯಸುವುದಿಲ್ಲ. ಬಿಜೆಪಿ ಮುರಿದ ಮನೆಯಾಗಿದ್ದರೆ ಕಾಂಗ್ರೆಸ್ ಒಗ್ಗಟ್ಟಿನ ಮನೆ ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹೇಳಿದರು.

ಉಡುಪಿಯ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ ಮಾರಿಯಮ್ಮ ದೇಗುಲದ ಬ್ರಹ್ಮಕಲ ಶೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಲು, ಇಲ್ಲಿನ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರು, ಮಹಾಶಿವರಾತ್ರಿ ದಿನ ಇಶಾ ಫೌಂಡೇಶನ್ ಕಾರ್ಯಕ್ರಮದಲ್ಲಿ ಸದ್ಗುರು ಜಗ್ಗಿ ವಾಸುದೇವ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜತೆ ವೇದಿಕೆ ಹಂಚಿಕೊಂಡ ಬಗ್ಗೆ ಕೇಳಿಬಂದಿರುವ ಟೀಕೆಗಳಿಗೆ ಪ್ರತಿಕ್ರಿಯೆ ನೀಡಿದರು. ಸದ್ಗುರು ಕರ್ನಾಟಕದವರು. ಅವರು ಕಾವೇರಿ ನೀರಿನ ಕಾರಣಕ್ಕಾಗಿ ಹೋರಾಡುತ್ತಿದ್ದಾರೆ. ಅವರು ಮನೆಗೆ ಬಂದು ನನಗೆ ವೈಯಕ್ತಿಕವಾಗಿ ಆಹ್ವಾನ ನೀಡಿದರು.



→ 4

ಹಿಮಪಾತ ದುರಂತ: ಸಾವಿನ ಸಂಖ್ಯೆ 8ಕ್ಕೆ

ಚಮೋಲಿ: ಉತ್ತರಾಖಂಡದ ಚಮೋಲಿ ಜಿಲ್ಲೆಯ ಮಾನಾ ಗ್ರಾಮದ ಬಳಿಯ ಗಡಿ ರಸ್ತೆ ಸಂಸ್ಥೆ (ಬಿಆರ್‌ಒ) ಶಿಬಿರದಲ್ಲಿ ಭಾರಿ ಹಿಮಪಾತ ಸಂಭವಿಸಿ 54 ಕಾರ್ಮಿಕರು ಹಿಮದ ಕೆಳಗೆ ಹೂತು ಹೋಗಿದ್ದ ಪ್ರಕರಣದಲ್ಲಿ ರಕ್ಷಣಾ ತಂಡಗಳು ಅವರಲ್ಲಿ 46 ಕಾರ್ಮಿಕರನ್ನು ರಕ್ಷಿಸಿದ್ದರೂ, 8 ಕಾರ್ಮಿಕರು ದುರಂತದಲ್ಲಿ ಸಾವನ್ನಪ್ಪಿದ್ದಾರೆ. ಭಾನುವಾರ ಕೂಡ ಹುಡುಕಾಟ ಮುಂದುವರಿದಿತ್ತು. ಸುಧಾರಿತ ತಂತ್ರಜ್ಞಾನ ಮತ್ತು ವೈಮಾನಿಕ ಬೆಂಬಲವನ್ನು ಬಳಸಿಕೊಂಡು ಏಜೆನ್ಸಿಗಳು ಶವಗಳನ್ನು ಪತ್ತೆಹಚ್ಚಿದ್ದು, ಹಿಮಪಾತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 8ಕ್ಕೆ ಏರಿಕೆಯಾಗಿದೆ.

ಕರ್ನಾಟಕ ಬಂದ್‌ಗೆ ನಮ್ಮ ಬೆಂಬಲ ಇಲ್ಲ ಎಂದ ಕರವೇ ಅಧ್ಯಕ್ಷ ನಾರಾಯಣ ಗೌಡ

ಬಂದ್ ಹೋರಾಟಗಾರರ ಕೊನೆಯ ಅಸ್ತ್ರ

ವಿಶ್ವವಾಣಿ ಸಂದರ್ಶನ:
ಚಿದಾನಂದ ರುದ್ರಾಪುರಮಠ

ಯಾವುದೇ ಹೋರಾಟ ಗಳು ಹಂತ- ಹಂತವಾಗಿ ಹೋಗ ಬೇಕು. ಮಾತೆತ್ತಿದ ಕೂಡಲೇ ಬಂದ್‌ಗೆ ಕರೆ ನೀಡುವುದು ರಾಜ್ಯದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಆದ್ದರಿಂದ 'ಸನ್ಮಾನ್ಯ' ವಾಟಾಳ್ ನಾಗಾರಾಜ್ ಅವರು ಕರೆ ನೀಡಿರುವ ಬಂದ್‌ಗೆ ಕರ್ನಾ ಟಕ ರಕ್ಷಣಾ ವೇದಿಕೆ ಬೆಂಬಲವಿಲ್ಲವೆಂದು ಕರವೇ ರಾಜ್ಯಾಧ್ಯಕ್ಷ ನಾರಾಯಣ ಗೌಡ ಸ್ಪಷ್ಟಪಡಿಸಿದ್ದಾರೆ.

'ವಿಶ್ವವಾಣಿ' ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಬೆಳಗಾವಿ ಗಲಾಟೆಯ ವಿಷಯಕ್ಕೆ ವಾಟಾಳ್ ನಾಗಾರಾಜ್ ಕರೆ ನೀಡಿರುವ ಕರ್ನಾಟಕ ಬಂದ್, ಅದಕ್ಕೆ ಕರವೇ ಬೆಂಬಲ ನೀಡದಿರುವ ಬಗ್ಗೆ, ಕೆಎಎಸ್ ಪರೀಕ್ಷೆ, ಬೆಳಗಾವಿ ಎಂಇಎಸ್ ಪುಂಡಾಟಿಕೆ, ರಾಜಕೀಯ ಪ್ರವೇಶ ಸೇರಿದಂತೆ ವಿವಿಧ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ್ದಾರೆ.

ಸಂದರ್ಶನದ ಪೂರ್ಣಪಾಠಕ್ಕೆ ವಿಶ್ವವಾಣಿ ಟಿವಿ ನೋಡಿ

ಸನ್ಮಾನ್ಯ ವಾಟಾಳ್ ನಾಗರಾಜು ಅವರು ಹಿರಿಯರಿದ್ದಾರೆ, ಆದರೆ, ಅವರು ತೆಗೆದುಕೊಳ್ಳುವ ಅನೇಕ ನಿರ್ಧಾರಗಳು ಆತುರ ಆತುರದ್ದಾಗಿರುತ್ತವೆ. ಮಾತೆತ್ತಿದರೆ ಬಂದ್‌ಗೆ ಏಕೆ ಕರೆ ನೀಡುತ್ತಾರೆ ಎನ್ನುವುದು ಗೊತ್ತಿಲ್ಲ. ಅದು ಅವರ ಪ್ರತಿಷ್ಠೆಯೋ ಅಥವಾ ಪ್ರಚಾರದ ಹುಚ್ಚೋ ಗೊತ್ತಿಲ್ಲ. ಈ ರೀತಿಯ ಬಂದ್‌ನಿಂದ ರಾಜ್ಯಕ್ಕೆ ನಷ್ಟವೇ ಹೊರತು, ಯಾವುದೇ ಲಾಭವಿಲ್ಲ. ಆದ್ದರಿಂದ ಈ ಬಂದ್‌ಗೆ ನಮ್ಮ ಬೆಂಬಲವಿಲ್ಲ.
- ಕೆ.ಎ. ನಾರಾಯಣಗೌಡ,
ಅಧ್ಯಕ್ಷರು, ಕನ್ನಡ ರಕ್ಷಣಾ ವೇದಿಕೆ

ಗೌಡರು ಹೇಳಿದ್ದು

- ಕರ್ನಾಟಕಕ್ಕೆ ಬರುವ ಅನ್ಯ ರಾಜ್ಯದವರಿಂದ ಕನ್ನಡಿಗರಿಗೆ ಉದ್ಯೋಗ ಸಿಗುತ್ತಿಲ್ಲ
- ವಲಸಿಗರಿಗೆ ಕನ್ನಡ ಕಲಿಯ ಬೇಕೆನ್ನುವ ಕಾನೂನಿಲ್ಲ; ಅದಕ್ಕೆ ಕರುನಾಡಲ್ಲಿ ಹಿಂದಿ ವಿಜೃಂಭಿಸುತ್ತಿದೆ.
- ಕೆಪಿಎಸ್‌ಸಿಯಿಂದ 78 ಸಾವಿರ ಅಭ್ಯರ್ಥಿಗಳಿಗೆ ಸಮಸ್ಯೆಯಾಗಿದೆ, ಇವರಿಗೆ ನ್ಯಾಯ ಕೊಡಿಸಲು ನಮ್ಮ ಆದ್ಯತೆ
- ಜಾಗೃತಿ, ಮನವಿ, ಸ್ಪಂದನೆಯ ಬಳಿಕ ಬಂದ್ ಮಾಡಬೇಕು; ಬಂದ್ ಎನ್ನುವುದು ಮೊದಲ ಅಸ್ತ್ರವಾಗಬಾರದು.
- ನನ್ನ ಬಳಿ ರಾಜಕೀಯಕ್ಕೆ ಬರುವಷ್ಟು ದುಡ್ಡಿಲ್ಲ; ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಬಂದರೆ ಯೋಚನೆ ಮಾಡಬಹುದು.

- **ಬಂದ್‌ಗೆ ನಿಮ್ಮ ಬೆಂಬಲ ಏಕಿಲ್ಲ?**
ಬಂದ್‌ನಿಂದ ರಾಜ್ಯ ಸರಕಾರದ ಬೊಕ್ಕಸಕ್ಕೆ ನಷ್ಟವೇ ಹೊರತು ಲಾಭವಲ್ಲ. ಆದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ಬಂದ್‌ಗಳು ಹೋರಾಟಗಾರರ ಪ್ರತ್ಯಸ್ತ್ರ ಅಸ್ತ್ರವಾಗಿರಬಾರದು. ಆರಂಭದಲ್ಲಿ ಜನರನ್ನು ಜಾಗೃತಿಗೊಳಿ ಸಬೇಕು, ನಾಡಿಮಿಡಿತ ಅರಿಯಬೇಕು, ಸರಕಾರದ ಸ್ಪಂದನೆ ನೋಡಿ ಹೋರಾಟ ಮಾಡಬೇಕು. ಅದ್ಯಾವುದಕ್ಕೂ ಸ್ಪಂದನೆ ಸಿಗದಿದ್ದರೆ 'ಬಂದ್' ಕೊನೆಯ ಬ್ರಹ್ಮಾಸ್ತ್ರವಾಗಬೇಕು. ನಮ್ಮ ಪ್ರತಿಷ್ಠೆಗಾಗಿ ಮಾತಿಗೆ ಮುಂಚೆ ಬಂದ್ ಮಾಡುವುದು ಸರಿಯಲ್ಲ. ಕೆಪಿಎಸ್‌ಸಿ ಮಾಡಿರುವ ಎಡವಟ್ಟಿನಿಂದ ಅತಂತ್ರದಲ್ಲಿರುವ 76 ಸಾವಿರ ಅಭ್ಯರ್ಥಿಗಳ ಹಿತ ಕಾಪಾಡುವುದು ನಮ್ಮ ಮೊದಲ ಆದ್ಯತೆ ಆಗಿದೆ. ಅವರ ಪರವಾಗಿ ನಾವು ಹೊರಡಬೇಕಿದೆ. ಆದ್ದರಿಂದ ವಾಟಾಳ್ ನಾಗರಾಜ್ ಅವರು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ನಮ್ಮ ಬೆಂಬಲವಿಲ್ಲ.

- **ಕೆಪಿಎಸ್‌ಸಿ ಸಮಸ್ಯೆ ಬಗ್ಗೆ ಏನು ಹೇಳುತ್ತೀರಾ?**
ಕೆಪಿಎಸ್‌ಸಿ ಕರ್ಮಕಾಂಡವನ್ನು ಹಿಂದಿನಿಂದಲೂ ನೋಡಿಕೊಂಡು ಬಂದಿದ್ದೇವೆ. ಅದರಲ್ಲಿ ಯಾರ ಯಾರದು ಎಷ್ಟೆಷ್ಟು ಪಾಲು ಎಂಬುವುದು ಇಂದಿಗೂ ಅರ್ಥವಾಗಿಲ್ಲ. ಅಲ್ಲಿರುವುದು ಮಹಾನ್ ಭ್ರಷ್ಟರ ಕೂಟ. ಪ್ರಾಮಾಣಿಕವಾಗಿ ಓದಿದ ಅಭ್ಯರ್ಥಿಗಳ ಭವಿಷ್ಯದ ಬಗ್ಗೆ ಅವರಿಗೆ ಅರಿವಿಲ್ಲ. ಇಷ್ಟೆಲ್ಲಾ ಅವಾಂತರಗಳು ನಡೆಯುತ್ತಿದ್ದರೂ ಮುಖ್ಯಮಂತ್ರಿಗಳು ಮೌನವಾಗಿ ಕೂತಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರನ್ನು ಕನ್ನಡ ರಾಮಯ್ಯ ಎಂದು ಜನ ಕರೆಯುತ್ತಾರೆ. ಸ್ಪರ್ಧಾರ್ಥಿಗಳ ನೋವಿಗೆ ಸ್ಪಂದಿಸಿ ಈ ಮಾತನ್ನು ಸಾಬೀತುಪಡಿಸಬೇಕಾಗಿದೆ.

ಸಂದರ್ಶನದ ಪೂರ್ಣಪಾಠ → 5

ಹಂಪಿ ಉತ್ಸವಕ್ಕೆ ಅದ್ಧೂರಿ ತೆರೆ

ವಿಜಯನಗರ: ಗತವೈಭವ ಸಾರಿದ ಇಲ್ಲಿನ ಹಂಪಿಯ ನೆಲದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ 'ಹಂಪಿ ಉತ್ಸವ-2025' ಭಾನುವಾರ ರಾತ್ರಿ ವರ್ಣರಂಜಿತವಾಗಿ ತೆರೆಕಂಡಿತು. ಮೂರು ದಿನಗಳ ಕಾಲ ನಡೆದ ಉತ್ಸವದಲ್ಲಿ ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಕಲೆ, ಸಾಹಿತ್ಯ, ಸಂಗೀತ, ನೃತ್ಯದ ಮೂಲಕ ಮೆಲುಕು ಹಾಕಲಾಯಿತು.

ಉತ್ಸವದ ಕೊನೆಯ ದಿನವಾದ ಭಾನುವಾರ ರಾತ್ರಿ ನಡೆದ ಸಮಾರೋಪ ಸಮಾರಂಭದಲ್ಲಿ ಖ್ಯಾತ ಚಿತ್ರನಟಿ ರಮ್ಯಾ ಭಾಗವಹಿಸಿ ನೆರೆದಿದ್ದ ಪ್ರೇಕ್ಷಕರ ಮನರಂಜಿಸಿ ದರು. ಸಮಾರೋಪ ಸಮಾರಂಭದ ವೇದಿಕೆ ಕಾರ್ಯಕ್ರಮದ ಆರಂಭಕ್ಕೂ ಮುನ್ನ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಂಗ ಳೂರಿನ ಅರ್ಥ್ ಚಾರಿಟಬಲ್ ಟ್ರಸ್ಟ್ ವತಿ ಯಿಂದ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ದೊರೆ 'ಶ್ರೀಕೃಷ್ಣದೇವರಾಯ ವೈಭವ' ನೃತ್ಯರೂಪಕವನ್ನು ಪ್ರಸ್ತುತ ಪಡಿಸಲಾಯಿತು.

ಸಮಾಚಾರ ಸಣ್ಣದಲ್ಲ

ಬೈಕ್ ಕಳ್ಳನ ಸಹಿತ ನಾಲ್ವರ ಬಂಧನ

ಮಂಗಳೂರು: ಜಾತ್ರೆ, ಕಂಬಳ, ಮಾಲ್, ಬಸ್ಸು, ರೈಲ್ವೆ ನಿಲ್ದಾಣಗಳಲ್ಲಿ ಪಾರ್ಕ್ ಮಾಡಿದ್ದ ಬೈಕ್ ಗಳನ್ನು ಅಂತರ್ ಜಿಲ್ಲಾ ದ್ವಿಚಕ್ರ ವಾಹನ ಕಳ್ಳನನ್ನು ಕಂಕನಾಡಿ ನಗರ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯ ಸೊರಬದ ಮಣಿಕಂಠ ಗೌಡ ಕೆ. (24) ಬಂಧಿತ. ಬಂಧಿತನಿಂದ ಪೊಲೀಸರು 20ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳನ್ನು ಸ್ವಾಧೀನ ಪಡೆಸಿಕೊಂಡಿದ್ದಾರೆ. ಜತೆಗೆ ಬೈಕ್‌ಗಳನ್ನು ಮಣಿಕಂಠನಿಂದ ಖರೀದಿ ಮಾಡುತ್ತಿದ್ದ ಕಾರ್ಕಳದ ಸತೀಶ್ ಬಂಗೇರ, ಮೂಡುಬಿದಿರೆಯ ದೀಕ್ಷಿತ್, ತಾಳಿಕೋಟೆಯ ಸಂಗಣ್ಣ ಹೊನ್ನಳ್ಳಿ ಎಂಬವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಮೂವರು ಸೂಕ್ತ ದಾಖಲೆಗಳಿಲ್ಲದೆ ವಾಹನಗಳನ್ನು ಪಡೆದು ಮಾರಾಟ ಮಾಡುತ್ತಿದ್ದ ಹಿನ್ನೆಲೆ ಅವರ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ. ಕಂಕನಾಡಿ ನಗರ ಠಾಣೆಯಲ್ಲಿ ದಾಖಲಾಗಿದ್ದ ಬೈಕ್ ಕಳವು ಪ್ರಕರಣವನ್ನು ಬೆನ್ನತ್ತಿದ ಪೊಲೀಸರು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಾಲ್ವರು ಆರೋಪಿಗಳನ್ನು ಪೊಲೀಸರು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಧೀಶರು ನ್ಯಾಯಾಂಗ ಬಂಧನ ವಿಧಿಸಿದ್ದಾರೆ.

ಸಿ.ಎಸ್. ಎಕ್ಸಿಕ್ಯೂಟಿವ್ ಪರೀಕ್ಷಾ ಫಲಿತಾಂಶ

ಮೂಡುಬಿದಿರೆ: 2024 ಡಿಸೆಂಬರ್ ನಲ್ಲಿ ನಡೆದ ಸಿ.ಎಸ್. ಎಕ್ಸಿಕ್ಯೂಟಿವ್ ಪರೀಕ್ಷೆಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಬಿ.ಕಾಂ. ವಿದ್ಯಾರ್ಥಿಗಳಾದ ಅನನ್ಯ

ಕೆ.ಎ.(258), ಬಿ ಸುಹಾಸ್ ರಾವ್ (230), ವಂದನಾ ಎಸ್.ಸಿ.(213), ನಿತ್ಯಾ ಸಂಜೀವ ಕುಲಕರ್ಣಿ (204), ನಿಶಿತಾ ಸಿ ಶೆಟ್ಟಿ (203) ಮತ್ತು ತನ್ಮಯ್ ಎಮ್ (201) ಸಿ.ಎಸ್. ಎಕ್ಸಿಕ್ಯೂಟಿವ್ ಮೊಡ್ಯುಲ್ 1 ರಲ್ಲಿ ಮೊದಲ ಪ್ರಯತ್ನದಲ್ಲಿ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿದ್ದಾರೆ. ಜತೆಯಲ್ಲಿ ಧನ್ವಿ ಹೆಚ್ ಪೈ (150) ಸಿ.ಎಸ್. ಎಕ್ಸಿಕ್ಯೂಟಿವ್ ಮೊಡ್ಯುಲ್ 2 ರಲ್ಲಿ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿರುತ್ತಾರೆ. ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೂ ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಮತ್ತು ಪ್ರಾಂಶುಪಾಲ ಡಾ.ಕುರಿಯನ್ ಹಾಗೂ ಸಿ.ಎಸ್. ಸಂಯೋಜಕರು ಅಭಿನಂದಿಸಿದ್ದಾರೆ.

ಸಚಿವ ಮಧು ಬಂಗಾರಪ್ಪ ಹುಟ್ಟುಹಬ್ಬ ಆಚರಣೆ | ಪೌರ ಕಾರ್ಮಿಕರಿಗೆ ಸೀರೆ ವಿತರಣೆ

ತ್ರಿಭಾಷಾ ಸೂತ್ರ ಶಿಕ್ಷಣ ಅಬಾಧಿತ

ಶಿವಮೊಗ್ಗ: ರಾಜ್ಯದ ಶಾಲಾ ಶಿಕ್ಷಣದಲ್ಲಿ ಈಗಿರುವ ತ್ರಿಭಾಷಾ ಸೂತ್ರದ ಶಿಕ್ಷಣ ಅಬಾಧಿತ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ಅವರು ಭಾನುವಾರ ತಮ್ಮ ಹುಟ್ಟುಹಬ್ಬದ ನಿಮಿತ್ತ ಅಭಿಮಾನಿಗಳು ಆಯೋಜಿಸಿದ್ದ ಪೌರ ಕಾರ್ಮಿಕರಿಗೆ ಸೀರೆ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ತಮಿಳುನಾಡಿನ ಸರ್ಕಾರ ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರಕ್ಕೆ ನಿರಾಕರಣೆ ಮಾಡುತ್ತಿದೆ. ಆದರೆ ಕರ್ನಾಟಕದಲ್ಲಿ ಹೊರಗಿನ ರಜ್ಯದ ವಿದ್ಯಾರ್ಥಿಗಳೂ ಬರುತ್ತಾರೆ. ಏಕಾ ಏಕಿ ಹಿಂದಿಯನ್ನು ತೆಗೆದುಹಾಕಿದರೆ ಹೊರಗಿನ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಅದಕ್ಕಾಗಿ ಈ ಮುಂಚಿನಂತೆಯೇ ಭಾಷಾ ಸೂತ್ರ ಮುಂದುವರಿಯಲಿದೆ ಎಂದು ತಿಳಿಸಿದರು.

ತಮ್ಮ ಹುಟ್ಟುಹಬ್ಬದ ಪ್ರಯುಕ್ತ ಅಭಿಮಾನಿಗಳು ಎಲ್ಲೆಡೆ ಸಂಭ್ರಮ ಆಚರಿಸುತ್ತಿದ್ದಾರೆ. ಅಭಿಮಾನಿಗಳ ಉತ್ಸಾಹ ನೋಡಿದಾಗ ತಮ್ಮ ತಂದೆ ದಿ.ಎಸ್.ಬಂಗಾರಪ್ಪ ಅವರ ಜೊತೆಯಲ್ಲೇ ಸಾಗುತ್ತಿದ್ದೇನೇನೋ ಎಂಬ ಭಾವನೆ ಉಂಟಾಗುತ್ತಿದೆ ಎಂದ ಅವರು ಅಭಿಮಾನಿಗಳು ತೋರಿಸುತ್ತಿರುವ ಪ್ರೀತಿ, ವಿಶ್ವಾಸಗಳಿಂದ ತಮ್ಮ ಜವಾಬ್ದಾರಿ ಇನ್ನಷ್ಟು ಹೆಚ್ಚಿದೆ ಎಂದರು.

ಬರುವ ಬಜೆಟ್ ಮಂಡನೆಗೆ ಸಂಬಂಧಿಸಿದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ ದಾಖಲೆ ಬಜೆಟ್ ಮಂಡಿಸುತ್ತಿದ್ದಾರೆ. ಸರ್ಕಾರದ ಆರ್ಥಿಕ ಸ್ಥಿತಿ ಸ್ವಲ್ಪ ಕಷ್ಟದಲ್ಲಿದ್ದರೂ ಅವಶ್ಯವಿರುವ ಅನುದಾನಗಳಿಗೆ ತೊಂದರೆ ಇಲ್ಲ. ಜಿಲ್ಲೆಯ ನೀರಾವರಿ ಇತರ ಅಭಿವೃದ್ಧಿ ಯೋಜನೆಗಳಿಗೆ ಬೇಕಾದಷ್ಟು ಹಣ ಸಿಗುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಎಚ್.ಡಿ.ಕೋಟೆಯಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರನ್ನು ಯಾರನ್ನೂ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದ ಸಚಿವರು ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟಿಕೆ ವಿರುದ್ಧ ಸರ್ಕಾರ ಕ್ರಮ ಕೈಗೊಂಡು ಕನ್ನಡವನ್ನು ಉಳಿಸುವ ಕೆಲಸ ಮಾಡುತ್ತದೆ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಬಗ್ಗೆ ಮಾತನಾಡದ ಸಚಿವರು, ಪಕ್ಷದ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ತಮಗೆ ಬಾಯಿ ಮುಚ್ಚಿಕೊಂಡು ಇರಲು ಆದೇಶಿಸಿದ್ದಾರೆ. ಇದೇ ಸಂದರ್ಭದಲ್ಲಿ ಸಚಿವ ಮಧು ಬಂಗಾರಪ್ಪ ಪೌರ ಕಾರ್ಮಿಕರಿಗೆ ಪುಷ್ಪಾರ್ಚನೆ ಮಾಡಿ ಗೌರವಿಸುವುದರ ಮೂಲಕ ತಮ್ಮ ಹುಟ್ಟುಹಬ್ಬಕ್ಕೆ ವಿಶೇಷ ಅರ್ಥ ತಂದುಕೊಂಡರು.

ಸಚಿವ ಮಧು ಬಂಗಾರಪ್ಪ ತಮ್ಮ ಹುಟ್ಟು ಹಬ್ಬದ ನಿಮಿತ್ತ ಅಭಿಮಾನಿಗಳು ಆಯೋಜಿಸಿದ್ದ ಪೌರ ಕಾರ್ಮಿಕರಿಗೆ ಸೀರೆ ವಿತರಣೆ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿದರು.

ಶರಾವತಿ ಸಂತ್ರಸ್ತರನ್ನು ಕೈ ಬಿಡಲ್ಲ

ಶರಾವತಿ ಸಂತ್ರಸ್ತರ ಪರವಾಗಿ ಕೇಂದ್ರ ಸರ್ಕಾರವೂ ಸಹಕಾರ ನೀಡುತ್ತಿದೆ. ರಾಜ್ಯ ಸರಕಾರವೂ ಕಾರ್ಯಪ್ರವೃತ್ತವಾಗಿದೆ. ಯಾವುದೇ ಕಾರಣಕ್ಕೂ ಸಂಸತ್ರಸ್ತರಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಇ ಸ್ವತ್ತಿನ ಸಮಸ್ಯೆಗೆ ಸರಕಾರ ಎ-ಬಿ ಖಾತೆ ನೀಡಬೇಕು

ಶಿಕಾರಿಪುರ: ಹಲವು ವರ್ಷಗಳಿಂದ ಬಾಕಿ ಇರುವ ಇ ಸ್ವತ್ತಿನ ಸಮಸ್ಯೆಗೆ ಸರಕಾರ ನೀಡಿರುವ ಮಾರ್ಗದರ್ಶಿ ಅನ್ವಯ ಜನರಿಗೆ ತೊಂದರೆ ಆಗದಂತೆ ಎ ಮತ್ತು ಬಿ ಖಾತೆಗಳನ್ನು ನೀಡಬೇಕು ಎಂದು ಕ್ಷೇತ್ರದ ಶಾಸಕ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ಬಿ ವೈ ವಿಜಯೇಂದ್ರ ಸಲಹೆ ನೀಡಿದರು.

ಭಾನುವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪುರಸಭಾ ಸದಸ್ಯರು ಹಾಗೂ ಸಂಬಂಧಿಸಿದ ಅಧಿಕಾರಿಗಳ ಜತೆಗೆ ನಡೆಸಿದ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿ, ದಶಕಗಳಿಂದ ಇರುವ ಸಮಸ್ಯೆಗೆ ಒಂದು ದಾರಿ ದೊರೆತಿದೆ, ಜನರನ್ನು ಕಚೇರಿಗೆ ಅಲೆದಾಡಿಸದೆ, 2004 ರಿಂದ ಈಚೆಗೆ ಇ ಸಿ ಪಡೆದು, ಅನಗತ್ಯ ದಾಖಲೆಗಳನ್ನು ಕೇಳದೆ ಪುರಸಭೆಯಲ್ಲಿ 8 - 10 ಕೌಂಟರ್ ಗಳನ್ನು ತೆರೆದು, ಅವಶ್ಯವಿದ್ದಲ್ಲಿ ಹೆಚ್ಚುವರಿ ಡಾಟಾ ಆಪರೇಟರ್ ಗಳನ್ನು , ಹೊರಗುತ್ತಿಗೆ ಆಧಾರದ ಮೇಲೆ ನಿಯೋಜನೆ ಮಾಡಿಕೊಳ್ಳಿ,ಹೊರ ಭಾಗದಲ್ಲಿ ಶಾಮಿಯಾನ ಹಾಕಿ ಜನ ಕೂರಲು ಕುರ್ಚಿ, ಬಂದವರಿಗೆ ಟೀ - ಕಾಫಿ ವ್ಯವಸ್ಥೆಯನ್ನು ಕಲ್ಪಿಸಿ, ಶೀಘ್ರವಾಗಿ ಇ ಸ್ವತ್ತನ್ನು ತಲುಪಿಸುವ ಕಾರ್ಯವನ್ನು ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷರು ಹಾಗೂ ಜಿಲ್ಲಾ ದಿಶಾ ಸಮಿತಿಯ ಸದಸ್ಯ ಕೆ ಎಸ್ ಗುರುಮೂರ್ತಿ,ಪುರಸಭಾ ಉಪಾಧ್ಯಕ್ಷ ರೂಪ ಪಾರಿವಾಳ ಮಂಜುನಾಥ, ಸ್ಥಾಯಿ ಸಮಿತಿ ಅಧ್ಯಕ್ಷ ರಮೇಶ್ (ಗುಂಡ),ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಕೆ ಹಾಲಪ್ಪ, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಸಂಕ್ಲಾಪುರ ಹನುಮಂತಪ್ಪ, ಸೇರಿದಂತೆ ಪುರಸಭಾ ಸದಸ್ಯರು ಹಾಜರಿದ್ದರು.

ಶಿಕಾರಿಪುರದ ಪ್ರವಾಸಿ ಮಂದಿರದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಶಾಸಕ ವಿಜೇಂದ್ರ ಮಾತನಾಡಿದರು.

ಶಿವಮೊಗ್ಗದಿಂದ ಬೆಂಗಳೂರಿಗೆ ಮಾಜಿ ಮುಖ್ಯ ಮಂತ್ರಿ ಬಂಗಾರಪ್ಪನವರ ಒಡನಾಡಿಗಳೊಂದಿಗೆ ಭಾನುವಾರ ವಿಮಾನದಲ್ಲಿ ಪ್ರಯಾಣ ಮಾಡಿದ ಸಚಿವ ಮಧು ಬಂಗಾರಪ್ಪ.

ಇಂಡೋ ಇಸ್ಲಾಮಿಕ್ ಶೈಲಿಯ ಮುಸುಕಿನ ಬಾವಿ ಗೋಚರ

ಚಂದ್ರಗುತ್ತಿ: ಮಲೆನಾಡಿನ ಶಿಲಾಮಯ ಬೆಟ್ಟ ಪ್ರದೇಶದಲ್ಲಿನ ಐತಿಹಾಸಿಕ ಚಂದ್ರಗುತ್ತಿ ಕೋಟೆ ಇನ್ನೂ ಬೆಳಕಿಗೆ ಬಾರದ ಅನೇಕ ಐತಿಹ್ಯಗಳನ್ನು ಅಡಗಿಸಿಕೊಂಡಿದೆ.

ವಿಜಯನಗರ ಅರಸರ ಕಾಲದಲ್ಲಿ ಮಹತ್ವಪೂರ್ಣ ಅಡುಗು ತಾಣವೆನಿಸಿದ್ದ, ಕೆಲಕಾಲ ಆದಿಲ್ ಶಾಹಿಗಳ ಹಿಡಿತದಲ್ಲಿದ್ದು ಮರಳಿ ಕೆಳದಿ ಅರಸರು ತಮ್ಮ ವಶಕ್ಕೆ ಪಡೆದ ಕೋಟೆಯಲ್ಲಿ ಜನವಸತಿ ಇದ್ದ ಬಗ್ಗೆ ಅನೇಕ ಕುರುಹುಗಳಿವೆ. ಯುದ್ಧಕ್ಕೆ ಬಳಸಿದ ಪಿರಂಗಿ, ಮದ್ದು ತಯಾರಿಕೆ ಘಟಕದ ಅವಶೇಷ, ಮದ್ದಿನ ಪಣತ, ಪ್ರಾರ್ಥನಾ ಮಂದಿರ, ಪುಟ್ಟಪುಟ್ಟ ದೇಗುಲ, ಶಿಖರದ ತುದಿಯಲ್ಲಿ ಚಂದ್ರಮೌಳೇಶ್ವರ ದೇಗುಲದ ಅವಶೇಷ, ಒಂದೆರಡು ಬಾವಿ, ಕಲ್ಯಾಣಿಗಳು ಹೀಗೆ ಹಲವು ಐತಿಹಾಸಿಕ ಆಕರಗಳಿದ್ದೂ ರಕ್ಷಣೆ ಇಲ್ಲದೆ ಮುಕ್ಕಾಗಿವೆ.

ಈಚೆಗೆ ಯುವ ವರದಿಗಾರ ಪುರುಷೋತ್ತಮ್ ಎನ್. ಗದ್ದೆಮನೆ, ಗ್ರಾಮದ ದತ್ತೋಜಿ ಕಮಲಾಪುರ ಅವರ ಮಾರ್ಗದರ್ಶನದಲ್ಲಿ ಕೋಟೆ ಅನ್ವೇಷಣೆಗೆ ತೆರಳಿದ್ದಾರೆ. ಆಗ ಕೋಟೆಯ ಒಂದೆಡೆ ಕಲಾತ್ಮಕ ಇಳಿಬಾವಿ ಗೋಚರಿಸಿದೆ. ಇಂಡೋ ಇಸ್ಲಾಮಿಕ್ ಶೈಲಿಯ ದ್ವಾರವನ್ನು ಹೊಂದಿದ ಈ ಬಾವಿಗೆ ಮುಸುಕಿನ ಬಾವಿ ಎಂದು ಕರೆಯುತ್ತಾರೆ. ಶಿಲಾರಣ್ಯದ ನಡುವೆ ಒಮ್ಮೆಲೆ ಗೋಚರಿಸದ ಬಾವಿಯಲ್ಲಿ ನೀರಿದೆ. ಬಾವಿಯ ಮೇಲ್ಛಾವಣಿ ಸುತ್ತ ಮಂಟಪದ ರಚನೆಯಿದ್ದು ಇಳಿಯಲು ಮೆಟ್ಟಿಲುಗಳು ಇವೆ. ಪ್ರಸ್ತುತ ಜಿಲ್ಲಾ ಉಸ್ತುವಾರಿ ಸಚಿವರು ಚಂದ್ರಗುತ್ತಿ ಅಭಿವೃದ್ಧಿ ವಿಚಾರದಲ್ಲಿ ಗಮನಹರಿಸಿ ಕ್ಷೇತ್ರ ಕಂಗೊಳಿಸುವಲ್ಲಿ ಮುಂದಾಗಬಹುದೇ ಕಾದು ನೋಡಬೇಕಿದೆ.

ಒಂದು ಕಾಲದ ದುರ್ಗಮ, ಅಭೇದ್ಯ ಕೋಟೆಯ ಅನೇಕ ಮಾರ್ಗಗಳು ಈಗ ಮುಚ್ಚಿದ್ದು ಇತಿಹಾಸ ಕೆಣಕುವ, ಶೋಧಕ ಮನೋಭಾವ ಇದ್ದವನು ಹೊಸ ಇತಿಹಾಸದ ಆಕರಗಳನ್ನು ಬೆಳಕಿಗೆ ತರಬಲ್ಲ. ವಿಶೇಷ ಎಂಬಂತೆ ತಾಲೂಕಿನ ಅನೇಕ ಪ್ರದೇಶಗಳು ಸೇರಿದಂತೆ ಚಂದ್ರಗುತ್ತಿ ಇತಿಹಾಸ ಶೋಧಿಸುವ ಅನೇಕ ಯುವ ಶೋಧಕರ ಪಡೆ ಕಾರ್ಯನಿರತವಾಗಿವೆ ಎಂಬುದು ಉತ್ತಮ ಬೆಳವಣಿಗೆ.

-ಶ್ರೀಪಾದ ಬಿಚ್ಚುಗತ್ತಿ,
ಇತಿಹಾಸ ಸಂಶೋಧಕ

ಚಂದ್ರಗುತ್ತಿ ಐತಿಹಾಸಿಕ ಕೋಟೆ ಪ್ರದೇಶದಲ್ಲಿ ಇರುವ ಇಂಡೋ ಇಸ್ಲಾಮಿಕ್ ಶೈಲಿಯ ಮುಸುಕಿನ ಬಾವಿ.

ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಫ್.ಸಿ. ನ್ಯಾಯಾಲಯದಲ್ಲಿ ಸೊರಬ.
ಸಿ.ಮಿಸ್.ನಂ: 50/2025

ಅರ್ಜಿದಾರರು :- 1) ನಾಗರಾಜ ಬಿನ್ ಕೂರಪ್ಪ ಸುಮಾರು 61 ವರ್ಷ ತೆಲಗುಂದ್ಲಿ ಗ್ರಾಮ, ಚಂದ್ರಗುತ್ತಿ ಹೋಬಳಿ, ಸೊರಬ ತಾಲ್ಲೂಕು. 2) ಅಣ್ಣಪ್ಪ ತಬಲಿ ಬಿನ್ ಕೂರಪ್ಪ ತಬಲಿ ಸುಮಾರು 75 ವರ್ಷ ತೆಲಗುಂದ್ಲಿ ಗ್ರಾಮ, ಚಂದ್ರಗುತ್ತಿ ಹೋಬಳಿ, ಸೊರಬ ತಾಲ್ಲೂಕು. 3) ಪರಮೇಶ್ವರ ಬಿನ್ ಕೂರಪ್ಪ ಸುಮಾರು 64 ವರ್ಷ ತೆಲಗುಂದ್ಲಿ ಗ್ರಾಮ, ಚಂದ್ರಗುತ್ತಿ ಹೋಬಳಿ, ಸೊರಬ ತಾಲ್ಲೂಕು.

-: ವಿರುದ್ಧ :-

ಎದುರುದಾರರು :- ತಹಶೀಲ್ದಾರ್ ರವರು ಸೊರಬ, ಸೊರಬ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ದ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ:02-04-2025 ರಂದು ಬೆಳ್ಳಗ್ಗೆ 11 ಗಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು. ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ ಅರ್ಜಿದಾರರ ತಾಯಿಯಾದ ಬಂಗಾರಮ್ಮ ಕೋಂ ಕೂರಪ್ಪ ಆದ ಇವರು ಸೊರಬ ತಾಲ್ಲೂಕು, ಚಂದ್ರಗುತ್ತಿ ಹೋಬಳಿ, ತೆಲಗುಂದ್ಲಿ ಗ್ರಾಮದಲ್ಲಿ ದಿನಾಂಕ:20-08-1970 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರ ತಾಯಿಯ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು,
ವ್ಯವಹಾರ ನ್ಯಾಯಾಧೀಶರು
ವಕೀಲರು, ಸೊರಬಮತ್ತು ಜೆ.ಎಂ.ಎಫ್.ಸಿ
ನ್ಯಾಯಾಲಯ, ಸೊರಬ.
ಅರ್ಜಿದಾರರ ಪರ ವಕೀಲರು
ಕಮಲಮ್ಮ ಕೆ. ಬಿ.ಎ.ಎಲ್.ಎಲ್. ಬಿ(ಸ್ಪೆ)
ರೋಲ್ ನಂ ಕೆ.ಎ.ಆರ್ .3237/2004

ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಹರಿಹರ.
ಸಿ.ಆರ್.ಮಿಸ್.ನಂ: 86/2025

ಅರ್ಜಿದಾರರು : ಶ್ರೀಮತಿ ಶಾಂತಮ್ಮ ಕೋಂ ಲೇಟ್ ತಿರುಕಪ್ಪ ವಯಸ್ಸು ಸುಮಾರು 65 ವರ್ಷ, ಕೂಲಿ ಕೆಲಸ ವಾಸ : ಹಲಸಬಾಳು ಗ್ರಾಮ, ಹರಿಹರ ತಾಲ್ಲೂಕು ದಾವಣಗೆರೆ ಜಿಲ್ಲೆ.

-:ವಿರುದ್ಧ:-

ಎದುರುದಾರರು : ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ತಹಶೀಲ್ದಾರ್ ರವರ ಕಛೇರಿ ಹರಿಹರ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರ ಗಂಡನಾದ " ತಿರುಕಪ್ಪ ತಂದೆ ಹನುಮಂತಪ್ಪ " ಇವರು ದಿನಾಂಕ: 01-02-1991 ರಂದು ಹರಿಹರ ತಾಲ್ಲೂಕು ಹಲಸಬಾಳು ಗ್ರಾಮದ ಅವರ ಮನೆಯಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿ ಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಅದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ ದಿನಾಂಕ; 07-04-2025 ರಂದು ಬೆಳಿಗ್ಗೆ 11-00 ಗಂಟೆಗೆ ತಾವಾಗಲಿ, ವಕೀಲರ ಮೂಲಕವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು.

ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ:-25-02-2025 ರಂದು ನೀಡಲಾಗಿದೆ.

ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸ್ತೇದಾರರು
ಸಿವಿಲ್ & ಪ್ರದ.ನ್ಯಾ.ದಂ. ನ್ಯಾಯಾಲಯ,
ಹರಿಹರ.
ಅರ್ಜಿದರಾರ ಪರ ವಕೀಲರು
ನಾಗರಾಜ, ಎಂ.
ಸ್ಥಳ : ಹರಿಹರ ದಿನಾಂಕ:25-02-2025

ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸೊರಬ.
ಸಿ.ಮಿಸ್.ನಂ: 48/2025

ಅರ್ಜಿದಾರರು :- 1) ಮೋಹನ ಬಿನ್ ಲೋಕಪ್ಪ ಸುಮಾರು 48 ವರ್ಷ ತೆಲಗುಂದ್ಲಿ ಗ್ರಾಮ, ಚಂದ್ರಗುತ್ತಿ ಹೋಬಳಿ, ಸೊರಬ ತಾಲ್ಲೂಕು. 2) ಲೋಕಪ್ಪ ಬಿನ್ ನಿಂಗಪ್ಪ ಸುಮಾರು 70 ವರ್ಷ ತೆಲಗುಂದ್ಲಿ ಗ್ರಾಮ, ಚಂದ್ರಗುತ್ತಿ ಹೋಬಳಿ, ಸೊರಬ ತಾಲ್ಲೂಕು. 3) ರತ್ನ ಕೋಂ ನಾರಾಯಣ ಸುಮಾರು 53 ವರ್ಷ ತೆಲಗುಂದ್ಲಿ ಗ್ರಾಮ, ಚಂದ್ರಗುತ್ತಿ ಹೋಬಳಿ, ಸೊರಬ ತಾಲ್ಲೂಕು. 4) ದೇವಕಿ ಕೋಂ ಶ್ರೀಪತಿ ಸುಮಾರು 46 ವರ್ಷ ಸುಂಟ್ರಳ್ಳಿ ಗ್ರಾಮ, ಚಂದ್ರಗುತ್ತಿ ಹೋಬಳಿ, ಸೊರಬ ತಾಲ್ಲೂಕು. 5) ಮಾಲತಿ ನಾರಾಯಣ ನಾಯ್ಕ ಕೋಂ ನಾರಾಯಣ ನಾಯ್ಕ ಸುಮಾರು 40 ವರ್ಷಬುಗಡಿ ಕೊಪ್ಪ ಗ್ರಾಮ, ಶಿರಸಿ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ.

-: ವಿರುದ್ಧ :-

ಎದುರುದಾರರು :- ತಹಶೀಲ್ದಾರ್ ರವರು ಸೊರಬ, ಸೊರಬ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ದ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ:02-04-2025 ರಂದು ಬೆಳ್ಳಗ್ಗೆ 11 ಗಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು. ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ ಅರ್ಜಿದಾರರ ತಾಯಿಯಾದ ಗೌರಮ್ಮ ಕೋಂ ಲೋಕಪ್ಪ ಆದ ಇವರು ಸೊರಬ ತಾಲ್ಲೂಕು, ಚಂದ್ರಗುತ್ತಿ ಹೋಬಳಿ, ತೆಲಗುಂದ್ಲಿ ಗ್ರಾಮದಲ್ಲಿ ದಿನಾಂಕ:06-06-2019 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರ ತಾಯಿಯ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು,
ವ್ಯವಹಾರ ನ್ಯಾಯಾಧೀಶರು
ವಕೀಲರು, ಸೊರಬಮತ್ತು ಜೆ.ಎಂ.ಎಫ್.ಸಿ
ನ್ಯಾಯಾಲಯ, ಸೊರಬ.
ಅರ್ಜಿದಾರರ ಪರ ವಕೀಲರು
ಕಮಲಮ್ಮ ಕೆ. ಬಿ.ಎ.ಎಲ್.ಎಲ್. ಬಿ(ಸ್ಪೆ)
ರೋಲ್ ನಂ ಕೆ.ಎ.ಆರ್ .3237/2004

ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸೊರಬ.
ಸಿ.ಮಿಸ್.ನಂ: 51/2025

ಅರ್ಜಿದಾರರು :- 1) ಗಣಪತಿ ಬಂಗಾರಪ್ಪ ನಾಯ್ಕ ಬಿನ್ ಬಂಗಾರಪ್ಪ ನಾಯ್ಕ ಸುಮಾರು 54 ವರ್ಷ ಶಿರಸಿ-ಕೊಪ್ಪ ಗ್ರಾಮ, ಶಿರಸಿ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ. 2) ಕಲಾವತಿ ಪುಟ್ಟಪ್ಪ ನಾಯ್ಕ ಕೋಂ ಪುಟ್ಟಪ್ಪ ನಾಯ್ಕ ಸುಮಾರು 67 ವರ್ಷ ಹಾಡಲಗಿ ಗ್ರಾಮ, ಶಿರಸಿ ತಾಲ್ಲೂಕು, ಉತರಕನ್ನಡ ಜಿಲ್ಲೆ. 3) ಸೀತಮ್ಮ ಕೋಂ ರಾಮಪ್ಪ ಸುಮಾರು 65 ವರ್ಷ ಬಳ್ಳಿಬೈಲು ಗ್ರಾಮ,ಸೊರಬ ತಾಲ್ಲೂಕು. 4) ಶಿನಾನಂದ ಬಿನ್ ಬಂಗಾರಪ್ಪ ಸುಮಾರು 56 ವರ್ಷ ತೆಲಗುಂದ್ಲಿ ಗ್ರಾಮ, ಚಂದ್ರಗುತ್ತಿ ಹೋಬಳಿ, ಸೊರಬ ತಾಲ್ಲೂಕು.

-: ವಿರುದ್ಧ :-

ಎದುರುದಾರರು :- ತಹಶೀಲ್ದಾರ್ ರವರು ಸೊರಬ, ಸೊರಬ ತಾಲ್ಲೂಕು

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ದ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ:02-04-2025 ರಂದು ಬೆಳ್ಳಗ್ಗೆ 11 ಗಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು. ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ ಅರ್ಜಿದಾರರ ತಾಯಿಯಾದ ದೇವಮ್ಮ ಕೋಂ ಬಂಗಾರಪ್ಪ ಆದ ಇವರು ಸೊರಬ ತಾಲ್ಲೂಕು, ಚಂದ್ರಗುತ್ತಿ ಹೋಬಳಿ, ತೆಲಗುಂದ್ಲಿ ಗ್ರಾಮದಲ್ಲಿ ದಿನಾಂಕ:23-06-1986 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರ ತಾಯಿಯ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು,
ವ್ಯವಹಾರ ನ್ಯಾಯಾಧೀಶರು
ವಕೀಲರು, ಸೊರಬ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಲಯ, ಸೊರಬ.
ಅರ್ಜಿದಾರರ ಪರ ವಕೀಲರು
ಕಮಲಮ್ಮ ಕೆ. ಬಿ.ಎ.ಎಲ್.ಎಲ್. ಬಿ(ಸ್ಪೆ)
ರೋಲ್ ನಂ ಕೆ.ಎ.ಆರ್ .3237/2004

ರೈತರನ್ನು ಕಾಂಗ್ರೆಸ್, ಬಿಜೆಪಿ ರಕ್ಷಿಸುವುದಿಲ್ಲ



ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಜನತಾ ಪ್ರಣಾಳಿಕೆ ಜನರ ನಡುವೆ ಚರ್ಚೆ ಕಾರ್ಯಕ್ರಮದಲ್ಲಿ ಹಸಿರು ಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿದರು.

ಶಿವಮೊಗ್ಗ: ಲೆಕ್ಕಾಚಾರವಿಲ್ಲದೆ ಉತ್ಪಾದನೆ ಮಾಡಿ ಸಾಲ ಮೈಮೇಲೆ ಎಳೆದುಕೊಳ್ಳುತ್ತಿರುವ ರೈತರು ಮೂರ್ಖ ರೆಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

ನವ ಕರ್ನಾಟಕ ನಿರ್ಮಾಣ ಆಂದೋಲನ ವತಿಯಿಂದ ಭಾನುವಾರ ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ರೈತ, ದಲಿತ, ಕನ್ನಡ ಭಾಷಾ, ಮಹಿಳಾ, ವಿದ್ಯಾರ್ಥಿ ಯುವಜನ ಚಳವಳಿ ರೂಪಿಸಿರುವ ಪ್ರಾದೇಶಿಕ ರಾಜಕೀಯ ಪಕ್ಷದ ಮುನ್ನೋಟ, ಜನತಾ ಪ್ರಣಾಳಿಕೆ ಜನರ ನಡುವೆ ಚರ್ಚೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇಲ್ಲಿಯ ರೈತರು ಮುರ್ಖರೆಂದರೆ ನಿಮಗೆ ಸಿಟ್ಟು ಬರುತ್ತದೆ. ಆದರೆ ರಾಜಕೀಯ ಪಕ್ಷಗಳು ರೈತರು ಮೂರ್ಖರಾಗಿ ಬದುಕುವಂತೆ ಮಾಡಿವೆ. ಲೆಕ್ಕಾಚಾರವಿಲ್ಲದೆ ಬದುಕುತ್ತಿರುವ ರೈತರನ್ನು ರಕ್ಷಿಸಲು ಕಾಂಗ್ರೆಸ್, ಬಿಜೆಪಿಯಿಂದಲೂ ಆಗೋಲ್ಲ. ರೈತ ವಿರೋಧಿ ಕೃಷಿ ಕಾಯಿದೆ ಜಾರಿಗೆ ತರಲಾಗಿದೆ. ಇದನ್ನು ವಾಪಸ್ ಪಡೆಯುವುದಾಗಿ ಕಾಂಗ್ರೆಸ್ ಹೇಳಿತ್ತು. ಆದರೆ ಈಗ ಮೀನಾಮೇಷ ಮಾಡಲಾಗುತ್ತಿದೆ ಎಂದರು.

ಹಳ್ಳಿ ಉದ್ದಾರವಾಗಲು ಬಂಡವಾಳಶಾಹಿಗಳು ಬೇಕಿಲ್ಲ

ಕೇಂದ್ರ ಸರಕಾರ ಸರಕಾರಿ ಸ್ವಾಮ್ಯದ ಕೈಗಾರಿಕೆಗಳಲ್ಲಿನ ಬಂಡವಾಳ ಹಿಂಪಡೆದು ಉದ್ಯಮದಾರರಿಗೆ ಬಿಟ್ಟು ಕೊಡುವುದಾಗಿ ಹೇಳಿದೆ. ಸರಕಾರಿ ಭೂಮಿ, ಬ್ಯಾಂಕ್ ಸಾಲ ಬಂಡವಾಳಶಾಹಿಗಳಿಗೆ ಕೊಟ್ಟು ಉದ್ಯಮ ಮಾಡಲು ಬಿಟ್ಟಿದ್ದಾರೆ. ಹಳ್ಳಿಯಲ್ಲಿನ ವಿದ್ಯಾವಂತರಿಗೆ ಕೊಟ್ಟರೆ ಉದ್ಯಮ ಮಾಡುವುದಿಲ್ಲವೇ? ನಮ್ಮ ಹಳ್ಳಿ ಉದ್ದಾರವಾಗಲು ಬಂಡವಾಳಶಾಹಿಗಳು ಬೇಕಿಲ್ಲ ಎಂದು ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

ವೇದಿಕೆಯಲ್ಲಿ ಆಲ್ ಇಂಡಿಯಾ ಬಿಎಸ್‌ಪಿ ಸಂಯೋಜಕ ಎಂ. ಗೋಪಿನಾಥ್, ಪ್ರಮುಖರಾದ ಎ.ಡಿ. ಶಿವಪ್ಪ, ತೀ.ನ. ಶ್ರೀನಿವಾಸ್, ಎನ್. ಮೂರ್ತಿ, ಪ್ರೊ.ಕೃಷ್ಣಪ್ಪ, ಲೋಕೇಶ್ ತಮ್ಮಡಿಹಳ್ಳಿ, ಮಂಝುನಾಥಗೌಡ, ಎನ್.ಉಮೇಶ್ ಪಾಟೀಲ್ ಮೊದಲಾದವರು ಇದ್ದರು.

ಬಂಟರು ನಂಬಿಕೆಗೆ ಅರ್ಹರು: ಅಶೋಕ ಶೆಟ್ಟಿ

ಹೊಸನಗರದ ಗಣಪತಿ ದೇವಸ್ಥಾನದ ಆವರಣದಲ್ಲಿ ಬಂಟರ ಯಾನೆ ನಾಡವರ ಸಂಘದವರು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ವಿದ್ಯಾರ್ಥಿಗಳಿಗೆ ಸನ್ಮಾನಿಸುತ್ತಿರುವುದು.

ಹೊಸನಗರ: ಬಂಟರು ಯಾನೆ ನಾಡವ ಶೆಟ್ಟರು ಯಾವುದೇ ಊರಿರಲೀ ನಾಡಿರಲಿ. ಯಾವುದೇ ರಾಜ್ಯ, ದೇಶಗಳಲ್ಲಿದ್ದರೂ ಅವರು ನಂಬಿಕೆಗೆ ಅರ್ಹರದವರು ಎಂದು ಬಂಟರ ಯಾನೆ ನಾಡವರ ಶೆಟ್ಟರ ಸಂಘದ ರಾಜ್ಯಾಧ್ಯಕ್ಷ ಅಶೋಕ ಶೆಟ್ಟಿಯವರು ಹೇಳಿದರು.

ಹೊಸನಗರದ ಗಣಪತಿ ದೇವಸ್ಥಾನದ ಆವರಣದಲ್ಲಿ ಬಂಟರ ಯಾನೆ ನಾಡವರ ಸಂಘದ ಆಶ್ರಯದಲ್ಲಿ ಪ್ರತಿಬಾ ಪುರಸ್ಕಾರ, ವಿದ್ಯಾರ್ಥಿವೇತನ, ಅಂಗ ವಿಕಲ ಕುಟುಂಬಕ್ಕೆ ಧನ ಸಹಾಯ ಮತ್ತು ತಾಲೂಕಿನಲ್ಲಿ ಬಂಟರ ಸಂಘದವರು ಚುನಾವಣೆಗಳಲ್ಲಿ ಗೆದ್ದಿರುವ ಸದಸ್ಯರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಬಂಟರ ಸಂಘ ಎಂದೆಂದಿಗೂ ಬಡವರ ಆರ್ಥಿಕವಾಗಿ ಹಿಂದುಳಿದವರ ಹಾಗೂ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದು ಇದರ ಉಪಯೋಗವನ್ನು ಎಲ್ಲ ಸದಸ್ಯರು ಪಡೆದು ಕೊಳ್ಳುವ ಜತೆಗೆ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮವಾಗಿ ಓದಿ ದೇಶ-ವಿದೇಶಗಳಿಗೆ ಹೋಗುವುದರ ಜತೆಗೆ ನಂಬಿಕೆ ಉಳಿಸಿಕೊಳ್ಳಬೇಕೆಂದು ಈ ಮೂಲಕ ಕರೆ ನೀಡಿದರು.

ಬೆಂಗಳೂರಿನ ಬಂಟರ ಸಂಘದ ಅಧ್ಯಕ್ಷರಾದ ಉಮೇಶ ಕುಮಾರ್‌ರವರು ಈ ಸಂದರ್ಭದಲ್ಲಿ ಮಾತನಾಡಿ, ನಾವು ಪ್ರತಿ ವರ್ಷ ಪ್ರತಿಭಾ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವುದರ ಜತೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ 2ಲಕ್ಷದ ವರೆವಿಗೆ ಸುಮಾರು 60 ವಿದ್ಯಾರ್ಥಿಗಳಿಗೆ ಬೆಂಗಳೂರು ಸಂಘದಿಂದ ಧನ ಸಹಾಯ ಕಾರ್ಯಕ್ರಮವನ್ನು ಅಧ್ಯಕ್ಷರಾದ ಅಶೋಕ ಕುಮಾರ್‌ರವರ ನೇತೃತ್ವದಲ್ಲಿ ನಡೆಯಲಿದೆ.ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಲೋನ್ ರೂಪದಲ್ಲಿ ಯಾವುದೇ ಬಡ್ಡಿ ರಹಿತ ಸಾಲವನ್ನು ಓದುವ ಉದ್ದೇಶದಿಂದ ನೀಡಲಾಗುತ್ತಿದೆ. ನಮ್ಮ ಸಂಘದೊಂದಿಗೆ ಎಲ್ಲರೂ ಕೈ ಜೋಡಿಸಿ ಎಂದರು.

ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಕೀರ್ತಿ ಶೆಟ್ಟಿ ಹಾಗೂ ಇತರೆ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ತಾ.ಸಂಘದ ಅಧ್ಯಕ್ಷರಾದ ದಿವಾಕರ ಶೆಟ್ಟಿ ಅಧ್ಯಕ್ಷತೆವಹಿಸಿದ್ದರು. ಬೆಂಗಳೂರು ಬಂಟರ ಸಂಘದ ನಿರ್ದೇಶಕಿ ಗೀತಾ ಶೆಟ್ಟಿ, ಉಪಾಧ್ಯಕ್ಷರಾದ ನಗರ ಚಂದ್ರಶೇಖರ ಶೆಟ್ಟಿ, ಮುಡುಬಾ ಶಿವರಾಮ್ ಶೆಟ್ಟಿ, ಸಂಪೆಕಟ್ಟೆ ಚಂದ್ರಶೇಖರ ಶೆಟ್ಟಿ, ಕಾರ್ಯದರ್ಶಿ ಶಿಕ್ಷಕರಾದ ನಾಗರಾಜ್ ಉಪಸ್ಥಿತರಿದ್ದರು.

ರಾಜ್ಯಕ್ಕೆ ಹೊಸ ರಾಜಕೀಯ ಪ್ರಾದೇಶಿಕ ಪಕ್ಷ ಅಗತ್ಯ

ಶಿವಮೊಗ್ಗ: ಸಜ್ಜನಿಕೆಯ ರಾಜಕಾರಣದ ಸ್ಥಾಪನೆ ಮತ್ತು ಭ್ರಷ್ಟಾಚಾರ ರಹಿತ ಆಡಳಿತದ ಸ್ಥಾಪನೆ ತಮ್ಮ ಹೊಸ ಪಕ್ಷದ ಉದ್ದೇಶ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಘೋಷಿಸಿದರು.

ಅವರು ಭಾನುವಾರ ನಗರದಲ್ಲಿ ನವಕರ್ನಾಟಕ ನಿರ್ಮಾಣ ಆಂದೋಲನದ ಶಿವಮೊಗ್ಗ ಜಿಲ್ಲಾ ಘಟಕದಿಂದ ಆಯೋಜಿಸಿದ್ದ ಜನರ ನಡುವೆ ಜನತಾ ಪ್ರಣಾಳಿಕೆ ಚರ್ಚೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರೈತ, ದಲಿತ, ಕನ್ನಡ ಭಾಷಾ, ಮಹಿಳಾ ಚಳವಳಿಗಳು ವಿದ್ಯಾರ್ಥಿ-ಯುವಜನರ ಚಳವಳಿಗಳು ರೂಪಿಸುರವ ಪ್ರಾದೇಶಿಕ ರಾಜಕೀಯ ಪಕ್ಷದ ಮುನ್ನೋಟ ಈ ಜನತಾ ಪ್ರಣಾಳಿಕೆ ಚರ್ಚೆ ವಿಷಯವಾಗಿದೆ ಎಂದ ಅವರು, 1956ರಿಂದ ಇಲ್ಲಿಯ ತನಕ ಕರ್ನಾಟಕವನ್ನು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಆಳುತ್ತಾ ಬಂದಿವೆ.

ಈ ನಾಡಿನ ರೈತರು, ಸಾಹಿತಿಗಳು, ಮಹಿಳೆ ಯರು, ಕಾರ್ಮಿಕರು, ವಿದ್ಯಾರ್ಥಿ ಗಳು, ಪರಿಸರವಾ ದಿಗಳು, ಅಂಗನವಾಡಿ-ಆಶಾ ಕಾರ್ಯಕತೆಯರು, ಪೌರ ಕಾರ್ಮಿಕರೆಲ್ಲರೂ ತಮ್ಮ ಹಕ್ಕು ಮತ್ತು ಸವಲತ್ತುಗಳಿಗಾಗಿ ನಿರಂತರ ವಾಗಿ ಹೋರಾಡಿದರು ಯಾವುದೇ ಸಮಸ್ಯೆಗಳು ಬಗೆಹರಿ ದಿಲ್ಲ ಎಂದು ಟೀಕಿಸಿದರು. ಜನತಾ ಪ್ರಣಾಳಿಕೆ ಯನ್ನು ಅನುಷ್ಠಾನಕ್ಕೆ ತರಲು ರಾಜಕೀಯ ಕಾರ್ಯವನ್ನು ಆರಂಭಿಸಲಾಗುತ್ತಿದೆ. 2028ರಲ್ಲಿ ದಿಲ್ಲಿ ಹೈಕಮಾಂಡ್ ನಿಂದ ಮುಕ್ತವಾದ ಕನಾಟಕದ ಶ್ರೇಯೋಭಿವೃದ್ಧಿಗೆ ಬದ್ಧವಾದ ಪಕ್ಷವೊಂದರ ಮೂಲಕ ಕನ್ನಡ ಜನತೆ ತಮ್ಮ ನಾಡನ್ನು ತಾವೇ ಆಳಬೇಕೆಂಬುದು ನಮ್ಮೆಲ್ಲರ ಧ್ಯೇಯವಾಗಿದೆ ಎಂದರು. ಸಮಾರಂಭದಲ್ಲಿ ಮುಖಂಡರಾದ ಎಂ.ಗೋಪಿನಾಥ್, ಮಂಜುನಾಥ ಪಾಟೀಲ್, ಉಮೇಶ್ ಪಾಟೀಲ್, ಎನ್.ಮೂರ್ತಿ, ಗುತ್ಯಪ್ಪ ಗಾಮ, ಲೋಕೇಶ್, ಎ.ಡಿ.ಶಿವಪ್ಪ ಇದ್ದರು.

ರಾಜಕೀಯ ಪಕ್ಷಗಳು ಸಂಪೂರ್ಣ ವಿಫಲ

ಶಿವಮೊಗ್ಗ: ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಸಂಪೂರ್ಣ ಭ್ರ ಷ್ಟವಾಗಿದ್ದು ರೈತ ಸಂಘಟನೆಗಳು ಈ ಪಕ್ಷಗಳನ್ನು ತಬ್ಬಿಕೊಂಡಿರಲು ಸಾಧ್ಯವಿಲ್ಲ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜಕಾರಣ ಕಾರ್ಯದಲ್ಲಿ ರಾಜಕೀಯ ಪಕ್ಷಗಳು ಸಂಪೂರ್ಣ ವಿಫಲವಾಗಿವೆ. ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ಎಲ್ಲರೂ ಕಾರ್ಪೋರೇಟ್ ಕಂಪನಿಗಳ ಎದುರು ಗುಲಾಮರಾಗಿದ್ದಾರೆ ಎಂದ ಅವರು ದಲಿತ, ಭಾಷಾ, ಕಾರ್ಮಿಕ, ಪರಿಸರ ಚಳವಳಿಗಾರರು, ವಿದ್ಯಾರ್ಥಿಗಳು, ಯುವ ಜನರು ಇರುವ ಪರ್ಯಾಯ ಪಕ್ಷವೊಂದರ ರಚನೆ ತಮ್ಮ ಉದ್ದೇಶವಾಗಿದೆ ಎಂದು ತಿಳಿಸಿದರು. ಯಾವುದೇ ಪಕ್ಷಕ್ಕೂ ಸಿದ್ಧಾಂತ ಎನ್ನುವುದಿಲ್ಲ. ಈ ಹಿಂದೆ ಪಿ.ವಿ.ನರಸಿಂಹ ರಾವ್, ಡಾ.ಮನಮೋಹನ ಸಿಂಗ್ ಅವರ ಆರ್ಥಿಕ ನೀತಿಯನ್ನೇ ಕೇಂದ್ರದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಸರಕಾರ ಜಾರಿಗೆ ತರುತ್ತಿದೆ. ಬಿಜೆಪಿಗೆ ದೇಶದ ಆರ್ಥಿಕ ನೀತಿಯೇ ಗೊತ್ತಿಲ್ಲ ಎಂದು ಕೋಡಿಹಳ್ಳಿ ಟೀಕಿಸಿದರು. ಸಿದ್ದರಾಮಯ್ಯ ಮಂಡಿಸುವ ಬಜೆಟ್ ನಲ್ಲಿ ರೈತರ ಅನುಕೂಲಕ್ಕಾಗಿ 10 ಸಾವಿರ ಕೋಟಿ.ಹಣವನ್ನು ಆವೃತ್ತ ನಿಧಿಯಾಗಿ ಇಡಬೇಕು ಎಂದು ಆಗ್ರಹಿಸಿದ ಅವರು ರೈತರಿಗೆ ಬೀಜೋತ್ಪನ್ನಕ್ಕಾಗಿ ಸೀಡ್ ಬ್ಯಾಂಕ್ ಸ್ಥಾಪಿಸಬೇಕು ಮತ್ತು ರೈತರ ಸಮಪೂರ್ಣ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ನುಡಿದಂತೆ ನಡೆದಿದ್ದೇವೆ: ಸಚಿವ ಮುನಿಯಪ್ಪ

ಶಿವಮೊಗ್ಗ: ನಾವು ಐದು ಕೆಜಿ ಅಕ್ಕಿಯನ್ನು ಕೊಡುತ್ತೇವೆ ಎಂದು ಕಳೆದ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದನ್ನು ಜಾರಿಗೊಳಿಸಿ ನುಡಿದಂತೆ ನಡೆದಿದ್ದೇವೆ ಎಂದು ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು. ಭಾನುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಹಿಂದಿನ ಬಿಜೆಪಿ ಸರಕಾರ ಇದ್ದಾಗ 2.95 ಲಕ್ಷ ಬಿಪಿಎಲ್ ಕಾರ್ಡ್‌ಗಳು ಪರಿಷ್ಕರಣೆಯಲ್ಲಿ ಇದ್ದವು. ನಾವು ಅಧಿಕಾರಕ್ಕೆ ಬಂದ ಮೇಲೆ ಅದನ್ನ ಪರಿಷ್ಕರಣೆ ಮಾಡಲು ತಿಳಿಸಿದೆ. ಅದರಲ್ಲಿ 1.65 ಲಕ್ಷ ಕಾರ್ಡಗಳನ್ನು ಬಿಪಿಎಲ್ ಗೆ ಹಾಗೂ ಉಳಿದ ಕಾರ್ಡುಗಳನ್ನು ಎಪಿಎಲ್ ಗೆ ಸೇರಿಸಿದ್ದೇವೆ ಎಂದರು. ಫೆಬ್ರವರಿ ತಿಂಗಳಿನಿಂದ ಪ್ರತಿ ತಿಂಗಳು ಅಕ್ಕಿ ಕೊಡಲು ನಿರ್ಧಾರಿಸಿದ್ದೇವೆ ಎಂದ ಸಚಿವರು ಇದಕ್ಕೆ 2.10 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಬೇಕಾಗುತ್ತದೆ. ಈಗಾಗಲೇ ಹಣವನ್ನ ಎಫ್ಸಿಐಗೆ ಪಾವತಿ ಮಾಡಿದ್ದೇವೆ. ಹಾಗಾಗಿ ಫೆಬ್ರವರಿ ತಿಂಗಳ ಅಕ್ಕಿಯನ್ನು ಸೇರಿಸಿಕೊಡಲಾಗುವುದು ಎಂದರು. ಈ ಬಜೆಟ್ ನಲ್ಲಿ ಗ್ಯಾರಂಟಿ ಯೋಜನೆಗಳ ಜತೆಗೆ ಅಭಿವೃದ್ಧಿಯ ಯೋಜನೆಗಳು ಬರಲಿವೆ. ಡಿಕೆ ಶಿವಕುಮಾರ್ ಅವರು ಬಿಜೆಪಿಗೆ ಸೇರ್ಪಡೆ ಆಗುತ್ತಾರೆ ಎಂಬ ವರದಿಗಳ ಬಗ್ಗೆ ಮಾತನಾಡಿದ ಅವರು, ಡಿಕೆಶಿ ಅವರು ಬೇರೆ ಯಾವ ಪಕ್ಷಕ್ಕೂ ಹೋಗುವುದಿಲ್ಲ. ಕೆಪಿಸಿಸಿ ಅಧ್ಯಕ್ಷರಾಗಿ ಹಾಗೂ ಉಪಮುಖ್ಯಮಂತ್ರಿಗಳಾಗಿ ಡಿಕೆ ಶಿವಕುಮಾರ್ ಅವರೇ ಮುಂದುವರೆಯುತ್ತಾರೆ ಎಂದರು.

ಸಮಾಚಾರ ಸಣ್ಣದಲ್ಲ

ಟಾಸ್ಕ್ ಫೋರ್ಸ್ ಸಮಿತಿ ಸಭೆ ಇಂದು

ದಾವಣಗೆರೆ: ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ ಅವರ ಅಧ್ಯಕ್ಷತೆಯಲ್ಲಿ ಮಾ. 3ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಜಿಲ್ಲಾ ಕಾರ್ಯಕಾರಿ ಸಮಿತಿ ಹಾಗೂ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ ಆಯೋಜಿಸಲಾಗಿದೆ ಎಂದು ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ಬೃಹತ್ ಉದ್ಯೋಗ ಮೇಳ ಮಾ.15ರಂದು

ದಾವಣಗೆರೆ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮತ್ತು ಜಿಲ್ಲಾ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಹಯೋಗದಲ್ಲಿ ಮಾರ್ಚ್ 15ರಂದು ನಗರದ ಸರಕಾರಿ ಐಟಿಐ ಕಾಲೇಜಿನ ಆವರಣದಲ್ಲಿ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಉದ್ಯೋಗದಾತ 40ಕ್ಕೂ ಹೆಚ್ಚು ಬೃಹತ್ ಬಹು ರಾಷ್ಟ್ರೀಯ ಕಂಪನಿಗಳು, ಕೈಗಾರಿಕೆಗಳು ಭಾಗವಹಿಸುತ್ತಿದ್ದು ವಿವಿಧ ಕ್ಷೇತ್ರಗಳಲ್ಲಿ ಸುಮಾರು ಅವಶ್ಯಕವಿರುವ 3000ಕ್ಕೂ ಹೆಚ್ಚು ಹುದ್ದೆಗಳಿಗೆ ಅರ್ಹ ಯುವಕ, ಯುವತಿಯರನ್ನು ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಆಸಕ್ತ ಯುವಕ ಯುವತಿಯರು ತಮ್ಮ ವಿದ್ಯಾರ್ಹತೆಯ ದಾಖಲಾತಿಗಳೊಂದಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಪಡೆದವರು ಉದ್ಯೋಗಮೇಳದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ: 08192-259447, 7892956667 ಸಂಪರ್ಕಿಸಲು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಹಾಗೂ ಜಿಪಂ ಸಿಇಒ ಸುರೇಶ್ ಬಿ. ಇಟ್ನಾಳ್ ತಿಳಿಸಿದ್ದಾರೆ.

ಮಾಸಿಕ ಇಷ್ಟಲಿಂಗ ದೀಕ್ಷಾ ಸಂಸ್ಕಾರ ಅವಶ್ಯ

ಹೊಸದುರ್ಗ: ಮನುಷ್ಯ ಭೂತಕಾಲದ ಬಗ್ಗೆ ಯೋಚಿಸದೆ ಭವಿಷ್ಯದ ಬಗ್ಗೆ ಚಿಂತಿಸದೇ ವರ್ತಮಾನದಲ್ಲಿ ಸಂಸ್ಕಾರವಂತನಾಗಿ ಬದುಕಬೇಕು ಎನ್ನುವ ಸಂಕಲ್ಪ ಮಾಡಿಕೊಳ್ಳಬೇಕು. ಇದಕ್ಕೆ ಲಿಂಗದೀಕ್ಷಾ ಸಂಸ್ಕಾರ ಬಹಳ ಮುಖ್ಯ ಎಂದು ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು. ತಾಲೂಕಿನ ಸಾಣೇಹಳ್ಳಿ ಗುರುಬಸವ ಮಹಾಮನೆಯಲ್ಲಿ ಏರ್ಪಡಿಸಿದ್ದ ಮಾಸಿಕ ಇಷ್ಟಲಿಂಗ ದೀಕ್ಷಾ ಸಂಸ್ಕಾರದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದರು. ದೀಕ್ಷೆ ಎಂದರೆ ಕೊಡುವುದು ಕಳೆಯುವುದು. ದೇವರ ಬಗ್ಗೆ ಇದ್ದ ಅಜ್ಞಾನವನ್ನು ಕಳೆದುಕೊಂಡು ಸುಜ್ಞಾನ ಪಡೆದುಕೊಳ್ಳಬೇಕು. ನಂತರ ನಿಷ್ಠೆ ಬದ್ಧತೆಯಿಂದ ಬದುಕುವುದೇ ದೀಕ್ಷೆ, ಭಗವಂತ ಸರ್ವಾಂತರ್ಯಾಮಿ. ಹೊರಗಡೆ ಇರುವ ದೇವರು ನಮ್ಮೊಳಗಡೆ ಇಲ್ವಾ ಎನ್ನುವ ಪ್ರಶ್ನೆ ಹಾಕಿ ಇಷ್ಟಲಿಂಗದ ಪರಿಕಲ್ಪನೆಯನ್ನು ಬಸವಣ್ಣನವರು ಜಾರಿಗೆ ತಂದರು. ಬಸವಣ್ಣ ದೇಹಾಲಯದ ಮೂಲಕ ಜಂಗಮತ್ವವನ್ನು ಸಾರಿ ಜೀವಂತಿಕೆಯನ್ನು ಕಲ್ಪನೆ ಕೊಟ್ಟರು ಎಂದು ತಿಳಿಸಿದರು. ಸಂಗೀತ ಶಿಕ್ಷಕ ನಾಗರಾಜ್ ಹೆಚ್.ಎಸ್ ವಚನಗಳನ್ನು ಹೇಳಿಕೊಟ್ಟರು. ಸಿರಿಮಠ ಹಾಗೂ ಧನಂಜಯ ದೀಕ್ಷಾ ಕಾರ್ಯವನ್ನು ಸಿದ್ಧತೆ ಮಾಡಿದರು.

ಶ್ರವಣ ದೋಷದಿಂದ ಮಕ್ಕಳ ಕಲಿಕೆ ಮಂದ

ಚಿತ್ರದುರ್ಗ: ಶ್ರವಣದೋಷದ ಕಾರಣದಿಂದ ಮಕ್ಕಳ ಕಲಿಕೆ ಹಿಂದುಳಿಯುವಿಕೆ ಆಗಬಾರದು ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಕೃಷ್ಣನಾಯ್ಕ್ ಹೇಳಿದರು. ನಗರದ ಎಸ್.ಜೆ.ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಜಿಲ್ಲಾ ಆರೋಗ್ಯ ಇಲಾಖೆ, ರಾಷ್ಟ್ರೀಯ ಶ್ರವಣದೋಷ ನಿವಾರಣಾ ಮತ್ತು ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ವಿಶ್ವ ಶ್ರವಣ ದಿನದ ಪ್ರಯುಕ್ತ 400 ವಿದ್ಯಾರ್ಥಿಗಳಿಗೆ ಆಡಿಯೋ ಮೆಟ್ರಿಕ್ ಉಪಕರಣದ ಮೂಲಕ ಕೇಳಿಸಿಕೊಳ್ಳುವ ಸಾಮರ್ಥ್ಯದ ಪರೀಕ್ಷೆ ಮತ್ತು ಮಾಹಿತಿ ಶಿಕ್ಷಣ ಸಂವಹನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ಶ್ರವಣ ಸಾಮರ್ಥ್ಯ ಸರಿಯಾಗಿ ಇರದಿದ್ದರೆ ಕಲಿಕಾ ಚಟುವಟಿಕೆಯಲ್ಲಿ ಹಿಂದುಳಿಯುತ್ತಾರೆ, ಸರಿಯಾದ ಸಮಯದಲ್ಲಿ ಸೂಕ್ತ ತಪಾಸಣೆ ಚಿಕಿತ್ಸೆ ಪಡೆಯದಿದ್ದಲ್ಲಿ ಕಿವುಡುತನ ಕಟ್ಟಿಟ್ಟ ಬುತ್ತಿ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆಡಿಯೋ ಲಾಜಿಸ್ಟ್ ದಿವ್ಯ, ಸಹಾಯಕ ಆಡಿಯೋ ಲಾಜಿಸ್ಟ್ ಜನಾರ್ಧನ್, ನೆಹರು ನಗರ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ಗುರುಮೂರ್ತಿ, ಗೋಪಾಲಕೃಷ್ಣ, ಕಾಲೇಜಿನ ಪ್ರಾಂಶುಪಾಲೆ ದಿವ್ಯ ಹಾಗೂ ಉಪನ್ಯಾಸಕರು ಇದ್ದರು. ಕಾರ್ಯಕ್ರಮದಲ್ಲಿ 400 ವಿದ್ಯಾರ್ಥಿಗಳ ಕೇಳುವ ಸಾಮರ್ಥ್ಯ ಪರೀಕ್ಷೆ ನಡೆಸಲಾಯಿತು. ಮೂರು ಮಕ್ಕಳಿಗೆ ಉನ್ನತ ಮಟ್ಟದ ತಪಾಸಣೆಗೆ ನಿರ್ದೇಶಿಸಲಾಯಿತು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಡಿ.ಕೆ.ಶಿವಕುಮಾರ್} ಉಪಮುಖ್ಯಮಂತ್ರಿ

ಸಂಸತ್ತಿನಲ್ಲಿ ದಕ್ಷಿಣ ರಾಜ್ಯಗಳ ಸಂಖ್ಯಾಬಲವನ್ನು ಕಡಿಮೆ ಮಾಡಲು ಕೇಂದ್ರ ಬಿಜೆಪಿ ಸರಕಾರ ಮುಂದಾಗಿದ್ದು, ಕಾಂಗ್ರೆಸ್ ಇದರ ವಿರುದ್ಧ ಹೋರಾಟ ಮಾಡಲಿದೆ. ಕೇಂದ್ರ ಸರಕಾರ ಸಂಸತ್ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಲು ಮುಂದಾಗಿರುವುದನ್ನು ಕಾಂಗ್ರೆಸ್ ಪಕ್ಷ ವಿರೋಧಿಸುತ್ತದೆ. ಇದು ಸರಿಯಲ್ಲ.

ಕಾವ್ಯ ಕುಂಚ-5 ಕವನ ಸಂಕಲನ 'ಕುಂಚ ಕೈಪಿಡಿ' ಪುಸ್ತಕ ಬಿಡುಗಡೆ

ಪದ್ಯಗಳಲ್ಲಿ ಗುಣಮಟ್ಟ ಕಣ್ಮರೆ

ದಾವಣಗೆರೆಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕಾವ್ಯ ಕುಂಚ-5 ಕವನ ಸಂಕಲನ ಮತ್ತು ಕುಂಚ ಕೈಪಿಡಿ ಪುಸ್ತಕ ಲೋಕಾರ್ಪಣೆ ಮಾಡಲಾಯಿತು.

ದಾವಣಗೆರೆ: ಕವಿಗಳಾದವರಿಗೆ ಹಳಗನ್ನಡ ಮತ್ತು ಹೊಸಗನ್ನಡದ ಆಳವಾದ ಅಧ್ಯಯನವಿದ್ದಾಗ ಮಾತ್ರ ಸತ್ವ ಭರಿತ ಕವಿತೆ ರಚಿಸಲು ಸಾಧ್ಯ ಎಂದು ಮೂಡಬಿದಿರೆಯ ಸಾಹಿತಿ ಡಾ.ರಾಮಕೃಷ್ಣ ಶಿರೂರು ಪ್ರತಿಪಾದಿಸಿದರು.

ನಗರದ ರೋಟರಿ ಬಾಲಭವನದಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕಾವ್ಯ ಕುಂಚ-5 ಕವನ ಸಂಕಲನ ಮತ್ತು ಕುಂಚ ಕೈಪಿಡಿ ಲೇಖನಗಳ ಸಂಗ್ರಹದ ಪುಸ್ತಕ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು.

ಪ್ರಸ್ತುತ ಹೊಸಗನ್ನಡದ ಕಾಲದಲ್ಲಿ ಸಾವಿರಾರು ಕವಿಗಳು ಸಾಹಿತ್ಯ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಆದರೆ, ಬಹುತೇಕರ ಪದ್ಯಗಳಲ್ಲಿ ಗುಣಮಟ್ಟ ಕಣ್ಮರೆಯಾಗಿದೆ. ಕವಿಗಳಾದವರು ಹೊಸಗನ್ನಡ ಮತ್ತು ಹಳಗನ್ನಡ ಓದಿನಲ್ಲಿ ನಿರಂತರತೆ ಕಾಪಿಟ್ಟುಕೊಂಡರೆ ಉತ್ತಮ ಕವಿತೆಗಳನ್ನು ಬರೆಯಲು ಅನುಕೂಲ ಎಂದು ಹೇಳಿದರು.

ಒಬ್ಬ ಬರಹಗಾರ ಸಾಹಿತ್ಯ ಕ್ಷೇತ್ರದಲ್ಲಿ ಶಾಶ್ವತವಾಗಿ ಉಳಿಯಬೇಕಾದರೆ ಆಳವಾದ ಅಧ್ಯಯನ ಅವಶ್ಯ. ಈ ನಿಟ್ಟಿನಲ್ಲಿ ಯುವ ಬರಹಗಾರರು ಕಾರ್ಯೋನ್ಮುಖರಾಗಬೇಕು ಎಂದು ಅವರು ಕಿವಿಮಾತು ಹೇಳಿದರು.

ನನಗೆ ಕಷ್ಟವಿರಲಿ, ಜಗತ್ತಿಗೆ ಸುಖವಿರಲಿ ಎಂಬ ಕವಿ ಮನಸ್ಸು ವಿಶಿಷ್ಟವಾದ ಆಶಯ ಹೊಂದಿದ್ದು, ಕವಿ ಸಮಾಜದಲ್ಲಿರುವ ಸಮಸ್ಯೆಗಳ ಮೇಲೂ ಬೆಳಕು ಚೆಲ್ಲಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಯಾವುದೇ ವಿಶ್ವ ವಿದ್ಯಾನಿಲಯ ಮಾಡದ ಕೆಲಸವನ್ನು ಈ ಸಂಸ್ಥೆ ಮಾಡುತ್ತಿರುವುದು ಶ್ಲಾಘನೀಯ ಎಂದು ಸಹ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಯಚೂರಿನ ಸಾಹಿತಿ ನಾನಾಗೌಡ ಮಾಲಿ ಪಾಟೀಲ್ ಮಾತನಾಡಿ, ಕವಿಗಳು ಇರುವುದನ್ನ ನೇರವಾಗಿ ಸಮಾಜಕ್ಕೆ ತಿಳಿಸುವ ಮೂಲಕ ಸಮಾಜದಲ್ಲಿರುವ ತಲ್ಲಣ, ಸಮಸ್ಯೆಗಳಿಗೆ ಧ್ವನಿಯಾಗಬೇಕು ಎಂದು ಸಲಹೆ ನೀಡಿದರು.

ಕವನ ಸಂಕಲನದ ಪ್ರಧಾನ ಸಂಪಾದಕ ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮಕ್ಕೂ ಮುನ್ನ ನಡೆದ ಕವಿಗೋಷ್ಠಿಯಲ್ಲಿ ಕವಿ, ಕವಯತ್ರಿಯರು ಸ್ವರಚಿತ ಕವನ ವಾಚಿಸಿದರು.

ಕಾರ್ಯಕ್ರಮದಲ್ಲಿ ರಾಜಶೇಖರ ಬೆನ್ನೂರು, ಜ್ಯೋತಿ ಗಣೇಶ್ ಶೆಣೈ, ಪ್ರಭಾ ರವೀಂದ್ರ, ಲಲಿತಾ ಕಲ್ಲೇಶ್, ವಿ. ಕೃಷ್ಣಮೂರ್ತಿ, ಕೆ.ಸಿ.ಉಮೇಶ್ ಇದ್ದರು.

37 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಶಸ್ತಿ

ನಿರಂತರವಾಗಿ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುತ್ತಿರುವ ಕಲಾಕುಂಚ ಸಂಸ್ಥೆಯು, ಕಳೆದ 35 ವರ್ಷಗಳಿಂದ ಎಸ್ಸೆಸ್ಸೆಲ್ಸಿಯಲ್ಲಿ ಕನ್ನಡದಲ್ಲಿ ಪರಿಪೂರ್ಣ ಅಂಕ ಪಡೆದ ಮತ್ತು ಹೆಚ್ಚು ಅಂಕಗಳಿಸಿದ 37 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಗುರುತಿಸಿ, ಪ್ರಶಸ್ತಿ ಪ್ರದಾನ ಮಾಡಿದೆ ಎಂದು ಶಿರೂರು ಶ್ಲಾಘಿಸಿದರು.

ಸಂಸ್ಕೃತಿ ಉಳಿವಿಗಾಗಿ ನಿರಂತರ ಕಾರ್ಯಕ್ರಮಗಳ ಆಯೋಜನೆ

ಹೊನ್ನಾಳಿ: ಮಕ್ಕಳಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಹಿರೇಕಲ್ಮಠದ ವತಿಯಿಂದ ಸಂಸ್ಕೃತಿ-ಸಂಸ್ಕಾರ ಕಾರ್ಯಕ್ರಮವನ್ನು ಪ್ರತಿ ಅಮಾವಾಸ್ಯೆಯಂದು ಆಯೋಜಿಸಲಾಗುತ್ತಿದ್ದು, ಪೋಷಕರು ಇದರ ಸದುಪಯೋಗಪಡೆದುಕೊಳ್ಳಬೇಕೆಂದು ಒಡೆಯರ್ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಕರೆ ನೀಡಿದರು.

ಪಟ್ಟಣದ ಹಿರೇಕಲ್ಮಠದಲ್ಲಿ ಶಿವರಾತ್ರಿ ಅಮಾವಾಸ್ಯೆ ಮತ್ತು ಶ್ರೀಚನ್ನಪ್ಪಸ್ವಾಮಿ ಬೆಳ್ಳಿ ರಥೋತ್ಸವದ ಧರ್ಮಸಭೆಯನ್ನುದ್ದೇಶಿಸಿ ಅವರು ಆಶೀರ್ವಚನ ನೀಡಿದರು.

ಮಕ್ಕಳ ಹುಟ್ಟುಹಬ್ಬವನ್ನು ದೀಪ ಬೆಳಗಿಸುವುದರ ಮೂಲಕ ಆಚರಿಸಿ, ಸಿಹಿ ಹಂಚಿ ಸಂಭ್ರಮಿಸಿಕೊಳ್ಳಲು ಮುಕ್ತ ಅವಕಾಶ ಕಲ್ಪಿಸಿದ್ದು ಮಕ್ಕಳ ಪೋಷಕರ ಪಾಲ್ಗೊಳ್ಳುವಿಕೆ ಅಗತ್ಯವೆಂದರು.

ಪ್ರತಿಯೊಬ್ಬರ ಬದುಕು ಹಸನಾಗಿಸಲು ಶ್ರೀಮಠದವತಿಯಿಂದ ನಿರಂತರವಾಗಿ ಧರ್ಮಸಭೆಗಳು, ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಮಾಲಿಕೆಗಳು, ಸಂಗೀತ ಘೋಷ್ಠಿ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು ಸರ್ವ ಭಕ್ತಾದಿಗಳು ಇವುಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳಬೇಕೆಂದರು. ಲಿಂ.ಡಾ.ಎಚ್.ತಿಪ್ಪೇರುದ್ರಸ್ವಾಮಿ ಮತ್ತು ಲಿಂ.ಎಚ್.ಎನ್.ಷಡಾಕ್ಷರಿ ಶಾಸ್ತ್ರಿ ಭಾವಿಕೆರೆ ಇವರುಗಳ ದತ್ತಿ ಉಪನ್ಯಾಸ ಕಾರ್ಯಕ್ರಮ ಹಾಗೂ ಚಂದ್ರಶೇಖರ ಶಿವಾಚಾರ್ಯ ಶ್ರೀಪ್ರಶಸ್ತಿ ಪ್ರಧಾನ ಮಾಡಲಿದ್ದು, ವಿಶೇಷ ಪೂಜಾ ಕೈಂಕರ್ಯಗಳು ಕೂಡ ನೆರವೇರಲಿದ್ದು ಈ ಎಲ್ಲಾ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಅವರು ವಿನಂತಿಸಿದರು. ಶ್ರೀ ಮಠದ ಪ್ರಧಾನ ಅರ್ಚಕ ಅನ್ನದಾನಯ್ಯ ಶಾಸ್ತ್ರಿ, ನಿಜಗುಣ ಶಾಸ್ತ್ರಿ, ದಾನಪ್ಪ,ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಪಟ್ಟಣದ ಹಿರೇಕಲ್ಮಠದಲ್ಲಿ ಮಕ್ಕಳ ಹುಟ್ಟುಹಬ್ಬವನ್ನು ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ದೀಪ ಬೆಳಗಿಸುವುದರ ಮೂಲಕ ಆಚರಿಸಿದರು.

ಬಿಸಿಯೂಟ ಸಿಬ್ಬಂದಿಗೆ ಸ್ಪಂದನೆ

ಪಟ್ಟಣದ ಶಾದಿಮಹಲ್ ಸಭಾಂಗಣದಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಶಾಸಕ ಬಿ.ಜಿ.ಗೋವಿಂದಪ್ಪ ಅವರಿಗೆ ಸನ್ಮಾನಿಸಿದರು.

ಹೊಸದುರ್ಗ: ಅಕ್ಷರ ದಾಸೋಹ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಬಿಸಿಯೂಟ ಸಿಬ್ಬಂದಿಗೆ ಅಗತ್ಯ ಸೌಲಭ್ಯ ಕಲ್ಪಿಸುವ ಸಂಬಂಧ ಸರಕಾರದ ಜೊತೆ ಮಾತುಕತೆ ನಡೆಸುತ್ತೇನೆ. ಅವರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದು ಸರಕಾರದ ಕರ್ತವ್ಯ ಎಂದು ಶಾಸಕ ಬಿ.ಜಿ.ಗೋವಿಂದಪ್ಪ ತಿಳಿಸಿದರು.

ಪಟ್ಟಣದ ಶಾದಿಮಹಲ್ ಸಭಾಂಗಣದಲ್ಲಿ ಭಾನುವಾರ ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ ಯೋಜನೆಯಡಿ ತಾಲೂಕಿನ ಸರಕಾರಿ, ಅನುದಾನಿತ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಧ್ಯಾಹ್ನದ ಬಿಸಿಯೂಟ ಮುಖ್ಯಅಡುಗೆಯವರು ಹಾಗೂ ಸಹಾಯಕಿಯರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಧ್ಯಾಹ್ನದ ಬಿಸಿಯೂಟ ವಿದ್ಯಾರ್ಥಿಗಳ ಕಲಿಕೆಗೆ ಚೈತನ್ಯ ನೀಡಬೇಕು ಎಂಬುದು ಅಕ್ಷರ ದಾಸೋಹ ಯೋಜನೆಯ ಉದ್ದೇಶವಾಗಿದೆ.

> ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಳಕ್ಕೆ ಮಧ್ಯಾಹ್ನದ ಬಿಸಿಯೂಟ ಯೋಜನೆ ಸಹಕಾರಿಯಾಗಿದೆ. ಬಿಸಿಯೂಟ ಸಿಬ್ಬಂದಿ ಅಡುಗೆ ಸಿದ್ಧಪಡಿಸುವ ವೇಳೆ ಸ್ವಚ್ಛತೆ ಕಾಪಾಡಬೇಕು.
> -ಸುನಿಲ್ ಕುಮಾರ್
> ತಾ.ಪಂ ಸಿಇಒ

ಶುಚಿರುಚಿಯಾದ ಊಟವನ್ನು ಮಕ್ಕಳಿಗೆ ತಯಾರಿಸುವ ಬಿಸಿಯೂಟ ನೌಕರರ ಕೆಲಸ ಸಾರ್ಥಕವಾದದ್ದು ಎಂದರು.

ಭಾರತ್ ಗ್ಯಾಸ್ ಏಜೆನ್ಸಿಯ ಸಿಬ್ಬಂದಿ ಅವರು ಶಾಲೆಗಳಲ್ಲಿ ಸಿಲಿಂಡರ್ ಬಳಸುವಾಗ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಕುರಿತು ಮಾಹಿತಿ ನೀಡಿದರು. ಬಿಸಿಯೂಟ ನೌಕರರ ಫೆಡರೇಷನ್ ಕುಮಾರಸ್ವಾಮಿ, ಮುಖಂಡರಾದ ಆಗ್ರೋಶಿವಣ್ಣ, ಶಿಕ್ಷಣ ಸಂಯೋಜಕ ಶಶಿಧರ್, ಬಿ. ಆರ್. ಪಿ, ಸಿ ಆರ್ ಪಿಗಳು ಹಾಜರಿದ್ದರು.

ಅಧಿಕಾರಿಗಳು ಕ್ರಿಯಾಯೋಜನೆ ರೂಪಿಸಿ ಕೆಲಸ ಮಾಡಲಿ ಸಂಸದೆ ಪ್ರಭಾ ಸೂಚನೆ

ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಹೆಚ್ಚಾಗಲಿ

ದಾವಣಗೆರೆ: ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳಾಗಬೇಕು. ಗ್ರಾಪಂಗಳು ನಮ್ಮ ವ್ಯವಸ್ಥೆ ಒಂದು ಭಾಗ. ಆದ್ದರಿಂದ ಅಭಿವೃದ್ಧಿ ಕಾರ್ಯಗಳಿಗಾಗಿ ಅನುದಾನ ನೀಡಲಾಗುತ್ತದೆ. ಅದನ್ನು ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸರಕಾರ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಪಾರದರ್ಶಕವಾಗಿ ಗ್ರಾಮದ ಸಮಸ್ಯೆ ಅರಿತು ಕೆಲಸ ಮಾಡಬೇಕು ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸಲಹೆ ನೀಡಿದರು.

> ಮರಿಯಮ್ಮನ ಹಳ್ಳಿಯಿಂದ ಶಿವಮೊಗ್ಗ ರಸ್ತೆ ವಿಜಯನಗರ,ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿದೆ ಈ ಮೂರು ಜಿಲ್ಲೆಯ ಸಂಸದರು ಈಗಾಗಲೇ ಮಾತನಾಡಿದ್ದೇವೆ ಹಾಗೂ ಈ ಬಗ್ಗೆ ಕೇಂದ್ರ ಸಚಿವರಾದ ಗಡ್ಕರಿಯವರ ಬಳಿ ಚರ್ಚೆ ನಡೆಸಿ ಅವಶ್ಯಕತೆಯ ಬಗ್ಗೆ ಗಮನಕ್ಕೆ ತರಲಾಗಿದೆ. ಎಸ್ ಎಚ್ 25 ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲು ಮನವಿ ಸಲ್ಲಿಸಲಾಗಿದೆ.
> -ಡಾ.ಪ್ರಭಾ ಮಲ್ಲಿಕಾರ್ಜುನ್, ಸಂಸದೆ

ಹರಿಹರ ತಾಲೂಕಿನ ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದಲ್ಲಿ ಗ್ರಾಮ ಪಂಚಾಯತ್ ನೂತನ ಕಟ್ಟಡವಾದ ರಾಜೀವ್ ಗಾಂಧಿ ಸೇವಾ ಕೇಂದ್ರವನ್ನು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸಿದರು.

ಹರಿಹರ ತಾಲೂಕಿನ ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಹಾಗೂ ಗ್ರಾಮ ಸ್ವರಾಜ್ ಅಭಿಯಾನ ಯೋಜನೆಯಡಿ ನಿರ್ಮಾಣ ಮಾಡಲಾಗಿರುವ ಗ್ರಾಪಂ ನೂತನ ಕಟ್ಟಡವಾದ ರಾಜೀವ್ ಗಾಂಧಿ ಸೇವಾ ಕೇಂದ್ರ, ಉದ್ಘಾಟಿಸಿ ಮಾತನಾಡಿದರು.

ಜೊಡೆತ್ತುಗಳು ಅಂದರೆ ಗ್ರಾಪಂ ಹಾಗೂ ಪಿಡಿಒಗಳು. ಆದ್ದರಿಂದ ಜೋಡೆತ್ತುಗಳು ಸಮರ್ಪಕವಾಗಿ ಕೆಲಸ ಮಾಡಿದಾಗ ಗ್ರಾಮಗಳ ಅಭಿವೃದ್ಧಿ ಸಾಧ್ಯ. ಆಗ ಗಾಂಧೀಜಿಯವರ ಕಲ್ಪನೆಯಂತೆ ಗ್ರಾಮಗಳ ಅಭಿವೃದ್ಧಿ ಯಾಗುತ್ತದೆ.ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಿಯಾಯೋಜನೆ ರೂಪಿಸಿ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದರು.

ವೇದಿಕೆಯಲ್ಲಿ ಹರಿಹರ ಶಾಸಕ ಬಿ.ಪಿ. ಹರೀಶ್, ಗ್ರಾ.ಪಂ ಅಧ್ಯಕ್ಷೆ ಉಮಾದೇವಿ ಶಿವ ರಾಮಚಂದ್ರಪ್ಪ, ಗ್ರಾಪಂ ಉಪಾಧ್ಯಕ್ಷ ಹರೀಶ್, ಮುಖಂಡರಾದ ಶ್ರೀನಿವಾಸ್ ನಂದಿಗಾವಿ, ಹನಗವಾಡಿ ಕುಮಾರ್ ಇದ್ದರು.

ಉದ್ಯೋಗ ಮೇಳಕ್ಕೆ ಚಾಲನೆ ನೀಡಿದ ಸಚಿವ ಡಿ.ಸುಧಾಕರ್

ಕಂಪನಿಗಳು ಯುವ ಜನತೆಗೆ ಭವಿಷ್ಯ ಕಲ್ಪಿಸಲಿ

ಚಿತ್ರದುರ್ಗ: ಜಿಲ್ಲೆಯ ಯುವ ಜನತೆಗೆ ಉಜ್ವಲ ಭವಿಷ್ಯ ರೂಪಿಸಲು ವಿವಿಧ ಕಂಪನಿಗಳು ಅಗತ್ಯ ಸಹಕಾರ ಹಾಗೂ ಉತ್ತೇಜನ ನೀಡಬೇಕು ಎಂದು ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಹೇಳಿದರು.

ನಗರದ ಸರಕಾರಿ ಕಲಾ ಕಾಲೇಜು ಆವರಣದಲ್ಲಿ ಶನಿವಾರ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಕೌಶಲ್ಯ ಮಿಷನ್ ಇವರ ಸಂಯುಕ್ತಾಶ್ರಯದಲ್ಲಿ ಕೌಶಲ ರೋಜಗಾರ್ ಮೇಳ-ಉದ್ಯೋಗ ಮೇಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

> ರಾಜ್ಯ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆ ಅಡಿಯಲ್ಲಿ ಪದವೀಧರರಿಗೆ ರು.3000 ಹಾಗೂ ಡಿಪ್ಲೊಮಾ ಪದವೀಧರರಿಗೆ ರು.1500 ನಿರುದ್ಯೋಗ ಭತ್ಯೆ ನೀಡಲಾಗುತ್ತಿದ್ದು, ಈ ಯುವನಿಧಿಯು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಗೂ ಇಂತಹ ಉದ್ಯೋಗ ಮೇಳದಲ್ಲಿ ಭಾಗವಹಿಸಲು ಬಳಸುತ್ತಿದ್ದಾರೆ. ಜಿಲ್ಲೆಯ ಅಭ್ಯರ್ಥಿಗಳು ಸರಕಾರ ಏರ್ಪಡಿಸುವ ಇಂತಹ ಉದ್ಯೋಗ ಮೇಳದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಇದರ ಸದುಪಯೋಗ ಪಡಿಸಿಕೊಳ್ಳಬೇಕು.
> -ಡಿ. ಸುಧಾಕರ್,ಸಚಿವ

ನಗರದ ಸರಕಾರಿ ಕಲಾ ಕಾಲೇಜು ಆವರಣದಲ್ಲಿ ನಡೆದ ಉದ್ಯೋಗ ಮೇಳ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಉದ್ಘಾಟಿಸಿದರು.

ಉದ್ಯೋಗ ಮೇಳದಲ್ಲಿ 50 ಕ್ಕೂ ಹೆಚ್ಚು ವಿವಿಧ ಕಂಪನಿಗಳು ಭಾಗವಹಿಸಿರುವುದು ಸಂತೋಷದ ವಿಚಾರ. ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯ ಯುವ ಜನರು ಪ್ರತಿಭಾವಂತರಿದ್ದು, ಅವರ ಪ್ರತಿಭೆಯನ್ನು ಸದುಪಯೋಗ ಪಡಿಸಿಕೊಂಡು ಯುವ ಜನರ ಜೀವನೋಪಾಯಕ್ಕೆ ಅಡಿಗಲ್ಲಾಗಲು ಸಹಾಯ ಮಾಡಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಾಂಕೇತಿಕವಾಗಿ 5 ಜನರಿಗೆ ಉದ್ಯೋಗ ನೇಮಕಾತಿ ಪತ್ರವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ವಿತರಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ, ಟಿ. ರಘುಮೂರ್ತಿ, ಎಂ. ಚಂದ್ರಪ್ಪ, ವಿಧಾನಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಸೂರಜ್ ಎಂ.ಎನ್. ಹೆಗಡೆ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ತಾಜ್‌ಪೀರ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಆರ್.ಶಿವಣ್ಣ, ಉಪಾಧ್ಯಕ್ಷ ಡಿ.ಎನ್. ಮೈಲಾರಪ್ಪ, ತಾಲ್ಲೂಕು ಅಧ್ಯಕ್ಷ ಪ್ರಕಾಶ್ ,ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಭಾಯಾಗಡ್‌ನಲ್ಲಿ ಶಿವರಾತ್ರಿ ಹಬ್ಬದ ಆಚರಣೆ

ನ್ಯಾಮತಿ: ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿವತಿಯಿಂದ ಸೂರಗೊಂಡನಕೊಪ್ಪದ ಭಾಯಾಗಡ್‌ನಲ್ಲಿ ಪ್ರತಿ ವರ್ಷದ ಪದ್ಧತಿಯಂತೆ ವಿಶೇಷವಾಗಿ ಮಹಾಶಿವರಾತ್ರಿ ಹಬ್ಬವನ್ನು ಆಚರಿಸಲಾಯಿತು.

ಹಬ್ಬದ ಪ್ರಯುಕ್ತ ಮರಿಯಮ್ಮ, ಸಂತ ಸೇವಾಲಾಲ್‌ರ ಶಿಲಾಮೂರ್ತಿಗಳನ್ನು ವಿಶೇಷವಾಗಿ ಅಲಂಕಾರ ಮಾಡಲಾಗಿತ್ತು. ನಾಡಿನ ನಾನಾ ಭಾಗಗಳಿಂದ ಬಂದಿದ್ದ ಮಾಲಾಧಾರಿಗಳು ಮತ್ತು ಈ ಭಾಗದ ಭಕ್ತಾದಿಗಳ ಸಮ್ಮುಖದಲ್ಲಿ ಮಹಾಭೋಗ್, ವಿಶೇಷ ಪೂಜಾ ಕೈಂಕರ್ಯಗಳು ಸಂಪ್ರದಾಯ ಬದ್ಧವಾಗಿ ಜರುಗಿದವು.

ಸೇವಾಲಾಲ್ ಜಯಂತಿಗೆ ಆಗಮಿಸದ ಭಕ್ತಾದಿಗಳು ಶಿವರಾತ್ರಿ ಹಬ್ಬದಂದು ಆಗಮಿಸಿ ಪೂಜೆ ಸಲ್ಲಿಸುವುದು ವಾಡಿಕೆಯಾಗಿದೆ. ಶಿವರಾತ್ರಿ ಜಾಗರಣೆಯಂದು ಹರ-ಹರ ಶಂಕರ, ಸೇವಾಲಾಲ್ ಅವರ ಕುರಿತಾದ ಭಜನೆ, ಭಕ್ತಿ ಗೀತೆಗಳಿಗೆ ನೃತ್ಯ ಮಾಡುವುದರ ಮೂಲಕ ಭಕ್ತಾದಿಗಳು ಭಾವಪರವಶರಾದರು.

ನ್ಯಾಮತಿ ತಾಲೂಕಿನ ಸೂರಗೊಂಡನಕೊಪ್ಪದ ಭಾಯಾಗಡ್‌ನಲ್ಲಿ ವಿಶೇಷ ಪೂಜೆ, ಹೋಮ ಹವನಗಳು ನಡೆದವು.

ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿಯ ಉಪಾಧ್ಯಕ್ಷ ಹಾಗೂ ಮಠ ನಿರ್ವಹಣಾ ಸಮಿತಿ ಅಧ್ಯಕ್ಷ ಎನ್. ಹನುಮಂತನಾಯ್ಕ್, ಪ್ರಧಾನ ಕಾರ್ಯದರ್ಶಿ ನರೇನಹಳ್ಳಿ ಅರುಣ್‌ಕುಮಾರ್, ಖಜಾಂಚಿ ಕೆ.ಟಿ.ನಾಗರಾಜ್, ಪ್ರತಿಷ್ಠಾನದ ಯೋಜನಾ ನಿರ್ದೇಶಕ ಹರಿಶ್ ನಾಯ್ಕ್, ಭೋಜ್ಯಾನಾಯ್ಕ್, ನಾನಾ ನಾಯ್ಕ್ ಇದ್ದರು.

ಹರಿಹರದ ಗ್ರಂಥಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಶಾಖಾ ಪ್ರಭಾರಧಾರಕ ರವಿಕುಮಾರ್, ಓದುಗರಾದ ರಾಮಸ್ವಾಮಿ, ಸಂಜಯ್ ಪಿ., ಅಮೀರ್ ಖಾನ್, ಕೃಷ್ಣಮೂರ್ತಿ, ಗುರುನಾಥ್, ಮಂಜುನಾಥ್ ಸ್ಪರ್ಧಾತ್ಮಕ ಓದುಗರಾದ ಪ್ರಮೋದ, ಪ್ರವೀಣ್, ಚಂದನಾ, ಪ್ರದೀಪ್, ಪ್ರಜ್ವಲ್ ಕೇಶವ ರೆಡ್ಡಿ ಇದ್ದರು.

ಬಿ-ಖಾತಾಗೆ ಶುಲ್ಕ ನಿಗದಿಗೆ ಸಚಿವ ಗರಂ

ದಾವಣಗೆರೆ: ಅನಧಿಕೃತ ಬಡಾವಣೆಯ ಸೈಟ್, ಮನೆ, ಕಟ್ಟಡಗಳಿಗೆ ಡೋರ್ ನಂಬರ್ ನೀಡಲು ನಿಗದಿ ಮಾಡಿದ್ದ 10 ಸಾವಿರ ರು. ಶುಲ್ಕವನ್ನು ಗಣಿ ಮತ್ತು ಭೂ ವಿಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರ ಸೂಚನೆ ಮೇರೆಗೆ ದಾವಣಗೆರೆ ಮಹಾನಗರ ಪಾಲಿಕೆ ಆಯುಕ್ತರು ಶುಲ್ಕ ನಿಗದಿ ರದ್ದು ಪಡಿಸಿದ್ದಾರೆ. ಇ- ಆಸ್ತಿಯಡಿ ಬಿ-ಖಾತೆ ನೀಡಲು ಅಭಿವೃದ್ಧಿ ಮತ್ತು ಸುಧಾರಣೆಯ ಹೆಸರಲ್ಲಿ ದಾವಣಗೆರೆ ಮಹಾನಗರ ಪಾಲಿಕೆ 10 ಸಾವಿರ ರು. ಶುಲ್ಕ ಪಡೆಯುತ್ತಿದೆ. ರಾಜ್ಯದ ಇತರೆ ಯಾವುದೇ ಮಹಾನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳಲ್ಲಿ ಅಭಿವೃದ್ಧಿ ಮತ್ತು ಸುಧಾರಣೆ ಶುಲ್ಕ ಹೆಸರಿನಲ್ಲಿ ಹೆಚ್ಚುವರಿ ಶುಲ್ಕ ಪಡೆಯುತ್ತಿರಲಿಲ್ಲ. ಆದರೆ, ದಾವಣಗೆರೆಯಲ್ಲಿ ಮಾತ್ರ ಹೊಸದಾಗಿ ಡೋರ್ ನಂಬರ್ ನೀಡಲು ಶುಲ್ಕ ಪಡೆಯಲಾಗುತ್ತಿದೆ ಎಂದು ಬಡ ನಿವೇಶನದಾರರು ಸಚಿವರ ಗಮನಕ್ಕೆ ತಂದಿದ್ದರು. ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು ಆಯುಕ್ತರಿಗೆ ಬಡವರ ಅನೂಕೂಲಕ್ಕಾಗಿ ಕಾಂಗ್ರೆಸ್ ಸರಕಾರ ನೂತನವಾಗಿ ಜಾರಿ ಮಾಡಿರುವ ಈ- ಖಾತಾ ಅಭಿಯಾನಕ್ಕೆ ಶುಲ್ಕ ನಿಗದಿ ಮಾಡಿರುವುದು ಸರಿಯಾದ ಕ್ರಮವಲ್ಲ. ಮೊದಲು ಶುಲ್ಕ ನಿಗದಿ ಆದೇಶ ರದ್ದು ಪಡಿಸಿ, ಬಡ ವರ್ಗದ ನಿವೇಶನದಾರರಿಗೆ ಅನುಕೂಲದ ಕ್ರಮಗಳನ್ನು ಜಾರಿ ಮಾಡುವಂತೆ ಸೂಚಿಸಿದರು.

ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಹೇಳಿಕೆ- ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರ ಸಭೆ

ಕೊನೆ ಭಾಗಕ್ಕೆ ನೀರು ಪೂರೈಸಲು ಕ್ರಮ

ದಾವಣಗೆರೆ: ಭದ್ರಾ ಜಲಾಶಯದ ಕಾಲುವೆ ಮೂಲಕ ಬಿಡುವ ನೀರು ಕೊನೆ ಭಾಗದ ಅಚ್ಚುಕಟ್ಟು ದಾರರಿಗೂ ತಲುಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಜಿ.ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರೊಂದಿಗೆ ನಡೆಸಿದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭದ್ರಾ ಜಲಾಶಯದಿಂದ ಅಚ್ಚುಕಟ್ಟು ದಾರರಿಗೆ ನೀರು ಹರಿಸಿ ಒಂದೆರಡು ದಿನಗಳಲ್ಲಿ ನಿಮ್ಮ ಸಮಸ್ಯೆ ಬಗೆಹರಿಸುತ್ತೇನೆ ಎಂದು ರೈತರಿಗೆ ಭರವಸೆ ನೀಡಿದರು.

ಕಾಲುವೆಗಳಿಗೆ ಅನಧಿಕೃತವಾಗಿ ಪಂಪ್ ಅಳವಡಿಸಿ ನೀರೆತ್ತಲಾಗುತ್ತಿದೆ, ಇದರಿಂದ ಕೊನೆ ಭಾಗದ ರೈತರಿಗೆ ನೀರು ಸಿಗುತ್ತಿಲ್ಲ. ಅನಧಿಕೃತ ಪಂಪ್ ತೆರವು ಮಾಡಿ ವಿದ್ಯುತ್ ಸಂಪರ್ಕವನ್ನು ಕಡಿತ ಮಾಡಲಾಗುವುದು ಎಂದರು. ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಜಲಾಶಯದ ದುರಸ್ಥಿ ಮಾಡಿಸಿ, ಭದ್ರಾ ಇಂಜಿನಿಯರ್‌ಗಳು ವೈಜ್ಞಾನಿಕ ತಂತ್ರಜ್ಞಾನ ಬಳಸಿ ನೀರು ಪೋಲಾಗದಂತೆ ಕ್ರಮ ತೆಗೆದುಕೊಳ್ಳ ಬೇಕೆಂದರು.

ದಾವಣಗೆರೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಮಾತನಾಡಿದರು.

ಭದ್ರಾ, ನೀರಿಗಾಗಿ ರೈತರ ಆಕ್ರೋಶ

ಭದ್ರಾ ಜಲಾಶಯದ ನೀರು ನಂಬಿ ಲಕ್ಷಾಂತರ ಎಕರೆ ಭೂಮಿಯಲ್ಲಿ ರೈತರು ಬೆಳೆ ಬೆಳೆಯುತ್ತಿದ್ದಾರೆ. ನೀರನ್ನು ನಂಬಿ ಭತ್ತ ನಾಟಿ ಮಾಡಿರುವ ಮಲೇಬೆನ್ನೂರಿನ ಕೊನೆ ಭಾಗದ ರೈತರು ಸೇರಿದಂತೆ ಹತ್ತಾರು ಹಳ್ಳಿಗಳು ನೀರಿನ ದಾರಿ ಕಾಯುತ್ತಿವೆ. ತಿಂಗಳು ಸಮೀಪವಾದರೂ ಈ ಪ್ರದೇಶಕ್ಕೆ ನೀರು ಬರುತ್ತಿಲ್ಲ ಎಂದು ರೈತರು ಆಕ್ರೋಶ ವ್ಯಕ್ತ ಪಡಿಸಿದರು.

ಭದ್ರಾ ನಾಲೆ ಅಚ್ಚುಕಟ್ಟು ಪ್ರದೇಶದ ಬಹುತೇಕ ಭಾಗದಲ್ಲಿ ನೀರಾವರಿ ಕಟ್ಟಡ ಹಾಗೂ ನಾಲೆಯ ಗೇಟ್‌ಗಳು ಹಾಳಾಗಿವೆ. ಆದ್ದರಿಂದ ನೀರು ಪೋಲಾಗುತ್ತಿದೆ ಎಂದು ವಿವರಿಸಿದರು. ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಂಜುನಾಥ, ಮಹಾಂತೇಶ್ ಇದ್ದರು.

ಮಹಾಲಕ್ಷ್ಮೀ ದೇವಿ ಮಹೋತ್ಸವ ಮಾ.7ಕ್ಕೆ

ಚಳ್ಳಕೆರೆ: ನಗರದ ಶಿವನಗರದಲ್ಲಿ ಶ್ರೀ ಮಹಾಲಕ್ಷ್ಮೀ ದೇವಿ ಪ್ರತಿಷ್ಠಾಪನ ಮಹೋತ್ಸವ ಮಾರ್ಚ್ 7ರಿಂದ ಮಾರ್ಚ್ 9 ರವರೆಗೆ ಮೂರು ದಿನಗಳ ಕಾಲ ನಡೆಯುವ ಶ್ರೀ ಮಹಾಲಕ್ಷ್ಮೀ ದೇವಿ ಪ್ರತಿಷ್ಠಾಪನ ಕಾರ್ಯಕ್ರಮಕ್ಕೆ ಸರ್ವ ಭಕ್ತಾದಿಗಳು ಆಗಮಿಸಿ ದೇವಿ ಕೃಪೆಗೆ ಪಾತ್ರರಾಗಬೇಕು ಎಂದು ಸಮಿತಿಯ ಸಂಚಾಲಕರಾದ ಬಿಸಿ. ಸಂಜೀವ್ ಮೂರ್ತಿ ಕರೆ ನೀಡಿದರು.

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮೂರು ದಿನ ನಡೆಯುವ ಮಹಾಲಕ್ಷ್ಮಿ ದೇವಸ್ಥಾನ ಉದ್ಘಾಟನೆ ಗೆ ಸರ್ವ ಭಕ್ತಾಧಿಗಳು ಹಾಗೂ ಮಾ. 9 ಭಾನುವಾರದಂದು ದೇವಾಲಯದ ಮಹೋತ್ಸವ ಕಾರ್ಯಕ್ರಮಕ್ಕೆ ಸದ್ಗುರು ಕಬೀರ್ ನಂದ ಆಶ್ರಮದ ಶ್ರೀ ಶಿವಲಿಂಗಾನಂದ ಮಹಾಸ್ವಾಮಿಜಿಯವರು ಮುಖ್ಯ ಅತಿಥಿಗಳಾಗಿ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸಂಸದರಾದ ಗೋವಿಂದ ಎಂ ಕಾರಜೋಳ, ಹಿರಿಯೂರು ವಿಧಾನಸಭಾ ಕ್ಷೇತ್ರದ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರಾದ ಡಿ ಸುಧಾಕರ್, ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಟಿ ರಘುಮೂರ್ತಿ, ಹೊಳಲ್ಕೆರೆ ಕ್ಷೇತ್ರದ ಶಾಸಕ ಎಂ ಚಂದ್ರಪ್ಪ , ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಶಾಸಕ ಕೆ ಸಿ ವೀರೇಂದ್ರ ಪಪ್ಪಿ , ವಿಧಾನ ಪರಿಷತ್ ಸದಸ್ಯರಾದ ಕೆ ಎಸ್ ನವೀನ್, ಆಗಮಿಸುವರು ಎಂದು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪತ್ನಿಯನ್ನು ಕೊಂದ ಪತಿ ಪೊಲೀಸರಿಗೆ ಶರಣು

ತುಮಕೂರು: ಶೀಲಶಂಕಿಸಿ 8 ತಿಂಗಳ ಗರ್ಭಿಣಿಯನ್ನು 8 ವರ್ಷದ ಮಗನ ಕಣ್ಣೆದುರೇ ನೇಣು ಬಿಗಿದು ಕೊಲೆ ಮಾಡಿ ಬಳಿಕ ಪತಿ ಠಾಣೆಗೆ ಹೋಗಿ ಶರಣಾದ ಘಟನೆ ತಿಲಕ್ ಪಾರ್ಕ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಕೊಲೆಯಾದ ಗರ್ಭಿಣಿ ನಗ್ಮಾ, ಪತಿ ಸೈಯದ್ ಎಂದು ತಿಳಿದುಬಂದಿದೆ. ಒಂದು ವರ್ಷದ ಹಿಂದೆ ನಗ್ಮಾ ಮೊದಲ ಗಂಡನನ್ನು ಬಿಟ್ಟು ಸೈಯದ್‌ನನ್ನು ಪ್ರೀತಿಸಿ ಎರಡನೇ ಮದುವೆಯಾಗಿದ್ದಳು. ಆದರೆ ಪತ್ನಿಯ ಶೀಲ ಶಂಕಿಸಿ ಕಿರುಕುಳ ನೀಡುತ್ತಿದ್ದ. ಹಣಕ್ಕಾಗಿ ಪೀಡಿಸಿ ಹಲ್ಲೆ ನಡೆಸುತ್ತಿದ್ದ ಎನ್ನಲಾಗಿದೆ. ಇದೇ ವಿಚಾರಕ್ಕೆ ಗಲಾಟೆ ನಡೆದು ಪತ್ನಿ ಬಾಯಿಗೆ ಬಟ್ಟೆ ತುರುಕಿ ನೇಣು ಬಿಗಿದು ಕೊಲೆಗೈದು ನೇರವಾಗಿ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದಾನೆ.

ಸಚಿವರ ಹೇಳಿಕೆ: ಡಿಕೆಶಿ ವಿಚಲಿತ

ಉಡುಪಿ: ಕಾಂಗ್ರೆಸ್ ಪಕ್ಷದ ಗೊಂದಲ, ಮುಖ್ಯಮಂತ್ರಿ ಆಗಬೇಕು ಎಂಬ ಆಸೆ ಮತ್ತು ದಿನನಿತ್ಯ ಕೆ. ಎನ್. ರಾಜಣ್ಣ ಸೇರಿದಂತೆ ಅನೇಕ ಸಚಿವರು ಅವರ ವಿರುದ್ಧ ಹೇಳಿಕೆ ನೀಡುತ್ತಿರುವುದು ಡಿ.ಕೆ. ಶಿವಕುಮಾರ್ ಅವರನ್ನು ವಿಚಲಿತರನ್ನಾಗಿ ಮಾಡಿದೆ. ಹೀಗಾಗಿ ಅವರು ಹತಾಶರಾಗಿ ಈ ರೀತಿ ನಡೆದುಕೊಳ್ಳುತ್ತಿದ್ದಾರೆ. ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಡಿಸಿಎಂ ಡಿ.ಕೆ. ಶಿವಕುಮಾರ್ 16ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭದಲ್ಲಿ ನೀಡಿದ ನಟ್ -ಬೋಲ್ಟ್ ರಿಪೇರಿ ಮಾಡಿಸುತ್ತೇವೆ ಎಂಬ ಹೇಳಿಕೆ ಬಗ್ಗೆ ಕಾಪುವಿನಲ್ಲಿ ಪ್ರತಿಕ್ರಿಯಿಸಿದ ವಿಜಯೇಂದ್ರ, ಬೇರೆಯವರಿಗೆ ಹೇಳೋಕೆ ಆಗದೇ ಸಿನಿಮಾ ಉದ್ಯಮದವರ ಮೇಲೆ ಸಿಟ್ಟು ತೀರಿಸಿಕೊಳ್ಳುತ್ತಿದ್ದಾರೆ ಎಂದರು.

ಅರ್ಜುನ್ ಜನ್ಯ ಸಂಗೀತಕ್ಕೆ ಯುವಜನರಿಂದ ಭರ್ಜರಿ ಸ್ಪಂದನೆ | ಹತ್ತಾರು ಹಾಡುಗಳಿಂದ ಎಲ್ಲರ ಮನ ರಂಜಿಸಿದ ಜನ್ಯ ತಂಡ

ನಾಡಿನ ಕಲೆ-ಸಂಸ್ಕೃತಿ ಮೇಳೈಸಿದ ಹಂಪಿ ಉತ್ಸವಕ್ಕೆ ತೆರೆ

ಹಂಪಿ: ಹಂಪಿ ಉತ್ಸವದಲ್ಲಿ ತಡರಾತ್ರಿವರೆಗೂ ನಡೆದ ರಸಮಂಜರಿ ಕಾರ್ಯಕ್ರಮದಲ್ಲಿ ನೆರೆದಿದ್ದ ಜನರು ಹುಚ್ಚೆದ್ದು ಕುಣಿದರು.

ಖ್ಯಾತ ಸಂಗೀತ ನಿರ್ದೇಶಕ ಅರ್ಜುನ ಜನ್ಯ ಅವ ರನ್ನು ಕಂಡು ಕೇಕೆ, ಶಿಳ್ಳೆಗಳಿಂದ ಸ್ವಾಗತಿಸಿತು. ಶನಿ ವಾರ ಮಧ್ಯರಾತ್ರಿ ಹಂಪಿ ಉತ್ಸವಕ್ಕೆ ಈ ರೀತಿಯಲ್ಲಿ 'ಎ.ಜೆ' ಸಂಗೀತ ತಂಡ ಭರ್ಜರಿ ಪ್ರವೇಶ ನೀಡಿತು. ಜನ್ಯ ಕೀಬೋರ್ಡ್ ನುಡಿಸುತ್ತಲೇ ಇದ್ದಾಗ ಹತ್ತು ನಿಮಿಷ ವಿವಿಧ ಗೀತೆಗಳನ್ನು ಹಾಡುತ್ತಾ ಬಂದ ಹಲವು ಹೊಸ ಗಾಯಕರು, ನುರಿತ ವಾದಕರ ತಂಡವನ್ನು ಸ್ವಾಗತಿ ಸಲಾಯಿತು. ಇದೊಂದು ಹೊಸ ಅನುಭವವಾಗಿತ್ತು.

ಹುಚ್ಚೆದ್ದು ಕುಣಿದ ಯುವಜನತೆ: 'ನೀ ಸಿಗೋ ವರೆಗೂ, ನಗೋ ವರೆಗೂ ಕಾದಿರುವೆ ಗೆಳತಿಯೇ' ಎಂದು ಯುಗಳ ಗೀತೆ ಶುರು ಮಾಡಿದಾಗ ಯುವಕರು, ಯುವತಿಯರು ಹುಚ್ಚೆದ್ದು ಕುಣಿದರು. ಜೈಜೈಜೈ ಭಜರಂಗಿ ಹಾಡುತ್ತಾ ಡ್ರಮ್ಸ್ ಬಡಿದು ಪ್ರೇಕ್ಷಕರ ಎದೆಬಡಿತ ಹೆಚ್ಚಿಸಿದರು. ಹಿಂದೆ ಗದೆ ಹಿಡಿದು ಹೆಜ್ಜೆ ಹಾಕಿದ ನೃತ್ಯಗಾರರು ಮೆರುಗು ನೀಡಿದರು.

ಹಂಪಿ ಉತ್ಸವದ ಪ್ರಧಾನ ವೇದಿಕೆಯಲ್ಲಿ ಗಾಯಕ ಅರ್ಜುನ ಜನ್ಯ ಅವರಿಂದ ಶನಿವಾರ ತಡರಾತ್ರಿವರೆಗೆ ನಡೆದ ಗಾಯನಕ್ಕೆ ನೆರೆದಿದ್ದ ಜನರು ಹುಚ್ಚೆದ್ದು ಕುಣಿದರು.

ವೈಭವದ ತೆರೆ

ನಾಡಿನ ಕಲೆ-ಸಂಸ್ಕೃತಿಗಳನ್ನು ಅನಾವರಣಗೊಳಿಸಿದ ಹಂಪಿ ಉತ್ಸವಕ್ಕೆ ಭಾನುವಾರ ತೆರೆಬಿದ್ದಿದೆ. ದೇಶ-ವಿದೇಶಗಳ ಅಪಾರ ಸಂಖ್ಯೆಯ ಪ್ರವಾಸಿಗರು ಪಾಲ್ಗೊಂಡು ವಿಜಯ ನಗರ ಸಾಮ್ರಾಜ್ಯದ ಶ್ರೀಮಂತ ಕಲೆಗಳಿಗೆ ಮಾರುಹೋದರು.

'ಹೇ ಹುಡುಗಿ ಯಾಕಿಂಗ್ ಮಾಡ್ತಿ, ವರ್ಷಾಯ್ತು ಸಿಗುಲ್ಲ ಕೈಗೆ' ಗೀತೆಯಲ್ಲಿ ಮೋಡಿ ಮಾಡಿದ ಜನ್ಯ ಅವರು ಎಲ್ಲರೂ ಎದ್ದುನಿಂತ ಕುಣಿಯುವಂತೆ ಮಾಡಿಬಿಟ್ಟರು. ಮಾಸ್ಟರ್ ಆನಂದ ರಚಿಸಿದ 'ನನ್ನಲ್ಲೊಂದು, ನಿನ್ನಲ್ಲೊಂದು, ಏನೊಂದು ಗುಟ್ಟು ಇದೆ' ಸಾಹಿತ್ಯವನ್ನು ಓದಿ ಹೇಳಿದರು, ಅದಕ್ಕೆ ಸ್ಥಳದಲ್ಲೇ ಜನ್ಯ ಅವರು ರಾಗ ಸಂಯೋಜಿಸಿದ ತಂಡದೊಟ್ಟಿಗೆ ಹಾಡಿಸಿದ್ದಕ್ಕೆ ಸಭಿಕರು ಹುಬ್ಬೇರಿಸಿದರು. 'ಬಾನದಾರಿಯಲ್ಲಿ ಸೂರ್ಯ ಜಾರಿ ಹೋದ' 'ಬೊಂಬೆ ಹೇಳತೈತಿ' ಗೀತೆಗಳ ಮೂಲಕ ನಟ ಪುನೀತ್ ಅವರನ್ನು ಸ್ಮರಿಸುವುದನ್ನು ಮರೆಯಲಿಲ್ಲ.

'ಯಾಕೋ ಹುಡುಗ ಮೈಯಾಗ ಹೆಂಗೈತಿ' ಗೀತೆಗೆ ಪ್ರೇಕ್ಷಕರು ಕೋರಸ್ ಹಾಡಿದರು. ಜಸ್ಕರಣ್ ಅವರ ಕಂಠಸಿರಿಯಲ್ಲಿ ಹೊರಹೊಮ್ಮಿದ 'ಜೀವದ ಗೆಳತಿಯೇ' ಹಾಡು ಚಳಿ ಮರೆಸಿತು. ಸರಿಗಮಪ ಖ್ಯಾತಿಯ ಕೀರ್ತನ್ ಹೊಳ್ಳ, ಗಾಯಕ ಸುನೀಲ್ ಸೇರಿದಂತೆ ಹಲವು ಗಾಯಕರು ಹಂಪಿ ಉತ್ಸವ ಮುಖ್ಯ ವೇದಿಕೆಯಲ್ಲಿ ತಮ್ಮ ಪ್ರತಿಭೆ ಪ್ರಸ್ತುತ ಪಡಿಸಿದರು.

ಬೀಟ್ ಗುರು ತಂಡದ ಚರ್ಮವಾದ್ಯದ ಹೊನಲು: ಬೀಟ್ ಗುರು ತಂಡ ಚರ್ಮ ವಾದ್ಯಗಳನ್ನು ನುಡಿಸಲು ಆರಂಭಿಸಿದಾಗ ರಾತ್ರಿ 12 ಗಂಟೆ ಆಗಿತ್ತು. ವೇದಿಕೆ ಯಲ್ಲಿ ಕೊಳಲು, ಚರ್ಮವಾದ್ಯಗಳ ಸದ್ದು ಕೇಳಿ ಬರುತ್ತಲೇ ಪ್ರೇಕ್ಷಕರು ಎದೆಬಡಿತ ನಿಧಾನವಾಗಿ ಹೆಚ್ಚಾಯಿತು. ತಂಡದ ನಾಯಕ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಹಾಡಿಗೆ ಕೊಳಲು, ವಾದ್ಯಗಳ ವಾದನ ಚಪ್ಪಾಳೆಯ ಹರ್ಷೋದ್ಗಾರಕ್ಕೆ ಸಾಕ್ಷಿಯಾಯಿತು.

ನಟಿ ನಿಖಿತಾ ಸ್ವಾಮಿ, ರಮೇಶ್ ಅವರ ತಂಡ, 'ಬಾಳ ಬಂಗಾರ ನೀನು, ಹಣೆಯ ಸಿಂಗಾರ ನೀನು' ಹಾಡಿಗೆ ಮನಮೋಹಕ ನೃತ್ಯ, ಶರಣ್ಯ ಶೆಟ್ಟಿ ತಂಡದ ನೃತ್ಯಗಳು ಮಧ್ಯರಾತ್ರಿಯ ಚಳಿ ಮರೆಸಿತು. ಕಾರ್ಯಕ್ರಮ ಕೊನೆಗೊಳ್ಳುವಾಗ ಮಧ್ಯರಾತ್ರಿ 2 ಗಂಟೆಯಾಗಿತ್ತು. ಆಗಲೂ ಜನಸಾಗರ ಕದಲದೆ ಉಳಿದಿತ್ತು.

ಇಂದಿನಿಂದ ಬಜೆಟ್ ಅಧಿವೇಶನ ಆರಂಭ

← ಮೊದಲಪುಟದಿಂದ

ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಯಾಗಿಲ್ಲ. ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಕೊರತೆ, ಗ್ಯಾರಂಟಿ ಯೋಜನೆಗಳ ಹಣ ಬಿಡು ಗಡೆ ವಿಳಂಬ, ಮೆಟ್ರೊ, ಬಸ್, ಹಾಲಿನ ದರ ಏರಿಕೆ, ಕೆಪಿಎಸ್ಸಿ ಹಗರಣ, ವಿಶ್ವವಿದ್ಯಾಲಯಗಳ ಮುಚ್ಚುವ ತೀರ್ಮಾನ, ಪರಿಶಿಷ್ಟ ಜಾತಿ ಪಂಗಡಗಳಿಗೆ ಮೀಸಲಾದ ಅನುದಾನ, ಬೇರೆ ಉದ್ದೇಶಗಳಿಗೆ ಬಳಕೆ ಮುಂತಾದ ವಿಚಾರಗಳನ್ನು ಇಟ್ಟುಕೊಂಡು ಪ್ರತಿಪಕ್ಷಗಳು ಸರಕಾರದ ಮೇಲೆ ಮುಗಿ ಬೀಳಲು ಸಿದ್ಧವಾಗಿವೆ. ಆದರೆ ಸದನದಲ್ಲಿ ಪ್ರತಿಪಕ್ಷಗಳ ಅಸ್ತ್ರಗಳನ್ನು ಸಮರ್ಥವಾಗಿ ಎದುರಿ ಸಲು ಕಾಂಗ್ರೆಸ್ ಸಹ ಪ್ರತ್ಯಾಸ್ತ್ರಗಳನ್ನು ಸಿದ್ಧ ಮಾಡಿಕೊಂಡಿದ್ದು, ತೆರಿಗೆ ಅನುದಾನ ಹಂಚಿಕೆ ಯಲ್ಲಿ ಕೇಂದ್ರದಿಂದ ಆಗಿರುವ ಅನ್ಯಾಯ, ಮಹಾದಾಯಿ, ಕೃಷ್ಣ, ಮೇಕೆದಾಟು, ನೀರಾವರಿ ಯೋಜನೆಗಳಿಗೆ ಸ್ಪಂದಿಸದ ಕೇಂದ್ರದ ನಡೆ, ಕೋವಿಡ್ ಕುರಿತ ನ್ಯಾಯಮೂರ್ತಿ ಮೈಕೆಲ್ ಡಿ'ಕುನ್ಹಾ ಸಮಿತಿಯ ವರದಿ, ಕೇಂದ್ರ ಸಚಿವ ಎಚ್ಚಿಕೆ ವಿರುದ್ಧದ ಹಗರಣಗಳನ್ನು ಪ್ರಸ್ತಾಪಿಸಿ ಪ್ರತಿಪಕ್ಷಗಳತ್ತ ಬಾಣ ಬಿಡಲು ಕಾಂಗ್ರೆಸ್ ತನ್ನದೇ ಆದ ತಯಾರಿ ನಡೆಸಿದೆ ಎಂದು ತಿಳಿದುಬಂದಿದೆ.

> ಕಾಂಗ್ರೆಸ್ ಸರಕಾರ ರಾಜ್ಯಪಾಲರಿಗೆ ನಿರಂತರವಾಗಿ ಅಪಮಾನ ಮಾಡು ತ್ತಿದೆ. ಮತ್ತೊಂದು ಕಡೆ ಭಾಷಣಗಳಲ್ಲಿ ಅವರಿಂದಲೇ ಸರಕಾರಕ್ಕೆ ಮೆಚ್ಚುಗೆ ಹೇಳುವ ಮಾತನ್ನು ಆಡಿಸಲಾಗುತ್ತಿದೆ. ಇದನ್ನು ವಿರೋಧಿಸಿ ಮಾರ್ಚ್ 3 ರಂದು ಬಿಜೆಪಿ ಪ್ರತಿಭಟಿಸಲಿದೆ.
> -ಆರ್. ಅಶೋಕ್, ಪ್ರತಿಪಕ್ಷ ನಾಯಕ

ಉಕ್ಕು ಕಾರ್ಖಾನೆ ಸ್ಥಾಪನೆ ಪ್ರಸ್ತಾವ ಕೇಂದ್ರದ ಮುಂದಿಲ್ಲ
ಕೇಂದ್ರ ಉಕ್ಕು-ಬೃಹತ್ ಕೈಗಾರಿಕೆ ಸಚಿವ ಕುಮಾರಸ್ವಾಮಿ ಸ್ಪಷ್ಟನೆ

ಬಲ್ದೋಟ ಕಾರ್ಖಾನೆ ವಿಸ್ತರಣೆಗೆ ವಿರೋಧ

ಕೊಪ್ಪಳ: ಬಲ್ದೋಟ ಸಂಸ್ಥೆಯ ಉದ್ದೇಶಿತ ಉಕ್ಕು ಕಾರ್ಖಾನೆ ಸ್ಥಾಪನೆಯ ಪ್ರಸ್ತಾವನೆ ಕೇಂದ್ರ ಸರಕಾರದ ಮುಂದೆ ಬಂದಿಲ್ಲ. ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುವ ಕೈಗಾರಿಕೆ ಸ್ಥಾಪಿಸುವುದು ಸರಿಯಲ್ಲ ಎಂದು ಈಗಾಗಲೇ ರಾಜ್ಯ ಸರಕಾರಕ್ಕೆ ಸಲಹೆ ನೀಡಿದ್ದೇನೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್. ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಕೊಪ್ಪಳ ಜಿಲ್ಲಾ ಕ್ರೀಡಾಂಗಣದ ಹೆಲಿಪ್ಯಾಡ್ ನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಲ್ದೋಟ ಸಮೂಹ ಸಂಸ್ಥೆ ಉಕ್ಕು ಕಾರ್ಖಾನೆ ಸ್ಥಾಪನೆಗೆ ವಿರೋಧ ವ್ಯಕ್ತವಾಗಿರುವ ಮಾಹಿತಿ ಇದೆ. ಇದಕ್ಕೆ ಕೊಪ್ಪಳ ಗವಿಮಠದ ಶ್ರೀಗವಿಸಿದ್ದೇಶ್ವರ ಸ್ವಾಮೀಜಿಗಳು ಕೂಡ ವಿರೋಧ ವ್ಯಕ್ತಪಡಿಸಿದ್ದು ಗೊತ್ತಿದೆ. ಕೊಪ್ಪಳದಲ್ಲಿ ಕಾರ್ಖಾನೆ ಸ್ಥಾಪನೆ ಕುರಿತಂತೆ ರಾಜ್ಯ ಸರಕಾರ ಹಾಗೂ ಕಂಪನಿ ಒಪ್ಪಂದ ಮಾಡಿಕೊಂಡಿವೆ. ಈ ಕಾರ್ಖಾನೆ ಮತ್ತು ಕೇಂದ್ರ ಸರಕಾರಕ್ಕೆ ಸಂಬಂಧವೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯ ಸರಕಾರಕ್ಕೆ ಸೂಚನೆ: ಪರಿಸರ ಹಾಗೂ ಜನರಿಗೆ ಹಾನಿ ಉಂಟು ಮಾಡುವ ಕೈಗಾರಿಕೆ ಸ್ಥಾಪಿಸುವುದು ಸರಿಯ ಎಂಬುದು ರಾಜ್ಯ ಸರಕಾರ ತಿಳಿದುಕೊಳ್ಳಬೇಕಿದೆ. ಉಕ್ಕು ಕೈಗಾರಿಕೆ ವಿರೋಧಿಸುವ ಕೊಪ್ಪಳ ಜನರ ಬೇಡಿಕೆಗೆ ಜೆಡಿಎಸ್ ಸಹಮತವೂ ಇದೆ. ರಾಜ್ಯ ಸರಕಾರ ಕೊಪ್ಪಳದ ಜನ ಹಾಗೂ ಸ್ವಾಮೀಜಿಗಳ ಜೊತೆ ಸಭೆ ನಡೆಸಿ ಮುಂದುವರಿಯಬೇಕು ಎಂದು ಕುಮಾರಸ್ವಾಮಿ ಸಲಹೆ ನೀಡಿದರು.

ಕೊಪ್ಪಳ ಜಿಲ್ಲಾ ಕ್ರೀಡಾಂಗಣದ ಹೆಲಿಪ್ಯಾಡ್‌ನಲ್ಲಿ ಭಾನುವಾರ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಸುದ್ದಿಗಾರರೊಂದಿಗೆ ಮಾತನಾಡಿದರು.

2 ವರ್ಷ ವ್ಯರ್ಥವಾಗಿ ಕಳೆದ ಸರಕಾರ

ಬರೀ ಗ್ಯಾರಂಟಿ ಯೋಜನೆ ಬಗ್ಗೆ ಮಾತನಾಡುವುದು ಹಾಗೂ ಕೇಂದ್ರ ಸರಕಾರ ಟೀಕಿಸುತ್ತಲೇ ರಾಜ್ಯ ಸರಕಾರ 2 ವರ್ಷ ಕಳೆದಿದೆ. ಈ ಸರ್ಕಾರದಿಂದ ಹೆಚ್ಚಿನ ನಿರೀಕ್ಷೆ ಇಲ್ಲ. ರಾಜ್ಯ ಸರಕಾರದ ಬೊಕ್ಕಸದಲ್ಲಿ ಹಣ ಇದೆ. ಆದರೆ, ವ್ಯಾಪಕ ದುರ್ಬಳಕೆಯಿಂದ ಅಭಿವೃದ್ಧಿ ಕೆಲಸಕ್ಕೆ ಅನುದಾನವೇ ಇಲ್ಲದಾಗಿದೆ. ಕಲ್ಯಾಣ ಕರ್ನಾಟಕ ಭಾಗಕ್ಕೆ 5 ಸಾವಿರ ಕೋಟಿ ರೂ. ಮೀಸಲಿಡಲಾಗಿತ್ತು. ಅದರಲ್ಲಿ ಒಂದು ನಯಾ ಪೈಸ ಕೂಡ ಬಿಡುಗಡೆ ಆಗಿಲ್ಲ. ಕಾಂಗ್ರೆಸ್ ಸರಕಾರ ಗುತ್ತಿಗೆದಾರರಿಂದ ಭಾರಿ ಪ್ರಮಾಣದ ಕಮಿಷನ್ ವಸೂಲಿ ಮಾಡುತ್ತಿದೆ ಎಂದು ಕೇಂದ್ರ ಸಚಿವರು ಆರೋಪಿಸಿದರು.

ಕರ್ನಾಟಕ ಸರ್ಕಾರ
ಜಿಲ್ಲಾ ಎನ್.ಸಿ.ಡಿ ಕೋಶ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ದೂ.ಸಂಖ್ಯೆ:- 08194-200388, E-mail:ncdcta2019@gmail.com
ಸಂ. ಎನ್.ಸಿ.ಡಿ.ಚಿ/107/2024-25 ದಿನಾಂಕ: 01.03.2025
ಟೆಂಡರ್ ಪ್ರಕಟಣೆ
ಆರೋಗ್ಯ ಮತ್ತು ಕ್ಷೇಮ ಕೇಂದ್ರ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯಲ್ಲಿನ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಅಗತ್ಯವಿರುವ ಔಷಧಿಗಳನ್ನು ಖರೀದಿಗೆ ಇ-ಟೆಂಡರ್ ಕರೆದಿದ್ದು, ಬಿಡ್ ಸಲ್ಲಿಸಲು ದಿನಾಂಕ: 15-03-2025 ಕೊನೆಯ ದಿನಾಂಕವಾಗಿರುತ್ತದೆ. ಆದ್ದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿಯಲ್ಲಿ ಪಡೆಯಬಹುದು ಅಥವಾ ಅಂತರ್ಜಾಲದಲ್ಲಿ (www.kppp.karnataka.gov.in) ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಸಂಗ್ರಹಿಸಬಹುದು.
DIPR/CTA/KSMCA/645/2024-25
ಸಹಿ/- ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಜಿಲ್ಲಾ ಸರ್ವೇಕ್ಷಣಾ ಘಟಕ, ಚಿತ್ರದುರ್ಗ

ಕರ್ನಾಟಕ ಸರಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ
ಭಾಗ-"ಎ"
ಟೆಂಡರಿನ ವಿವರಗಳ ಘೋಷವಾರು
2025-26 ನೇ ಸಾಲಿನ ಕೊಪ್ಪಳ ಜಿಲ್ಲೆಯ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ಕಾಮಗಾರಿಗಳು ಹಾಗೂ ಇತರೆ ಯೋಜನೆಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಿ 3ನೇ ವ್ಯಕ್ತಿಯ ತಪಾಸಣೆಯ ಇ-ಟೆಂಡರ್ ಅನ್ನು ಎರಡು ಲಕೋಟೆಗಳಲ್ಲಿ ಸಲ್ಲಿಸಲು ಜಿಲ್ಲಾಧಿಕಾರಿಗಳು, ಕೊಪ್ಪಳ ಇವರು ಆಹ್ವಾನಿಸಿರುತ್ತಾರೆ. ಆಸಕ್ತಿಯುಳ್ಳ ಟೆಂಡರದಾರರು ಟೆಂಡರ್ ದಾಖಲೆಗಳನ್ನು https://www.eproc.karnataka.gov.in ವೆಬ್‌ಸೈಟಿನಿಂದ ಪಡೆದುಕೊಳ್ಳಲು ತಿಳಿಸಲಾಗಿದೆ. (ಎಲ್ಲಾ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಈ ದೂರವಾಣಿಗೆ ಸಂಪರ್ಕಿಸಿ, ದೂರವಾಣಿ ಸಂಖ್ಯೆ : 08539-220844/8147824645, email:deo.koppal@gmail.com).
ಕಾಮಗಾರಿ ಹೆಸರು : 2025-26 ನೇ ಸಾಲಿನ ಕೊಪ್ಪಳ ಜಿಲ್ಲೆಯ ಜಿಲ್ಲಾ ಖನಿಜ ಟ್ರಸ್ಟಿನ ನಿಧಿಯ ಕಾಮಗಾರಿಗಳು ಹಾಗೂ ಇತರೆ ಯೋಜನೆಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಿ 3ನೇ ವ್ಯಕ್ತಿಯ ತಪಾಸಣೆಯ ಇ-ಟೆಂಡರ್ ಮೂಲಕ ಆಯ್ಕೆ ಮಾಡುವ ಕುರಿತು. **ಅಂದಾಜು ಕಾಮಗಾರಿಗಳ ಮೊತ್ತ** : (ರೂ.ಲಕ್ಷಗಳಲ್ಲಿ) **ರೂ.10000.00. ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ) : ರೂ.1.00. ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕ : 03.03.2025. ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ : 19.03.2025 ಸಂಜೆ 5:30** ಗಂಟೆವರೆಗೆ. **ಟೆಂಡರಿನ್ ದಾಖಲೆಗಳನ್ನು ವೆಬಸೈಟ್‌ನಲ್ಲಿ ಪಡೆಯುವ ದಿನಾಂಕ : 03.03.2025. ಟೆಂಡರಿನ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21.03.2025 ಬೆಳ್ಳಿಗ್ಗೆ 11:00** ಗಂಟೆವರೆಗೆ. **ಟೆಂಡರಿನ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 25.03.2025 ಬೆಳ್ಳಿಗ್ಗೆ 11:30** ಗಂಟೆವರೆಗೆ.
ವಾ.ಸಾ.ಇ/ಕೊಪ್ಪಳ/792/ದೇಶಪಾಂಡೆಪಬ್ಲಿಸಿಟಿ/2024-25
ಸಹಿ/- ಜಿಲ್ಲಾಧಿಕಾರಿಗಳು, ಕೊಪ್ಪಳ

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ, (ಆಡಳಿತ) ಡಿಜಿಎಸ್‌ಟಿಓ ಕಲಬುರಗಿ ವಿಭಾಗ, ಕಲಬುರಗಿ
ದೂ:08472-222051
ಸಂಖ್ಯೆ:ವಾತೆಜಂಆ/ಡಿಜಿಎಸ್‌ಟಿಓ/ಕ/ಹೊ.ಗು./03/2024-25
ದಿನಾಂಕ: 01.03.2025
ಇ-ಟೆಂಡರ್ ಪ್ರಕಟಣೆ
ವಾಣಿಜ್ಯ ತೆರಿಗೆ ಇಲಾಖೆ, ಕಲಬುರಗಿ ವಿಭಾಗದ ವಿವಿಧ ಕಛೇರಿಗಳಿಗೆ ದತ್ತಾಂಶ ನಮೂದಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಇ- ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
1) ಸೇವೆಯ ವಿವರ: **ಹೊರಗುತ್ತಿಗೆ ಆಧಾರದ ಮೇಲೆ 45 ದತ್ತಾಂಶ ನಮೂದಕರ ಸೇವೆಯನ್ನು ಒದಗಿಸುವುದು,** 2) ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: **11.03.2025 ಸಾಯಂಕಾಲ 4.30 ಗಂಟೆಗೆ**

ಕಾರ್ಯ ಸ್ಥಳಗಳು	ಕೆಲಸದ ಅವಶ್ಯಕತೆಗಳು
	ದತ್ತಾಂಶ ನಮೂದಕರ
ಕಲಬುರಗಿ (Zone-1)	29
ರಾಯಚೂರ (Zone-2)	05
ಬೀದರ (Zone-2)	04
ಯಾದಗೀರ (Zone-2)	02
ಸಿಂಧನೂರ (Zone-3)	02
ಶಹಾಪೂರ (Zone-3)	02
ಸೇಡಂ (Zone-3)	01
ಒಟ್ಟು	**45**

3) ಟೆಂಡರ್ ತೆರೆಯುವ ದಿನಾಂಕ: **12.03.2025 ಸಾಯಂಕಾಲ 05.00 ಗಂಟೆಗೆ,** 4) ಕಾಮಗಾರಿ/ಸರಕು ಸೇವೆಯ ಟೆಂಡರ್ ಅಂದಾಜು ಮೊತ್ತ: ಅಂದಾಜು **ರೂ. 1.45 ಒಂದು ಕೋಟಿ ನಲವತ್ತೈದು ಲಕ್ಷಗಳು ಮಾತ್ರ** (ಪ್ರತಿ 1 ವರ್ಷಕ್ಕೆ). ಅವಧಿ: **01-04-2025 ರಿಂದ 31-03-2027 ರವರೆಗೆ,** 5) ಇ.ಎಮ್.ಡಿ ಮೊತ್ತ: ರೂ. **3.00 ಲಕ್ಷ,** 6) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ ದೂರವಾಣಿ ಸಂಖ್ಯೆ: ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಸ& ಸೇ.ತೆ.ಕ. ಕಲಬುರಗಿ ವಿಭಾಗ, ಕಲಬುರಗಿ. ದೂರವಾಣಿ ಸಂ: 08472-222051, 7) ಅಂತರ್ಜಾಲ ತಾಣದ ವಿಳಾಸ: https://www.eproc.karnataka.gov.in
ಸಹಿ/- ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಡಿಜಿಎಸ್‌ಟಿಓ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1025/ಕೆ.ಎಸ್.ಎಂ.ಸಿ.&ಎ/2024-25

ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದಲ್ಲಿ ನಡೆಯುತ್ತಿರುವ ಗುರು ಭಕ್ತಿ ಉತ್ಸವದ ಎರಡನೇ ದಿನವಾದ ಭಾನುವಾರ ಕೇಂದ್ರ ಸಚಿವ ವಿ.ಸೋಮಣ್ಣ ಅವರು ತಮ್ಮ ಕುಟುಂಬದೊಂದಿಗೆ ಭೇಟಿ ನೀಡಿ ಗುರು ಸಾರ್ವಭೌಮರ ದರ್ಶನ ಮಾಡಿ ಪೀಠಾಧಿಪತಿ ಸುಬುಧೇಂದ್ರ ಶ್ರೀಗಳ ಆಶೀರ್ವಾದ ಪಡೆದರು.

ಜೆಡಿಎಸ್ ಬಲವರ್ಧನೆಗೆ ಗೌಡರ ಪಣ

← ಮೊದಲಪುಟದಿಂದ

ಆದರೆ ಶಾಸಕ ಜಿ.ಟಿ. ದೇವೇಗೌಡರು ಈ ಸಭೆಯಿಂದ ದೂರವುಳಿದಿದ್ದರು. ಈಗಾಗಲೇ ರಾಜ್ಯದ ಉದ್ದಗಲಕ್ಕೂ ಪಕ್ಷದ ವತಿಯಿಂದ ಸದಸ್ಯತ್ವ ಅಭಿಯಾನ ಚಾಲ್ತಿಯಲ್ಲಿದ್ದು, ಅದನ್ನು ಮತ್ತೊಂದು ಹಂತಕ್ಕೆ ತೆಗೆದುಕೊಂಡು ಹೋಗಬೇಕು. ಸದಸ್ಯತ್ವ ಅಭಿಯಾನಕ್ಕೆ ಮತ್ತಷ್ಟು ವೇಗ ನೀಡಬೇಕು. ಶಾಸಕರು, ಮಾಜಿ ಶಾಸಕರು, ಹಿರಿಯ ಮುಖಂಡರು, ಎರಡನೇ ಹಂತದ ನಾಯಕರು ಹಾಗೂ ಕಾರ್ಯಕರ್ತರು ದೊಡ್ಡ ಪ್ರಮಾಣದಲ್ಲಿ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ಪಾಲ್ಗೊಳ್ಳಬೇಕು ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮನವಿ ಮಾಡಿದರು. ಮಾಜಿ ಪ್ರಧಾನಿ ದೇವೇಗೌಡರು ಮಾತನಾಡಿ, ಹಿಂದೆ 23 ಜಿಲ್ಲೆಗಳಿದ್ದವು. ನಾನು ಪ್ರತಿ ಜಿಲ್ಲೆ, ತಾಲೂಕಿನಲ್ಲಿ ಪ್ರವಾಸ ಮಾಡಿದ್ದೇನೆ. ಕಷ್ಟಪಟ್ಟು ಪಕ್ಷ ಕಟ್ಟಿದ್ದೇನೆ. ಈಗಲೂ ಓಡಾಟ ಮಾಡುತ್ತಿದ್ದೇನೆ. ಪಕ್ಷ ಕಟ್ಟೋದು ಸುಲಭದ ಕೆಲಸವಲ್ಲ. ಹೀಗಾಗಿ ಯಾರೊಬ್ಬರೂ ಸಂಘಟನೆಯನ್ನು ಲಘುವಾಗಿ ತೆಗೆದುಕೊಳ್ಳುವುದು ಬೇಡ. ಯಾರೂ ಎದೆಗುಂದಬೇಕಿಲ್ಲ. ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಸಮಾವೇಶಗಳನ್ನು ಮಾಡೋಣ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಗೆಲ್ಲುವ ಸಮರ್ಥ ಅಭ್ಯರ್ಥಿಗಳನ್ನು ಹುಡುಕಿ ಪಟ್ಟಿ ಮಾಡಿ ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಬಿ.ಎಂ. ಫಾರೂಕ್, ಜೆಡಿಎಸ್ ರಾಜ್ಯ ಮಹಿಳಾ ಅಧ್ಯಕ್ಷೆ ರಶ್ಮಿ ರಾಮೇಗೌಡ, ಮಾಜಿ ಸಚಿವರಾದ ವೆಂಕಟರಾವ್ ನಾಡಗೌಡ, ಬಂಡೆಪ್ಪ ಕಾಶೆಂಪೂರ, ಎಚ್.ಕೆ. ಕುಮಾರಸ್ವಾಮಿ, ಮಾಜಿ ಶಾಸಕರಾದ ರಾಜಾ ವೆಂಕಟಪ್ಪ ನಾಯಕ, ಡಾ. ಕೆ.ಅನ್ನದಾನಿ, ಕೆ.ಎ. ತಿಪ್ಪೇಸ್ವಾಮಿ ಮುಂತಾದವರು ವೇದಿಕೆಯ ಮೇಲಿದ್ದರು.

ಕಾಂಗ್ರೆಸ್ ಒಗ್ಗಟ್ಟಿನ ಮನೆ: ಡಿಕೆಶಿ

← ಮೊದಲಪುಟದಿಂದ

ಅವರಿಗೆ ಅಪಾರ ಅಭಿಮಾನಿಗಳಿದ್ದಾರೆ. ಅವರು ಉತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ. ವಿವಿಧ ರಾಜಕೀಯ ಪಕ್ಷಗಳ ಶಾಸಕರು ಮತ್ತು ನಾಯಕರು ಅಲ್ಲಿ ಸೇರಿದ್ದರು. ನನ್ನ ವೈಯಕ್ತಿಕ ನಂಬಿಕೆ ಮೇಲೆ ನಾನು ಹೋಗಿ ಕಾರ್ಯಕ್ರಮದಲ್ಲಿ ಭಾಗಿಯಾದೆ ಎಂದರು. ನನ್ನ ಕ್ಷೇತ್ರದಲ್ಲಿ, ಸುಮಾರು 100 ಅಡಿ ಎತ್ತರದ ಯೇಸುಕ್ರಿಸ್ತನ ಪ್ರತಿಮೆಯನ್ನು ಸ್ಥಳೀಯ ಕ್ಷೇತ್ರದ ಜನರು ನಿರ್ಮಿಸಿದರು. ಆಗ ಬಿಜೆಪಿ ನನ್ನನ್ನು 'ಯೇಸುಕುಮಾರ' ಎಂದು ಕರೆದರು. ನಾನು ಎಲ್ಲಾ ಧರ್ಮಗಳಲ್ಲಿ, ಎಲ್ಲಾ ಜಾತಿಗಳಲ್ಲಿ ನಂಬಿಕೆ ಇಟ್ಟಿರುವವನು. ಸಮಾಜದಲ್ಲಿರುವ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವುದು ಕಾಂಗ್ರೆಸ್ ಪಕ್ಷದ ಸಿದ್ಧಾಂತ. ಭಿನ್ನತೆಯಲ್ಲಿ ಏಕತೆಯನ್ನು ನಾನು ಕಾಣುತ್ತೇನೆ. ಇದು ಕೆಲವರಿಗೆ ಇಷ್ಟವಾಗಬಹುದು, ಇನ್ನು ಕೆಲವರಿಗೆ ಇಷ್ಟವಾಗದಿರಬಹುದು ಎಂದರು. ತಮಿಳುನಾಡು ಸಿಎಂ ಎಂ.ಕೆ ಸ್ಟಾಲಿನ್ ಕ್ಷೇತ್ರ ಪುನರ್ವಿಂಗಡಣೆಯನ್ನು ವಿರೋಧಿಸುತ್ತಿರುವ ಬಗ್ಗೆ ಮಾತನಾಡಿದ ಡಿ ಕೆ ಶಿವಕುಮಾರ್, ಕಾಂಗ್ರೆಸ್ ಪಕ್ಷವು ಕ್ಷೇತ್ರ ಪುನರ್ವಿಂಗಡಣೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ. ಕೇಂದ್ರ ಸರಕಾರ ದಕ್ಷಿಣದಲ್ಲಿ ನಮ್ಮ ಸಂಖ್ಯೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ ಎಂದು ದೂರಿದರು.

ಎಸ್‌ಐ ಹುದ್ದೆ ಹೆಸರಲ್ಲಿ 45 ಲಕ್ಷ ವಂಚನೆ: ವೈದ್ಯ ಸೇರಿ ಇಬ್ಬರ ಸೆರೆ

ನೆಲಮಂಗಲ: ಕೆಲ ತಿಂಗಳ ಹಿಂದೆಯಷ್ಟೇ ಇಡೀ ರಾಜ್ಯದ ಗಮನ ಸೆಳೆದಿದ್ದ ಪಿಎಸ್ ಐ ನೇಮಕದ ಹಗರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ದೂರು ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಒಬ್ಬ ವೈದ್ಯ ಸೇರಿದಂತೆ ಆತನ ಸ್ನೇಹಿತನನ್ನು ದಾಬಸ್‌ಪೇಟೆ ಪೊಲೀಸರು ಬಂಧಿಸಿದ್ದಾರೆ. ದಾಬಸ್‌ಪೇಟೆಯ ಆರೋಗ್ಯ ಭಾರತಿ ಆಸ್ಪತ್ರೆಯ ಸಂಸ್ಥಾಪಕ ಅಧ್ಯಕ್ಷ ಡಾ.ಚಂದ್ರಶೇಖರ್ ಹಾಗೂ ಆತನ ಸ್ನೇಹಿತ ಯೋಗೇಂದ್ರ, ಬಂಧಿತ ಆರೋಪಿಗಳು. ಬೆಂಗಳೂರಿನಲ್ಲಿ ವಾಸಿಯಾದ ಯೋಗೇಂದ್ರ, ಈತ ಮೂಲತಃ ಸೋಂಪುರ ಹೋಬಳಿಯ ಮಾಚನಹಳ್ಳಿ ಗ್ರಾಮದವನು. ದೂರುದಾರ ಬಿಲ್ಲನಕೋಟೆಯ ಅನಿಲ್ ಕುಮಾರ್ 45 ಲಕ್ಷ ರು. ವಂಚನೆಗೆ ಒಳಗಾಗಿದ್ದಾರೆ.

ಜಾತಿನಿಂದನೆ ದೂರು: ನಾನು ಕೊಟ್ಟ 45 ಲಕ್ಷ ವಾಪಸ್ ಕೊಡಿ ಎಂದು ಅನಿಲ್ ಒತ್ತಾಯಿಸಿದಾಗ ಆರೋಪಿ ವೈದ್ಯ ತನ್ನ ಖಾತೆಯಿಂದ 15 ಲಕ್ಷ ವರ್ಗಾಯಿಸಿ ದ್ದಾನೆ. ಉಳಿದ 30 ಲಕ್ಷ ಹಣ ಕೇಳಿದಾಗ ಇಷ್ಟೇ ಹಣ ನಾನು ಕೊಡುವುದೆಂದು ಹೇಳಿ, ಏನಾದರೂ ಹಣ ಕೇಳಿದರೆ ನಿನ್ನ ಮೇಲೆ ಜಾತಿನಿಂದನೆ ಪ್ರಕರಣ ಹಾಕಿಸು ತ್ತೇನೆಂದು ಹೆದರಿಸಿದ್ದಾನೆ.

ವಿವಿಧ ಠಾಣೆಗಳಲ್ಲಿ ಪ್ರಕರಣ: ಆರೋಪಿ ಯೋಗೇಂದ್ರನ ವಿರುದ್ಧ ಬೆಂಗಳೂರಿನ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ, ಯಲಹಂಕ ನ್ಯೂಟೌನ್, ವಿವಿಪುರಂ, ಹಿರಿಯೂರು, ಚಿತ್ರದುರ್ಗ ಠಾಣೆಗಳಲ್ಲಿ ಪ್ರಕರಣ ದಾಖಲಾಗಿವೆ.

ನಟ್-ಬೋಲ್ಟ್ ಟೈಟ್ ಮಾಡುವ ಡಿಕೆ ಹೇಳಿಕೆಗೆ ವಿರೋಧ
ಚಿತ್ರೋದ್ಯಮದ ತೀವ್ರ ಆಕ್ಷೇಪ, ತಿರುಗಿಬಿದ್ದ ಪ್ರತಿಪಕ್ಷಗಳು

ಟೈಟ್ ಟಾಕ್‌ಗೆ, ಚಿತ್ರೋದ್ಯಮದ ವಿರೋಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿತ್ರೋತ್ಸವದಲ್ಲಿ ಭಾಗವಹಿಸದ ಚಿತ್ರರಂಗದ ಪ್ರಮುಖರ ವಿರುದ್ಧ ಅಸಮಾಧಾನ ವ್ಯಕ್ತಪಡಿಸುವ ಭರದಲ್ಲಿ 'ಶೂಟಿಂಗ್ ಅವಕಾಶ ನೀಡದೇ ನಟ್-ಬೋಲ್ಟ್ ಟೈಟ್ ಮಾಡಿದರೆ ಎಲ್ಲವೂ ಸರಿಹೋಗುತ್ತದೆ' ಎನ್ನುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತು ಇದೀಗ ಭಾರಿ ವಿವಾದ ಹಾಗೂ ಚರ್ಚೆಗೆ ಕಾರಣವಾಗಿದೆ.

ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದ ಉದ್ಘಾಟನೆಯ ಸಮಯದಲ್ಲಿ ಡಿಕೆಶಿ ನೀಡಿದ ಈ ಹೇಳಿಕೆ ಇದೀಗ ಪ್ರತಿಪಕ್ಷ ನಾಯಕರ ಹಾಗೂ ಚಿತ್ರೋದ್ಯಮದ ಹಲವರ ಅಕ್ಷೇಪಕ್ಕೆ ಕಾರಣವಾಗಿದೆ. ಡಿಕೆ ಹೇಳಿಕೆಗೆ, ಕುಮಾರಸ್ವಾಮಿ ಹಾಗೂ ಆರ್. ಅಶೋಕ್ ವಿರೋಧಿಸಿದ್ದರೆ ಶಾಸಕ ರವಿ ಗಣಿಗ ಸಮರ್ಥಿಸಿಕೊಂಡಿದ್ದಾರೆ.

ರಾಜಣ್ಣ ನಟ್-ಬೋಲ್ಟ್ ಟೈಟ್ ಮಾಡಿ: ಭಾನುವಾರ ಈ ಹೇಳಿಕೆಗೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಪ್ರತಿಕ್ರಿಯಿಸಿ, 'ಡಿ.ಕೆ. ಶಿವಕುಮಾರ್ ಅಣ್ಣ, ಮೊದಲು ನಿಮ್ಮ ರಾಜಣ್ಣನಿಗೆ ನಟ್ಟು ಬೋಲ್ಟ್-ಟೈಟ್ ಮಾಡಿ. ಅದು ಬಿಟ್ಟು ಸಿನಿಮಾ ನಾಯಕರ ನಟ್ಟು ಬೋಲ್ಟ್ ಟೈಟ್ ಮಾಡೋಕೆ ಆಗುತ್ತಾ? ಎಂದು ವ್ಯಂಗ್ಯವಾಡಿದರು.

'ನೀವು ಕಿಚ್ಚ ಸುದೀಪ್‌ಗೆ, ಕೆಜಿಎಫ್ ಯಶ್‌ಗೆ, ನಟ ದರ್ಶನ್‌ಗೆ ನಟ್ಟು ಬೋಲ್ಟ್ ಟೈಟ್ ಮಾಡುತ್ತೀರಾ? ಸಿನಿಮಾದವರನ್ನು ಸರಿಯಾಗಿ ನಡೆಸಿಕೊಳ್ಳಿ, ಇದು ಸಿನಿಮಾ ರಂಗಕ್ಕೆ ಮಾಡಿದ ಅಪಮಾನ' ಎಂದು ಟೀಕಿಸಿದರು.

ತಾರಾ ಅವರು ನಮಗೆ ಕರೆದಿಲ್ಲ ಅಂತಾ ಹೇಳಿದ್ದಾರೆ. ಇದು ಸಿನಿಮಾ ರಂಗಕ್ಕೆ ಮಾಡಿದ ಅಪಮಾನ. ಕೂಡಲೇ ಡಿ.ಕೆ. ಶಿವಕುಮಾರ್ ಕ್ಷಮೆ ಕೇಳಬೇಕು. ಡಾ. ರಾಜಕುಮಾರ್, ಶಂಕರ್ ನಾಗ್, ವಿಷ್ಣುವರ್ಧನ್, ಅಂಬರೀಶ್ ಅಂಥವರು ಇದ್ದ ಚಿತ್ರರಂಗ ಇದು. ಅಂಬರೀಶ್ ಇವತ್ತು ಇದ್ದಿದ್ದರೆ ಸರಿಯಾಗಿ ಉತ್ತರ ಕೊಟ್ಟಿರೋರು. ಕಳೆದ ಬಾರಿ ಜಯನಗರ ಶಾಸಕರು ಹೆಚ್ಚು ಅನುದಾನ ಕೇಳಿದಾಗ ತಗ್ಗಿ ಬಗ್ಗಿ ನಡೆಯಬೇಕು ಅಂತಿದ್ದರು. ಅದೇ ಚಾಳಿ ಸಿನಿಮಾ ನಟರ ಮೇಲೆ ತೋರಿಸಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಡಿಕೆಶಿ ಹೇಳಿದ್ದೇನು?



ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಹಲವು ಸಿನಿಮಾ ನಟ, ನಟಿಯರು ಗೈರಾಗಿ ದ್ದನ್ನು ಪ್ರಸ್ತಾಪಿಸುವ ವೇಳೆ, ಚಿತ್ರರಂಗದ ಕಾರ್ಯಕ್ರಮದಲ್ಲಿ ಕೆಲವೇ ಕೆಲವು ಪ್ರಮುಖರು ಮಾತ್ರ ಇದ್ದಾರೆ. ಇದು ಕನ್ನಡ ಸಿನಿಮಾ ರಂಗದ ಕಾರ್ಯಕ್ರಮ. ಈ ಕಾರ್ಯಕ್ರಮಕ್ಕೆ ನಟರು, ನಿರ್ಮಾಪಕರು, ನಿರ್ದೇಶಕರು, ಕಲಾವಿದರಲ್ಲದೆ ಮತ್ಯಾರು ಬರುತ್ತಾರೆ? ಶಿವರಾಜಕುಮಾರ್ ಅವರು ಇದನ್ನು ನಮ್ಮ ಮನೆಯ ಹಬ್ಬ ಎಂದು ಹೇಳಿದರು. ಆ ಭಾವನೆ ಚಿತ್ರರಂಗದ ಕಲಾವಿದರು, ನಿರ್ಮಾಪಕರು, ನಿರ್ದೇಶಕರು, ಪ್ರದರ್ಶಕರಿಗೆ ಇಲ್ಲವಾದರೆ, ನಿಮಗೇ ಆಸಕ್ತಿ ಇಲ್ಲವಾದರೆ ಈ ಚಲನಚಿತ್ರೋತ್ಸವವನ್ನು ಏಕೆ ಮಾಡಬೇಕು? ಸಿನಿಮಾ ಸಂಬಂಧಿತ ಕಾರ್ಯಕ್ರಮಗಳಲ್ಲಿ ಚಿತ್ರರಂಗ ಭಾಗವಹಿಸಬೇಕು.

ನಾವು ನಿಮ್ಮ ಶೂಟಿಂಗ್‌ಗೆ ಅವಕಾಶ ಕೊಡದಿದ್ದರೆ ನೀವು ಹೇಗೆ ಸಿನಿಮಾ ಮಾಡುತ್ತೀರಾ? ನಾವೂ ಎಲ್ಲಿ ನಟ್ ಬೋಲ್ಟ್ ಟೈಟ್ ಮಾಡಿ ರಿಪೇರಿ ಮಾಡಬೇಕೋ ಮಾಡುತ್ತೇವೆ. ಇದು ನನ್ನ ವಾರ್ನಿಂಗ್ ಎಂದಾದರೂ ತಿಳಿದುಕೊಳ್ಳಿ ಮನವಿ ಎಂದಾದರೂ ತಿಳಿದು ಕೊಳ್ಳಿ ಎಂದು ಹೇಳಿದ್ದರು.

> ಡಿ.ಕೆ.ಶಿವಕುಮಾರ್ ಹೇಳಿರುವುದರಲ್ಲಿ ತಪ್ಪಿಲ್ಲ. ಕನ್ನಡಿಗರಿಂದಲೇ ಇವರೆಲ್ಲ ಸ್ಟಾರ್ ಆಗಿರೋದು. ಸಬ್ಸಿಡಿ ಬೇಕು ಅಂದಾಗ ಬರುತ್ತಾರೆ, ಕನ್ನಡದ ನೆಲ, ಜಲ, ಭಾಷೆ ಬೇಡವಾ? ಕ್ಯಾನ್ಸರ್ ಶಸ್ತ್ರಚಿಕಿತ್ಸೆಯಾಗಿದ್ದರೂ ಶಿವರಾಜ್ ಕುಮಾರ್ ಬಂದಿದ್ದಾರೆ. ಇನ್ನುಳಿದವರಿಗೆ ಏನಾಗಿದೆ? ಕನ್ನಡದ ಕಾರ್ಯಕ್ರಮ ಅಂದರೆ ಕನ್ನಡದ ನಟರಿಗೆ ಯಾಕೆ ಅಸಡ್ಡೆ? ವಿಧಾನಸೌಧದ ಮುಂದೆ ನಿಮಗಾಗಿ ಕಾರ್ಯಕ್ರಮ ಮಾಡಿದ್ದೇವೆ. ಮರ್ಯಾದೆಯಿಂದ ಆಹ್ವಾನ ಕಳುಹಿಸಿದರೆ ಯಾಕೆ ಬರುವುದಿಲ್ಲ?
> -ರವಿ ಗಣಿಗ, ಶಾಸಕ

ಎಚ್‌ಡಿಕೆ ವಾಗ್ದಾಳಿ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿ, ಶಿವಕುಮಾರ್ ಅವರ ಬೆದರಿಕೆ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ. ಕಾಂಗ್ರೆಸ್ ಹಮ್ಮಿಕೊಂಡಿದ್ದ ಮೇಕೆದಾಟು ಯೋಜನೆಗಾಗಿ ನಡೆದ ಪಾದಯಾತ್ರೆಗೆ ಯಾರು ಬೆಂಬಲ ಕೊಟ್ಟಿದ್ದಾರೋ, ಬಿಟ್ಟಿದ್ದಾರೋ ಎಂಬುದು ಮುಖ್ಯವಲ್ಲ. ಅಧಿಕಾರ ನಡೆಸಲು ನಾಡಿನ ಜನರು 138 ಸ್ಥಾನ ಕೊಟ್ಟಿದ್ದಾರೆ. ಅದರ ಸದ್ಬಳಕೆ ಮಾಡಿ ಕೆಲಸ ಮಾಡಲಿ. ನಟ್ಟು, ಬೋಲ್ಟ್ ಸಡಿಲವಾದರೆ, ಅವುಗಳನ್ನು ಸರಿಪಡಿಸಲು ಹಲವು ತಜ್ಞರಿದ್ದಾರೆ. ರಾಜ್ಯದ ಜನ ಸಹಕಾರ ನೀಡಿದ್ದಾರೆ. ಅಧಿಕಾರ ಅವರ ಕೈಯಲ್ಲಿದೆ. ಇವರೇನು ಮಾಡಬೇಕೋ ಅದನ್ನು ಮಾಡಲಿ ಎಂದು ವಾಗ್ದಾಳಿ ನಡೆಸಿದರು.

ಹಲವರ ಬೇಸರ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಪಕ್ಷ ನಾಯಕರು ಬಹಿರಂಗವಾಗಿಯೇ ವಿರೋಧಿಸಿದ್ದಾರೆ. ಆದರೆ ಚಿತ್ರರಂಗದ ಹಲವು ನಾಯಕ, ನಾಯಕಿಯರು, ಪ್ರಮುಖರು ಡಿಕೆಶಿ ಅವರು ಜವಾಬ್ದಾರಿಯುತ ಸ್ಥಾನದಲ್ಲಿದ್ದು, ಬಹಿರಂಗವಾಗಿ ಈ ರೀತಿಯ ಎಚ್ಚರಿಕೆ ನೀಡುವುದು ಸರಿಯಲ್ಲ. ಚಿತ್ರೀಕರಣಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದ ಮೇಲೆ ಅದನ್ನು ಮನವಿ ಎಂದು ಪರಿಗಣಿಸಲು ಸಾಧ್ಯವೇ? ವಾರ ಪೂರ್ತಿ ನಡೆಯುವ ಚಿತ್ರೋತ್ಸವದಲ್ಲಿ ಕನ್ನಡ ಚಿತ್ರೋದ್ಯಮದವರು ತಮಗೆ ಅನುಕೂಲವಾದಾಗ ಭಾಗವಹಿಸುತ್ತಾರೆ. ಆದರೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ ಎಂದ ಮಾತ್ರಕ್ಕೆ ಈ ರೀತಿ ಹೇಳುವುದು ಸರಿಯಲ್ಲ ಎನ್ನುವ ಮಾತನ್ನು ಮಾತಾಡಿಕೊಂಡಿದ್ದಾರೆ.

ಬೆದರಿಕೆ ನನ್ನ ರಕ್ತದಲ್ಲಿಲ್ಲ: ಡಿಕೆಶಿ

ಉಡುಪಿ: ನಾನು ಯಾರಿಗೂ ಕಂಡೀಶನ್ ಹಾಕಿಲ್ಲ, ಅದರ ಅವಶ್ಯಕತೆಯೂ ನನಗಿಲ್ಲ. ನಾನೊಬ್ಬ ಕಾಂಗ್ರೆಸ್‌ನ ಕಾರ್ಯಕರ್ತ. ಪಕ್ಷ ಏನು ಹೇಳುತ್ತದೆ, ಅಷ್ಟು ಕೆಲಸ ಮಾಡುವವನು. ಅಷ್ಟು ಬಿಟ್ಟರೆ ನಾನು ಬೇರೆ ಏನು ಕೆಲಸ ಮಾಡಲ್ಲ. ಕಂಡೀಷನ್, ಬೆದರಿಕೆ ಎನ್ನುವುದು ನನ್ನ ರಕ್ತದಲ್ಲಿಲ್ಲ. ನಾನೊಬ್ಬ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತ ಎಂದು ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಪಷ್ಟವಾಗಿ ಹೇಳಿದ್ದಾರೆ. ಕಾಂಗ್ರೆಸ್ ವರಿಷ್ಠರೊಂದಿಗೆ ಅಧಿಕಾರ ಹಂಚಿಕೆ ಚರ್ಚೆಯ ಬಗ್ಗೆ ಉತ್ತರಿಸಿದ ಅವರು, ನನ್ನ ಸಮರ್ಪಣೆ ಇರುವುದು ಪಕ್ಷಕ್ಕೆ, ಗಾಂಧಿ ಕುಟುಂಬಕ್ಕೆ. ನನ್ನ ಬಗ್ಗೆ ಬೇರೊಬ್ಬರು ಏನಾದರೂ ಯೋಚನೆ ಮಾಡುತ್ತಿದ್ದರೇ ಅದು ಅವರ ಭ್ರಮೆ ಎಂದು ತಿರುಗೇಟು ನೀಡಿದರು.

ಸಿನಿಮಾದವರ ಬಗ್ಗೆ ಗರಂ: ಚಿತ್ರೋದ್ಯಮ ಸತ್ತು ಹೋಯಿತು, ಥಿಯೇಟರ್‌ಗಳು ಮುಚ್ಚಿಹೋದವು, ಊಟಕ್ಕೆ ಸಮಸ್ಯೆ ಎನ್ನುವ ಕನ್ನಡ ಚಿತ್ರರಂಗದವರು, ಅವರಿಗಾಗಿ ಸರಕಾರ ಕಾರ್ಯಕ್ರಮ ನಡೆಸಿದರೇ ಅವರು ಬರುವುದಿಲ್ಲ. ಚಲನಚಿತ್ರೋತ್ಸವ ಯಾರಿಗೋಸ್ಕರ ಮಾಡೋದು ಎಂದು ಡಿಸಿಎಂ ಖಾರವಾಗಿ ಪ್ರಶ್ನಿಸಿದರು. ಚಿತ್ರೋದ್ಯಮ ಎಂದರೆ ಕ್ಯಾಮರಾಮನ್, ಸ್ಕ್ರಿಪ್ಟ್‌ರೈಟರ್, ನಟರು, ನಿರ್ದೇಶಕರು ಎಲ್ಲರೂ ಬರಬೇಕು. ಅವರ ಹಬ್ಬದಲ್ಲಿ ಅವರೇ ಇಲ್ಲ ಅಂದರೆ ಹೇಗೆ ಎಂದು ಅವರು ಪ್ರಶ್ನಿಸಿದರು.

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ಪ್ರತಿವರ್ಷ ಕನ್ನಡಿಗರಿಂದ ಸಂಗ್ರಹಿಸಲಾದ ಅಂದಾಜು 4 ಲಕ್ಷ ಕೋಟಿ ರು.ಗಳಲ್ಲಿ ರಾಜ್ಯಕ್ಕೆ ವಾಪಸು ಬರುವುದು ರುಪಾಯಿಗೆ 15 ಪೈಸೆ ಮಾತ್ರ. 15ನೇ ಹಣಕಾಸು ಆಯೋಗ ತೆರಿಗೆ ಹಂಚಿಕೆಯ ಪ್ರಮಾಣವನ್ನು ಶೇ. 4,713 ರಿಂದ ಶೇ. 3.64ಕ್ಕೆ ಇಳಿಸಿದ್ದರಿಂದ ಕರ್ನಾಟಕ ಕಳೆದ 5 ವರ್ಷಗಳಲ್ಲಿ 68,775 ಕೋಟಿ ಕಳೆದುಕೊಂಡಿದೆ.(ಸಿಎಂ ಸಿದ್ದರಾಮಯ್ಯ ಅವರ ಹೇಳಿಕೆ ಉಲ್ಲೇಖಿಸಿ).

ಅಶ್ವಿನ್‌ಕುಮಾರ್, ಬೆಂಗಳೂರು

ಸರ್, ಬರೀ ಕಥೆ ಹೇಳಿಕೊಂಡು ಕುಳಿತರೆ ಏನೂ ಪ್ರಯೋಜನವಿಲ್ಲ. 136 ಸೀಟು ಗೆದ್ದಿರುವಿರಿ. ಎರಡು ವರ್ಷ ಮುಕ್ತಾಯವಾಗುತ್ತ ಬರುತ್ತಿದೆ. ಇನ್ನೂ ಸಿಎಂ ಕುರ್ಚಿಗೆ ಕಿತ್ತಾಡುತ್ತ ಇದ್ದೀರಾ ಮೀಡಿಯಾ ಮುಂದೆ. ಮಂತ್ರಿಗಳ ಮೇಲೆ ನಿಯಂತ್ರಣವೇ ಇಲ್ಲ.

ವಿಶ್ವವಾಣಿ ಕ್ಲಬ್ ಹೌಸ್
03.03.2025
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ಪ್ರೊ. ಪ್ರಶಾಂತ ಹೆಗಡೆ ಮೂಡಲಮನೆ
ವಿಷಯ
ದೇವ ದೀಪದ ಬೆಳಕಿನಲ್ಲಿ
vishwavani.news

ಅರ್ಥವಾಗದ , ತಪ್ಪುತಪ್ಪಾದ ಪ್ರಶ್ನೆಗಳಿಂದ ಭಾರಿ ಅವಾಂತರ: ನಾರಾಯಣಗೌಡ ಕಿಡಿ | ಪ್ರಾಮಾಣಿಕವಾಗಿ ಓದಿದ ಅಭ್ಯರ್ಥಿಗಳ ಬಗ್ಗೆ ಭ್ರಷ್ಟರಿಗೆ ಅರಿವಿಲ್ಲ

ಕೆಪಿಎಸ್‌ಸಿ ಮಹಾನ್ ಭ್ರಷ್ಟರ ಕೂಟ

ಕರವೇ ಅಧ್ಯಕ್ಷ ಟಿ.ಎ. ನಾರಾಯಣಗೌಡ ವಿಶ್ವವಾಣಿಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಕೆಎಎಸ್ ಪರೀಕ್ಷೆ, ಎಂಇಎಸ್ ಪುಂಡಾಟಿಕೆ, ರಾಜಕೀಯ ಪ್ರವೇಶ, ವಿವಿಧ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ್ದಾರೆ.

ವಿಶ್ವವಾಣಿ ಸಂದರ್ಶನ

ಚಿದಾನಂದ ರುದ್ರಾಪುರಮಠ

ಕೆಪಿಎಸ್‌ಸಿ ಕರ್ಮಕಾಂಡ ಇಂದು ನಿನ್ನೆಯದಲ್ಲ. ಇದೊಂದು ಮಹಾನ್ ಭ್ರಷ್ಟ ಕೂಟದ ವ್ಯವಸ್ಥೆ. ಇಲ್ಲಿ ಯಾರಿಗೆ ಎಷ್ಟೆಷ್ಟು ಪಾಲು ಎನ್ನುವುದು ಈಗಲೂ ಅರ್ಥವಾಗಿಲ್ಲ. ಪ್ರಾಮಾಣಿಕವಾಗಿ ಓದಿದ ಅಭ್ಯರ್ಥಿಗಳ ಭವಿಷ್ಯದ ಬಗ್ಗೆ ಅವರಿಗೆ ಅರಿವಿಲ್ಲ ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣ ಗೌಡ ಕಿಡಿಕಾರಿದ್ದಾರೆ.

● ಆಯೋಗದಲ್ಲಿ ನಿಜಕ್ಕೂ ಏನಾಗುತ್ತಿದೆ?

ಕೆಪಿಎಸ್‌ಸಿ ಕರ್ಮಕಾಂಡವನ್ನು ಅಂದಿನಿಂದ ನೋಡಿಕೊಂಡು ಬಂದಿದ್ದೇವೆ. ಅದರಲ್ಲಿ ಯಾರ ಯಾರದು ಎಷ್ಟೆಷ್ಟು ಪಾಲು ಎಂಬುವುದು ಇಂದಿಗೂ ಅರ್ಥವಾಗಿಲ್ಲ. ಅಲ್ಲಿ ಮಹಾನ್ ಭ್ರಷ್ಟರ ಕೂಟವಿದೆ. ಅಂತಹ ಕೆಪಿಎಸ್‌ಸಿ ಕೆಎಎಸ್ ಪರೀಕ್ಷೆ ನಡೆಸಿ, ಅದರಲ್ಲಿ ಅರ್ಥವಾಗದ 50-59 ಪ್ರಶ್ನೆಗಳಿವೆ. ತಪ್ಪು ತಪ್ಪಾಗಿ ಪ್ರಶ್ನೆಗಳನ್ನು ಕೇಳಲಾಗಿದೆ. ಪ್ರಾಮಾಣಿಕವಾಗಿ ಓದಿದ ಅಭ್ಯರ್ಥಿಗಳ ಭವಿಷ್ಯದ ಬಗ್ಗೆ ಅವರಿಗೆ ಅರಿವಿಲ್ಲ. ಇಷ್ಟೆಲ್ಲಾ ಅವಾಂತರ ನಡೆಯುತ್ತಿದ್ದರೂ ಮುಖ್ಯಮಂತ್ರಿಗಳು ಮೌನವಾಗಿ ಕೂತಿದ್ದಾರೆ. ನಿಮ್ಮನ್ನು ಕನ್ನಡ ರಾಮಯ್ಯ ಎಂದು ಜನ ಕರೆಯುತ್ತಾರೆ. ಅವರ ಮಾತನ್ನು ಸಾಬೀತುಪಡಿಸುವುದಾದರೆ ಆ ಅಭ್ಯರ್ಥಿಗಳ ನೋವು ನಿಮಗೆ ಅರ್ಥವಾಗುತ್ತಿಲ್ಲವೇ?

● ಕನ್ನಡಿಗರಿಗೆ ಉದ್ಯೋಗ ಸಿಗುವ ವಿಷಯದಲ್ಲಿ ಏನು ಮಾಡಬೇಕು?

ಈ ಹಿಂದೆ ರಾಮಕೃಷ್ಣ ಹೆಗಡೆ ಅವರ ಅವಧಿಯಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲು ನೀಡಬೇಕು ಎಂದು ಸರೋಜಿನಿ ಮಹಿಷಿ ಸಮಿತಿ ವರದಿ ನೀಡಿತ್ತು. ಆದರೆ, ಇವತ್ತಿನವರೆಗೆ ಸಮಿತಿ ವರದಿ ಜಾರಿಯಾಗಿಲ್ಲ. ಸಿದ್ದರಾಮಯ್ಯ ಅವರು ಎರಡನೇ ಬಾರಿ ಸಿಎಂ ಆದಾಗ ಕನ್ನಡಿಗರಿಗೆ ಉದ್ಯೋಗ ಮೀಸಲು ನೀಡಬೇಕು ಎಂದು ಕೋರಿದೆವು. ಕನ್ನಡಿಗರಿಗೆ ಮೀಸಲು ನೀಡಲು ಸರಕಾರ ಮುಂದಾದಾಗ 3-4 ಉದ್ಯಮಿಗಳು, ಇಲ್ಲಿನ ಉದ್ಯಮಗಳು ಬೇರೆ ರಾಜ್ಯಗಳಿಗೆ ಹೋಗುತ್ತವೆ ಎಂದು ಬೆದರಿಕೆ ಹಾಕಿದ್ದರಿಂದ ಮೀಸಲಾತಿ ನಿರ್ಧಾರವನ್ನು ತಡೆಹಿಡಿದರು. ಇದರಿಂದ ಕನ್ನಡಿಗ ಮಕ್ಕಳಿಗೆ ಉದ್ಯೋಗಗಳು ಇಲ್ಲದಂತೆ ಆಗಿದೆ. ಈ ರಾಜ್ಯದಲ್ಲಿ ಕನ್ನಡ ಭಾಷೆಗೆ ಪ್ರಾಮುಖ್ಯತೆ ಸಿಗಬೇಕಾಗಿತ್ತು. ಆದರೆ, ಕನ್ನಡ ಸೊರಗುತ್ತಿದೆ. ವಲಸೆ ಬಂದವರಿಗೆ ಕನ್ನಡ ಕಲಿಯಬೇಕು ಎಂಬ ಕಾನೂನು ಇಲ್ಲ. ಹೀಗಾಗಿ ಹಿಂದಿ ವಿಜೃಂಭಿಸುತ್ತಿದೆ.

> 1999ರಲ್ಲಿ ತಮಿಳರನ್ನು ಹೊರಗೆ ಹಾಕಿ ಕನ್ನಡಿಗರನ್ನು ಕೆಲಸಕ್ಕೆ ನೇಮಿಸಬೇಕು ಎಂದು ಹೋರಾಡಿದೆವು. ಅದು ನಮ್ಮ ಪ್ರಥಮ ಹೋರಾಟವಾಗಿತ್ತು, ನಮಗೆ ಗೆಲುವು ಸಿಕ್ಕಿತ್ತು. ಅಲ್ಲಿಂದ ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ ಸಂಘಟನೆಯನ್ನು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಶಾಖೆಗಳನ್ನು ತೆರೆದವು. ಅಂದಿನಿಂದ ಕನ್ನಡ ನೆಲ, ಜಲ, ಭಾಷೆ ವಿಚಾರಕ್ಕೆ ಬಹಳಷ್ಟು ಹೋರಾಟಗಳು ನಡೆದಿವೆ.
> -ಕೆ.ಎ. ನಾರಾಯಣಗೌಡ, ಅಧ್ಯಕ್ಷರು, ಕನ್ನಡ ರಕ್ಷಣಾ ವೇದಿಕೆ

ಆರ್‌ಸಿಬಿಯಲ್ಲಿ ಕನ್ನಡಿಗರಿರಬೇಕು

ಆರ್‌ಸಿಬಿ ಕ್ರಿಕೆಟ್ ತಂಡದಲ್ಲಿ ಕನ್ನಡಿಗರಿಗೆ ಸ್ಥಾನವಿಲ್ಲದ ಬಗ್ಗೆ ನಾರಾಯಣಗೌಡ ಪ್ರತಿಕ್ರಿಯಿಸಿ, ಕನ್ನಡಿಗರಿಗೆ ಮಾನ್ಯತೆ ಕೊಡದ ಮೇಲೆ ಅವರು ಬೆಂಗಳೂರು ಹೆಸರು ಹೇಳಬಾರದು. ಒಂದು ವೇಳೆ ಪುಕ್ಕಟೆಯಾಗಿ ಹೇಳಬೇಕಿದ್ದರೆ ಅಲ್ಲಿ ಆಟಗಾರರಾಗಿ ಹೆಚ್ಚು ಕನ್ನಡಿಗರು ಇರಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕರವೇ ದೊಡ್ಡ ಹೋರಾಟ ನಡೆಸಲಿದೆ ಎಂದರು.

● ಕರ್ನಾಟಕ ಬಂದ್‌ಗೆ ನಿಮ್ಮ ಬೆಂಬಲ ಏಕಿಲ್ಲ?

ಚಳವಳಿ ಅಥವಾ ಹೋರಾಟದ ಪ್ರಥಮ ಅಸ್ತ್ರವೇ ಬಂದ್ ಆಗಬಾರದು. ಯಾವುದೇ ಒಂದು ಚಳವಳಿಯನ್ನು ಹಂತಹಂತವಾಗಿ ಮಾಡಬೇಕು. ಜನರನ್ನು ಜಾಗೃತಿಗೊಳಿಸಬೇಕು, ನಾಡಿಮಿಡಿತ ಅರಿಯಬೇಕು, ಸರಕಾರದ ಸ್ಪಂದನೆ ನೋಡಿ ಹೋರಾಟ ಮಾಡಬೇಕು. ಅದಾವುದೂ ಇಲ್ಲದಿದ್ದರೆ 'ಬಂದ್' ಕೊನೆಯ ಬ್ರಹ್ಮಾಸ್ತ್ರವಾಗಬೇಕು. ನಮ್ಮ ಪ್ರತಿಷ್ಠೆಗಾಗಿ ಮಾತಿಗೆ ಮುಂಚೆ ಬಂದ್ ಮಾಡುವುದು ಸರಿಯಲ್ಲ. ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಹಿರಿಯರಿದ್ದಾರೆ, ಅದರೆ, ಅವರು ತೆಗೆದುಕೊಳ್ಳುವ ನಿರ್ಧಾರ ಆತುರದಿಂದ ಕೂಡಿರುತ್ತದೆ. ಅದು ಅವರ ಪ್ರತಿಷ್ಠೆಯೋ ಅಥವಾ ಪ್ರಚಾರದ ಹುಚ್ಚೋ ಗೊತ್ತಿಲ್ಲ. ಒಂದು ಚಳವಳಿ ಎಂದರೆ ನಾವು ಹೊರಟಿರುವ ಉದ್ದೇಶ ಈಡೇರಬೇಕು. ಇವತ್ತು 76 ಸಾವಿರ ಕೆಪಿಎಸ್‌ಸಿ ಪರೀಕ್ಷಾ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಅವರಿಗೆ ನ್ಯಾಯ ಕೊಡಿಸಲು ಹೋರಾಡಬೇಕು. ಬಂದ್‌ನಿಂದ ರಾಜ್ಯಕ್ಕೆ ನಷ್ಟವೇ ಹೊರತು, ಲಾಭವಿಲ್ಲ, ಹೀಗಾಗಿ ಈ ಬಂದ್‌ಗೆ ನಮ್ಮ ಬೆಂಬಲವಿಲ್ಲ.

● ರಾಜಕೀಯಕ್ಕೆ ಬರುವ ಉದ್ದೇಶವಿಲ್ಲವೇ?

ಇಂದು ರಾಜಕೀಯದ ಭಾಷ್ಯ ಬದಲಾಗಿದೆ. ವಿಧಾನಸಭೆ, ವಿಧಾನ ಪರಿಷತ್‌ಗೆ ಹೋಗಬೇಕಾದರೆ ಕೋಟ್ಯಂತರ ರು. ಬೇಕು. ನಾನು ಯಾರ ತಲೆ ಹೊಡೆದು ಅಷ್ಟು ದುಡ್ಡು ತರಲಿ. ಇಲ್ಲಿ ನನ್ನ ಹೋರಾಟ, ಕಾಳಜಿ, ಕಳಕಳಿ ಯಾವ ರಾಜಕಾರಣಕ್ಕೆ ಅರ್ಥವಾಗಲ್ಲ. ಇವತ್ತಿನ ರಾಜಕಾರಣ ಹೊಲಸು ಅನಿಸುತ್ತಿದೆ. ಹೀಗಾಗಿ ನನ್ನ ದೇಹದಲ್ಲಿ ಕೊನೆಯ ಹನಿ ರಕ್ತ ಇರುವವರೆಗೂ ಕನ್ನಡ, ಕರ್ನಾಟಕಕ್ಕೆ ಹೋರಾಡುತ್ತೇನೆ ಹೊರತು ರಾಜಕೀಯಕ್ಕೆ ಹೋಗಲ್ಲ. ಆದರೆ ರಾಜ್ಯದಲ್ಲಿ ಅಪ್ಪಟ ಪ್ರಾದೇಶಿಕ ಪಕ್ಷ ಬೇಕು ಎಂಬ ಒತ್ತಡ ಕೇಳಿಬರುತ್ತಿದೆ. ಜನ ಅಂತಹ ಪಕ್ಷವನ್ನು ಬಯಸುವುದಾದರೆ ಆ ಕಾಲಕ್ಕೆ ಅಧಿಕಾರದಿಂದ ದೂರ ಉಳಿದು ಪಕ್ಷ ಕಟ್ಟುವ ಯೋಚನೆ ಮಾಡಬಹುದು.

● ನಾರಾಯಣ ಗೌಡರ ಹೋರಾಟದ ಹಾದಿ ಹೇಗಿತ್ತು?

ನಾನು ಹೋರಾಟದ ಹಾದಿಗೆ ಬಂದಾಗ ನನ್ನ ವಯಸ್ಸು 15. ಅರಸೀಕೆರೆಯಲ್ಲಿ ಆಯೋಜಿಸಿದ್ದ ಆರ್ಕೆಸ್ಟ್ರಾದಲ್ಲಿ ಕನ್ನಡದ ಬದಲಿಗೆ ತಮಿಳು ಹಾಡು ಹಾಡಿದರು ಎಂಬ ಕಾರಣಕ್ಕೆ ಆರ್ಕೆಸ್ಟ್ರಾಗೆ ಹೊಡೆದಿದ್ದೆ. ಅಂದು ನನ್ನನ್ನು ಪ್ರಥಮ ಬಾರಿ ಲಾಕಪ್‌ನಲ್ಲಿ ಹಾಕಿ ಎಸ್‌ಐ ಮಹದೇವು ಎಂಬುವವರು ಹಿಗ್ಗಾಮುಗ್ಗಾ ಹೊಡೆದಿದ್ದರು. ನಮ್ಮ ತಂದೆ ಭಾರಿ ಶಿಸ್ತಿನ ಮನುಷ್ಯ. ಓದು, ಮನೆ, ತೋಟದ ಕೆಲಸ ಬಿಟ್ಟು ಬೇರೆ ವಿಚಾರಕ್ಕೆ ಹೋಗಬಾರದು ಎಂಬುವುದು ಅವರ ಸೂಚನೆ. ಆದರೆ, ನನಗೆ ಕನ್ನಡದ ಸಾಹಿತ್ಯ ಭಾರಿ ಅಚ್ಚುಮೆಚ್ಚು. ರಾಷ್ಟ್ರಕವಿ ಕುವೆಂಪು ಅವರ ವಿಚಾರಗಳು, ರಾಜಕುಮಾರ್ ಅವರ ಸಿನಿಮಾಗಳು, ಪ್ರೊ.ನಂಜುಂಡಸ್ವಾಮಿ ಅವರ ರೈತ ಚಳವಳಿಯ ಆ ದಿನಗಳನ್ನು ಬಹಳ ಹತ್ತಿರದಿಂದ ಗಮನಿಸಿದವನು ನಾನು. ಆವತ್ತಿನ ಕಾಲಕ್ಕೆ ಕನ್ನಡದ ವಿಚಾರಕ್ಕೆ ಬಂದಾಗ ನನಗೆ ಸಿಟ್ಟು ಬರುತ್ತಿತ್ತು. ನಾನು ಚಿಕ್ಕ ವಯಸ್ಸಿನಲ್ಲೇ ಪೊಲೀಸ್ ಠಾಣೆ ಮೆಟ್ಟಿಲು ಹತ್ತಿದ್ದೆ ಎಂದು ಸ್ಟೇಷನ್ನಲ್ಲೇ ಎರಡು ದಿನ ಹೊಡೆದಿದ್ದರು. ನಂತರ ಮನೆಗೆ ಹೋದಾಗ ನಮ್ಮ ಸೋದರಮಾವ ಒನಕೆಯಿಂದ ತಲೆಗೆ ಹೊಡೆದಿದ್ದರು. ಆಗ ತಲೆಯಿಂದ ರಕ್ತ ಸೋರುತ್ತಿತ್ತು. ನಮ್ಮ ತಾಯಿ ಅರಿಶಿಣ ಮತ್ತು ಕಾಫಿಪುಡಿಯನ್ನು ಗಾಯಕ್ಕೆ ಮೆತ್ತಿ ಹಳೇ ಸೀರೆಯನ್ನು ಹರಿದು ಗಾಯಕ್ಕೆ ಕಟ್ಟಿದ್ದರು.

ಅಂದು ರಾತ್ರಿ ನನಗೆ ಅನಿಸಿತು. ಕನ್ನಡ ಎಂದಿದ್ದಕ್ಕೆ ಪೊಲೀಸರು ಹೊಡೆದರು. ಕನ್ನಡ ಎಂದಿದ್ದಕ್ಕೆ ಮನೆಯಲ್ಲಿ ಹೊಡೆದರು. ಹೀಗಾಗಿ ಇಲ್ಲಿ ಇರಬೇಕಾ ಎಂದು ನಮ್ಮ ಊರು ಅರಸೀಕೆರೆಯ ಮಾಲೇಕಲ್ ತಿರುಪತಿಯಿಂದ ಬಾಂಬೇ(ಈಗಿನ ಮುಂಬೈ)ಗೆ ಹೊರಟುಹೋದೆ. ತೆಂಗಿನಕಾಯಿ ಲಾರಿಯಲ್ಲಿ ಹತ್ತಿ ಬಾಂಬೇಗೆ ಹೋದೆ. 8-9 ವರ್ಷಗಳ ಕಾಲ ಯಾರ ಸಂಪರ್ಕಕ್ಕೂ ಸಿಗದೆ ಕೆಲಸ ಮಾಡಿಕೊಂಡಿದ್ದೆ. ಪ್ರಾರಂಭದ ದಿನಗಳಲ್ಲಿ ಅಲ್ಲಿ ಶಿವಸೇನೆ ಭಾರಿ ಪುಂಡಾಟಿಕೆ ನಡೆಸುತ್ತಿತ್ತು. ದಕ್ಷಿಣ ಭಾರತದವರ ಮೇಲೆ ನಡೆಯುತ್ತಿದ್ದ ನಡೆಯುತ್ತಿದ್ದ ದೌರ್ಜನ್ಯವನ್ನು ಕಂಡಿದ್ದೆ. ಅದಾದ ಮೇಲೆ ನಾನು ಮುಂಬೈ ಬಿಟ್ಟು ಬೆಂಗಳೂರಿಗೆ ಬಂದೆ. ಆದರೆ, ಬೆಂಗಳೂರಿನ ಪರಿಸ್ಥಿತಿ ಅವತ್ತು ಕನ್ನಡಿಗರ ಪಾಲಿಗೆ ನರಕವಾಗಿತ್ತು. ಎಲ್ಲಿ ನೋಡಿದರೂ ತಮಿಳು ಸಿನಿಮಾಗಳು, ತಮಿಳು ಪೋಸ್ಟರ್‌ಗಳು, ಎಲ್ಲಿ ನೋಡಿದರೂ ಡಿಎಂಕೆ, ಎಐಡಿಎಂಕೆ ನಾಯಕ ಪೋಸ್ಟರ್‌ಗಳು, ಹತ್ತು ಮಂದಿ ಡಿಎಂಕೆ, ಹತ್ತು ಮಂದಿ ಎಐಡಿಎಂಕೆಯವರು ನಗರ ಪಾಲಿಕೆಯಲ್ಲಿರುತ್ತಿದ್ದರು. ರಾಜ್‌ಕುಮಾರ್ ಅವರೆಂದರೆ ಪಂಚಪ್ರಾಣ, ಹಾಗಾಗಿ ಅಭಿಮಾನಿಗಳ ಸಂಘದಲ್ಲೇ ಒಂದಷ್ಟು ಕಾಲ ಕೆಲಸ ಮಾಡಿದೆ. ಬಳಿಕ ಕನ್ನಡಪರ ಹೋರಾಟಕ್ಕಾಗಿ ಬಲಿಷ್ಠ ಸಂಘಟನೆ ಅಗತ್ಯವಿದೆ ಎಂದು 1999ರಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ಥಾಪಿಸಲಾಯಿತು.

ಸಮಾಚಾರ ಸಣ್ಣದಲ್ಲ

ಡಿಕೆಶಿ ಹೇಳಿದ್ದು ಸರಿ ರವಿ ಗಣಿಗ ಸಮರ್ಥನೆ

ಮೈಸೂರು: ಡಿಸಿಎಂ ಬಳಿಕ ಕನ್ನಡ ನಟರ ವಿರುದ್ಧ ಕಾಂಗ್ರೆಸ್ ಶಾಸಕ ಗಣಿಗ ರವಿ ಗರಂ ಆಗಿದ್ದು, ನಟ್ಟು, ಬೋಲ್ಟು ಇವತ್ತೇ ಟೈಟ್ ಮಾಡಬೇಕು ಎಂದು ಹರಿಹಾಯ್ದರು. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕನ್ನಡಿಗರಿಂದಲೇ ಇವರೆಲ್ಲ ಸ್ಟಾರ್ ಆಗಿರೋದು. ನಿಮಗೆ ಸಬ್ಸಿಡಿ ಬೇಕು ಅಂದಾಗ ಬರ್ತೀರಾ ? ಕನ್ನಡದ ನೆಲ, ಜಲ, ಭಾಷೆ ಬೇಡವೇ ಎಂದು ಆಕ್ರೋಶ ವ್ಯಕ್ತಪಡಿಸಿದರು. ಡಿ.ಕೆ.ಶಿವಕುಮಾರ್ ಹೇಳಿರುವುದರಲ್ಲಿ ಏನೂ ತಪ್ಪಿಲ್ಲ. ತೆಲಂಗಾಣದಲ್ಲಿ ರೇವಂತ್ ರೆಡ್ಡಿ ರೀತಿ ನಾವೂ ಮಾಡಬೇಕು. ಕನ್ನಡದ ಕಾರ್ಯಕ್ರಮ ಅಂದರೆ ಕನ್ನಡದ ನಟರಿಗೆ ಯಾಕೆ ಅಸಡ್ಡೆ ? ವಿಧಾನಸೌಧದ ಮುಂದೆ ನಿಮಗಾಗಿ ಕಾರ್ಯಕ್ರಮ ಮಾಡಿದ್ದೇವೆ. ಮರ್ಯಾದೆಯಿಂದ ಆಹ್ವಾನ ಕಳುಹಿಸಿದರೆ ಯಾಕೆ ಬರುವುದಿಲ್ಲ ? ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಆಗಿದ್ದರೂ ಶಿವರಾಜ್‌ಕುಮಾರ್ ಬಂದಿದ್ದಾರೆ.

ನಾಳೆ ವೀರಶೈವ-ಲಿಂಗಾಯತ ಸಮಾವೇಶ

ದಾವಣಗೆರೆ: ಮಾಜಿ ಸಿಎಂ ಯಡಿಯೂರಪ್ಪ ಒಂದು ಸಮಾಜಕ್ಕೆ ಮೀಸಲು ಮಾಡುತ್ತಿಲ್ಲ, ಅವರು ಜಾತ್ಯತೀತ ನಾಯಕ. ಆದರೆ ಇಡೀ ವೀರಶೈವ-ಲಿಂಗಾಯತ ಸಮಾಜ ಅವರ ಬೆಂಬಲಕ್ಕಿದೆ ಎಂದು ಸಮಾವೇಶದ ಮೂಲಕ ತೋರಿಸುತ್ತೇವೆ ಎಂದು ಮಾಜಿ ಸಚಿವ ಎಂ.ಪಿ ರೇಣುಕಾಚಾರ್ಯ ಹೇಳಿದರು. ವೀರಶೈವ ಲಿಂಗಾಯತ ಸಮುದಾಯದ ಪೂರ್ವಾಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾ.ನಾಲ್ಕರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಯಲಿದೆ. ಈ ಸಮಾವೇಶದ ಬಗ್ಗೆ ಹಲವು ಮಠಾಧೀಶರು ನನಗೆ ಕರೆ ಮಾಡಿ ಮಾತನಾಡಿದ್ದಾರೆ. ಇಟ್ಟ ಹೆಜ್ಜೆ ಹಿಂದೆ ಇಡಬೇಡಿ .ನಿಮ್ಮ ಜೊತೆ ನಾವೆಲ್ಲ ಮಠಾಧೀಶರು ಇರುತ್ತೇವೆ ಎಂದಿದ್ದಾರೆ ಎಂದರು.

ವಿರಾಮ
ಪ್ರತಿ ಭಾನುವಾರ

{ ಜಗ್ಗೇಶ್ } ನಟ

ಚಿತ್ರೋದ್ಯಮದಲ್ಲಿ ಒಗ್ಗಟ್ಟಿಲ್ಲ, ಸಂವಾದವಿಲ್ಲ. ಒಟ್ಟಾರೆ ಕಲಾವಿದರ ಸಂಘವೇ ಕಣ್ಮರೆ. ಕರ್ನಾಟಕದಲ್ಲಿ ಕನ್ನಡ ಚಿತ್ರರಂಗ ಅವಸಾನ. ಯಾವ ಕಲಾವಿದರು ಏನಾಗಿದ್ದಾರೆ, ಕಲಾವಿದರಾದ ನಮಗೇ ಚಿತ್ರೋತ್ಸವದ ಬಗ್ಗೆ ಮಾಹಿತಿಯಿಲ್ಲ. ಸಾವಿನ ಅಂಚಿನ ಚಿತ್ರರಂಗಕ್ಕೆ ಬೋಲ್ಟೇ ಇಲ್ಲಾ, ಇನ್ನು ಟೈಟ್ ಮಾಡಿ ಏನು ಪ್ರಯೋಜನ.

ಕನ್ನಡಪರ ಹೋರಾಟಗಾರ ವಾಟಾಳ್ ಸ್ಪಷ್ಟನೆ | ಕೊನೆಯ ಕ್ಷಣದಲ್ಲಿ ನಾರಾಯಣಗೌಡ ಬೆಂಬಲದ ವಿಶ್ವಾಸ

ಮಾರ್ಚ್ 22ರಂದು ಕರ್ನಾಟಕ ಬಂದ್ ನಡೆಯುವುದು ಖಚಿತ

ಮೈಸೂರು: ಆಕಾಶ ಭೂಮಿ ಒಂದಾದರೂ ಸರಿ ಮಾರ್ಚ್ 22ರಂದು ಅಖಂಡ ಕರ್ನಾಟಕ ಬಂದ್ ಮಾಡಲಾಗುವುದು ಎಂದು ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಹೇಳಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗಡಿನಾಡು, ಕನ್ನಡ, ಕನ್ನಡಿಗರ ಶಕ್ತಿ ಪ್ರದರ್ಶನ. ಕನ್ನಡಿಗರ ಶಕ್ತಿ ದೇಶಕ್ಕೆ ಗೊತ್ತಾಗಬೇಕು. ಹಾಗಾಗಿ 22ರಂದು ಕರ್ನಾಟಕ ಸಂಪೂರ್ಣ ಬಂದ್ ಮಾಡುತ್ತೇವೆ ಎಂದರು.

ಕೇಂದ್ರದಿಂದ ರಾಜ್ಯದ ಕಡೆಗಣನೆ: ಕೇಂದ್ರ ಸರಕಾರ ರಾಜ್ಯವನ್ನು ಕಡೆಗಣಿಸಿದೆ. ಕರ್ನಾಟಕದಲ್ಲಿ ಎಂದೆಂದೂ ಕಂಡಿರದ ಬಂದ್ ಆಗಬೇಕು. 1900 ಕನ್ನಡಪರ ಸಂಘಟನೆಗಳು ಬಂದ್ ಗೆ ಬೆಂಬಲ ಸೂಚಿಸಿವೆ. ಈ ಬಂದ್ ಕನ್ನಡಿಗರಿಗಾಗಿ ನಡೆಯುತ್ತಿರುವ ಬಂದ್ ಎಂದು ವಾಟಾಳ್ ಸ್ಪಷ್ಟಪಡಿಸಿದರು.

ನಾರಾಯಣಗೌಡರ ಬಗ್ಗೆ ನಂಬಿಕೆ: ಕೊನೆಯ ಕ್ಷಣದಲ್ಲಿ ನಾರಾಯಣಗೌಡರು ಕೂಡ ಬಂದ್ ಗೆ ಬೆಂಬಲ ಸೂಚಿಸುತ್ತಾರೆ. ನಾರಾಯಣ ಗೌಡರ ಬಗ್ಗೆ ಗೌರವ ಇದೆ. ಅವರ ಜೊತೆಯೂ ಕೂಡ ಮಾತನಾಡುತ್ತೇವೆ. ಯಾರೂ ಕೂಡ ವಿರೋಧ ಮಾಡುವುದಿಲ್ಲ. ಕೆಲವರು ಬಂದ್ ಬಗ್ಗೆ ಮಾತನಾಡುತ್ತಾರೆ, ಅವರು ಅವಿವೇಕಿಗಳು ಎಂದು ವಾಟಾಳ್ ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡುವ ಭಾವನೆ ಇರಬೇಕು. ಪ್ರಾಣ ಕೊಡಲು ಸಿದ್ಧರಾಗಿರಬೇಕು ಎಂದ ಅವರು, ಆಕಾಶ , ಭೂಮಿ ಒಂದಾದರೂಸರಿಯೇ ಮಾ. 22ರಂದು ಕರ್ನಾಟಕ ಬಂದ್ ಎಂದು ಹೇಳಿದ ಅವರು, ಸೋಮವಾರ ಬೆಳಗ್ಗೆ ರಾಜಭವನಕ್ಕೆ ಮುತ್ತಿಗೆ ಹಾಕುತ್ತೇವೆ ಎಂದು ತಿಳಿಸಿದರು.

ಮಾ.7 ರ ಬಜೆಟ್ ಮಂಡನೆ ದಿನ ಪಾದಯಾತ್ರೆ, ಪ್ರತಿಭಟನೆ

ಕಾಂಗ್ರೆಸ್ ವಿರುದ್ಧ ಪ್ರತಿಭಟನೆ: ಅಶೋಕ

ಬೆಂಗಳೂರು: ರಾಜ್ಯಪಾಲರಿಗೆ ನಿರಂತರವಾಗಿ ಅಪಮಾನ ಮಾಡುತ್ತಿರುವ ಕಾಂಗ್ರೆಸ್ ಸರಕಾರದ ವಿರುದ್ಧ ಅಧಿವೇಶನದ ಮೊದಲ ದಿನ ಪ್ರತಿಭಟಿಸಲಾಗುವುದು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರ ರಾಜ್ಯಪಾಲರಿಗೆ ನಿರಂತರವಾಗಿ ಅಪಮಾನ ಮಾಡುತ್ತಿದೆ. ಒಂದು ಕಡೆ ಅಪಮಾನ ಮಾಡಿದರೆ, ಮತ್ತೊಂದು ಕಡೆ ಅವರಿಂದಲೇ ಸರಕಾರಕ್ಕೆ ಮೆಚ್ಚುಗೆ ಹೇಳುವ ಮಾತನ್ನು ಆಡಿಸಲಾಗುತ್ತಿದೆ. ಇದನ್ನು ವಿರೋಧಿಸಿ ಬಿಜೆಪಿಯಿಂದ ಮಾರ್ಚ್ 3 ರಂದು ಪ್ರತಿಭಟಿಸಲಾಗುವುದು. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಕಾಂಗ್ರೆಸ್ ಶಾಸಕರೇ ಈ ಮಾತನ್ನು ಹೇಳುತ್ತಿದ್ದಾರೆ. ಇದರ ಜೊತೆಗೆ ಹಣ ಇಲ್ಲದೆ ಒಂದು ಲಕ್ಷ ಕೋಟಿ ರೂ.ಸಾಲ ಮಾಡಲಾಗುತ್ತಿದೆ. ಜನರ ಮೇಲೆ ತೆರಿಗೆ ಹೊರೆ ಹೇರಲಾಗುತ್ತಿದೆ. ಇದನ್ನು ಖಂಡಿಸಿ ಮಾ. 7 ರಂದು ಶಾಸಕರ ಭವನದಿಂದ ವಿಧಾನಸೌಧಕ್ಕೆ ಪಾದಯಾತ್ರೆ, ಹಾಗೂ ಪ್ರತಿಭಟನೆ ಮಾಡಲಾಗುವುದು ಎಂದು ತಿಳಿಸಿದರು.

ಮಂತ್ರಾಲಯದ ರಾಯರ ಮಠಕ್ಕೆ ಭೇಟಿ ನೀಡಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಸುಬುಧೇಂದ್ರ ತೀರ್ಥ ಸ್ವಾಮೀಜಿಯವರು ಸನ್ಮಾನಿಸಿ ಆಶೀರ್ವದಿಸಿದರು. ಎಚ್‌ಡಿಕೆ ಪತ್ನಿ ಹಾಗೂ ಮಾಜಿ ಶಾಸಕಿ ಅನಿತಾ ಅವರೂ ಇದ್ದರು.

ವಿಚಾರಣಾಧೀನ ಕೈದಿ ಸಾವು

ಹಾವೇರಿ: ಹಾವೇರಿ ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ಘಟನೆ ರವಿವಾರ ಬೆಳಗ್ಗೆ ನಡೆದಿದೆ. 2019ರಲ್ಲಿ ಜೋಡಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದ ವಿಚಾರಣಾಧೀನ ಕೈದಿ ಕೋಟ್ಯಪ್ಪ ಅಂಬಿಗೇರ ನೇಣಿಗೆ ಶರಣಾಗಿದ್ದಾರೆ. ಆರೋಪಿ ಕೋಟ್ಯಪ್ಪ ಅಂಬಿಗೇರ ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಹತ್ತಿಮತ್ತೂರಿನಲ್ಲಿ ಅನೈತಿಕ ಸಂಬಂಧದ ವಿಚಾರಕ್ಕೆ ಇಬ್ಬರನ್ನು ಬರ್ಬರವಾಗಿ ಕೊಲೆಗೈದಿದ್ದ. ಕಳೆದ ಆರು ವರ್ಷಗಳಿಂದ ಕೊಲೆಯ ವಿಚಾರವಾಗಿ ವಿಚಾರಣಾಧೀನ ಕೈದಿಯಾಗಿದ್ದ ಕೋಟ್ಯಪ್ಪನನ್ನು ಜಿಲ್ಲಾ ಕಾರಾಗೃಹದಲ್ಲಿ ಇಡಲಾಗಿತ್ತು. ಆತನನ ಶವ ರವಿವಾರ ಬೆಳಗ್ಗೆ ಜಿಲ್ಲಾ ಕಾರಾಗೃಹದ ಸ್ಟೋರ್ ರೂಂನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಕೋಡಿಮಠದ ಶ್ರೀಗಳ ಭವಿಷ್ಯ | ಹಾಲು ಕೆಟ್ಟರೂ ಹಾಲು ಸಮಾಜ ಕೆಡದು: ಶ್ರೀ

ಸಿದ್ದರಾಮಯ್ಯರಿಂದ ಸಿಎಂ ಸ್ಥಾನ ಕಸಿಯುವುದು ಯಾರಿಗೂ ಸಾಧ್ಯವಿಲ್ಲ

ಯಾದಗಿರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಿಎಂ ಕುರ್ಚಿಯಿಂದ ಬಿಡಿಸುವುದು ಅಷ್ಟು ಸುಲಭವಲ್ಲ. ಸಿಎಂ ಸಿದ್ದರಾಮಯ್ಯ ಅವರಾಗಿಯೇ ಮುಖ್ಯಮಂತ್ರಿ ಸ್ಥಾನ ಬಿಡಬೇಕೇ ಹೊರತು ಅವರನ್ನು ಇಳಿಸಲು ಯಾರಿಂದಲೂ ಆಗದು ಎಂದು ಕೋಡಿಮಠದ ಡಾ. ಶಿವಯೋಗಿ ಶಿವಾನಂದ ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ.

ಯಾದಗಿರಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯನವರನ್ನು ಸಿಎಂ ಕುರ್ಚಿಯಿಂದ ಇಳಿಸುವುದು ಸುಲಭದ ಮಾತಲ್ಲ. ಅವರ ಹಾಲುಮತ ಸಮಾಜವು ಪ್ರಾಚೀನ ಕಾಲದಿಂದ ದೈವರಾಧನೆ ಮಾಡುವ ಸಮಾಜವಾಗಿದ್ದು, ಹಾಲು ಕೆಟ್ಟರೂ ಹಾಲು ಸಮಾಜ ಕೆಡದು, ಹಕ್ಕು-ಬುಕ್ಕರು ವಿಜಯನಗರ ಸಾಮ್ರಾಜ್ಯ ಕಟ್ಟಿದರು. ಹಾಲುಮತ ಸಮಾಜದವರಲ್ಲಿ ರಾಜ್ಯದ ಅಧಿಕಾರವಿದೆ. ಹಾಗಾಗಿ ಇದನ್ನು ಕಸಿದುಕೊಳ್ಳುವುದು ಅಸಾಧ್ಯ ಎಂದು ಖಡಾಖಂಡಿತವಾಗಿ ಹೇಳಿದರು.

ಯುಗಾದಿ ನಂತರ ಹೇಳುವೆ: ಸಿಎಂ ಕುರ್ಚಿ ಬಗ್ಗೆ ಚರ್ಚಿಸುವುದು ಸುಲಭ. ಆದರೆ ಅವರನ್ನು ಅಷ್ಟು ಸುಲಭವಾಗಿ ಅಧಿಕಾರದಿಂದ ಇಳಿಸಲು ಆಗುವುದಿಲ್ಲ. ಮುಂದೆ ಏನಾಗುತ್ತದೆಂದು ಯುಗಾದಿ ಆದ ಮೇಲೆ ಹೇಳುವೆ ಎನ್ನುವ ಮೂಲಕ ಕೋಡಿಮಠದ ಶ್ರೀಗಳು ಮತ್ತಷ್ಟು ಕುತೂಹಲ ಜನರಲ್ಲಿ ಹುಟ್ಟಿಸಿದ್ದಾರೆ.



> ಮುಂಬರುವ ದಿನಗಳಲ್ಲಿ ಕರ್ನಾಟಕಕ್ಕೆ ಯಾವುದೇ ತೊಂದರೆಗಳಿಲ್ಲ. ಆದರೆ ಜಾಗತಿಕವಾಗಿ ಮುಂದೆ ಅಜಾಗರೂಕತೆ ಎದುರಾಗಲಿದ್ದು, ಕಳೆದ ವರ್ಷಕ್ಕಿಂತ ಈ ವರ್ಷ ಭೀಕರತೆ ಕಾಡುವ ಲಕ್ಷಣಗಳಿವೆ.
> -ಡಾ.ಶಿವಯೋಗಿ ಶಿವಾನಂದ ಸ್ವಾಮೀಜಿ, ಕೋಡಿಮಠ

ಡಿಕೆ ಶಿವಕುಮಾರ್ ಸಿಎಂ ಅಗುವುದನ್ನು ತಪ್ಪಿಸಲಾಗದು

ಉಡುಪಿ:ರಾಜ್ಯದಲ್ಲಿ ನಾಯಕತ್ವದ ಚರ್ಚೆ ನಡೆದಿರುವ ಬೆನ್ನಲ್ಲೇ ಡಿಸಿಎಂ ಡಿ.ಕೆ.ಶಿವಕುಮಾರ್ ಬೆಂಬಲಕ್ಕೆ ನಿಂತಿರುವ ಮಾಜಿ ಸಿಎಂ ವೀರಪ್ಪ ಮೊಯ್ಲಿ, ಡಿಕೆಶಿ ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ಬಗ್ಗೆ ಕಾರ್ಕಳದಲ್ಲಿ ಭಾನುವಾರ ಹೇಳಿಕೆ ನೀಡಿರುವ ಮೊಯ್ಲಿ, ಶಿವಕುಮಾರ್ ಸಿಎಂ ಆಗುವುದು ಖಚಿತ. ಮುಖ್ಯಮಂತ್ರಿ ಸ್ಥಾನ ಯಾರು ಕೊಡುವಂಥದ್ದಲ್ಲ. ಡಿಕೆಶಿಗೆ ವಿಧಾನಸಭಾ ಚುನಾವಣೆಯ ಟಿಕೆಟ್ ಕೊಡಿಸಿದವನು ನಾನು.ಇಂದು ಅವರು ಯಶಸ್ವಿ ನಾಯಕರಾಗಿ ಮೂಡಿಬಂದಿದ್ದಾರೆ.ಸದ್ಯದಲ್ಲೇ ಅವರು ಸಿಎಂ ಅಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಸಿದ್ದು ಶೀಘ್ರ ರಾಜೀನಾಮೆ

ಗಂಗಾವತಿ: ವೈಯಕ್ತಿಕ ಮತ್ತು ಆರೋಗ್ಯದ ಸಮಸ್ಯೆಯಿಂದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಸಂಭವ ಹೆಚ್ಚಿದೆ. ಆ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಪತನವಾಗಲಿದೆ ಎಂದು ತಾವು ಹೇಳಿರುವುದಾಗಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಹೇಳಿದ್ದಾರೆ. ಕಳೆದ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಸಿದ್ದರಾಮಯ್ಯನವರು ಆಡಳಿತ ನಡೆಸಿದಂತೆ ಪ್ರಸ್ತುತ ಈಗ ಅವರು ಆಡಳಿತ ನಡೆಸಲು ಆಗುತ್ತಿಲ್ಲ. ಅವರಿಗೆ ವೈಯಕ್ತಿಕ ಸಮಸ್ಯೆಗಳು ಮತ್ತು ಆರೋಗ್ಯ ಕೈ ಕೊಡುತ್ತಿದ್ದು ಈ ಕಾರಣಕ್ಕಾಗಿ ಅವರು ತಮ್ಮ ಸ್ಥಾನವನ್ನು ತ್ಯಾಗ ಮಾಡಲಿದ್ದಾರೆ ಎಂದು ಕೆಲ ಮೂಲಗಳಿಂದ ಗೊತ್ತಾಗಿದೆ ಎಂದರು.

ಕಾಪು ಹೊಸ ಮಾರಿಗುಡಿಯ ಬ್ರಹ್ಮಕಳಶೋತ್ಸವದಲ್ಲಿ ಡಿಸಿಎಂ ಭಾಗಿ

ಮಾನವೀಯತೆಗೆ ತಲೆಬಾಗೋಣ, ಮಾನವ ಧರ್ಮ ಉಳಿಸೋಣ

ಉಡುಪಿ: ಮಾನವೀಯತೆಗೆ ತಲೆಬಾಗೋಣ, ಮಾನವಧರ್ಮವನ್ನು ಉಳಿಸೋಣ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರೆ ನೀಡಿದ್ದಾರೆ. ಕಾಪುವಿನಲ್ಲಿ ಭಾನುವಾರ ನಡೆದ ಇತಿಹಾಸ ಪ್ರಸಿದ್ಧ ಹೊಸಮಾರಿಗುಡಿಯ ಬ್ರಹ್ಮ ಕಳಶೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಡಿಸಿಎಂ, ನಾನು ನಂಬಿರುವ ನಮ್ಮ ಗುರುಗಳು ನನಗೆ, 'ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಸಿಗಲಿ' ಎಂದು ಮಾರ್ಗದರ್ಶನ ನೀಡಿದ್ದಾರೆ ಎಂದರು.

ಮನುಷ್ಯ ಹುಟ್ಟಿದ ಮೇಲೆ ಒಂದು ದಿನ ಸಾಯಲೇ ಬೇಕು. ನಮ್ಮ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಜನನ ಉಚಿತ, ಮರಣ ಖಚಿತ. ಇದರ ನಡುವೆ ನಾವು ಮಾಡುವ ಸಾಧನೆ ಏನೆನ್ನುವುದು ಮುಖ್ಯವಾಗುತ್ತದೆ ಎಂದು ಡಿಕೆಶಿ ಮಾರ್ಮಿಕವಾಗಿ ನುಡಿದರು.

ದೇವಿಯ ಭಕ್ತನಾಗಿ ಭಾಗಿ: ದೇವರು ವರ, ಶಾಪ ಎರಡೂ ಕೊಡುವುದಿಲ್ಲ. ಆದರೆ ಅವಕಾಶ ಕೊಡುತ್ತಾನೆ. ನಾನೂ ಸೇರಿ ಅನೇಕ ಭಕ್ತರಿಗೆ ದೇವಿಯ ಸೇವೆ ಮಾಡಲು ಅವಕಾಶ ಸಿಕ್ಕಿರುವುದು ನಮ್ಮ ಭಾಗ್ಯ. ಭಕ್ತರ ನೆರವಿನಿಂದ ಇಡೀ ದೇವಸ್ಥಾನವನ್ನು 99 ಕೋಟಿ ರು.ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗಿದೆ ಎಂದು ತಿಳಿದು ಸಂತೋಷವಾಯಿತು ಎಂದು ಹೇಳಿದರು.

ನಾನು ಈ ದೇವಸ್ಥಾನಕ್ಕೆ ಉಪಮುಖ್ಯಮಂತ್ರಿಯಾಗಿ ಬಂದಿಲ್ಲ. ದೇವಿಯ ಭಕ್ತವಾಗಿ ಭೇಟಿ ನೀಡಿದ್ದೇನೆ ಎಂದ ಅವರು, ಮುಂಬೈ, ದುಬೈ, ಬೆಂಗಳೂರು ಸೇರಿ ಹೊರ ಊರುಗಳಲ್ಲಿ ಇರುವ ಅನೇಕರು ದೇವಿಯ ಶಕ್ತಿಯ ಸೆಳೆತಕ್ಕೆ ಒಳಗಾಗಿ ಬಂದಿದ್ದೀರಿ. ಇದೇ ತಾಯಿಯ ಪವಾಡ ಎಂದು ನುಡಿದರು.

ಕಾಪುವಿನ ಹೊಸ ಮಾರಿಗುಡಿಯ ಬ್ರಹ್ಮಕಳಶೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭಾನುವಾರ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

> ಮಾರಿಗುಡಿ ದೇವಸ್ಥಾನದ ಶಿಲ್ಪಕಲೆ ಚೆನ್ನಾಗಿ ಮೂಡಿಬಂದಿದೆ. ಕೆತ್ತನೆ ಕೆಲಸ ಅಚ್ಚುಕಟ್ಟಾಗಿದೆ. ಇಳಕಲ್ಲಿನ ಕೆಂಪು ಕಲ್ಲನ್ನು ಬಳಸಲಾಗಿದೆ. ನಾನಾ ಭಾಗದ ಜನರು ಕೈ ಜೋಡಿಸಿ ತಾಯಿಯ ಆಶೀರ್ವಾದಕ್ಕೆ ಭಾಜನರಾಗಿದ್ದಾರೆ. ದೇವಸ್ಥಾನ ಇನ್ನೂ ಬೆಳೆಯಲಿ ಎಂದು ಆಶಿಸುತ್ತೇನೆ.
> -ಡಿ.ಕೆ.ಶಿವಕುಮಾರ್, ಡಿಸಿಎಂ

ಡಿಕೆಶಿ ಹಿಂದುತ್ವ ನೀತಿಗೆ ಸ್ವಾಗತ

ಕಾರ್ಕಳ: ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಹಿಂದುತ್ವ ಕುರಿತಾದ ನಿಲುವನ್ನು ಬಿಜೆಪಿಯ ಶಾಸಕ ಸುನೀಲ್ ಕುಮಾರ್ ಸ್ವಾಗತಿಸಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರೋಧದ ನಡುವೆಯೂ ಪ್ರಯಾಗರಾಜ್‌ನ ಕುಂಭಮೇಳದಲ್ಲಿ ಗಂಗಾ ಸ್ನಾನ ಮಾಡಿದ ಹಾಗೂ ಪಕ್ಷದ ಮುನಿಸಿನ ಹೊರತಾಗಿಯೂ ಈಶಾ ಫೌಂಡೇಶನ್‌ನ ಶಿವರಾತ್ರಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಡಿ.ಕೆ.ಶಿವಕುಮಾರ್ ಅಭಿನಂದನಾರ್ಹರು ಎಂದಿದ್ದಾರೆ.

ಅಲ್ಲದೆ, ಹಿಂದುವಾಗಿಯೇ ಹುಟ್ಟಿ ಹಿಂದುವಾಗಿಯೇ ಸಾಯುವೆ ಎಂಬ ಡಿಸಿಎಂ ಮಾತನ್ನು ಶ್ಲಾಘಿಸಿರುವ ಸುನೀಲ್ ಕುಮಾರ್, ಹಿಂದುತ್ವದೆಡೆಗೆ ಹೆಜ್ಜೆಹಾಕಲು ಮನಸ್ಸು ಮಾಡುತ್ತಿರುವ ಕೆಪಿಸಿಸಿ ಅಧ್ಯಕ್ಷರಿಗೆ ಉಡುಪಿ ಜಿಲ್ಲೆಗೆ ಸ್ವಾಗತ ಎಂದಿದ್ದಾರೆ. ಭಾನುವಾರವಷ್ಟೇ ಕಾಪುವಿನ ಹೊಸಮಾರಿಗುಡಿಯ ಕಾರ್ಯಕ್ರಮದಲ್ಲಿ ಡಿಕೆಶಿ ಪಾಲ್ಗೊಂಡ ಹಿನ್ನೆಲೆಯಲ್ಲಿ ಸುನೀಲ್ ಕುಮಾರ್ ಟ್ವೀಟ್ ಮಾಡಿರುವುದು ಗಮನಾರ್ಹವಾಗಿದೆ.

ವಿಶ್ವವಾಣಿ

ಸಂಪಾದಕೀಯ

ರಚನಾತ್ಮಕ ಚರ್ಚೆಗೆ ಅವಕಾಶ ಸಿಗಲಿ

ಆಡಳಿತ ಹಾಗೂ ಪ್ರತಿಪಕ್ಷಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಎರಡು ಆಧಾರಸ್ತಂಭಗಳು. ಚುನಾವಣೆ ವೇಳೆ ರಾಜಕೀಯವಾಗಿ ಹೋರಾಟ ನಡೆಸಿ ವಿಧಾನಮಂಡಲಕ್ಕೆ ಆಗಮಿಸುವ ಎರಡೂ ಕಡೆಯ ಶಾಸಕರು, ಒಮ್ಮೆ ಪ್ರವೇಶಿಸಿದ ಬಳಿಕ ಪಕ್ಷದ ವ್ಯವಸ್ಥೆ ಮೀರಿ ರಾಜ್ಯದ ಅಭಿವೃದ್ಧಿ, ಜನರ ಒಳಿತಿನ ಕುರಿತು ಮಾತಿನ ಮಂಟಪದಲ್ಲಿ ಚರ್ಚಿಸಬೇಕು. ಅದರಲ್ಲಿಯೂ ಪ್ರತಿಪಕ್ಷ ಸ್ಥಾನದಲ್ಲಿರುವವರು ಆಡಳಿತ ಪಕ್ಷವನ್ನು ಎಚ್ಚರಿಸುವ, ಜನ ವಿರೋಧಿ ನಡೆಗಳ ಬಗ್ಗೆ ಸರಕಾರದ ಗಮನ ಸೆಳೆದು ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಧ್ವನಿಯಾಗಬೇಕಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಸೇರಿದಂತೆ ಯಾವುದೇ ರಾಜ್ಯ ಅಥವಾ ಸಂಸತ್ ಕಲಾಪದಲ್ಲಿ, ಜನಪರ ಚರ್ಚೆಗಿಂತ ಹೆಚ್ಚಾಗಿ ರಾಜಕೀಯ ವಿಷಯಗಳನ್ನೇ ಮುಂದಿಟ್ಟು ಅದಕ್ಕೆ 'ರಾಜ್ಯದ ಜನರ ಒಳಿತಿನ' ಲೇಪನವನ್ನು ಹಚ್ಚಿ ಆರೋಪ ಮಾಡುವುದು, ಇದಕ್ಕೆ ಆಡಳಿತ ಪಕ್ಷದ ಕಡೆಯಿಂದ ರಾಜಕೀಯವಾಗಿಯೇ ಉತ್ತರಿಸುವುದು, ರಾಜಕೀಯ ಹೇಳಿಕೆಗಳನ್ನು ನೀಡುವುದು ಸಾಮಾನ್ಯವಾಗಿದೆ. 2025ನೇ ಸಾಲಿನ ಮೊದಲ ಅಧಿವೇಶನ ಸೋಮವಾರದಿಂದ ಆರಂಭವಾಗುತ್ತಿದ್ದು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ 'ಸಾಂಪ್ರದಾಯಿಕ' ಭಾಷಣ ಮಾಡಲಿದ್ದಾರೆ. ಬಳಿಕ ಅಗಲಿದ ನಾಯಕರಿಗೆ ಸಂತಾಪ ಸೂಚಿಸುವುದರೊಂದಿಗೆ ಅಂದಿನ ಅಧಿವೇಶನ ಮುಕ್ತಾಯವಾಗಲಿದೆ. ಮಂಗಳವಾರದಿಂದ ಸದನ ಆಡಳಿತ-ಪ್ರತಿಪಕ್ಷ ಶಾಸಕರ ನಡುವೆ ವಾಕ್ಸಮರಕ್ಕೆ ವೇದಿಕೆಯಾಗುವ ಸಾಧ್ಯತೆಯಿದೆ. ಉಭಯ ಪಕ್ಷಗಳು ಸದ್ಯಕ್ಕೆ ಮಾಡಿಕೊಂಡಿರುವ ಸಿದ್ಧತೆಗಳನ್ನು ಗಮನಿಸಿದರೆ ಬೆಳಗಾವಿ ಅಧಿವೇಶನದಂತೆ ಬಜೆಟ್ ಅಧಿವೇಶನವೂ ರಾಜಕೀಯ ಕಾಳಗಕ್ಕೆ ವೇದಿಕೆಯಾಗುವ ಸಾಧ್ಯತೆ ಹೆಚ್ಚಿದೆ. ರಾಜ್ಯದ ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ ಯಾವುದೇ ಕಾರ್ಯಸೂಚಿಯನ್ನೂ ಎರಡೂ ಪಕ್ಷಗಳು ಮುಂದಿಟ್ಟಿಲ್ಲ. ಚಿಂತಕರ ಚಾವಡಿ'ಎನ್ನಲಾಗುವ ವಿಧಾನ ಪರಿಷತ್‌ನಲ್ಲೂ ರಾಜಕೀಯ ಚರ್ಚೆಯೇ ಮೇಲುಗೈ ಸಾಧಿಸುತ್ತಿರುವುದು ವಿಷಾದನೀಯ. ಈ ಹಿಂದೆ ಪರಿಷತ್‌ನಲ್ಲಿ ಅನೇಕ ವೇಳೆ ಪಕ್ಷಗಳನ್ನು ಮೀರಿದ ಚರ್ಚೆಗಳು ನಡೆದು, ಪರಿಹಾರ ಕಂಡುಕೊಂಡಿದ್ದಿದೆ. ಆಡಳಿತ ಪಕ್ಷದ ಸದಸ್ಯರೇ, ಸರಕಾರದ ನೀತಿಗಳನ್ನು ಖಂಡಿಸಿರುವ ನಿದರ್ಶನಗಳಿವೆ. ಉತ್ತಮ ಸಂಸದೀಯ ನಡವಳಿಕೆಯ ಹಿಂದಿನ ಉದಾಹರಣೆಗಳನ್ನು ಮಾದರಿಯಾಗಿಟ್ಟುಕೊಂಡು ಉಭಯ ಸದನದ ಶಾಸಕರು ರಾಜ್ಯದ ಒಳಿತಿನ ದೃಷ್ಟಿಯಿಂದ ರಚನಾತ್ಮಕ ವಿಷಯಗಳ ಬಗ್ಗೆ ಚರ್ಚೆ ನಡೆಸುವಂತಾಗಬೇಕು.

ಸೊಂಪಾದಕೀಯ

ಅಭಯ್ ಸಿಂಗ್‌ಗೆ ಭಯ

ಅಭಯ್ ಸಿಂಗ್ ಭಯಭೀತರಾಗಿದ್ದಾರೆ ಅಂದ್ರೆ, ನೀವು 'ಯಾರು ಈ ಅಭಯ್ ಸಿಂಗ್?' ಅಂತ ಆಶ್ಚರ್ಯಪಡಬಹುದು. ಆದರೆ ಅಭಯ್ ಸಿಂಗ್ ಅನ್ನೋ ಹೆಸರಿನ ಬದಲು 'ಐಐಟಿ ಬಾಬಾ' ಅಂದ್ರೆ, ಸುಲಭವಾಗಿ ಅರ್ಥ ಆಗುತ್ತೆ. ಯಾಕಂದ್ರೆ ಇದು ಇತ್ತೀಚಿನ ಕುಂಭಮೇಳದ ಸಮಯದಲ್ಲಿ ಬೆಳಕಿಗೆ ಬಂದ ಪ್ರತಿಭೆ. ಆಧ್ಯಾತ್ಮಿಕ ಜ್ಞಾನದ ಬೆಳಕನ್ನು ಹುಡುಕುತ್ತಾ ಕೈಲಿದ್ದ ಏರೋಸ್ಪೇಸ್ ಎಂಜಿನಿಯರಿಂಗ್ ಪದವಿಯನ್ನು ಬಿಟ್ಟು ಐಐಟಿಯಿಂದ ಹೊರಬಂದು ಬಾಬಾ ಆಗಿದ್ದ ಈತ, ಇತ್ತೀಚಿಗೆ ಫೇಮಸ್ ಆದ ಮೇಲೆ ಸಹಜವಾಗಿಯೇ ಖಾಸಗಿ ಟಿವಿ ವಾಹಿನಿಯವರು 'ಬಾಬಾ, ಬಾ, ಬಾ' ಅಂತ ಕಾರ್ಯಕ್ರಮವೊಂದಕ್ಕೆ ಕರೆಸಿಕೊಂಡಿದ್ದಾರೆ. ಆದರೆ ಅಲ್ಲಿ ಈತನ ಮೇಲೆ ಹಲ್ಲೆ ನಡೆದಿದೆ ಅನ್ನೋದು ಈತ ತನ್ನ ಇನ್ಸ್ಟಾಗ್ರಾಮ್‌ನಲ್ಲಿ ಮಾಡಿರುವ ಆರೋಪ. ಅಂದಹಾಗೆ, ಬಾಬಾ ಮೇಲೆ ಹಲ್ಲೆ ನಡೆಸಿದ ಗೂಂಡಾಗಳು ಯಾರು ಅಂತ ಕೇಳಿದ್ರೆ ನೀವು ಅಚ್ಚರಿಪಡ್ತೀರ. ಯಾರೋ ಪುಡಿರೌಡಿಗಳು ಬಾಬಾ ಮೇಲೆ ಹಲ್ಲೆ ನಡೆಸಿಲ್ಲ. ಬದಲಾಗಿ 'ಕೇಸರಿಬಟ್ಟೆ ತೊಟ್ಟ ಕೆಲ ಸಂತರು ಹಲ್ಲೆ ಮಾಡಿದ್ದಾರೆ' ಅಂತ ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಬಾಬಾ. ಈ ಬಗ್ಗೆ ಲಖನೌನ ಸೆಕ್ಟರ್ 126ರ ಪೊಲೀಸ್ ಠಾಣೆ ಮುಂದೆ ನಿಂತು ತಮ್ಮ ನೋವನ್ನ ಪ್ರತಿಭಟನೆ ಮೂಲಕ ಹೇಳಿಕೊಂಡಿದ್ದಾರೆ. ಈ ಬಾಬಾ ಚರ್ಚಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಗ ಕೆಲ ಸಂತರು ಕೂಡಾ ಅಲ್ಲಿ ಉಪಸ್ಥಿತರಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರೋ ವಿಡಿಯೋದಲ್ಲಿ ಈ ಬಾಬಾ ಮೇಲೆ 'ನೀನು ಪಾಕಿಸ್ತಾನಿ ಏಜೆಂಟ್' ಅಂತ ನಿಂದಿಸಿರುವ ಈ ಸಂತರು, ಕಾರ್ಯಕ್ರಮದಿಂದ ಎದ್ದು ಹೋಗಲು ಯತ್ನಿಸುತ್ತಿದ್ದ ಬಾಬಾ ಮೇಲೆ, 'ಹೋಗಬೇಡ, ಒಳಗೆ ಬಾ' ಅಂತ ದೈಹಿಕ ಹಲ್ಲೆ ಮಾಡಿರೋದು ಕಂಡುಬಂದಿದೆ. ಇದಕ್ಕೆ ಖಾಸಗಿ ಚಾನೆಲ್‌ನ ಕುಮ್ಮಕ್ಕು ಕೂಡಾ ಇದೆ ಎನ್ನಲಾಗಿದೆ. ವಾಹಿನಿಯವರು ಆತನನ್ನು ಹೊರಗೆ ಹೋಗಲು ಬಿಡದೆ ಕೂಡಿ ಹಾಕಿದ್ದರಂತೆ. ಐಐಟಿ ಕೆಲಸ ಮುಂದುವರಿಸಿದ್ದಿದ್ದರೆ ಹೋಮಿ ಜಹಾಂಗೀರ್ ಬಾಬಾ ಥರ ಆಗಬಹುದಾಗಿದ್ದ ಈ ಬಾಬಾಗೆ ಈ ಪರಿಸ್ಥಿತಿ ಬರಬಾರದಿತ್ತು.

ಸಂಪಾದಕರ ಸದ್ಯಶೋಧನೆ

ವಾಟರ್ ಲ್ಯಾಂಡಿಂಗ್ ಅಂದರೇನು?

ವಿಮಾನ ಟೇಕಾಫ್ ಆಗುವುದಕ್ಕಿಂತ ಮುನ್ನ ಗಗನಸಖಿಯರು ಪ್ರಯಾಣಿಕರಿಗೆ ಕೆಲವು ಸೂಚನೆಗಳನ್ನು ನೀಡುತ್ತಾರಷ್ಟೆ. ಆ ಸಂದರ್ಭದಲ್ಲಿ ಒಂದು ಸೂಚನೆಯನ್ನು ನೀಡಲು ಮರೆಯುವುದಿಲ್ಲ. ಅದೇನೆಂದರೆ, ಒಂದು ವೇಳೆ ವಿಮಾನ ನೀರಿನ ಮೇಲೆ ಇಳಿದರೆ (ಲ್ಯಾಂಡ್ ಆದರೆ) ಏನು ಮಾಡಬೇಕು, ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು, ಅಂಥ ಸನ್ನಿವೇಶದಲ್ಲಿ ಪಾರಾಗುವ ಬಗೆ ಎಂತು ಎಂಬುದನ್ನು ವಿವರಿಸುತ್ತಾರೆ. ಅದನ್ನು ಮೊದಲ ಬಾರಿ ಕೇಳಿಸಿಕೊಂಡವರಿಗೆ ಭಯವಾಗಬಹುದು. ವಿಮಾನ ನೀರಿನ ಮೇಲೆಯೂ ಇಳಿಯುತ್ತದಾ ಎಂದು ಅನಿಸಬಹುದು. ಆದರೆ ತುರ್ತುಸ್ಥಿತಿ ಸಂದರ್ಭದಲ್ಲಿ ವಿಮಾನ ನೀರಿನ ಮೇಲೆ ಇಳಿಯುವ ಪ್ರಸಂಗ ಬರಲೂಬಹುದು. ಇದನ್ನು ವಾಟರ್ ಲ್ಯಾಂಡಿಂಗ್ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ವಿಮಾನಗಳನ್ನು ಭೂಮಿಯ ಮೇಲೆ ಇಳಿಯಲಾಗುವಂತೆ ವಿನ್ಯಾಸಗೊಳಿಸಲಾಗಿರುತ್ತದೆ. ಆದರೆ ಅನಿವಾರ್ಯ ಕಾರಣಗಳಿಂದ, ನೀರಿನ ಮೇಲೆ ವಿಮಾನವನ್ನು ಇಳಿಸುವ ಪ್ರಸಂಗವೂ ಬರಬಹುದು. ಇದು ಅತ್ಯಂತ ಅಪಾಯಕಾರಿ ಕೂಡ ಹೌದು. ಇಂಧನ ಮುಗಿದುಹೋದರೆ, ಎಂಜಿನ್ ವಿಫಲವಾದರೆ, ತುರ್ತು ತಾಂತ್ರಿಕ ದೋಷಗಳು ಕಾಣಿಸಿಕೊಂಡರೆ ಅನಿವಾರ್ಯವಾಗಿ ನೀರಿನ ಮೇಲೆ ಲ್ಯಾಂಡ್ ಮಾಡಬೇಕಾಗುತ್ತದೆ. ಇದು ಪೈಲಟ್ ಮುಂದಿರುವ ಕೊನೆಯ ಆಯ್ಕೆ. ಎಷ್ಟೋ ವಿಮಾನ ನಿಲ್ದಾಣಗಳು ಸಮುದ್ರದ ಅಂಚಿಗೆ ಇವೆ. ಉದಾಹರಣೆಗೆ, ಹಾಂಗ್‌ಕಾಂಗ್ ಮತ್ತು ಮಾಲ್ಡೀವ್ಸ್ ವಿಮಾನ ನಿಲ್ದಾಣಗಳು. ಕೆಲವು ವೇಳೆ ಹವಾಮಾನ ವೈಪರೀತ್ಯಗಳಿಂದ ಭೂಮಿ ಮೇಲೆ ಇಳಿಯಬೇಕಾದ ವಿಮಾನ ಸ್ವಲ್ಪ ಹಿಂದೆಯೇ ಇಳಿದರೆ ಆಗ ನೀರಿನ ಮೇಲೆ ಲ್ಯಾಂಡ್ ಆಗಬಹುದು. ವಾಟರ್ ಲ್ಯಾಂಡಿಂಗ್ ಅನ್ನು ಮಾಡಲು ಕಾರಣಗಳಿವೆ. ವಿಮಾನವು ಸಂಪೂರ್ಣವಾಗಿ ನಾಶವಾಗದಂತೆ ತಡೆಯಲು ಮತ್ತು ಪ್ರಯಾಣಿಕರ ಜೀವಗಳನ್ನು ಉಳಿಸಲು ಪೈಲಟ್‌ಗಳು ವಾಟರ್ ಲ್ಯಾಂಡಿಂಗ್ ಮಾಡಲು ನಿರ್ಧರಿಸುತ್ತಾರೆ. ಪೈಲಟ್‌ಗಳ ತರಬೇತಿ ಕಾಲದಲ್ಲಿ ನೀರಿನ ಮೇಲೆ ವಿಮಾನವನ್ನು ಇಳಿಸುವ ಉಪಕ್ರಮವೂ ಸೇರಿರುತ್ತದೆ. ಇದಕ್ಕೆ 'ಸೈಲೆಂಟ್ ಲ್ಯಾಂಡಿಂಗ್' ಎಂದೂ ಕರೆಯುತ್ತಾರೆ, ಏಕೆಂದರೆ ವಿಮಾನವು ನೀರಿನ ಮೇಲೆ ಇಳಿಯುವುದು ಒಂದು ಮೃದು ಅಥವಾ ಸಾವಧಾನದ ಪ್ರಕ್ರಿಯೆಯಾಗಿದ್ದು, ಭೂಮಿ ಮೇಲೆ ಇಳಿಸುವಾಗ ಆಗುವ ಗಡುಸಾದ ಅನುಭವ ಆಗುವುದಿಲ್ಲ. ವಿಮಾನ ನೀರಿನ ಮೇಲೆ ಇಳಿದರೂ ಅದು ಎಲ್ಲಿ ಇಳಿದಿದೆ ಎಂಬುದು ಮುಖ್ಯ. ಆಳವಾದ ಸಮುದ್ರದಲ್ಲಿ ವಿಮಾನ ಇಳಿದರೆ ಗಂಡಾಂತರವೇ. ಹೀಗಾಗಿ ಸಮುದ್ರದ ಅಲೆಗಳ ಅಬ್ಬರ, ಗಾಳಿಯ ವೇಗ ಮತ್ತು ನೀರಿನ ಆಳ ಇವು ವಾಟರ್ ಲ್ಯಾಂಡಿಂಗ್ ಪ್ರಕ್ರಿಯೆ ಮೇಲೆ ಪ್ರಭಾವ ಬೀರುತ್ತವೆ. ಸರಿಯಾದ ಎತ್ತರ, ವೇಗ ಮತ್ತು ಸಮತೋಲನವನ್ನು ನಿರ್ವಹಿಸುವುದು ಬಹಳ ಮುಖ್ಯ. ಇಲ್ಲದಿದ್ದರೆ ವಿಮಾನವು ತ್ವರಿತವಾಗಿ ಮುಳುಗಬಹುದು ಅಥವಾ ಮುರಿಯಬಹುದು. ಪೈಲಟ್ ಮತ್ತು ವಿಮಾನ ಸಿಬ್ಬಂದಿ ನೀರಿನ ಮೇಲೆ ಇಳಿಸಿದ ಬಳಿಕ ತುರ್ತು ಕ್ರಮಗಳನ್ನು ಶ್ರದ್ಧೆಯಿಂದ ನಿರ್ವಹಿಸಬೇಕಾಗುತ್ತದೆ, ಏಕೆಂದರೆ ವಿಮಾನ ಇಳಿದ ನಂತರ ಮುಳುಗುವ ಸಾಧ್ಯತೆ ಇರುತ್ತದೆ. ವಿಮಾನ ಹಾರಾಟದ ಇತಿಹಾಸ 'ದಲ್ಲೇ ಅತ್ಯಂತ ಪ್ರಸಿದ್ಧ ವಾಟರ್ ಲ್ಯಾಂಡಿಂಗ್ ಅಂದರೆ, 2009ರಲ್ಲಿ ಅಮೆರಿಕದಲ್ಲಿ ಸಂಭವಿಸಿದ 'ಹಡ್ಸನ್ ನದಿ ಅದ್ಭುತ' ಎಂಬ ಹೆಸರಿನಿಂದ ಪ್ರಸಿದ್ಧವಾದ ಘಟನೆ. ಯುಎಸ್ ಏರ್‌ವೇಸ್ ಫ್ಲೈಟ್ 1549ರ ಎರಡೂ ಎಂಜಿನ್‌ಗಳು ವಿಫಲವಾದ ಬಳಿಕ, ಕ್ಯಾಪ್ಟನ್ ಸಲಿ ಸುಲ್ಲೆನ್‌ಬರ್ಗರ್ ಅತ್ಯಂತ ನಿಶ್ಚಿತ ಹಾಗೂ ಸಮರ್ಥವಾಗಿ ನ್ಯೂಯಾರ್ಕಿನ ಹಡ್ಸನ್ ನದಿಯಲ್ಲಿ ವಿಮಾನವನ್ನು ಇಳಿಸಿದ್ದು ಇಂದಿಗೂ ಮೈನವಿರೇಳಿಸುವ ಪ್ರಸಂಗ. ಇದರಿಂದ ವಿಮಾನದಲ್ಲಿದ್ದ ಎಲ್ಲ ಪ್ರಯಾಣಿಕರು ಸುರಕ್ಷಿತವಾಗಿ ಪಾರಾದರು. ವಾಟರ್ ಲ್ಯಾಂಡಿಂಗ್ ಅನ್ನು ಅತ್ಯಂತ ಅಪರೂಪದ ತುರ್ತು ಪರಿಸ್ಥಿತಿ ಎಂದು ಪರಿಗಣಿಸಲಾಗುತ್ತದೆ, ಏಕೆಂದರೆ ಸಾಮಾನ್ಯವಾಗಿ ವಿಮಾನಗಳನ್ನು ಭೂಮಿಯ ಮೇಲೆ ಅಥವಾ ವಿಮಾನ ನಿಲ್ದಾಣಗಳಲ್ಲಿ ಇಳಿಯಲೆಂದೇ ವಿನ್ಯಾಸಗೊಳಿಸಿರುತ್ತಾರೆ. ಜಲಕ್ರೀಡೆಗಳಲ್ಲಿ ವಿಮಾನವನ್ನು ನೀರಿನ ಮೇಲಿಂದ ಟೇಕಾಫ್ ಮತ್ತು ಲ್ಯಾಂಡ್ ಮಾಡುತ್ತಾರೆ. ಆದರೆ ಪ್ರಯಾಣಿಕರ ವಿಮಾನವನ್ನು ನೀರಿನ ಮೇಲೆ ಇಳಿಸುವುದು ಸಾಮಾನ್ಯ ಸಂಗತಿಯಲ್ಲ. ಲ್ಯಾಂಡ್ ಮಾಡಿದ ಬಳಿಕ ವಿಮಾನವನ್ನು ಮರುಬಳಸುವ ಸಾಧ್ಯತೆ ತೀರಾ ಕಮ್ಮಿ.

ಡಿಕೆಶಿ ಅಂದ್ರೆ ಅಮಿತ್ ಶಾ ಅವರಿಗಿಷ್ಟ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಕಳೆದ ವಾರ ಕೊಯಮತ್ತೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಇಬ್ಬರ ಮಧ್ಯೆ ಮಾತುಕತೆ ನಡೆಯಲಿಲ್ಲವಾದರೂ ಅದು ಕರ್ನಾಟಕದ ರಾಜಕಾರಣದಲ್ಲಿ ಸಂಚಲನ ಮೂಡಿಸಿರುವುದು ಮಾತ್ರ ನಿಜ. ಅದರ ಪ್ರಕಾರ, ನಿಗದಿತ ಸಮಯಕ್ಕೆ ಸರಿಯಾಗಿ ತಮಗೆ ಸಿಎಂ ಹುದ್ದೆ ಸಿಗದಿದ್ದರೆ ಪಕ್ಷ ತೊರೆದು ಬಿಜೆಪಿ ಪಾಳಯ ಸೇರುವುದಾಗಿ ಕಾಂಗ್ರೆಸ್ ವರಿಷ್ಠರಿಗೆ ಡಿಕೆಶಿ ಮೆಸೇಜು ಕೊಟ್ಟಿದ್ದಾರೆ.

ಕರ್ನಾಟಕದಲ್ಲಿ ಪಕ್ಷ ಅಧಿಕಾರಕ್ಕೆ ಬರಲು ಕಾರಣರಾದ ತಮಗೆ ಸಿಎಂ ಹುದ್ದೆ ಸಿಗದಿದ್ದರೆ, ಆ ಜಾಗದಲ್ಲಿ ಸಿದ್ದರಾಮಯ್ಯ ಕೂಡಾ ಮುಂದುವರಿಯುವುದು ಬೇಡ ಅನ್ನುವುದು ಡಿಕೆಶಿ ಹಠ ಎಂಬುದು ಇಂಥ ಸಂಚಲನದ ಸಾರ. ಹಾಗಂತ ಇದರ ಎಳೆ ಹಿಡಿದು ಹೊರಟರೆ ಅಮಿತ್ ಶಾ-ಡಿಕೆಶಿ ವೇದಿಕೆ ಹಂಚಿಕೊಂಡ ಬೆಳವಣಿಗೆಯ ಹಿಂದೆ ಬೇರೆ ಬೇರೆ ಅಂಶಗಳು ಕೆಲಸ ಮಾಡಿರುವುದು ಗೋಚರವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಕೊಯಮತ್ತೂರಿನ ಕಾರ್ಯಕ್ರಮದಲ್ಲಿ ಭಾಗಿಯಾಗಿ ಕಾಂಗ್ರೆಸ್ ವರಿಷ್ಠರಿಗೆ ಮೆಸೇಜು ಕೊಡುವ ಅಗತ್ಯವೇ ಡಿ.ಕೆ.ಶಿವಕುಮಾರ್ ಅವರಿಗಿರಲಿಲ್ಲ, ಬದಲಿಗೆ ಅವರು ತಮ್ಮ ಕುಟುಂಬದ ಸದಸ್ಯರೊಬ್ಬರ ಮಾತಿಗೆ ಮನ್ನಣೆ ನೀಡಿ ಈ ಕಾರ್ಯಕ್ರಮದಲ್ಲಿ ಭಾಗಿಯಾದರೇ ಹೊರತು ಬೇರೆ ಉದ್ದೇಶವೇ ಅವರಿಗಿರಲಿಲ್ಲ.

ಅಂದ ಹಾಗೆ, ಕರ್ನಾಟಕದಲ್ಲಿ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಸಿದ್ದು-ಡಿಕೆಶಿ ಬಣದ ಮಧ್ಯೆ ನಡೆಯುತ್ತಿರುವ ಸಂಘರ್ಷಕ್ಕೆ ತಾರ್ಕಿಕ ಅಂತ್ಯ ಸಿಗಬೇಕಿರುವುದು ನವೆಂಬರ್ ಹೊತ್ತಿಗೇ ಹೊರತು ಈಗಲ್ಲ. ಹೀಗಿರುವಾಗ ಕೊಯಮತ್ತೂರಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾಂಗ್ರೆಸ್ ವರಿಷ್ಠರಿಗೆ ಬೆದರಿಕೆಯ ಸಂದೇಶ ಕಳುಹಿಸುವಷ್ಟು ತರಾತುರಿಯಲ್ಲಿ ಡಿಕೆಶಿ ಇಲ್ಲ. ಇವತ್ತು ಡಿ.ಕೆ.ಶಿವಕುಮಾರ್ ಅವರಿಗೂ ಗೊತ್ತಿರುವ ಸರಳ ಸತ್ಯವೆಂದರೆ, ಅವರ ಜತೆ ಕಾಂಗ್ರೆಸ್‌ನ ಮೂರನೇ ಎರಡು ಭಾಗದಷ್ಟು ಶಾಸಕರು ಇಲ್ಲ. ಇಪ್ಪತ್ತೋ, ಮೂವತ್ತೋ ಶಾಸಕರು ಅವರ ಜತೆಗಿದ್ದರೂ ಅಷ್ಟು ಜನರನ್ನು ಹೊರಗೆ ಕರೆದುಕೊಂಡು ಹೋಗಿ ಸರಕಾರ ಬೀಳಿಸಲು ಸಾಧ್ಯವಿಲ್ಲ. ಹಾಗೊಂದು ವೇಳೆ ಇಷ್ಟು ಸಂಖ್ಯೆಯ ಶಾಸಕರು ಅವರೊಂದಿಗೆ ಹೊರಹೋಗಲು ತಯಾರಿದ್ದರೂ, ಹೊರಗೆ ಹೋದ ಕೂಡಲೇ ಅವರು ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಾಸಕ ಸ್ಥಾನ ಕಳೆದುಕೊಳ್ಳುತ್ತಾರೆ.

ಹೀಗೆ ಡಿಕೆಶಿ ಹಿಂದೆ ಹೋದವರು ಶಾಸಕ ಸ್ಥಾನ ಕಳೆದುಕೊಂಡರೆ ವಿಧಾನಸಭೆಯ ಅವತ್ತಿನ ಬಲಾಬಲವನ್ನು ಗಮನದಲ್ಲಿಟ್ಟುಕೊಂಡರೆ ಸಿದ್ದರಾಮಯ್ಯ ಸರಕಾರಕ್ಕೆ ಬಹುಮತ ಇರುತ್ತದೆ. ಈ ಸರಳ ಸತ್ಯ ಗೊತ್ತಿರುವುದರಿಂದ ಡಿಕೆಶಿ ತಮ್ಮ ಬೆಂಬಲಿಗ ಶಾಸಕರ ಸಂಖ್ಯೆಯನ್ನು ಹಿಗ್ಗಿಸಿಕೊಳ್ಳುತ್ತಾ ನಡೆದಿದ್ದಾರೆ. ಅವರ ಆಪ್ತರ ಪ್ರಕಾರ ಇನ್ನು ಕೆಲ ತಿಂಗಳಲ್ಲಿ ಅವರ ಬೆಂಬಲಿಗ ಶಾಸಕರ ಸಂಖ್ಯೆ ಅರವತ್ತರ ಗಡಿ ತಲುಪಲಿದೆ. ಹೀಗೆ ತಮ್ಮ ಬೆಂಬಲಿಗ ಶಾಸಕರ ಪಡೆಯನ್ನು ಹಿಗ್ಗಿಸಿಕೊಂಡರೆ ನವೆಂಬರ್ ಹೊತ್ತಿಗೆ ಎದುರಾಗಲಿರುವ ಸವಾಲನ್ನು ಅವರು ಸಮರ್ಥವಾಗಿ ಎದುರಿಸಬಲ್ಲರು. ಅರ್ಥಾತ್, ಸಿದ್ದರಾಮಯ್ಯರು ಕೆಳಗಿಳಿಯುವುದೇ ಆದರೆ ಅವರ ಜಾಗಕ್ಕೆ ನಾವು ಬರಬೇಕು ಅಂತ ಪಟ್ಟು ಹಿಡಿದವರ ಎದುರು ಸ್ಪರ್ಧಿಸಿ ಗೆಲ್ಲಲು ಅವರಿಗೆ ಸಾಧ್ಯವಾಗುತ್ತದೆ. ಎಷ್ಟೇ ಆದರೂ ಡಿಕೆಶಿ ಅವರಿಗೆ ಸಿಎಂ ಪಟ್ಟ ಕೊಡಿಸುವ ಆಸೆ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಅವರಿಗಿದೆ. ಹೀಗಿರುವಾಗ ಅವಸರಕ್ಕೆ ಬಿದ್ದು ಆಟ ಕೆಡಿಸಿಕೊಳ್ಳಲು ಡಿಕೆಶಿ ತಯಾರಿಲ್ಲ ಎಂಬುದು ಅವರ ಆಪ್ತರ ಮಾತು. ಅರ್ಥಾತ್ ಕರ್ನಾಟಕದಲ್ಲಿ ನಡೆಯುತ್ತಿರುವ ಅಧಿಕಾರ ಹಂಚಿಕೆಯ ಸಂಘರ್ಷಕ್ಕೂ ಕೊಯಮತ್ತೂರಿನ ಕಾರ್ಯಕ್ರಮದಲ್ಲಿ ಅಮಿತ್ ಶಾ-ಡಿಕೆಶಿ ಭಾಗಿಯಾಗಿದ್ದಕ್ಕೂ ಸಂಬಂಧ ಕಲ್ಪಿಸುವ ಅಗತ್ಯವೇ ಇಲ್ಲ.

ಅಮಿತ್ ಶಾ-ಡಿಕೆಶಿ ಆಪ್ತರಾಗಿದ್ದು ಹೇಗೆ?

ಇನ್ನು ಅಮಿತ್ ಶಾ ಅವರ ಜತೆ ವೇದಿಕೆ ಹಂಚಿಕೊಂಡರು ಅಂದ ಮಾತ್ರಕ್ಕೆ ಕಾಂಗ್ರೆಸ್ ವರಿಷ್ಠರು ಡಿಕೆಶಿ ವಿರುದ್ಧ ಕೆಂಡಾಮಂಡಲಗೊಳ್ಳುತ್ತಾರೆ ಎಂಬುದು ಸುಳ್ಳು. ಯಾಕೆಂದರೆ ಅಮಿತ್ ಶಾ ಮತ್ತು ಡಿಕೆಶಿ ಅತ್ಯಾಪ್ತರು ಎಂಬ ಮೆಸೇಜು ಸೋನಿಯಾ, ರಾಹುಲ್ ಅವರಿಗೆ ಯಾವತ್ತೋ ರವಾನೆಯಾಗಿದೆ ಮತ್ತು ಇಬ್ಬರ ನಡುವೆ ಇಂಥ ಆಪ್ತತೆ ಬೆಳೆಯಲು ವೈಯಕ್ತಿಕ ಕಾರಣಗಳಿವೆ ಎಂಬುದೂ ಗೊತ್ತಿದೆ.

ಹೀಗೆ ಅಮಿತ್ ಶಾ ಹಾಗೂ ಡಿಕೆಶಿ ನಡುವೆ ಆಪ್ತತೆ ಬೆಳೆಯಲು ಒಂದು ಘಟನೆ ಕಾರಣ. ಮೂಲಗಳ ಪ್ರಕಾರ, ಕೆಲ ಕಾಲದ ಹಿಂದೆ ಅಮಿತ್ ಶಾ ಗಂಭೀರ ಆರೋಗ್ಯ ಸಮಸ್ಯೆಗೆ ಒಳಗಾಗಿದ್ದರು. ಆ ಸಂದರ್ಭದಲ್ಲಿ ಅವರ ಪರಿಸ್ಥಿತಿ ಹೇಗಿತ್ತೆಂದರೆ ಕೆಲ ಕಾಲ ಅವರು ಹೊರಗೆ ಕಾಣಿಸಿಕೊಳ್ಳುವ ಸ್ಥಿತಿಯಲ್ಲೇ ಇರಲಿಲ್ಲ. ಇಂಥ ಕಾಲದಲ್ಲೇ ಒಮ್ಮೆ ಅವರನ್ನು ನೋಡಲು ಕರ್ನಾಟಕ ಬಿಜೆಪಿಯ ಹಿರಿಯ ನಾಯಕ ವಿ.ಸೋಮಣ್ಣ ಹೋದರು. ಹೀಗೆ ಹೋದವರು ಅಮಿತ್ ಶಾ ಅವರ ಕುಶಲ ವಿಚಾರಿಸಿದ್ದಲ್ಲದೇ, ''ಸರ್, ನೀವೊಂದು ಸಲ ನೊಣವಿನಕೆರೆ ಅಜ್ಜಯ್ಯನವರ ಗದ್ದುಗೆಯ ದರ್ಶನ ಮಾಡಿ. ಎಲ್ಲ ಒಳ್ಳೆಯದಾಗುತ್ತದೆ'' ಅಂತ ಸಲಹೆ ನೀಡಿದರು. ಆಗೆಲ್ಲ ಬಳಲಿದ್ದ ಅಮಿತ್ ಶಾ ಅವರು, ''ದರ್ಶನ ಮಾಡಲು ನಾನು ರೆಡಿ. ಆದರೆ ಇಂಥ ಸ್ಥಿತಿಯಲ್ಲಿ ಕರ್ನಾಟಕಕ್ಕೆ ಹೋಗುವುದು ಹೇಗೆ?'' ಎಂದು ಕೇಳಿದರಂತೆ. ಇದಾದ ನಂತರ ಸೋಮಣ್ಣ ಅವರು ನೊಣವಿನಕೆರೆ ಅಜ್ಜಯ್ಯನವರ ಗದ್ದುಗೆಯನ್ನೇ ದೆಹಲಿಗೆ ತರಿಸುವ ವ್ಯವಸ್ಥೆ ಮಾಡಿದ್ದಾರೆ. ಅದರ ಪ್ರಕಾರ ಅಜ್ಜಯ್ಯನವರ ಗದ್ದುಗೆ ದೆಹಲಿಗೆ ಬಂತಲ್ಲ, ಅದನ್ನು ಇಡುವುದೆಲ್ಲಿ? ಎಂಬ ಪ್ರಶ್ನೆ ಬಂದಾಗ ದೆಹಲಿಯಲ್ಲಿರುವ ಡಿ.ಕೆ.ಶಿವಕುಮಾರ್ ಅವರ ಫ್ಲ್ಯಾಟಿನಲ್ಲಿ ಇರಿಸುವ ವ್ಯವಸ್ಥೆ ಮಾಡಲಾಗಿದೆ. ಹೀಗೆ ಡಿಕೆಶಿ ಅವರ ಫ್ಲ್ಯಾಟಿನಲ್ಲಿದ್ದ ಅಜ್ಜಯ್ಯನವರ ಗದ್ದುಗೆಯನ್ನು ದರ್ಶಿಸಲು ಅಂಥ ನಿತ್ರಾಣ ಸ್ಥಿತಿಯಲ್ಲಿಯೇ ಅಮಿತ್ ಶಾ ಹೋದರಂತೆ. ಕುತೂಹಲದ ಸಂಗತಿಯೆಂದರೆ ಅವತ್ತು ಡಿಕೆಶಿ ಫ್ಲ್ಯಾಟಿನಲ್ಲಿ ಇಡಲಾಗಿದ್ದ ಅಜ್ಜಯ್ಯನವರ ಗದ್ದುಗೆಯನ್ನು ನೋಡಿ ನಮಸ್ಕರಿಸಿ ಬಂದ ಮರುದಿನದಿಂದಲೇ ಅಮಿತ್ ಶಾ ಅವರ ಆರೋಗ್ಯದಲ್ಲಿ ಗಣನೀಯ ಸುಧಾರಣೆ ಶುರುವಾಗಿ, ವಾರವೊಪ್ಪತ್ತಿನಲ್ಲಿ ಅವರು ಸಂಪೂರ್ಣ ಗುಣಮುಖರಾಗಿದ್ದಾರೆ. ಯಾವಾಗ ಈ ಬೆಳವಣಿಗೆ ನಡೆಯಿತೋ, ಅಮಿತ್ ಶಾ ಅವರು ಡಿಕೆಶಿ ವಿಷಯದಲ್ಲಿ ಖುಷಿಯಾಗಿದ್ದಾರೆ. ಅಷ್ಟೇ ಅಲ್ಲ, ಅವರ ಜತೆ ಒಂದು ಆಪ್ತತೆಯೂ ಬೆಳೆದಿದೆ.

ಇದೇ ಮೂಲಗಳ ಪ್ರಕಾರ, ಅಮಿತ್ ಶಾ ಜತೆ ಡಿಕೆಶಿ ಆಪ್ತರಾಗುವ ಕಾಲದಲ್ಲಿ ಡಿಕೆಶಿ ವಿರೋಧಿಗಳ ಪಡೆ ಒಂದು ಕನಸು ಕಾಣುತ್ತಿತ್ತು. ಅದೆಂದರೆ ಹಲವು ಆರೋಪಗಳನ್ನು ಹೊತ್ತಿರುವ ಡಿಕೆಶಿ ಅವರನ್ನು ಕೇಂದ್ರದ ಬಿಜೆಪಿ ಸರಕಾರ ಬಲಿ ಹಾಕುತ್ತದೆ, ಜೈಲಿಗೆ ತಳ್ಳುತ್ತದೆ ಎಂಬುದು. ಆದರೆ ಎಷ್ಟು ದಿನ ಕಳೆದರೂ ಡಿಕೆಶಿ ಜೈಲು ಪಾಲಾಗಲಿಲ್ಲ. ಅವರಿಗಿದ್ದ ಪವರ್‌ರೂ ಕಡಿಮೆಯಾಗಲಿಲ್ಲ. ಇದೇಕೆ ಹೀಗೆ ಅಂತ ಡಿಕೆಶಿ ವಿರೋಧಿಗಳು ವಿಸ್ಮಯಪಡುತ್ತಿದ್ದ ಸಂದರ್ಭದಲ್ಲೇ ಈ ಕತೆ ಹೊರಬಿದ್ದಿದೆ ಮತ್ತು ರಾಜಕೀಯ ಮಹಲುಗಳ ಉತ್ತುಂಗದಲ್ಲಿ ಬಿಸಿಬಿಸಿ ಚರ್ಚೆಗೆ ಕಾರಣವಾಗಿ ಎಲ್ಲರೂ ಹುಬ್ಬೇರಿಸುವಂತೆ ಮಾಡಿದೆ.

ಅರ್ಥಾತ್, ಅಮಿತ್ ಶಾ ಮತ್ತು ಡಿಕೆಶಿ ಅತ್ಯಾಪ್ತರಾಗಲು ಏನು ಕಾರಣ ಎಂಬ ಕತೆ ಸೋನಿಯಾ, ರಾಹುಲ್ ಕಿವಿಗೆ ತಲುಪಿ ಹಲವು ಕಾಲವೇ ಆಗಿದೆ. ಹೀಗಿರುವಾಗ ಕೊಯಮತ್ತೂರು ಕಾರ್ಯಕ್ರಮದಿಂದ ವರಿಷ್ಠರ ಜತೆಗಿನ ಡಿಕೆಶಿ ಬಾಂಧವ್ಯ ಹದಗೆಡುತ್ತದೆ ಎಂಬುದು ಕೇವಲ ಭ್ರಮೆ.

ರಾಷ್ಟ್ರಪತಿ ಆಳ್ವಿಕೆ ಮೇಲೆ ಕಣ್ಣು

ಹಾಗಂತ, ಡಿಕೆಶಿ ಕಾಂಗ್ರೆಸ್‌ನಲ್ಲೇ ಸುಖವಾಗಿರಲಿ ಅಂತ ಮೋದಿ-ಅಮಿತ್ ಶಾ ಜೋಡಿ ಬಯಸುತ್ತಿಲ್ಲ. ಅದೇ ರೀತಿ, ಪರ್ಯಾಯ ಸರಕಾರ ರಚಿಸೋಣ, ನೀವೇ ಸಿಎಂ ಆಗಿ ಅಂತ ಹೇಳುವ ಸ್ಥಿತಿಯಲ್ಲೂ ಅವರಿಲ್ಲ. ಕಾರಣ? ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರಕಾರ ಉರುಳಿದರೆ ಪರ್ಯಾಯ ಸರಕಾರ ರಚಿಸುವ ಉತ್ಸುಕತೆ ಅವರಲ್ಲಿಲ್ಲ, ಯಾಕೆಂದರೆ ಇವತ್ತಿನ ಸ್ಥಿತಿಯಲ್ಲಿ ಬಿಜೆಪಿ, ಜೆಡಿಎಸ್ ಶಾಸಕರು ಡಿಕೆಶಿ ನೇತೃತ್ವದಲ್ಲಿ ಸರಕಾರ ರಚಿಸಲು ಒಪ್ಪುವುದಿಲ್ಲ. ಹಾಗೊಂದು ವೇಳೆ ಅಂಥ ಸನ್ನಿವೇಶ ಸೃಷ್ಟಿಸಲು ಮುಂದಾದರೆ ಜೆಡಿಎಸ್ ನಾಯಕ ಕುಮಾರಸ್ವಾಮಿ ಇದ್ದಕ್ಕಿದ್ದಂತೆ ಯೂ-ಟರ್ನ್ ಹೊಡೆದು ಸಿದ್ದರಾಮಯ್ಯ ಸರಕಾರದ ರಕ್ಷಣೆಗೆ ನಿಲ್ಲಬಹುದು. ಹೀಗಾಗಿ ಡಿಕೆಶಿ ನೇತೃತ್ವದಲ್ಲಿ ಪರ್ಯಾಯ ಸರಕಾರ ರಚಿಸುವ ಬದಲು ಅವರ ಮುಂದಾಳತ್ವದಲ್ಲಿ ಕರ್ನಾಟಕ ಸರಕಾರ ಉರುಳಲಿ ಎಂಬ ಇಚ್ಛೆ ಮೋದಿ-ಅಮಿತ್ ಶಾ ಅವರಿಗಿದೆ. ಹಾಗೇನಾದರೂ ಆದರೆ ಕರ್ನಾಟಕದ ಮೇಲೆ ರಾಷ್ಟ್ರಪತಿ ಆಳ್ವಿಕೆ ಹೇರುವುದು, ರಾಜಕೀಯ ಧ್ರುವೀಕರಣಕ್ಕೆ ದಾರಿ ಮಾಡಿಕೊಟ್ಟು ಬಿಜೆಪಿ ಬಲ ಹಿಗ್ಗುವಂತೆ ಮಾಡುವುದು, ಆ ಮೂಲಕ ಮಧ್ಯಂತರ ವಿಧಾನಸಭಾ ಚುನಾವಣೆಗೆ ಅಣಿಯಾಗುವುದು ಈ ಜೋಡಿಯ ಲೆಕ್ಕಾಚಾರ.

ಬಿಜೆಪಿಯಲ್ಲಿ ಬೆಂಗಳೂರು ವಾರ್

ಇನ್ನು ರಾಜ್ಯ ಬಿಜೆಪಿಯಲ್ಲಿ ಮೊದಲನೇ ಬೆಂಗಳೂರು ಯುದ್ಧ ಶುರುವಾಗಿದೆ. ಈ ಯುದ್ಧದಲ್ಲಿ ಎದುರಾಳಿಗಳಾಗಿರುವವರು ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಪ್ರತಿಪಕ್ಷ ನಾಯಕ ಆರ್.ಅಶೋಕ್. ಅಂದ ಹಾಗೆ, ಕರ್ನಾಟಕದಲ್ಲಿ ಬಿಜೆಪಿ ಅಧಿಕಾರ ಹಿಡಿದ ಕಾಲದಿಂದ ರಾಜಧಾನಿ ಬೆಂಗಳೂರಿನ ಮೇಲೆ ನಿಯಂತ್ರಣ ಇಟ್ಟುಕೊಂಡವರು ಅಶೋಕ್ ಮತ್ತು ಇದರ ಪರಿಣಾಮವಾಗಿಯೇ ಪಕ್ಷದಲ್ಲಿ ಅವರಿಗೆ ಯಮಬಲವೂ ಇತ್ತು. ಆದರೆ ಈಗ ಅಶೋಕ್ ಅವರ ಬಲವನ್ನು ಕುಗ್ಗಿಸಲು, ರಾಜಧಾನಿಯ ಮೇಲೆ ಅವರಿಗಿರುವ ನಿಯಂತ್ರಣವನ್ನು ತಪ್ಪಿಸುವುದು ವಿಜಯೇಂದ್ರ ಅವರ ಲೆಕ್ಕಾಚಾರ.

ಎಲ್ಲಿಯವರೆಗೆ ರಾಜಧಾನಿಯ ಮೇಲೆ ತಮಗೆ ಹಿಡಿತ ಇರುವುದಿಲ್ಲವೋ, ಅಲ್ಲಿಯವರೆಗೆ ತಮ್ಮ ನಾಯಕತ್ವ ಪರಿಪೂರ್ಣವಲ್ಲ ಎಂಬ ಲೆಕ್ಕಾಚಾರಕ್ಕೆ ಬಂದಿರುವ ವಿಜಯೇಂದ್ರ ಅವರು, ಇದಕ್ಕಾಗಿ ತಮ್ಮ ತಂದೆ ಯಡಿಯೂರಪ್ಪ ಮಾಡದ ಸಾಹಸವನ್ನು ಮಾಡಲು ನಿರ್ಧರಿಸಿದ್ದಾರೆ. ಹೀಗಾಗಿ ಅಶೋಕ್ ಅವರಿಗೆ ಸೆಡ್ಡು ಹೊಡೆಯುವ ಸಲುವಾಗಿ ಬೆಂಗಳೂರಿನ ಬಿಜೆಪಿ ಶಾಸಕರ ಸಭೆ ಕರೆಯುವುದರಿಂದ ಹಿಡಿದು ಮುಖ್ಯಮಂತ್ರಿಗಳನ್ನು ನಿಯೋಗದೊಂದಿಗೆ ಭೇಟಿ ಮಾಡುವ ಮತ್ತಿತರ ಕೆಲಸಗಳಿಗೆ ಕೈ ಹಾಕುತ್ತಿದ್ದಾರೆ. ಕುತೂಹಲದ ಸಂಗತಿ ಎಂದರೆ ಯಲಹಂಕ ಕ್ಷೇತ್ರದ ಶಾಸಕ ಎಸ್.ಆರ್.ವಿಶ್ವನಾಥ್, ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ, ಜಯನಗರದ ಶಾಸಕ ರಾಮಮೂರ್ತಿ ಸೇರಿದಂತೆ ಹಲವು ಶಾಸಕರು ವಿಜಯೇಂದ್ರ ಕ್ಯಾಂಪಿನಲ್ಲಿ ಕಾಣಿಸಿಕೊಂಡು ಅವರ ಕೈ ಬಲಪಡಿಸುತ್ತಿದ್ದಾರೆ. ಪರಿಣಾಮ? ವಿಜಯೇಂದ್ರ-ಅಶೋಕ್ ನಡುವೆ ಆರಂಭವಾಗಿರುವ ಮೊದಲ ಬೆಂಗಳೂರು ಯುದ್ಧ ದಿನಗಳೆದಂತೆ ರಂಗೇರತೊಡಗಿದೆ.

ಅಧ್ಯಕ್ಷರ ಆಯ್ಕೆ ಸದ್ಯಕ್ಕಿಲ್ಲ

ಈ ಮಧ್ಯೆ ರಾಜ್ಯ ಬಿಜೆಪಿಗೆ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಒಂದು ತಿಂಗಳ ಮಟ್ಟಿಗೆ ಮುಂದೂಡಿಕೆಯಾಗಿದೆ. ಹಾಲಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಕೆಳಗಿಳಿಸಬೇಕು ಅಂತ ಯತ್ನಾಳ್ ಪಡೆ, ವಿಜಯೇಂದ್ರ ಅವರನ್ನೇ ಮುಂದುವರಿಸಬೇಕು ಅಂತ ಮತ್ತೊಂದು ಪಡೆ ಮಾಡುತ್ತಿರುವ ಅಬ್ಬರವನ್ನು ಕೇಳಿ ಕೇಳಿ ಕೇಂದ್ರ ಸಚಿವ ಅಮಿತ್ ಶಾ ಬೇಸತ್ತು ಹೋಗಿದ್ದಾರೆ. ಹೀಗಾಗಿ ಉಭಯ ಬಣಗಳ ವಾದಕ್ಕೆ ಬ್ರೇಕ್ ಹಾಕಿರುವ ಅವರು, ''ಕರ್ನಾಟಕದ ಪ್ರತಿಯೊಂದು ಕ್ಷೇತ್ರಗಳಲ್ಲಿ ನಾವೇ ಸರ್ವೆ ಮಾಡಿಸುತ್ತೇವೆ'' ಎಂದಿದ್ದಾರೆ. ಅಷ್ಟೇ ಅಲ್ಲ, ''ಯಾರಿಗೆ ಹೆಚ್ಚು ಸಪೋರ್ಟ್ ಇದೆಯೋ, ಅದರ ಆಧಾರದ ಮೇಲೆ ಯಾರು ಅಧ್ಯಕ್ಷರಾಗಬೇಕು ಅಂತ ನಿರ್ಧರಿಸುತ್ತೇವೆ'' ಅಂತ ಸ್ಪಷ್ಟವಾಗಿ ಹೇಳಿದ್ದಾರೆ.

ಯಾವಾಗ ಅವರು ಈ ಮಾತು ಹೇಳಿದರೋ, ಮಾತೆತ್ತಿದರೆ ದಿಲ್ಲಿಯ ಕಡೆ ಮುಖಮಾಡುತ್ತಿದ್ದ ರಾಜ್ಯ ಬಿಜೆಪಿಯ ಉಭಯ ಬಣಗಳ ನಾಯಕರು ಮೌನವಾಗಿದ್ದಾರೆ. ಆದರೆ ಅಮಿತ್ ಶಾ ಅವರ ಈ ನಿರ್ಧಾರ ಕೂಡಾ ಹಾಲಿ ಅಧ್ಯಕ್ಷ ವಿಜಯೇಂದ್ರ ಅವರಿಗೆ ಪ್ಲಸ್ ಆಗಿ ಯತ್ನಾಳ್ ಬಣಕ್ಕೆ ಹಿನ್ನಡೆ ಆಗಲಿದೆ ಎಂಬುದು ಬಿಜೆಪಿ ಮೂಲಗಳ ಅಭಿಪ್ರಾಯ. ಯಾಕೆಂದರೆ ರಾಜ್ಯದ ಬಹುತೇಕ ಕ್ಷೇತ್ರಗಳಲ್ಲಿ ಯಡಿಯೂರಪ್ಪ ಅವರ, ಆ ಮೂಲಕ ವಿಜಯೇಂದ್ರ ಅವರ ಬೆಂಬಲಿಗರ ಸಂಖ್ಯೆ ಹೆಚ್ಚು.

ಮೂಲಭೂತ ವಾದವನ್ನು ಖಂಡಿಸಬೇಕಲ್ಲವೇ?

ಯಕ್ಷಪ್ರಶ್ನೆ

ಜನಮೇಜಯ ಉಮರ್ಜಿ

vveditoped@gmail.com

ಮಹಾಪುರುಷರಿಗೆ ಅಪಚಾರ ಆಗುವುದಾದರೆ, ಅದು ಅವರ ಮಿಥ್ಯಾನುಯಾಯಿಗಳಿಂದ ಮಾತ್ರ ಎಂಬ ಮಾತಿದೆ. ಇಂಥ ಅನೇಕ ಸ್ವಘೋಷಿತ ಅನುಯಾಯಿಗಳನ್ನು ನೋಡಿದಾಗ, ಈ ಮಾತು ಸತ್ಯವೆನಿಸುತ್ತದೆ. ಇದು ಒಬ್ಬ ಮಹಾಪುರುಷರ ಮಾತಲ್ಲ, ಎಲ್ಲ ಮಹಾಪುರುಷರ ಪರಿಸ್ಥಿತಿಯೂ ಇದೇ ಆಗಿದೆ.

ಸತ್ಪುರುಷರದು ಸದಾ ಅನ್ವೇಷಣೆಯ ಪಥ, ನಿಷ್ಕರ್ಷೆಯ ಚಾಕ್ಷುಷನೋಟ. ಆದರೆ ಅವರ ಬೋಧನೆಗಳ ಭಾವವು ಮಿಥ್ಯಾವಾದಿಗಳ, 'ಇಸಂ'ಕೋರರ ಅಪವ್ಯಾಖ್ಯಾನಗಳಿಂದ ಮಸುಕಾಗುತ್ತಿದೆ. ತಮ್ಮದು ಮಾತ್ರ ಸತ್ಯ, ತಾವು ಮಾತ್ರ ಅವರ ಬಗ್ಗೆ ಮಾತನಾಡಲು ಹಕ್ಕುದಾರರು ಎನ್ನುತ್ತಾ ಮಹಾಪುರುಷರನ್ನು ಸೀಮಿತಗೊಳಿಸುವ ಕೆಲಸ ನಡೆಯುತ್ತಿದೆ. ಕೇವಲ ದಬ್ಬಾಳಿಕೆ ಮತ್ತು ವರ್ಗಸಂಘರ್ಷದ ಕಣ್ಣಿನ ಮೂಲಕ ಆಧ್ಯಾತ್ಮಿಕ ಪರಂಪರೆಯನ್ನು ಮರುವ್ಯಾಖ್ಯಾನಿಸಿದಾಗ, ಬಸವಣ್ಣ ಮತ್ತು ಅಕ್ಕಮಹಾದೇವಿಯವರಂಥ ಮಹಾಚೇತನಗಳ ಆಳವಾದ ತಾತ್ವಿಕ ವಿಚಾರಗಳು ಕೇವಲ ಮೇಲ್ಪದರದ ಹೋರಾಟದ ವಸ್ತುಗಳಾಗಿಬಿಡುವ ಅಪಾಯವಿದೆ.

ಮೂಲಭೂತವಾದ ಎಂದರೆ, ಕೆಲವು ವ್ಯಕ್ತಿಗಳು ಅಥವಾ ಗುಂಪು, ಮುಖ್ಯವಾಹಿನಿಯ ರೂಢಿಗಳನ್ನು ತಿರಸ್ಕರಿಸುವ ತೀವ್ರ ರಾಜಕೀಯ, ಧಾರ್ಮಿಕ ಅಥವಾ ಸೈದ್ಧಾಂತಿಕ ನಂಬಿಕೆಗಳನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆ. ಪರಿವರ್ತನೆಯನ್ನು ಒಪ್ಪಿಕೊಳ್ಳದಿರುವುದೇ ಮೂಲಭೂತವಾದ. ಇದು ಭಾರತದ್ದಲ್ಲ. ಸನಾತನವೆಂದರೆ, ನಿತ್ಯನೂತನ, ಸುಧಾರಣೆಗೆ ತೆರೆದುಕೊಂಡಿರುವಂಥದ್ದು. ನಮ್ಮದು ಸಮನ್ವಯದ ದಾರಿ, ಸಾಮರಸ್ಯದ ದಾರಿ. ನಾವು ಹೇಳಿದ ವ್ಯಾಖ್ಯಾನ ಮಾತ್ರವೇ ಸರಿ, ನಮಗೆ ಒಪ್ಪದ ವಚನಗಳು ಪ್ರಕ್ಷಿಪ್ತ ಎನ್ನುವ ಮೂಲಭೂತ ವಾದವನ್ನು ಟೀಕಿಸಿದ ಪರಮಪೂಜ್ಯ ಕನ್ನೇರಿ ಸ್ವಾಮಿಗಳು ಇಂದು, ಆಯಕಟ್ಟಿನ ಸ್ಥಾನಗಳಲ್ಲಿರುವ ಬೆರಳೆಣಿಕೆಯ ಕೆಲವರಿಂದ ವಿರೋಧ ಎದುರಿಸುತ್ತಿದ್ದಾರೆ. ಟೀಕೆಗೆ ಯಾರೂ ಹೊರತಾಗಿಲ್ಲ ಎಂಬುದು ಸತ್ಯವಾದರೂ, ಸದ್ವಿನಯದ ವಾರಸುದಾರರಾಗಿರಬೇಕಾದವರು ತೋರುತ್ತಿರುವ ಅಸಹಿಷ್ಣುತೆ ಮಾತ್ರ ಅವೈಜ್ಞಾನಿಕ, ಅಸಾಂಸ್ಕೃತಿಕವಾಗಿದೆ. ಇದು ದುರದೃಷ್ಟಕರ. ವಿದೇಶಿ ಮತಗಳಿಂದ ಆಮದು ಮಾಡಿಕೊಂಡ ಮೂಲಭೂತ ವಾದವಿಂದು, ಜಗದಗಲ ಮುಗಿಲಗಲ ಮಿಗೆಯಗಲ ವ್ಯಾಪ್ತಿ-ವಿಸ್ತಾರ ಹೊಂದಿದ ಉದಾತ್ತ ವಿಚಾರಗಳನ್ನು ಸಂಕುಚಿತಗೊಳಿಸುವ, ಆಪೋಷಣ ತೆಗೆದುಕೊಳ್ಳುವ ಕೆಲಸ ಮಾಡುತ್ತಿದೆ. ಒಡಕು ಮೂಡಿಸುವ 'ಮಾರ್ಕ್ಸ್‌ವಾದಿ' ಮುಖವಾಡಗಳಿಂದಾಗಿ ಈ ಸಮಸ್ಯೆ ಉಲ್ಬಣಗೊಂಡಿದೆ.

ಆಳವಾದ ಆಧ್ಯಾತ್ಮಿಕ ಒಳನೋಟಕ್ಕೆ, ಪ್ರಾಮಾಣಿಕತೆಗೆ, ನೇರವಂತಿಕೆಗೆ, ನಿಷ್ಠುರತನಕ್ಕೆ ಹೆಸರಾದ ಕನ್ನೇರಿ ಶ್ರೀಗಳು, ಮೂಲಭೂತ ವಾದಿಗಳು ಮತ್ತು ಧರ್ಮವಿಭಜಕ ಮನಸ್ಥಿತಿಗಳು ಹೊತ್ತು ತರುವ ಅಪಾಯಗಳ ಕುರಿತು ಸಮಾಜವನ್ನು ಎಚ್ಚರಿಸಿದ್ದಾರೆ. ಆದಾಗ್ಯೂ, ಅವರ ವಾದಗಳನ್ನು ತರ್ಕಬದ್ಧವಾಗಿ ಎದುರಿಸುವ ಬದಲು, ಸಮಾಜದ ಒಂದು ಗುಂಪು ಅವರ ವಿರುದ್ಧ ಅಪಪ್ರಚಾರದ, ಆಕ್ರಮಣಕಾರಿಯಾಗಿರುವ ಅಭಿಯಾನವನ್ನು ಪ್ರಾರಂಭಿಸಿದೆ, ಅದರ ಮೂಲಕ ಮೈಲೇಜು ಪಡೆಯಲು ಪ್ರಯತ್ನಿಸುತ್ತಿದೆ. ಈ ಟೀಕೆಯ ಮಾದರಿ ಹೊಸದೇನಲ್ಲ; ಇದು ಈ ಹಿಂದೆ ಅನೇಕರ ಮೇಲೆ ಪ್ರಯೋಗಿಸಿದ ಸಿದ್ಧಮಾದರಿಯೇ ಆಗಿದೆ. ಇಂಥ ಮೂಲಭೂತ ವಾದವನ್ನು 'ಧೈರ್ಯವಾಗಿ ಪ್ರಶ್ನಿಸುವುದು' ಅಪರಾಧವೇ?

ಕನ್ನೇರಿ ಸ್ವಾಮಿಗಳಾದರೋ ಕೃಷಿ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ್ದಾರೆ, ರೈತರನ್ನು ಲಕ್ಷಾಧಿಪತಿಗಳನ್ನಾಗಿಸಿದ್ದಾರೆ. ಭಾರತೀಯ ಜ್ಞಾನ ಪರಂಪರೆಯನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದ್ದಾರೆ. ಕಾಡಸಿದ್ಧೇಶ್ವರ ಕೃಷಿ ಪರಂಪರೆಯನ್ನು, ಕಾಯಕ ಪರಂಪರೆಯನ್ನು ಉಸಿರಾಗಿಸಿಕೊಂಡಿದ್ದಾರೆ. ಬಸವಣ್ಣನವರ ತತ್ವದ ಆಶಯಗಳಾದ ಭಕ್ತಿ, ಕಾಯಕ, ದಾಸೋಹಗಳನ್ನು ಕಾಯಾ-ವಾಚಾ-ಮನಸಾ ಪಾಲಿಸಿದ್ದಾರೆ. ಶುಷ್ಕ ವೈಚಾರಿಕತೆಯಿಂದ ಕಲ್ಯಾಣವಲ್ಲ, ವ್ಯಕ್ತಿಯ ಸಮಗ್ರ ಅಭಿವೃದ್ಧಿ, ಸಮೃದ್ಧಿಯೇ ಕಲ್ಯಾಣ ಎಂದರಿತು, ಆಧ್ಯಾತ್ಮಿಕ, ಆರ್ಥಿಕ, ದೇಶಭಕ್ತಿಯ ಕೂಡಲಸಂಗಮವನ್ನು ಮನೆಮನೆಯಲ್ಲಿ ಮೂಡಿಸಿದ್ದಾರೆ. ಇಂಥವರನ್ನು ಟೀಕಿಸುವವರು ತಮ್ಮ ಸಾಧನೆಯೇನು ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳುವುದು ಒಳಿತಲ್ಲವೇ? ಅಷ್ಟಕ್ಕೂ, ಟೀಕೆಗೆ ಹಳಸಲು ಸರಕು ಒದಗಿಸಿ ಆಡಿಸುವವರಿಗೂ, ಶಿವಭಕ್ತಿಗೂ ಸಂಬಂಧವೇ ಇಲ್ಲ. ನಮ್ಮ ಬಲವಾದ ಸಾಂಸ್ಕೃತಿಕ ಏಕತೆಯನ್ನು ಮುರಿಯುವುದು ಮತ್ತು ಅವುಗಳನ್ನು 'ವರ್ಗ-ಸಂಘರ್ಷ' ಆಧರಿತ 'ಜಾಗತಿಕ' ದೃಷ್ಟಿಕೋನಕ್ಕೆ ಬದಲಾಯಿಸುವುದೇ ಈ ಆಟಗಾರರ ಗುರಿ ಇದ್ದಂತಿದೆ.

ಈ ವಿರೋಧವು 'ಸೆಲೆಕ್ಟಿವ್' ಜಾಡು ಹಿಡಿದಿದೆ ಮತ್ತು ಪೂರ್ವಗ್ರಹಪೀಡಿತವಾಗಿದೆ ಎಂಬುದಕ್ಕೆ ಹಲವು ನಿದರ್ಶನಗಳಿವೆ. ಬಸವಣ್ಣನವರ ಮೇಲೆ ಪುರುಷ ಅಹಂಕಾರದ ಆರೋಪ ಹೊರಿಸಿದ್ದ 'ಪ್ರಗತಿಪರ ಸಾಕ್ಷಿಪ್ರಜ್ಞೆ'ಯ ಒಬ್ಬರನ್ನು ಉದಾಸೀನ ಮಾಡಿ ವ್ಯವಸ್ಥಿತವಾಗಿ ಟೀಕೆಗಳಿಂದ ರಕ್ಷಿಸಲಾಯಿತು. ಆಹಾರವು ಅವರವರ ಸ್ವಾತಂತ್ರ್ಯ ಮತ್ತು ಸಾಂವಿಧಾನಿಕ ಹಕ್ಕು ಕೂಡಾ. ಶರಣತತ್ವವನ್ನು ಉಸಿರಾಡಿಕೊಂಡವರೊಬ್ಬರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಸುಯೋಗ ಬಂದಾಗಲೇ, 'ಬಾಡೂಟವನ್ನು ಸಮ್ಮೇಳನವೇ ಪ್ರಾಯೋಜಿಸಬೇಕು' ಎಂಬ ಕೂಗೆದ್ದಿತು. 'ದಯ ಬೇಕು ಸಕಲ ಪ್ರಾಣಿಗಳಲ್ಲಿ' ಎಂದು ಸಾರಿ, ಶುದ್ಧ ಸಸ್ಯಾಹಾರ ಪ್ರಸಾದವನ್ನು ಬಸವಣ್ಣನವರು ಪ್ರತಿಪಾದಿಸಿದ್ದರು ಕೂಡ, ಈ ಯಾವೊಬ್ಬ ನಿಜಾಚರಣೆದಾರನೂ ಬಾಡೂಟದ ಬಗ್ಗೆ ಚಕಾರ ಎತ್ತಲಿಲ್ಲ.

ಭಕ್ತಿ ಭಂಡಾರಿ, ಜಗಜ್ಯೋತಿ ಬಸವಣ್ಣನವರು ನೀಡಿದ್ದು ಉದಾತ್ತವಾದ ಭಕ್ತಿ ಪರಂಪರೆ. ಜಾತಿ, ಲಿಂಗ, ವರ್ಗ, ವರ್ಣ ಭೇದಗಳಿಲ್ಲದೇ ಎಲ್ಲರಿಗೂ ಶಿವಾನುಭವದ ಬಾಗಿಲು ತೆರೆದಿದೆ. ಇದು ಸಾಮರಸ್ಯ, ಭಕ್ತಿ ಮತ್ತು ಜ್ಞಾನಕ್ಕೆ ಒತ್ತು ನೀಡುವ ಆಧ್ಯಾತ್ಮಿಕ ಮತ್ತು ಸಾಮಾಜಿಕ ಸುಧಾರಣಾ ಪ್ರವಾಹ. ಆದರೆ ಮಾರ್ಕ್ಸ್‌ವಾದಿ ಮುಖವಾಡ ಹೊತ್ತ ಕೆಲವರು ಒಂದಷ್ಟು ಸಾಂದರ್ಭಿಕ ಸಾಲುಗಳನ್ನು ಹಿಡಿದುಕೊಂಡು ವಿಭಜನೆಯನ್ನು ಉತ್ತೇಜಿಸುವ ಮೂಲಕ ಈ ನಿರೂಪಣೆಯನ್ನು ಹೈಜಾಕ್ ಮಾಡಲು ಯತ್ನಿಸುತ್ತಿದ್ದಾರೆ. ಈ ಅರ್ಜಿದಾರರ ಸಣ್ಣ ಗುಂಪು, ಸೈದ್ಧಾಂತಿಕ ಸಾಮರಸ್ಯದ ಹಿಂದೂ ಸಮಾಜದ ಏಕತೆಗೆ ಸವಾಲು ಹಾಕಲು ಪ್ರಯತ್ನಿಸುತ್ತಿದೆ. ಕುಂಭಮೇಳಕ್ಕೆ ಹೋಗುವ ಸ್ವಾಮಿಗಳನ್ನು ವಿರೋಧಿಸುವ ನಿಲುವು ತೆಗೆದುಕೊಂಡಿದ್ದೂ ಇದೇ ಗುಂಪು. ತಿರುಚಿದ ಇತಿಹಾಸ ಮತ್ತು ಅಸಮಾಧಾನ-ಪ್ರೇರಿತ ಕಥನಗಳ ಮೂಲಕ ಇದು ಹಿಂದೂ ಸಮಾಜದಲ್ಲಿ ಕಂದಕವನ್ನು ಸೃಷ್ಟಿಸುತ್ತಿದೆ, ಸಾಮಾಜಿಕ ಸಾಮರಸ್ಯಕ್ಕೆ ಪೆಟ್ಟು ನೀಡುತ್ತಿದೆ.

ತಮಗಾಗದವರಿಗೆ 'ಸನಾತನಿ' ಎಂಬ ಹಣೆಪಟ್ಟಿ ಕಟ್ಟುವುದು ಇವರ 'ಚಿಂತನ ಚಿಲುಮೆ'ಗಳು ನೀಡಿದ ಸಿದ್ಧಮಾದರಿಯ ಭಾಗ. ವಿಚಿತ್ರವೆಂದರೆ, ವಚನಗಳಲ್ಲಿ ವೇದ-ಉಪನಿಷತ್ತುಗಳಿಂದ ನೇರವಾಗಿ ಎತ್ತಿ ಇಟ್ಟ 800ಕ್ಕೂ ಹೆಚ್ಚು ಸಾಲುಗಳಿವೆ, ಸಾವಿರಾರು ಸಂಸ್ಕೃತೋಕ್ತಿಗಳಿವೆ. ಉರಿಲಿಂಗಪೆದ್ದಿಗಳ ವಚನಗಳಂತೂ ಇಂಥವುಗಳಿಗೆ ಕಲಶಪ್ರಾಯ. ಭಾರತದ ಪ್ರತಿ ವ್ಯಕ್ತಿಗೆ, ಮತಗಳಿಗೆ, ಮಠಗಳಿಗೆ ಸನಾತನ ಬೇರುಗಳು ಇದ್ದೇ ಇವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ನಿಜವಾದ ತತ್ವಸಾರವನ್ನು ಕಾಪಾಡಿಕೊಳ್ಳಲು ಮತ್ತು ವಿಶಾಲವಾದ ಭಾರತೀಯ ಭಕ್ತಿ ಪರಂಪರೆಯೊಂದಿಗೆ ಗುರುತಿಸಿಕೊಳ್ಳಲು ಇಂಥ ಟೀಕೆಗಳನ್ನು ಎದುರಿಸುವುದು ಅನಿವಾರ್ಯವಾಗಿದೆ.

ಒಂದಿಷ್ಟು ಪ್ರತಿಭಟನೆಗಳಿಗೆ ಹೆದರಿ ಸತ್ಯ ಹೇಳುವವರ ಧ್ವನಿಗಳು ಉಡುಗಿದಾಗ, ಲಾಭ ದಕ್ಕುವುದು ವಿಭಜಕ ಶಕ್ತಿಗಳಿಗೆ ತಾನೇ? ಯಾವುದೇ ರೀತಿಯ ತೀವ್ರಗಾಮಿತನವನ್ನು ವಿರೋಧಿಸುವುದು ಎಲ್ಲರ ಕಾಳಜಿಯಾಗಿರಬೇಕು. ಇಂಥ ವಿರೋಧ ಎದುರಿಸಿದವರಲ್ಲಿ ಕನ್ನೇರಿ ಶ್ರೀಗಳು ಮೊದಲನೆಯವರೂ ಅಲ್ಲ, ಕೊನೆಯವರೂ ಅಲ್ಲ. ಇದು ಸಮಯಕ್ಕೆ ಸಿಕ್ಕ ಅವಕಾಶ. ವಿವಾದದ ಎಳೆಗಾಗಿ ಕಾಯುವ, ಅದರಿಂದ ಲಾಭ ಮಾಡಿಕೊಳ್ಳುವ ಒಂದು ಗುಂಪು ತುಂಬಾ ವ್ಯವಸ್ಥಿತವಾಗಿ ಈ ಕೆಲಸ ಮಾಡುತ್ತದೆ. ಇಲ್ಲಿ ಸತರ್ಕದ ಧ್ವನಿಗಳನ್ನು ನಿಗ್ರಹಿಸಲು ಶತಪ್ರಯತ್ನ ಮಾಡಲಾಗುತ್ತದೆ. 'ಸೆಲೆಕ್ಟಿವ್' ಆಕ್ರೋಶದ ವೆಚ್ಚವನ್ನು ಪುನರ್‌ವಿಮರ್ಶಿಸುವ ಮತ್ತು ತೀವ್ರಗಾಮಿತ್ವದ ವಿರುದ್ಧ ನಿಲ್ಲುವವರನ್ನು ಮೌನಗೊಳಿಸುವ ಅಪಾಯಗಳನ್ನು ಅರಿಯಲು ಇದು ಸುಸಮಯ ಎನಿಸುತ್ತಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಿಮಗೆ ಹೆಂಗೆ ಗೊತ್ತಾಯ್ತು?

ಸುದ್ದಿಗಿಷ್ಟು ಒಗ್ಗರಣೆ ವಿಭಾಗದಲ್ಲಿ (ವಿಶ್ವವಾಣಿ ಮಾ.1), ''ಅಸ್ತಿತ್ವದಲ್ಲಿ ಇರದ ವಿಶ್ವವಿದ್ಯಾಲಯದ ಹೆಸರಲ್ಲಿ ಅಂಕಪಟ್ಟಿ ತಯಾರಿಸಿ ಮಾರಾಟ ಮಾಡಿದ ಪ್ರಳಯಾಂತಕರು'' ಎಂಬ ಸುದ್ದಿಸಾಲಿಗೆ, ''ಅದೇನು ಮಹಾ ಬಿಡಿ! ತೋಡಿಸದ ಬಾವಿಯ ಹೆಸರಿನಲ್ಲಿ ಬ್ಯಾಂಕ್ ಸಾಲ ಪಡೆದಿದ್ದ ಮಹಾಶಯರು ಬಾಳಿಹೋದ ನೆಲವಿದು; ಬ್ಯಾಂಕ್‌ನವರು ಸಾಲದ ಮರುಪಾವತಿಯ ಬಗ್ಗೆ ಕೇಳಿದಾಗ 'ಬಾವಿ ಕಳೆದಿದೆ' ಎಂದವರೂ ಇದ್ದಾರೆ!'' ಎಂದು ಒಗ್ಗರಣೆ ಹಾಕಲಾಗಿದೆ. 1970ರ ದಶಕದಲ್ಲಿ, ಆಗಿನ ಹಾವೇರಿ ತಾಲೂಕಿನಲ್ಲಿನ ಸೆಂಟ್ರಲ್ ಬ್ಯಾಂಕಿನಲ್ಲಿ ನಡೆದ ಈ ಘಟನೆಯ ಬಗೆಗಿನ ಮಾಹಿತಿ ನಿಮಗೆ ಹೇಗೆ ಸಿಕ್ಕಿತು?! ನಾನು ಆಗ ಪಕ್ಕದ ರಾಣೇಬೆನ್ನೂರಿನಲ್ಲಿ ಕೆಲಸ ಮಾಡುತ್ತಿದ್ದೆ, ಅದರಿಂದಾಗಿ ನನಗೆ ಆ ಘಟನೆ ಚೆನ್ನಾಗಿ ನೆನಪಿದೆ.

- ದಾವಣಗೆರೆ ಮುಕುಂದ, ಬೆಂಗಳೂರು

ಅನ್ನಬ್ರಹ್ಮನಿಗೆ ನಮಿಸಿ...

'ಹಸಿವೆಯಾದಾಗ ನಮಗೇಕೆ ಸಿಟ್ಟು ಬರುತ್ತದೆ' ಶೀರ್ಷಿಕೆಯ ಶಿಶಿರ್ ಹೆಗಡೆಯವರ ಅಂಕಣ ಬರಹ (ವಿಶ್ವವಾಣಿ ಫೆ.28) ಹೃದಯಸ್ಪರ್ಶಿಯಾಗಿತ್ತು. 'ಮೌನದ ಲುಂಬುದು ಆಚಾರವಲ್ಲ, ಲಿಂಗಾರ್ಪಿತವ ಮಾಡಿದ ಬಳಿಕ ತುತ್ತಿಗೊಮ್ಮೆ ಶಿವಶರಣೆನುತ್ತಿರಬೇಕು, ಕರಣ ವೃತ್ತಿಗಳಡಗುವವು ಕೂಡಲಸಂಗನ ನೆನೆವುತ್ತ ಉಂಡಡೆ' ಎಂದಿದ್ದಾರೆ ಶರಣರು. ಹಾಗಂತಲೇ ನಮ್ಮ ಯಜಮಾನರು ಹಿಂದೆ ಕುರುಕುಲದಂತ ಮಠದಲ್ಲಿ ವಿದ್ಯಾಭ್ಯಾಸ ಮಾಡುವಾಗ, 'ಅನ್ನಪೂರ್ಣೆ ಸದಾಪೂರ್ಣೆ ಶಂಕರ ಪ್ರಾಣವಲ್ಲಭೆ । ಜ್ಞಾನ ವೈರಾಗ್ಯ ಸಿದ್ಧ್ಯರ್ಥಂ ಭಿಕ್ಷಾಂ ದೇಹಿ ಚ ಪಾರ್ವತಿ॥' ಎಂಬ ಶ್ಲೋಕವನ್ನು ಊಟ ಮಾಡುವ ತಟ್ಟೆ ಮುಂದೆ ಕುಳಿತು ಹೇಳಿದ ಮೇಲೆಯೇ ಸೇವಿಸುತ್ತಿದ್ದರಂತೆ. ತುಮಕೂರಿನ ಸಿದ್ಧಗಂಗಾ ಮಠದಲ್ಲಿ, ಶಿವಮಂದಿರದ ಆಶ್ರಮಗಳಲ್ಲಿ ಈಗಲೂ ಮೊದಲು ಶ್ಲೋಕ ಹೇಳಿ ನಮಸ್ಕರಿಸಿ ನಂತರವಷ್ಟೇ ಊಟ ಮಾಡುವ ಪರಿಪಾಠವಿದೆ.

ಒಂದು ವೈಯಕ್ತಿಕ ಸಂಗತಿಯನ್ನು ಹಂಚಿಕೊಳ್ಳಲು ಬಯಸುವೆ. ಮದುವೆಯಾದ ಮೇಲೆ ನಮಗೆ ತುಂಬಾ ಕಷ್ಟವಿತ್ತು. ಒಂದು ಹೊತ್ತಿನ ಊಟವನ್ನು ಹೊಂದಿಸಿಕೊಳ್ಳುವುದೂ ದುಸ್ತರವಾಗಿತ್ತು. ತವರಿನಲ್ಲಿ ಸುಖವಾಗಿದ್ದ ನನಗೆ ಅದು ಮೊದಮೊದಲಿಗೆ ಕಷ್ಟವೆನಿಸಿದರೂ ಹೊಂದಿಕೊಂಡೆ. ಊಟ ಮಾಡುವಾಗ ನಮಸ್ಕರಿಸಿ ಮೊದಲ ತುತ್ತು ತಿನ್ನುವುದು ಅಭ್ಯಾಸವಾಗಿದ್ದು ಆವಾಗಲೇ. ಈಗ ನಾವು ಸುಖವಾಗಿದ್ದೇವಾದರೂ, ಎಲ್ಲೇ ಊಟಕ್ಕೆ ಕುಳಿತರೂ ಮೊದಲ ತುತ್ತನ್ನು ನಮಸ್ಕರಿಸಿ ತಿನ್ನುವುದು ಅಭ್ಯಾಸವಾಗಿದೆ. ಮಕ್ಕಳೂ ಹಾಗೆಯೇ ಉಣ್ಣುವುದು ಸಂತಸದ ಸಂಗತಿ. ಮೊಬೈಲ್ ಅಥವಾ ಟಿವಿಯನ್ನು ವೀಕ್ಷಿಸುತ್ತಾ, ಏನು ತಿನ್ನುತ್ತಿದ್ದೇನೆ ಎಷ್ಟು ತಿನ್ನುತ್ತಿದ್ದೇನೆ ಎನ್ನುವುದರ ಅರಿವಿಲ್ಲದೇ ಊಟ ಮಾಡುವುದೂ ಈಗ ಪದ್ಧತಿಯಾಗಿಬಿಟ್ಟಿದೆ. ಅಂಕಣಕಾರರು ಅದರ ಬಗ್ಗೆಯೂ ಒಂದಿಷ್ಟು ಹೇಳಬೇಕಿತ್ತು.

- ನಿಂಗಮ್ಮ ಭಾವಿಕಟ್ಟಿ, ಹುನಗುಂದ

ಸತ್ಯವಾದ ಮಾತು

ಕನ್ನಡದ ಟಿವಿ ವಾಹಿನಿಗಳು ಚಿತ್ರರಂಗಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಪರಭಾಷಾ ಚಿತ್ರಗಳ ಸುದ್ದಿಗಳಿಗೆ ಬಹುತೇಕ ಸಮಯವನ್ನು ಮೀಸಲಿಡುತ್ತವೆ ಎಂದು ಕೆ.ಶ್ರೀನಿವಾಸರಾವ್ ಅವರು 'ಓದುಗರ ಓಣಿ'ಯಲ್ಲಿ (ವಿಶ್ವವಾಣಿ ಮಾ.1) ಹೇಳಿರುವುದು ಸತ್ಯವಾದ ಮಾತು. ಪರಭಾಷಾ ಚಿತ್ರಗಳ ಬಿಡುಗಡೆಯ ಸಮಯದಲ್ಲಿ 'ದಾಖಲೆಯ ಕೋಟಿ ಗಳಿಕೆ' ಎಂಬಂಥ ಬೋಗಸ್ ಸುದ್ದಿಗಳನ್ನು ಪ್ರಸಾರ ಮಾಡುವ ನಮ್ಮ ವಾಹಿನಿಗಳು, ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಸಣ್ಣ ಕಥೆ ಆಧರಿತ 'ಡೇರ್ ಡೆವಿಲ್ ಮುಸ್ತಾಫಾ' ಎಂಬ ಚಿತ್ರ ಬಿಡುಗಡೆಯಾದಾಗ ಆ ಚಿತ್ರತಂಡದವರ ಸಂದರ್ಶನ ಮಾಡಿದ್ದನ್ನು ನಾವು ನೋಡಿದ ನೆನಪಿಲ್ಲ. ಸದಭಿರುಚಿಯ ಕನ್ನಡ ಚಿತ್ರಗಳ ಬಗ್ಗೆ ಅನಾದರ ತೋರುವುದನ್ನು ನಮ್ಮ ಟಿವಿ ವಾಹಿನಿಗಳು ಇನ್ನಾದರೂ ಬಿಡಲಿ.

- ಟಿ.ಎಸ್.ಪ್ರತಿಭಾ, ಚಿತ್ರದುರ್ಗ

ಗೊತ್ತಿರದ ವಿಷಯ

ವಿಶ್ವೇಶ್ವರ ಭಟ್ಟರ 'ಇದೇ ಅಂತರಂಗ ಸುದ್ದಿ' ಅಂಕಣ (ವಿಶ್ವವಾಣಿ ಮಾ.2) ಮುದನೀಡಿತು. ಕರೋಕೆ ಎಂಬುದು ಜಪಾನಿನ ಕೊಡುಗೆ ಎಂಬುದು ನನ್ನನ್ನೊಳಗೊಂಡಂತೆ ಅನೇಕರಿಗೆ ಗೊತ್ತಿಲ್ಲದ ವಿಷಯ. ಇನ್ನು ಅಳುವ ಕೋಣೆಗಳ ಬಗ್ಗೆ ಓದಿ 'ಹೀಗೂ ಉಂಟೆ' ಎನಿಸಿ, ಅಳುವುದೋ ನಗುವುದೋ ಎಂಬಂತಾಯಿತು. ಆದರೆ ಅಳುವುದು ಲಜ್ಜೆಯಲ್ಲ.. ಅಷ್ಟಕ್ಕೂ ನಾವು ಈ ಜಗತ್ತಿಗೆ ಕಾಲಿಟ್ಟಿದ್ದೇ ಅಳುವ ಮೂಲಕವಲ್ಲವೇ? You said it so well!. ಜಪಾನ್ ಬಗೆಗಿನ ಭಟ್ ಸರ್ ಅವರ ಲೇಖನಗಳು ಡಾಕ್ಟರೇಟ್ ಪದವಿಗೆ ಅರ್ಹ! ಇನ್ನು ಶ್ರೀವತ್ಸ ಜೋಶಿ ಅವರ 'ಒಂದಕ್ಷರದ ಪದಗಳ' ಲೇಖನವು ಸೊಬಗನ್ನೂ ಸೋಜಿಗವನ್ನೂ ತಂದಿತು. ಅವರ ಆಳವಾದ ಅಧ್ಯಯನ, ಸೂಕ್ಷ್ಮಗ್ರಾಹಿ ಸಂಶೋಧನೆ ಮತ್ತು ಸ್ವಾರಸ್ಯಕರ ನಿರೂಪಣೆ ಮನಸೂರೆಗೊಂಡಿತು. ಅವರಿಂದ ಈ ರೀತಿಯ ಲೇಖನಗಳು ಹೆಚ್ಚೆಚ್ಚು ಬರಲಿ.

- ಲಕ್ಷ್ಮಣ ಗೋರ್ಲಕಟ್ಟೆ, ಮೈಸೂರು

ಆರೋಗ್ಯವೇ ಭಾಗ್ಯ

ಆರೋಗ್ಯ ಇಲಾಖೆ ಮತ್ತು ಆಹಾರ ಸುರಕ್ಷತಾ ಅಧಿಕಾರಿಗಳು ಇತ್ತೀಚೆಗೆ ನಡೆಸುತ್ತಿರುವ ದಾಳಿಗಳು ಹಾಗೂ ಮಾದರಿ ಪರೀಕ್ಷಾ ವರದಿಗಳು, ಸಾರ್ವಜನಿಕರ ಆರೋಗ್ಯದ ಬಗ್ಗೆ ಅವರಿಗಿರುವ ಕಾಳಜಿಯನ್ನು ಎತ್ತಿ ತೋರಿಸುತ್ತವೆ. ರಾಸಾಯನಿಕ ಮಿಶ್ರಿತ ಬಟಾಣಿ, ಇಡ್ಲಿ ತಯಾರಿಯಲ್ಲಿ ಪ್ಲಾಸ್ಟಿಕ್ ಹಾಳೆಯ ಬಳಕೆ, ಕುಡಿಯುವ ನೀರಿನ ಬಾಟಲ್‌ಗಳಿಂದ ಸೇರಿಕೊಳ್ಳುವ ಹಾನಿಕಾರಕ ರಾಸಾಯನಿಕ, ಟ್ಯಾಟೂವಿನಿಂದ ಹರಡುವ ರೋಗಗಳು ಹೀಗೆ ಈ ಸಂದರ್ಭದಲ್ಲಿ ಅನೇಕ ಸಂಗತಿಗಳು ಬೆಳಕಿಗೆ ಬರುತ್ತಿವೆ. ಈ ಕಾರ್ಯಾಚರಣೆಯಲ್ಲಿ ತೊಡಗಿರುವ ಅಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳು. ಆದರೆ, ಈ ಕಾರ್ಯಾಚರಣೆಗಳು, ಅವುಗಳಿಂದ ಹೊಮ್ಮುವ ವರದಿಗಳು ಕೇವಲ ಅಂಕಿ-ಅಂಶಗಳಾಗಿ ಉಳಿಯಬಾರದು. ಸರಕಾರವು ಈ ವಿಷಯದಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕು. ಆಹಾರದ ಕಲಬೆರಕೆಯನ್ನು ತಡೆಗಟ್ಟಲು ವಿಶೇಷ ತನಿಖಾ ತಂಡಗಳನ್ನು ರಚಿಸಬೇಕು. ಕಲಬೆರಕೆ ಆಹಾರ ಪದಾರ್ಥಗಳನ್ನು ಮಾರಾಟ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮವನ್ನು ಕೈಗೊಂಡು ಸಾರ್ವಜನಿಕರ ಆರೋಗ್ಯವನ್ನು ಕಾಪಾಡಲು ಮುಂದಾಗಬೇಕು. ಆಹಾರದ ಕಲಬೆರಕೆಯ ವಿಷಯದಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. 'ಆರೋಗ್ಯವೇ ಭಾಗ್ಯ' ಎಂಬ ಮಾತಿನಂತೆ, ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದ್ದು ನಮ್ಮೆಲ್ಲರ ಕರ್ತವ್ಯ. ಹೀಗಾಗಿ ಈ ನಿಟ್ಟಿನಲ್ಲಿ ಸಾರ್ವಜನಿಕರು ಸರಕಾರದ ಜತೆಗೆ ಕೈಜೋಡಿಸಬೇಕು.

- ಎಸ್.ನಾಗರಾಜ ನಾಗೂರ, ಬಾಗಲಕೋಟೆ

ಕನ್ನಡದ ಹೆಸರು

ಕಚೇರಿ, ಅಂಗಡಿ-ಮುಂಗಟ್ಟುಗಳ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆಯ ಅಳವಡಿಕೆಯ ಅನುಷ್ಠಾನದ ಬೆನ್ನಲ್ಲೇ ಇದೀಗ ರಾಜ್ಯದೊಳಗೆ ತಯಾರಾಗುವ ಉತ್ಪನ್ನಗಳ ಪ್ಯಾಕೆಟ್ ಮೇಲೆ ಕನ್ನಡದಲ್ಲಿ ಹೆಸರು ಮುದ್ರಿಸಬೇಕು, ಅವುಗಳ ಬಳಕೆ ಬಗೆಗಿನ ನಿರ್ದೇಶನಗಳೂ ಕನ್ನಡದಲ್ಲಿರಬೇಕು ಎಂಬ ಆದೇಶವನ್ನು ರಾಜ್ಯ ಸರಕಾರ ಹೊರಡಿಸಿದೆ. ಇದನ್ನು ಇನ್ನೊಂದು ದಿಟ್ಟಹೆಜ್ಜೆ ಎನ್ನಬಹುದು. ಎಂದೋ ಆಗಬೇಕಾದ್ದು ಸ್ವಲ್ಪ ತಡವಾಗಿಯಾದರೂ ಆಗುತ್ತಿರುವುದು ಖುಷಿಯ ಸಂಗತಿ.

- ರಮಾನಂದ ಶರ್ಮಾ, ಬೆಂಗಳೂರು

ಭಟ್ಟರ್ ಸ್ಕಾಚ್

- **ವಿನಾಯಕ ಪೀರೇಮಠ, ಗೋಕಾಕ**
ಭಟ್ರೇ, ಕೆಲವರಿಗೆ ಫ್ಯಾಂಟ್ ಜಿಪ್ ಏರಿಸಲು ಮರೆತು ಹೋಗುತ್ತದಲ್ಲ?
– ಅದನ್ನು ಇಳಿಸಲು ಮರೆತುಹೋದರೂ ಕಷ್ಟವೇ!

- **ಸಂಗೀತಾ ಕಾಮತ್, ಹುಬ್ಬಳ್ಳಿ**
ಭಟ್ರೇ, ಮೆಟ್ರೋದಲ್ಲಿ ಪಯಣಿಸುವಾಗ ಕೆಲವರು ಜೋರಾಗಿ ಮಾತಾಡುತ್ತಾರಲ್ಲ?
– ಪಕ್ಕದ ಬೋಗಿಯಲ್ಲಿರುವವರಿಗೂ ಕೇಳಿಸಲಿ ಎಂದು ಅಂದುಕೊಂಡಿರಬಹುದಾ?!

- **ನವೀನ ಹೆಬ್ಬಾರ, ಕುಮಟಾ**
ಭಟ್ರೇ, ವಿಮಾನದಲ್ಲಿ ಪಯಣಿಸುವಾಗ ಗಗನಸಖಿ ಯೊಂದಿಗೆ ಲವ್ ಆಗಬಹುದಾ?
– ಆಗಬಹುದು, ಆದರೆ ಮರ ಸುತ್ತಲು ಆಗಲಿಕ್ಕಿಲ್ಲ!

- **ಪವಿತ್ರ ವಿ.ಎಂ., ಬೆಂಗಳೂರು**
ಸರ್, ನಮ್ಮ ಮುತ್ತ ಗೊತ್ತಿಲ್ಲದವರಿಗೆ ಅದನ್ನು ತಿಳಿಸಿಕೊಡುವುದು ಹೇಗೆ?
– ಎಲ್ಲ ಸಲ ವಜಾಡ ಹೆಲ್ಲು ಉಮಿಸಿಸಬಾರದು!

- **ಸ್ಯಾಕ್ಷಿ, ಸುರತ್ಕಲ್**
ಭಟ್ರೇ, ನೀವು ನೋಡದ ದೇಶಗಳು ಇವೆಯಾ?
– ಎಲ್ಲ ದೇಶಗಳನ್ನೂ ನೋಡಿದ್ದೇನೆ, ನಾಕಲೆಯಲ್ಲಿ!

- **ಗುರುಪ್ರ ಶ್ರೀಕರ್, ತುಮಕೂರು**
ಭಟ್ರೇ, ನಮಗೆ ಒಪ್ಪುವ ಡ್ರೆಸ್ ಯಾವುದು ಎಂದು ತಿಳಿದುಕೊಳ್ಳುವುದು ಹೇಗೆ?
– ಈ ವಿಷಯದಲ್ಲಿ ಅನೇಕರು ಹೆಂಡತಿ ಅಥವಾ ಗರ್ಲ್‌ಫ್ರೆಂಡ್ ಸಲಹೆ ಪಡೆಯುತ್ತಾರೆ ಎಂದು ಕೇಳಿದ್ದೇನೆ!

- **ಪಿ.ಶಂಕರ, (ಇಮೇಲ್ ಮೂಲಕ)**
ಭಟ್ರೇ, ಹುಡುಗಿಯರ ಮನಸ್ಸನ್ನು ತಿಳಿಯುವುದು ಹೇಗೆ?
– ಐಫೋನ್ ಕೊಡಿಸುವ ಅಂತ ಹೇಳಿ ನೋಡಿ!

- **ಮೋಹನ ಪಿ.ಜನಗೆರೆ**
ಸರ್, ಕೆಲವರು ಕುಳಿತಲ್ಲಿ ಕುತುಕೊಳ್ಳುವುದಿಲ್ಲವಲ್ಲ?
– ಅವರಿಗೆ ಆಗಾಗ ಮೊಬೈಲ್ ಕಾಲ್‌ಗಳು ಬರುತ್ತಾವಲ್ಲ!

- **ಬಸವರಾಜ ಪಾಟೀಲ, ರಾಯಚೂರು**
ಭಟ್ರೇ, ನೀವು ಬಹಳ ಸಿಂಪಲ್ ಅಂತ ನನ್ನ ಸ್ನೇಹಿತ ಹೇಳ್ತಾನಲ್ಲ?
– ಅದಕ್ಕಾಗಿ ಎಷ್ಟು ಖರ್ಚು ಮಾಡ್ತೇನೆ ಗೊತ್ತಾ ನಿನಗೆ?!

- **ರಾಮು ಮಲ್ಲಿಕಟ್ಟಿ, ಕೋಣಂದೂರು**
ಭಟ್ರೇ, ಈ ಸ್ಕ್ರಾಚ್ ಕಾರ್ಡುಗಳು ಯಾವಾಗಲೂ 'ಬೆಟರ್ ಲಕ್ ನೆಕ್ಸ್ಟ್ ಟೈಮ್' ಅಂತ ಹೇಳ್ತಾವಲ್ಲ?
– ಬಹಳ ಸ್ಕ್ರಾಚ್ ಮಾಡಿಕೊಳ್ಳದಿರಲಿ ಎಂಬುದು ಆಶಯ!

ದುಡ್ಡೇ ದೊಡ್ಡಪ್ಪ; ಜಾಹೀರಾತು ಅದರಪ್ಪ!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ದುಡ್ಡಿನ ಧರ್ಮ ಯಾವುದು? ಜಾಹೀರಾತಿನ ಜಾತಿ ಯಾವುದು? ಯಾರೂ ಉತ್ತರ ಹೇಳಲಾಗದ ಪ್ರಶ್ನೆ ಇದು. ಇದಕ್ಕೆ ಉತ್ತರ ಗೊತ್ತಿದ್ದರೆ ತಿಳಿಸಿ. ಸರಿಯಾದ ಉತ್ತರ ಕೊಟ್ಟವರಿಗೆ ಬಹುಮಾನ ಇದೆ. ಆ ಬಹುಮಾನವೂ ಜಾಹೀರಾತೇ ಆಗಿರಲಿಕ್ಕೂ ಸಾಕು! ಅಥವಾ ಜಾಹೀರಾತಿನಲ್ಲಿ ಬಹುಮಾನ ಕೊಡಿಸಿಕೊಂಡರೂ ಆಶ್ಚರ್ಯವಿಲ್ಲ, ದುಡ್ಡೇ ದೊಡ್ಡಪ್ಪ ಎನ್ನುವುದು ಜಗದ ಮಾತು, ಜಾಹೀರಾತು ಅದರಪ್ಪ ಎನ್ನುವುದು 'ಜಾಹೀರಾತು ಜಗ'ದ ಮಾತು.

ಎಂಟಿಆರ್ ಗುಲಾಬ್ ಜಾಮೂನ್, ನಿರ್ಮಾ, ಥಮ್ಸ್ ಅಪ್ ಇತ್ಯಾದಿ ಜಾಹೀರಾತುಗಳು ಯಾರಿಗೆ ನೆನಪಿಲ್ಲ ಹೇಳಿ? ಒಂದು ಕಾಲದಲ್ಲಿ ಇವೆಲ್ಲ ಅತ್ಯಂತ ಜನಪ್ರಿಯ ಜಾಹೀರಾತುಗಳು. ಇಂದಿಗೂ ನಮ್ಮ ಮನದಲ್ಲಿ ಉಳಿದುಕೊಂಡಿವೆ. ಜಾಹೀರಾತಿನ ಲೋಕವೇ ಹಾಗೆ, ಮನುಷ್ಯನಿಗೆ ಮುಪ್ಪು ಆವರಿಸಬಹುದು, ಮನಸ್ಸು ಸಾಯಿಸಬಹುದು, ಆದರೆ ಕೆಲವು ಜಾಹೀರಾತುಗಳಿಗೆ ಮುಪ್ಪು-ಸಾವು ಎರಡೂ ಇಲ್ಲ. ವಿಕೋ ವಜ್ರದಂತಿ, ಅಯೋಡೆಕ್ಸ್, ಅಮೃತಾಂಜನ್ ಇತ್ಯಾದಿ ಜಾಹೀರಾತನ್ನು ನಾವು ಕೆಲವು ದಶಕಗಳವರೆಗೆ ನೋಡಿದ್ದೇವೆ. ಯಾವುದೇ ಸಿನಿಮಾಕ್ಕೆ ಹೋದರೂ, ಸಿನಿಮಾ ಆರಂಭವಾಗುವ ದೃಶ್ಯದ ಮೊದಲು ಬರುವ ಕಾಯಂ ಜಾಹೀರಾತುಗಳು ಇವಾಗಿದ್ದವು. ಬಾಲ್ಯದಲ್ಲಿ ಕಂಡ ಈ ಜಾಹೀರಾತುಗಳು ಇಂದಿಗೂ ನಮ್ಮ ಮನದ ಮೂಲೆಯಲ್ಲಿ ಮನೆ ಮಾಡಿಕೊಂಡು ಬೆಚ್ಚಗೆ ಕುಳಿತಿವೆ. ನಾವು ಪ್ರತಿನಿತ್ಯ ನೂರಾರು ಜಾಹೀರಾತುಗಳನ್ನು ನೋಡುತ್ತೇವೆ. ಒಂದು ತಿಂಗಳಲ್ಲಿ ದೃಶ್ಯ ಮಾಧ್ಯಮ, ದಿನಪತ್ರಿಕೆ, ರಸ್ತೆಯ ಅಕ್ಕ-ಪಕ್ಕದಲ್ಲಿ ಇರುವ ಹೋರ್ಡಿಂಗ್, ಬ್ಯಾನರ್, ವಾಹನಗಳ ಮೇಲೆ, ಹೀಗೆ ಸಾವಿರಾರು ಜಾಹೀರಾತುಗಳು ನಮ್ಮ ಕಣ್ಣಿಗೆ ಬೀಳುತ್ತವೆ. ಆದರೆ ಎಲ್ಲವೂ ನೆನಪಿನಲ್ಲಿ ಇರುವುದಿಲ್ಲ. ಜಾಹೀರಾತು ಗಳನ್ನು ನೆನಪಿನಲ್ಲಿರುವಂತೆ ಮಾಡುವುದೂ ಒಂದು ಕಲೆ. ಕೆಲವು ಜಾಹೀರಾತುಗಳು ಹತ್ತು ಸಲ ನೋಡಿದರೂ ನೆನಪಿನಲ್ಲಿರುವುದಿಲ್ಲ, ಅದೇ ಕೆಲವು ಜಾಹೀರಾತುಗಳು ಒಮ್ಮೆ ನೋಡಿದರೆ ಹತ್ತು ವರ್ಷವಾದರೂ ಮರೆಯುವುದಿಲ್ಲ.

ಉತ್ಸವ, ಸಂಭ್ರಮಾಚರಣೆ ಎಂದರೆ ಕೇವಲ ನಮಗಷ್ಟೇ ಅಲ್ಲ, ಜಾಹೀರಾತುಗಳಿಗೂ ಸುಗ್ಗಿಯ ಕಾಲ. ಕೆಲವರು ಜನನಿಬಿಡ ಪ್ರದೇಶವನ್ನು ಇಷ್ಟಪಡದೇ ಇರಬಹುದು. ಆದರೆ ಜಾಹೀರಾತುಗಳಿಗೆ ಜನನಿಬಿಡ ಪ್ರದೇಶಗಳೇ ಇಷ್ಟ. ಜಾಹೀರಾತುಗಳು ಬೇಯುವುದೇ ಅಲ್ಲಿಯೇ, ಬದುಕುವುದೂ ಅಲ್ಲಿಯೇ. ಜನ ಓಡಾಡದ ಜಾಗದಲ್ಲಿ, ನೋಡದ ತಾಣದಲ್ಲಿ ಜಾಹೀರಾತಿಗೆ ಏನು ಕೆಲಸ? ಜನರಿಗೆ ಉಸಿರಾಡಲು ಆಮ್ಲಜನಕ ಬೇಕಾದಂತೆ, ಜಾಹೀರಾತಿಗೆ ಜನರೇ ಆಮ್ಲಜನಕ. ಆ ಕಾರಣಕ್ಕಾಗಿಯೇ ಫುಟ್ಬಾಲ್ ಪಂದ್ಯದಲ್ಲಿ ಗೋಲಿನ ಅಬ್ಬರ, ಕ್ರಿಕೆಟ್‌ನಲ್ಲಿ ಸಿಕ್ಸರ್‌ನ ಎತ್ತರಕ್ಕೆಲ್ಲ, ಜಾಹೀರಾತಿನ ದರ ಸದ್ದು ಮಾಡುತ್ತದೆ, ಪರಿಣಾಮವನ್ನು ಬೀರುತ್ತದೆ. ಹಾಗಿರುವಾಗ ಇಡೀ ವಿಶ್ವವೇ ಬೆರಗಿನಿಂದ ನೋಡುವಷ್ಟು ಜನ ಸೇರುವ ಕುಂಭಮೇಳದಿಂದ ಜಾಹೀರಾತು ಹೊರಗು ಳಿಯಲು ಹೇಗೆ ತಾನೆ ಸಾಧ್ಯ? ಜತೆಗೆ, ಜಾಹೀರಾತಿನಲ್ಲಿ ಒಳ್ಳೆಯ ಸಂದೇಶ, ಸಾಮಾಜಿಕ ಕಾಳಜಿಯೂ ಸೇರಿಕೊಂಡರೆ ಸ್ವರ್ಣಪುಷ್ಪಕ್ಕೆ ಪರಿಮಳ ಬಂದಂತೆ. ಇತ್ತೀಚಿನ ಕುಂಭಮೇಳವನ್ನು ನೋಡಿದಂತೆ, ಮೇಳದಲ್ಲಿ ಅಥವಾ ಕುಂಭದೊಳಗೆ ಪ್ರಧಾನ ವಿಷಯವನ್ನಾ ಗಿಟ್ಟುಕೊಂಡು ತಯಾರಾದ, ಅತಿ ಹೆಚ್ಚು ಸುದ್ದಿ ಮಾಡಿದ ಕೆಲವು ಜಾಹೀರಾತುಗಳನ್ನು ಒಮ್ಮೆ ನೋಡಿ.

ನಾವು ತಿನ್ನುವ ರೊಟ್ಟಿಯೂ ಜಾಹೀರಾತಿಗೆ ಆಹಾರವಾಗಬಲ್ಲದು ಎಂದರೆ ನಂಬಲೇಬೇಕು. ಪ್ರಯಾಗರಾಜ್‌ನಲ್ಲಿ ಕಳೆದ ಬಾರಿ (2013) ನಡೆದ ಕುಂಭಮೇಳದಲ್ಲಿ, ಲೈಫ್‌ಬಾಯ್ ಸಾಬೂನು ಕಂಪನಿಯವರ ಜಾಹೀರಾತು ಬಹಳ ಜನಪ್ರಿಯವಾಗಿತ್ತು. ತಮ್ಮ ಜಾಹೀರಾತು ಜನರಿಗೆ ತಲುಪಲು ಅವರು ರೊಟ್ಟಿಯನ್ನು ಮಾಧ್ಯಮವನ್ನಾಗಿ ಬಳಸಿಕೊಂಡಿದ್ದರು. ಹೇಗೆ ಎನ್ನುತ್ತೀರಾ? ಕುಂಭಮೇಳದಲ್ಲಿ ಉಚಿತ ಭೋಜನದ ವ್ಯವಸ್ಥೆ ಇರುವುದು ಗೊತ್ತೇ ಇದೆಯಲ್ಲ? ಆ ವರ್ಷ ಕೆಲವು ಟೆಂಟ್‌ಗಳಲ್ಲಿ ಊಟಕ್ಕೆ ಕುಳಿತವರಿಗೆ ಒಂದು ಆಶ್ಚರ್ಯ ಕಾದಿತ್ತು. ಅವರ ತಟ್ಟೆಯಲ್ಲಿ ಬಂದು ಬಿದ್ದ ರೊಟ್ಟಿಯ ಮೇಲೆ 'ನೀವು ಲೈಫ್‌ಬಾಯ್‌ನಿಂದ ಕೈ ತೊಳೆದುಕೊಂಡಿದ್ದೀರಾ?' ಎಂಬ ಸಂದೇಶವಿತ್ತು. ಆ ಒಂದು ಸಂದೇಶ ನೀಡಲು ಅಡುಗೆ ಮನೆಯಲ್ಲಿ ನೂರು ಮಂದಿ ಈ ಕೆಲಸಕ್ಕಾಗಿಯೇ ನಿಂತಿದ್ದರು. ಒಂದು ತಿಂಗಳಿನಲ್ಲಿ ಸುಮಾರು 25 ಲಕ್ಷಕ್ಕೂ ಹೆಚ್ಚು ರೊಟ್ಟಿಯ ಮೇಲೆ ಈ ರೀತಿಯ ಸಂದೇಶ ಮುದ್ರೆಯನ್ನು ಒತ್ತಿದ್ದರು. ಆ ಸಂದೇಶವನ್ನು ನೋಡಿದ ಜನರು, ಊಟದ ಮನೆಯ ಪಕ್ಕದಲ್ಲಿಯೇ ಇರುವ ಕೈ ತೊಳೆಯುವ ಸ್ಥಳಕ್ಕೆ ಹೋದಾಗ, ಅಲ್ಲಿ ಲೈಫ್‌ಬಾಯ್ ಸಾಬೂನನ್ನು ಇಡಲಾಗಿತ್ತು. ಅಂದು ಜನ ಊಟದ ಜತೆಗೆ ಲೈಫ್‌ಬಾಯ್ ಕಂಪನಿಯ ಸೃಜನಶೀಲತೆಯನ್ನೂ ಮೆಚ್ಚಿಕೊಂಡಿದ್ದರು. ಕೈ ತೊಳೆದುಕೊಂಡು ಬಂದ ಜನ ತಮ್ಮ ಅಕ್ಕ-ಪಕ್ಕದವರಲ್ಲಿ, 'ಲೈಫ್‌ಬಾಯ್‌ನಿಂದ ಕೈ ತೊಳೆದುಕೊಂಡಿದ್ದೀರಾ?' ಎಂದು ಕೇಳುವುದನ್ನು ಕಂಪನಿಯವರು ಸೆರೆಹಿಡಿದಿದ್ದರು. ನಂತರದ ಕೆಲವು ದಿನ ಅದನ್ನೇ ಜಾಹೀರಾತಿಗಾಗಿಯೂ ಬಳಸಿಕೊಂಡರು. ದೃಶ್ಯಮಾಧ್ಯಮಗಳಲ್ಲಿ ಜಾಹೀರಾತು ಪ್ರದರ್ಶನಗೊಳ್ಳುವುದಕ್ಕಿಂತ ಮೊದಲು, 'ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರತಿವರ್ಷ ಅತಿಸಾರದಿಂದ ಹನ್ನೊಂದು ಲಕ್ಷಕ್ಕೂ ಹೆಚ್ಚು ಮಕ್ಕಳು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ, ಊಟಕ್ಕಿಂತ ಮೊದಲು ಕೈ ತೊಳೆದುಕೊಳ್ಳುವುದರಿಂದ ಇದನ್ನು ನಿಯಂತ್ರಿಸಬಹುದು' ಎಂಬ ಎರಡು ಸಾಲನ್ನು ಸೇರಿಸಿದ್ದರು.

ನಾಸಿಕ್‌ನಲ್ಲಿ ನಡೆದ ಪೂರ್ಣಕುಂಭಮೇಳದಲ್ಲಿ (2015) ಡೆಟಾಲ್ ಕಂಪನಿಯವರು ಅರವತ್ತಾರು ಸಾವಿರ ಹ್ಯಾಂಡ್ ಸ್ಯಾನಿಟೈಸರ್ ಹಂಚಿದ್ದರು. ನೂರಾರು ಕಾರ್ಯಕರ್ತರು ಡೆಟಾಲ್ ಸ್ಯಾನಿಟೈಸರ್ ತುಂಬಿದ ಟ್ಯಾಂಕ್ ಮತ್ತು ಪಂಪ್ ಹೊತ್ತು ತಿರುಗಿದ್ದರು. ಭೋಜನ ಶಾಲೆಯ ಪಕ್ಕದಲ್ಲಿ ನಿಂತು ಸುಮಾರು ಎಪ್ಪತ್ತು ಲಕ್ಷ ಜನ ನೀರಿನ ಬದಲು ಡೆಟಾಲ್‌ನಲ್ಲಿ ಕೈ ತೊಳೆಯುವಂತೆ ಮಾಡಿದರು. ಅದನ್ನೇ ಬಳಸಿಕೊಂಡು ಜಾಹೀರಾತು ತಯಾರಿಸಿದರು. ಅದರಲ್ಲಿ, 'ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ಒಂದೂವರೆ ಕೋಟಿಗೂ ಹೆಚ್ಚು ಜನ ನಾಸಿಕ್ ಪಟ್ಟಣಕ್ಕೆ ಬರುತ್ತಾರೆ. ಗೋದಾವರಿಯಲ್ಲಿ ಸ್ನಾನ ಮಾಡಿದರೆ ಆತ್ಮ ಶುದ್ಧಿಯಾಗುತ್ತದೆ ಎಂಬ ನಂಬಿಕೆ ಅವರಲ್ಲಿರುತ್ತದೆ. ಆದರೆ ನೈರ್ಮಲ್ಯದ ಕೊರತೆಯಿಂದ ನೂರಾರು ರೋಗಗಳು ಹರಡುತ್ತವೆ. ಅದರಲ್ಲಿ ಕೆಲವು ಮಾರಕವಾಗಿಯೂ ಇರುತ್ತವೆ. ಅದರ ಕುರಿತು ಏನಾದರೂ ಮಾಡಲು ನಾವು ನಿರ್ಧರಿಸಿದ್ದೇವೆ. ಈ ಕುಂಭಮೇಳವನ್ನು ಮೊದಲ ಬಾರಿ 'ಡೆಟಾಲ್‌ನಿಂದ ತೊಳೆದ ಕುಂಭಮೇಳ'ವನ್ನಾಗಿಸಲು ನಾವು ಹೊರಟಿದ್ದೇವೆ. ಭಕ್ತರು ಮೋಕ್ಷದ ಕಡೆಗೆ ಸಾಗುವಾಗ ನೈರ್ಮಲ್ಯದ ಕಡೆಗೂ ಮೊದಲ ಹೆಜ್ಜೆ ಇಡುವಂತೆ ಮಾಡುತ್ತಿದ್ದೇವೆ. ಊಟಕ್ಕೂ ಮೊದಲು ಕೈ ತೊಳೆಯುವ ಅಗತ್ಯದ ಬಗ್ಗೆ ತಿಳಿಸುತ್ತಿದ್ದೇವೆ. ಡೆಟಾಲ್‌ನಲ್ಲಿ ಕೈತೊಳೆಸುವುದರೊಂದಿಗೆ, ನಾಸಿಕ್ ಪಟ್ಟಣಕ್ಕೆ ಮೂವತ್ತು ಲಕ್ಷ ಲೀಟರ್ ನೀರನ್ನು ಉಳಿಸುತ್ತಿದ್ದೇವೆ' ಎಂದು ಜಾಹೀರಾತಿನಲ್ಲಿ ಹೇಳಿಕೊಂಡಿದ್ದರು.

ಪ್ರಯಾಗರಾಜ್‌ನಲ್ಲಿ 2019ರಲ್ಲಿ ನಡೆದ ಅರ್ಧ ಕುಂಭಮೇಳದಲ್ಲಿ ಡಾಬರ್ ಕಂಪನಿಯವರು ಇದಕ್ಕೆ ಹೊಂದುವಂಥ ಪ್ರಚಾರವೊಂದನ್ನು ಮಾಡಿದ್ದರು. ಕುಂಭಮೇಳದ ಅಲ್ಲಲ್ಲಿ, ದೊಡ್ಡ-ದೊಡ್ಡ ಬಿಲ್ ಬೋರ್ಡ್‌ಗಳಲ್ಲಿ, ಬ್ಯಾನರ್‌ಗಳಲ್ಲಿ, ಡಾಬರ್ ರೆಡ್ ಟೂತ್‌ಪೇಸ್ಟ್‌ನ ಚಿತ್ರವನ್ನು ಹಾಕಿ, ಅದರ ಅಡಿಯಲ್ಲಿ 'ಕುಂಭಸ್ನಾನಕ್ಕಿಂತ ಮೊದಲು ಡಾಬರ್ ದಂತಸ್ನಾನ' ಎಂಬ ಸಾಲನ್ನು ಬರೆದಿದ್ದರು. ಅಲ್ಲಲ್ಲಿ ಡಾಬರ್ ಪೇಸ್ಟ್‌ನ ವಿತರಣೆಯ ವ್ಯವಸ್ಥೆಯನ್ನೂ ಮಾಡಿದ್ದರು.

ಹಳೆಯ ಹಿಂದಿ ಸಿನಿಮಾಗಳಲ್ಲಿ, ಬಾಲ್ಯದಲ್ಲಿ ಇಬ್ಬರು ಸಹೋದರರು ಬೇರೆಯಾದರೆ ಅದಕ್ಕೆ ಕುಂಭಮೇಳ ಕಾರಣವಾಗಿರುವುದನ್ನು ನೀವು ನೋಡಿರಬಹುದು. ಬ್ರೂಕ್‌ಬಾಂಡ್ ರೆಡ್ ಲೇಬಲ್ ಚಹಾ ಕಂಪನಿಯವರು ಇಂಥದ್ದೇ ಸನ್ನಿವೇಶವನ್ನು ಇಟ್ಟುಕೊಂಡು ಒಂದು ಜಾಹೀರಾತು ನಿರ್ಮಿಸಿದ್ದರು. ಆ ಜಾಹೀರಾತಿನಲ್ಲಿ, ಅಪ್ಪ ಮತ್ತು ಮಗ ಮೇಳಕ್ಕೆ ಹೋಗುತ್ತಾರೆ. ಅಪ್ಪನನ್ನು ಕುಂಭಮೇಳದಲ್ಲಿ ಬಿಟ್ಟು ಬರುವ ಉದ್ದೇಶ ಮಗನದ್ದಾಗಿರುತ್ತದೆ. ಹೆಚ್ಚು ಜನರು ಇರುವ ಪ್ರದೇಶಕ್ಕೆ ಮಗ ತನ್ನನ್ನು ಕರೆದುಕೊಂಡು ಹೋಗುತ್ತಿರುವುದನ್ನು ಕಂಡ ಅಪ್ಪ, 'ಅಲ್ಲಿ ಬಹಳ ಜನರಿದ್ದಾರೆ ಮಗ' ಎಂದು ಹೇಳುತ್ತಾನೆ. ಆಗ ಮಗ, 'ಕುಂಭಮೇಳದಲ್ಲಿ ಜನರು ಎಲ್ಲಾ ಕಡೆ ಇರುತ್ತಾರೆ, ಬನ್ನಿ ಹೋಗೋಣ' ಎಂದು ಕರೆದುಕೊಂಡು ಹೋಗುವಾಗ, ತನ್ನ ಕೈ ಹಿಡಿದಿದ್ದ ಅಪ್ಪನಿಂದ ತಪ್ಪಿಸಿಕೊಂಡು ಬೇರೆ ಆಗುತ್ತಾನೆ. ಬಿಟ್ಟುಹೋದ ಮಗನನ್ನು ಹುಡುಕುವ ಅಪ್ಪ ಒಂದು ಕಡೆಯಾದರೆ, ಅಪ್ಪನಿಂದ ತಪ್ಪಿಸಿಕೊಂಡು ದೂರವಾದ ಮಗ ಇನ್ನೊಂದು ಕಡೆ ನಡೆಯುತ್ತಿರುತ್ತಾನೆ. ವ್ಯಕ್ತಿಯೊಬ್ಬ ತನ್ನ ಸಣ್ಣ ಮಗನ ಕೈಗೆ ಶಾಲನ್ನು ಕಟ್ಟುತ್ತಾ, 'ಮಗೂ, ಇಲ್ಲಿ ಬಹಳ ಜನರಿದ್ದಾರೆ, ನೀನು ಕಳೆದುಹೋಗಬಾರದು ಎಂದು ನಮ್ಮಿಬ್ಬರ ಕೈಗಳನ್ನೂ ಶಾಲಿನಲ್ಲಿ ಕಟ್ಟುತ್ತೇನೆ' ಎಂದು ಹೇಳುವ ದೃಶ್ಯ ಕಾಣುತ್ತದೆ. ಅದನ್ನು ನೋಡಿದ ಮಗನಿಗೆ ತನ್ನ ಬಾಲ್ಯದಲ್ಲಿ ತನ್ನ ತಂದೆಯೂ ಹೀಗೇ ಮಾಡಿದ ಸನ್ನಿವೇಶ ನೆನಪಾಗುತ್ತದೆ. ಮರುಗಿದ ಮಗ ಅಪ್ಪನನ್ನು ಹುಡುಕುವ ಕೆಲಸಕ್ಕೆ ತೊಡುಗುತ್ತಾನೆ. ಕೊನೆಗೆ ಅಪ್ಪ ಒಂದು ಕಡೆ ಕುಳಿತಿರುವುದನ್ನು ಕಂಡು ಅವನ ಪಕ್ಕದಲ್ಲಿ ಹೋಗಿ ಕುಳಿತುಕೊಳ್ಳುತ್ತಾನೆ. 'ಎಲ್ಲಿಗೆ ಹೋಗಿದ್ದೆ ಮಗ?' ಎಂದು ಅಪ್ಪ ಕೇಳುತ್ತಾನೆ. 'ಕಳೆದುಹೋಗಿದ್ದೆ ಅಪ್ಪ' ಎಂದು ಮಗ ಉತ್ತರಿಸುತ್ತಾನೆ. ಅಷ್ಟರಲ್ಲಿ ಒಬ್ಬ ಎರಡು ಕಪ್ ಚಹಾ ತೆಗೆದುಕೊಂಡು ಬರುತ್ತಾನೆ. ಅಪ್ಪ ಅದನ್ನು ಎತ್ತಿಕೊಂಡು, ಒಂದು ಕಪ್ ಮಗನ ಕೈಗೆ ಕೊಡುತ್ತಾ ಹೇಳುತ್ತಾನೆ, 'ನಾನು ಎರಡು ಕಪ್ ಚಹಾ ಹೇಳಿದ್ದೆ. ನೀನು ಬಂದೇ ಬರುತ್ತೀಯ ಎಂದು ನನಗೆ ಗೊತ್ತಿತ್ತು, ಕುಡಿ' ಎಂದು ನಗುತ್ತಾ ಹೇಳುತ್ತಾನೆ. ಮಗ ಕೇಳುತ್ತಾನೆ, 'ಅಪ್ಪ, ನಮ್ಮಿಬ್ಬರ ಕೈಯನ್ನು ಕಟ್ಟಿಕೊಳ್ಳೋಣವೆ?'.. ಅಲ್ಲಿಗೆ ಜಾಹೀರಾತು ಮುಗಿದು ಎರಡು ಸಾಲುಗಳು ಕಾಣಿಸಿಕೊಳ್ಳುತ್ತವೆ. 'ಕುಂಭಮೇಳ ಪ್ರಪಂಚದ ಅತಿ ದೊಡ್ಡ ಧಾರ್ಮಿಕ ಸಮ್ಮೇಳನವಾಗಿದ್ದು, ಇಲ್ಲಿ ಅನೇಕ ವೃದ್ಧರನ್ನು ಅವರ ಕುಟುಂಬದವರು ಬಿಟ್ಟು ಹೋಗುತ್ತಾರೆ. ಈ ಕುಂಭಮೇಳದಲ್ಲಿ ನಮ್ಮನ್ನು ನಾವಾಗಿಸಿದವರ ನಮ್ಮವರ ಕೈಗಳನ್ನು ಹಿಡಿಯೋಣ!'

ಇನ್ನೊಂದು, ಉಜ್ಜಯಿನಿಯಲ್ಲಿ ನಡೆದ 2016ರ ಕುಂಭಮೇಳದ ಜಾಹೀರಾತು. ತೆರೆಯ ಮೇಲೆ, 'ಕುಂಭಮೇಳವು ಜಗತ್ತಿನಲ್ಲಿ ಅತಿ ದೊಡ್ಡ ಮಾನವ ಸಭೆಯಾಗಿದ್ದು, ಹತ್ತು ಕೋಟಿಗೂ ಹೆಚ್ಚು ಭಕ್ತರು ದೇವರನ್ನು ಹುಡುಕಲು ಇಲ್ಲಿಗೆ ಬರುತ್ತಾರೆ' ಎಂಬ ಸಂದೇಶದಿಂದ ಆರಂಭವಾಗುತ್ತದೆ. ಎಷ್ಟೇ ಒಟ್ಟಿಗೆ ಇರಲು ಪ್ರಯತ್ನಿಸಿದರೂ ಕೆಲವರು ಇಲ್ಲಿ ಕಳೆದು ಹೋಗುತ್ತಾರೆ' ಎಂಬ ಸಾಲಿನ ನಂತರ ಕುಂಭಮೇಳದಲ್ಲಿ ಕಳೆದುಹೋದವರ ಸಂಖ್ಯೆಯನ್ನು ಹೇಳುವ ಪತ್ರಿಕಾ ವರದಿಯ ತುಣುಕುಗಳು ತೆರೆಯ ಮೇಲೆ ಬರುತ್ತವೆ. ಅದರ ಬೆನ್ನಲ್ಲೇ, 'ಭಾರತದ ದೊಡ್ಡ ಸಂಸ್ಥೆಯೊಂದು ಜನಸಂದಣಿಯಲ್ಲಿ ಭಕ್ತರು ಬೇರ್ಪಡದಂತೆ ಸಹಾಯಮಾಡಲು ಸಹಕರಿಸುತ್ತಿದೆ' ಎಂಬ ವಾಕ್ಯದೊಡನೆ 'ಫೆವಿಕಾಲ್' ಎಂಬ ಪದಗಳು ಮೂಡುತ್ತವೆ. ಜತೆಗೆ, ಹಳದಿ ಬಣ್ಣದ ಒಂದೇ ಟೀ-ಶರ್ಟ್ ಅನ್ನು ಇಬ್ಬರು ಅಥವಾ ಮೂವರು ತೊಟ್ಟುಕೊಂಡು ಓಡಾಡುವುದು ಕಾಣಿಸುತ್ತದೆ. ಮೂರು ಜನರನ್ನು ಒಟ್ಟಿಗೇ ಹಿಡಿದಿಟ್ಟುಕೊಂಡ ಒಂದೇ ಅಂಗಿಯ ಮುಂದುಗಡೆ ಇಂಗ್ಲಿಷ್‌ನಲ್ಲಿ, 'ವಿ ವಿಲ್ ಸ್ಟಿಕ್ ಟುಗೆದರ್' ಅಥವಾ ಹಿಂದಿಯಲ್ಲಿ 'ಹಮ್ ಜುಡೇ ರಹೇಂಗೆ' (ನಾವು ಒಟ್ಟಿಗೇ ಇರುತ್ತೇವೆ) ಎಂಬ ಸಂದೇಶವಿರುತ್ತದೆ. ಅಂಗಿಯ ಹಿಂದೆ, 'ಫೆವಿಕಾಲ್' (ಅಂಟು ತಯಾರಿಸುವ ಕಂಪನಿ) ಹೆಸರು ಕಾಣುತ್ತದೆ.

ಇನ್ನು, ಕುಂಭಮೇಳಕ್ಕೆ ಬರುವ ಜನರಲ್ಲಿ ಶೇಕಡ 75ರಷ್ಟು ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರು ಎಂಬುದನ್ನು ಕಂಪನಿಗಳು ಅರ್ಥ ಮಾಡಿಕೊಂಡಿವೆ. ಆದರೆ, ಇಡೀ ಅಮೆರಿಕದ ಒಟ್ಟೂ ಜನಸಂಖ್ಯೆಯ ಎರಡು ಪಟ್ಟು ಜನ, ನಮ್ಮ ದೇಶದ ನಲವತ್ತು ಪ್ರತಿಶತ ಜನ ಒಂದೇ ಕಡೆ ಸಿಗುತ್ತಾರೆ ಎಂದರೆ ಯಾರು ಬಿಟ್ಟಾರು? ಯಾಕೆ ಬಿಟ್ಟಾರು? ಆದ್ದರಿಂದ ಇಂದು ದೊಡ್ಡ-ದೊಡ್ಡ ಕಂಪನಿಗಳು ಬಿಲ್‌ಬೋರ್ಡ್‌ನಿಂದ ಕೆಳಗೆ, ಬೀದಿಗೆ ಇಳಿದಿವೆ. ಮೇಳಕ್ಕೆ ಬಂದು-ಹೋಗುವ ಜನರ ಕೈಗೆಟುಕುವಂತೆ ಆಗಿವೆ. ಕಂಪನಿಗಳು ಕೇವಲ ಜಾಹೀರಾತುಗಳಿಗಷ್ಟೇ ಸೀಮಿತವಾಗದೆ, ಬೇರೆ ಬೇರೆ ಬಗೆಯ ಪ್ರಚಾರ ವಿಧಾನ ಮತ್ತು ಸ್ಯಾಂಪಲ್ ನೀಡುವುದಕ್ಕಾಗಿಯೇ ಕೋಟಿಗಟ್ಟಲೆ ಹಣವನ್ನು ಮೀಸಲು ಇಡುತ್ತಿವೆ. ಅಂದಹಾಗೆ, ಜಾಹೀರಾತು ನೀಡುವುದರಲ್ಲಿ, ಪ್ರಚಾರ ಕೈಗೊಳ್ಳುವುದರಲ್ಲಿ ಸರಕಾರಗಳೂ ಹಿಂದೆ ಬಿದ್ದಿಲ್ಲ. ಈ ಬಾರಿಯ ಕುಂಭಮೇಳ ಇಷ್ಟು ಯಶಸ್ವಿಯಾಗುವುದಕ್ಕೆ ಪ್ರಚಾರವೂ ಒಂದು ಕಾರಣ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ.

ಕೊನೆಯದಾಗಿ, ಕುಂಭಮೇಳದಂಥ ಧಾರ್ಮಿಕ ಕೇಂದ್ರಗಳಲ್ಲಿ ಜಾಹೀರಾತು ನೀಡುವಾಗ ಬಹಳ ಎಚ್ಚರಿಕೆ ಅಗತ್ಯ. ಜಾಹೀರಾತು ಒಳ್ಳೆಯದಾಗಿದ್ದರೆ, ಒಳ್ಳೆಯ ರೀತಿಯಲ್ಲಿ ಏಕಕಾಲದಲ್ಲಿ ಕೋಟ್ಯಂತರ ಜನರನ್ನು ತಲುಪುತ್ತದೆ. ಅದೇ ಕೆಟ್ಟದಾಗಿದ್ದು, ಜನರ ಭಾವನೆಯನ್ನು ಘಾಸಿಗೊಳಿಸುವಂತಿದ್ದರೆ? ಜಾಹೀರಾತಿನಿಂದ ವರ್ಷಗಟ್ಟಲೆ ಹೆಸರು ಗಳಿಸಿದ ಕಂಪನಿಯ ಕಥೆ ಹರೋಹರ..! ಅಲ್ಲದೆ, ಕೆಲವು ಜಾಹೀರಾತು ತಯಾರಿಕೆಯ ಹಿಂದೆ ವರ್ಷಗಳ ಪ್ರಯತ್ನವಿರುತ್ತದೆ. 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಎಂಬ ಮಾತಿದೆ. ಅದೇರೀತಿ, 'ಜಾಹೀರಾತಿಗೆ ವರುಷ, ಕುಂಭಕ್ಕೆ ನಿಮಿಷ!' ಆದರೂ, ಕುಂಭಮೇಳ ಜಾಹೀರಾತಿನ ಮೇಳವೂ ಹೌದು!



ನಾರದ ಸಂಚಾರ
ಕಲಹಪ್ರಿಯ
naadigru@gmail.com

ಕಲಬೆರಕೆ ದುನಿಯಾ ಇದು...

'ಮದರಂಗಿಯಲ್ಲಿ ಮನಸಿನ ರಂಗು ತುಂಬಿದೇ..' ಎಂಬ ಜನಪ್ರಿಯ ಚಿತ್ರಗೀತೆಯನ್ನು ಮತ್ತೆ ಮತ್ತೆ ಗುನುಗುತ್ತಿದ್ದವರು, ತಮ್ಮ ಆ ಧಾಟಿ ಮತ್ತು ಧೋರಣೆಯನ್ನು ಬದಲಿಸಿಕೊಳ್ಳಬೇಕಾಗಿ ಬಂದಿದೆ. ಕಾರಣ, ಮದರಂಗಿಯಲ್ಲಿ ಕ್ಯಾನ್ಸರ್‌ಕಾರಕ ಅಂಶಗಳು ಪತ್ತೆಯಾಗಿವೆ. ಈ ಮಾಹಿತಿಯ ಹಿನ್ನೆಲೆಯಲ್ಲಿ 'ಅದರಲ್ಲಿರೋದು ಕ್ಯಾನ್ಸರ್ ರಂಗು ಕಣ್ರೀ, ಮನಸಿನ ರಂಗು ಅಲ್ಲ' ಎಂಬ ತಿದ್ದುಪಡಿ ಮಾಡಿಕೊಳ್ಳಬೇಕಾಗಿ ಬಂದಿದೆ.

ಮೆಹಂದಿ ಅಥವಾ ಮದರಂಗಿಯು ತ್ವಚೆಯ ಸ್ವಾಸ್ಥ್ಯಕ್ಕೆ ಮತ್ತು ಸೌಂದರ್ಯಕ್ಕೆ ಮತ್ತಷ್ಟು ಇಂಬುಕೊಡುವ ಉತ್ಪನ್ನವೇನೋ ಹೌದು; ಆದರೆ ಆ ಹೆಸರಿನಲ್ಲಿ ಕೆಲವರು ಮಾರುತ್ತಿರುವ ಕಳಪೆ ಸರಕಿನಿಂದಾಗಿ, ಮದರಂಗಿಯ ಪರಿಕಲ್ಪನೆಗಿರುವ ರಂಗು ಮಸುಕಾಗುವಂತಾಗಿದೆ. ಮೆಹಂದಿ ಹಣೆಪಟ್ಟಿಯ ಕೆಲ ಉತ್ಪನ್ನಗಳಲ್ಲಿ ರಾಸಾಯನಿಕ/ಕ್ಯಾನ್ಸರ್‌ಕಾರಕ ಅಂಶಗಳು ಪತ್ತೆಯಾಗಿರುವುದರಿಂದ ಚರ್ಮದಲ್ಲಿ ಕೆರೆತ, ಅಲರ್ಜಿ, ಗಾಯಗಳಂಥ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆಯಂತೆ. ಇವೆಲ್ಲಾ ಕಲಬೆರಕೆ ಸಾಮ್ರಾಟರ ಕೈಚಳಕ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಕಾಫಿಪುಡಿಗೆ ಹುರಿದ ಹುಣಿಸೇಬೀಜದ/ಉತ್ತುತ್ತೆ ಬೀಜದ ಪುಡಿ, ಧನಿಯಾ ಪುಡಿಗೆ ಕುದುರೆಯ ಲದ್ದಿ, ಕರಿ ಮೆಣಸಿನ ಕಾಳಿಗೆ ಪಪ್ಪಾಯಿ ಬೀಜ, ಒಗ್ಗರಣೆಗೆ ಹಾಕೋ ಸಾಸಿವೆಯಲ್ಲಿ ರಾಗಿಕಾಳು ಹೀಗೆ ಬೆರಕೆ ಮಾಡೋ ಮೂಲಕ ಕಲಬೆರಕೆಯ ಆಸಾಮಿಗಳು ಆಡುತ್ತಿರುವ ಆಟಗಳು ಒಂದೆರಡಲ್ಲ. ಅವುಗಳ ಸಾಲಿಗೆ ಮದರಂಗಿಯೂ ಸೇರಿಕೊಂಡಿರುವುದು ಈಗ ಗೊತ್ತಾಗಿದೆಯಷ್ಟೇ!

ಈ ಕಲಬೆರಕೆ ಕಥಾನಕಗಳನ್ನು ಓದಿದಾಗ, ಪುಟ್ಟ ಪ್ರಸಂಗವೊಂದು ನೆನಪಾಗುತ್ತೆ. ಜೀವನದಲ್ಲಿ ತೀರಾ ಜುಗುಪ್ಸೆ ಹೊಂದಿದ ಆಸಾಮಿಯೊಬ್ಬ ಆತ್ಮಹತ್ಯೆ ಮಾಡಿಕೊಳ್ಳಲೆಂದು ಕಟುವಿಷವನ್ನು ಗಟಗಟನೆ ಕುಡಿದು ಬಿಟ್ಟನಂತೆ. ಹಾಗೆ ಕುಡಿಯುವಾಗ, ''ಅಬ್ಬಾ, ಎಲ್ಲಾ ಟೆನ್ಷನ್ ಮಟಾಷ್, ಇನ್ಮೇಲೆ ನಾನು ಈ ಭೂಮಿ ಮೇಲೇ ಇರಲ್ಲ. ಸಮಸ್ಯೆಗಳೆಲ್ಲಾ ಫಿನಿಷ್'' ಎಂದೇ ಕಲ್ಪಿಸಿಕೊಂಡು ಮನದಲ್ಲೇ ವಿಲಕ್ಷಣವಾಗಿ ಸುಖಿಸುತ್ತಿದ್ದನಂತೆ. ಆದರೆ ವಿಷದ ಬಾಟಲಿಯನ್ನು ಖಾಲಿ ಮಾಡಿ ಸಾಕಷ್ಟು ಹೊತ್ತಾದರೂ 'ಢರ್' ಎಂದು ತೇಗು ಬಂತೇ ವಿನಾ, ಆತ ಸಾಯಲಿಲ್ಲ...

ಕಾರಣ ಗೊತ್ತೇ? ಆ ವಿಷವೂ ಕಲಬೆರಕೆಯಾಗಿತ್ತು, ತನ್ನ ಮೂಲಗುಣವನ್ನು ಅದು ಕಳೆದುಕೊಂಡಿತ್ತು!

ನದೀ ಸ್ನಾನದಿಂದ ಪುಣ್ಯಪ್ರಾಪ್ತಿ ಸಾಧ್ಯವೇ?



ವಿಶ್ಲೇಷಣೆ
ಡಾ. ಕೆ.ಪಿ. ಪುತ್ತೂರಾಯ
vveditoped@gmail.com

ನಮ್ಮ ದೇಶದಲ್ಲಿ ಜನರು ತರತರಹದ ನಂಬಿಕೆಗಳನ್ನಿಟ್ಟುಕೊಂಡಿದ್ದಾರೆ. ನಂಬಿಕೆಗಳೆಂದರೆ ದೃಢ ವಿಶ್ವಾಸಗಳೆಂದರ್ಥ. ನಂಬಿಕೆಗಳಿಗೆ ವೈಜ್ಞಾನಿಕವಾದ ವಿವರಣೆ ಮತ್ತು ಆಧಾರವಿದ್ದರೆ ಮಾತ್ರ ಅದು ಸಾರ್ವಕಾಲಿಕವಾಗಿ ಎಲ್ಲರಿಂದಲೂ ಬಲು ಶೀಘ್ರ ಸ್ವೀಕೃತಗೊಳ್ಳುತ್ತದೆ ಹಾಗೂ ಆಚರಿಸಲ್ಪಡುತ್ತದೆ. ಆದರೆ ಯಾವ ನಂಬಿಕೆಗಳು ಕಪೋಲಕಲ್ಪಿತವೋ ಅವು 'ಮೂಢನಂಬಿಕೆ' ಎಂಬ ಹಣೆಪಟ್ಟಿ ಪಡೆದು, ವಿದ್ಯಾವಂತರ, ವಿಚಾರವಂತರ ಪಟ್ಟಿಯಿಂದ ಹೊರಬೀಳುತ್ತವೆ.

''ಪ್ರಶ್ನಿಸಬೇಡ, ಸುಮ್ಮನೆ ಆಚರಿಸು'' ಎನ್ನುತ್ತದೆ ಮೂಢನಂಬಿಕೆ. ಆದರೆ ''ಪ್ರಶ್ನಿಸು, ಸರಿ ಎಂದರೆ ಮಾತ್ರ ಆಚರಿಸು'' ಎಂದು ಹೇಳುತ್ತದೆ ವಿಜ್ಞಾನ. ''ನಂಬಿದವರಿಗೆ ಕಲ್ಲು ಕೂಡಾ ದೇವರೇ; ನಂಬದವರಿಗೆ ದೇವರು ಕೂಡಾ ಕಲ್ಲೇ'' ಎಂಬುದು ಇನ್ನೊಂದು ಮಾತು. ಅಂಥ ನಂಬಿಕೆಗಳ ಪೈಕಿ 'ಪರ್ವಕಾಲದಲ್ಲಿ ಪವಿತ್ರ ನದಿಗಳಲ್ಲಿ ಮಿಂದೆದ್ದರೆ, ನಮ್ಮ ಪಾಪಗಳೆಲ್ಲಾ ತೊಳೆದು ಹೋಗಿ ಪುಣ್ಯ ಪ್ರಾಪ್ತಿಯಾಗುತ್ತದೆ' ಎಂಬುದೂ ಒಂದು. ಈ ನಂಬಿಕೆಯ ಆಧಾರದ ಮೇಲೆಯೇ, ಕುಂಭಮೇಳ ಕಾಲದಲ್ಲಿ ಗಂಗೆ-ಯಮುನೆ-ಸರಸ್ವತಿ ಪವಿತ್ರ ನದಿಗಳು ಒಂದೇ ಕಡೆ ಸೇರುವ ತ್ರಿವೇಣಿ ಸಂಗಮದಲ್ಲಿ ಕೋಟ್ಯಂತರ ಜನರು ಪುಣ್ಯಸ್ನಾನ ಮಾಡಿ ತಾವು ಪಾಪಮುಕ್ತರಾಗಿ ಪುನೀತರಾದೆವು ಎಂದು ಭಾವಪರವಶರಾಗುತ್ತಾರೆ.

ಮೂಲತಃ ಭಾರತೀಯರು ಪ್ರಕೃತಿ ಆರಾಧಕರು. ನಮಗೆ ಪ್ರಾಣಜಲವಾಗಿ, ನಮ್ಮ ಬೆಳೆಗಳಿಗೆ ಪೋಷಕ ಅಂಶವಾಗಿ, ಜನಜೀವನಕ್ಕೆ ಆಧಾರವಾಗಿರುವ ಪವಿತ್ರ ನದಿಗಳನ್ನು ಪೂಜಿಸಿ ಅದರ ನೀರಿನಲ್ಲಿ ಮಿಂದೆದ್ದು ಮೋಕ್ಷದತ್ತ ಮುಖ ಮಾಡುವುದು ನಮ್ಮ ಆಚರಣೆ ಹಾಗೂ ಸಂಪ್ರದಾಯ. ವಾಸ್ತವದಲ್ಲಿ ನದೀ ಸ್ನಾನದಿಂದ ಮಾತ್ರ ಪಾಪಗಳ ಪರಿಹಾರ, ಪುಣ್ಯಪ್ರಾಪ್ತಿ ಸಾಧ್ಯವೇ ಎಂಬುದು ಒಂದು ವೈಜ್ಞಾನಿಕ ಪ್ರಶ್ನೆ; ಸಾಧ್ಯವೆಂಬುದು ಒಂದು ಧಾರ್ಮಿಕ ನಂಬಿಕೆ. ಮೂಢನಂಬಿಕೆಗಳ ವಿರುದ್ಧ ನೂರಾರು ದಾರ್ಶನಿಕರು, ದಾಸರು ನಮ್ಮನ್ನು ಬಡಿದೆಬ್ಬಿಸಿದ್ದುಂಟು. ದಾಸವರೇಣ್ಯ ಪುರಂದರದಾಸರೆಂದರು ''ಉದಯಕಾಲದೊಳೆದ್ದು ಗಡಗಡ ನಡುಗುತ ನದಿಯಲ್ಲಿ ಮಿಂದೆವೆಂದು ಹಿಗ್ಗುತಲಿ, ಮದ ಮತ್ಸರ ಕ್ರೋಧವ ಒಳಗೆ ತುಂಬಿಟ್ಟುಕೊಂಡು ಬಳಿಯಲಿದ್ದವರಿಗಾಶ್ಚರ್ಯವ ತೋರುವುದು; ಕೊರಳೊಳು ಮಾಲೆಯ ಧರಿಸಿದರೇನು? ಬೆರಳೊಳು ಜಪಮಣಿ ತಿರುಹಿದರೇನು? ತಾ ಬದಲಾಗದ ತನಕ!''. ಮುಂದುವರಿಸುತ್ತಾ ದಾಸರು ಹೇಳಿದರು- ''ಬಟ್ಟೆಯ ನೀರೊಳಗದ್ದಿ ಉಟ್ಟುಕೊಂಡರೆ, ಅದು ಮಡಿಯಲ್ಲ; ಹೊಟ್ಟೆಯೊಳಗಿನ ಕಾಮ ಕ್ರೋಧ ಮದ ಮತ್ಸರವ ಬಿಟ್ಟು ನಡೆದರೆ ಅದು ಮಡಿಯು!''. ಅವರು ಅಂಧವಿಶ್ವಾಸಗಳನ್ನು ಪ್ರಶ್ನಿಸಿದ್ದು ಹೀಗೆ- ''ಮನಶುದ್ಧಿ ಇಲ್ಲದವಗೆ ಮಂತ್ರದ ಫಲವೇನು? ತನುಶುದ್ಧಿ ಇಲ್ಲದವಗೆ ತೀರ್ಥದ ಫಲವೇನು? ಮಿಂದಲ್ಲಿ ಫಲವೇನು ಮೀನು ಮೊಸಳೆಯಂತೆ! ಹೊರಗೆ ಮಿಂದು ಒಳಗೆ ಮೀಯದವರ ಕಂಡು ಬೆರಗಾಗಿ ನಗುತ್ತಿದ್ದ ಪುರಂದರ ವಿಠಲ''. ಇಷ್ಟಕ್ಕೇ ನಿಲ್ಲಿಸದೆ ಮಾನಸಿಕ ಮಡಿವಂತಿಕೆ ಇಲ್ಲದ ಡಂಭಾಚಾರಿಗಳನ್ನು ಬೈದೇ ಬಿಟ್ಟರು- ''ಮಡಿ ಮಡಿ ಮಡಿ ಎಂದು ಮೂರ್ಮಾರು ಹಾರುತಿಹೆ ಮಡಿ ಎಲ್ಲಿ ಬಂತೋ ಬಿಕನಾಶಿ? ಮಡಿಯು ನೀನೆ, ಮೈಲಿಗೆಯು ನೀನೇ, ಸುಡಲಿ ನಿನ್ನ ಮಡಿ ಬಿಕನಾಶಿ?''.

ಇಷ್ಟೆಲ್ಲಾ ಉಪದೇಶಗಳಿದ್ದರೂ ಜನ ನದೀಸ್ನಾನ ಮಾಡುವುದನ್ನ ನಿಲ್ಲಿಸಲಿಲ್ಲ! ಮುಂದಕ್ಕೂ ನಿಲ್ಲಿಸೋದಿಲ್ಲ. ಹಾಗಂತ ನದೀಸ್ನಾನಗಳು ಅನಗತ್ಯ, ಸಂಪೂರ್ಣ ವ್ಯರ್ಥವೆಂದು ಹೇಳಲಾಗದು. ವೈಜ್ಞಾನಿಕವಾಗಿ ನೋಡಿದರೆ ನೀರು ಸ್ವಚ್ಛವಾಗಿದ್ದಲ್ಲಿ ನದೀಸ್ನಾನ ಆರೋಗ್ಯವರ್ಧಕವೂ ಹೌದು, ಉಲ್ಲಾಸದಾಯಕವೂ ಹೌದು. ಕಾರಣ ಬೆಟ್ಟ ಪರ್ವತಗಳಲ್ಲಿ ಹುಟ್ಟಿ ಹರಿಯುವ ಈ ನೀರಿನಲ್ಲಿ ಖನಿಜಾಂಶಗಳು, ಗಿಡಮೂಲಿಕೆಗಳೇ ಮುಂತಾದ ಔಷಧೀಯ ಗುಣಗಳಿರುತ್ತವೆ. ಆದರೆ ಸಹಸ್ರಾರು ಜನರು ಸ್ನಾನ ಮಾಡಿದ, ಎಣ್ಣೆ ಜಿಡ್ಡು ಹೊಂದಿ, ಕೊಳೆ, ಕ್ರಿಮಿ-ಕೀಟ, ರೋಗಾಣುಗಳನ್ನು ಹೊಂದಿದ, ಹರಿಯದೆ ಕಲುಷಿತವಾಗಿ ನಿಂತ ನೀರಲ್ಲಿ ಸ್ನಾನ ಮಾಡಿದರೆ ಚರ್ಮರೋಗಗಳನ್ನು, ವ್ಯಾಧಿಗಳನ್ನು ಆಹ್ವಾನಿಸಿಕೊಂಡಂತೆ. ಇಷ್ಟಕ್ಕೂ ಬರೇ ಮೈಕೈಗಳನ್ನು ತೊಳೆದುಕೊಂಡ ಮಾತ್ರಕ್ಕೆ ಗೈದ ಪಾಪಗಳೆಲ್ಲಾ ಹೋಯಿತು, ಪುಣ್ಯ ಸಂಪಾದನೆಯಾಗಿ ನಾವು ಪರಿಶುದ್ಧರಾದೆವು ಎಂಬುದು ಒಂದು ತಪ್ಪು ಕಲ್ಪನೆ. ಮೈಯ ಸ್ನಾನದ ಜತೆ ಆತ್ಮಸ್ನಾನವೂ ನಡೆಯಬೇಕು; ಆತ್ಮಶುದ್ಧಿಯೂ ಆಗಬೇಕು. ಈ ಸತ್ಯವನ್ನೇ ''ಮುಸುರೆ ತೊಳೆಯಬೇಕು. ಈ ಮನದಾ ಮುಸುರೆ ತೊಳೆಯಬೇಕು'' ಎಂಬುದಾಗಿ ದಾಸರು ಸೂಚಿಸಿದರು. ಕಾರಣ ಮನುಷ್ಯನ ಮನಸ್ಸು ಗುಣದ ತೊಟ್ಟಿಲೂ ಆಗಬಹುದು, ಕಸದ ತೊಟ್ಟಿಯೂ ಆಗಬಹುದು. ಇದೇ ಸತ್ಯವನ್ನೇ ಕನಕದಂಥ ಕನಕದಾಸರು ಪುನರುಚ್ಚರಿಸಿದರು- ''ಮನವ ಶೋಧಿಸಬೇಕು ನಿಚ್ಚ; ದಿನ ದಿನವೂ ಮಾಡುವ ಪಾಪ ಪುಣ್ಯಗಳ ಲೆಕ್ಕ''.

ಈ ಹಿನ್ನೆಲೆಯಲ್ಲಿ ನದೀಸ್ನಾನಗಳ ಸಂಪೂರ್ಣ ಪ್ರಯೋಜನವನ್ನು ಪಡೆಯಬೇಕಾದರೆ, ಶಾರೀರಿಕ ಸ್ನಾನದ ಜತೆ ಆಂತರಿಕವಾಗಿಯೂ ಪರಿಶುದ್ಧರಾಗಿರಬೇಕು; ಇದಕ್ಕೆ ಬೇಕು ನಿತ್ಯ ನಮಗೆರಡು ಸ್ನಾನಗಳು- ಒಂದು ಮೈಸ್ನಾನ, ಇನ್ನೊಂದು ಆತ್ಮಸ್ನಾನ. ಇದನ್ನು ನಾವು ನಾವೇ ನಡೆಸಿಕೊಳ್ಳಬೇಕಾದ ಸ್ವಯಂ ಮೌಲ್ಯಮಾಪನ ಇಲ್ಲವೇ ಆತ್ಮಾವಲೋಕನವೆನ್ನಬಹುದು. ಏಕೆಂದರೆ ನಮ್ಮ ಬಗ್ಗೆ ನಮಗೇ ಗೊತ್ತಿರುವಷ್ಟು ಇನ್ಯಾರಿಗೂ ತಿಳಿಯದು. ಮೇಲಾಗಿ ನಾವ್ಯಾರೂ ಸಂಪೂರ್ಣವಾಗಿ ಶತ ಪ್ರತಿಶತ ಪರಿಶುದ್ಧರಲ್ಲ, ಪರಿಪೂರ್ಣರಲ್ಲ. ಎಲ್ಲರಲ್ಲೂ ಏನಾದರೊಂದು ದೌರ್ಬಲ್ಯ, ದುರ್ಗುಣಗಳು ಇದ್ದೇ ಇದೆ. ಹಾಗೂ ಎಲ್ಲರೂ ಕೆಲವೊಮ್ಮೆ ಕೆಟ್ಟ ಕೆಲಸ, ತಪ್ಪು ಕೆಲಸಗಳನ್ನು ಮಾಡಿಯೇ ಮಾಡಿರುತ್ತಾರೆ. ಇದಕ್ಕೆ ಇರಬೇಕಾದ ಪಾಪಪ್ರಜ್ಞೆಯೂ ಮಾಡಿಕೊಳ್ಳಲೇಬೇಕಾದ ಪ್ರಾಯಶ್ಚಿತ್ತವೂ ನದೀಸ್ನಾನದ ಒಂದು ಕಾರ್ಯಕ್ರಮವಾಗಿರಬೇಕು. ಪಶ್ಚಾತ್ತಾಪವೇ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಪರಿ ಹೊರತು ಹೋಮ-ಹವನಗಳಲ್ಲ. ಅಂತೆಯೇ, ನದೀಸ್ನಾನಗಳು ನಾವು ಇದುವರೆಗೆ ಗೈದ ಪಾಪಗಳನ್ನು ಸಂಪೂರ್ಣವಾಗಿ ನಿವಾರಿಸಿ, ಮುಂದಕ್ಕೆ ಹೊಸ ಪಾಪಗಳನ್ನು, ಕೆಟ್ಟ ಕೆಲಸಗಳನ್ನು ಮಾಡಲು ಅನುಮತಿ/ಅವಕಾಶವನ್ನು ನೀಡಿದಂತೆಯೂ ಆಗೋದಿಲ್ಲ. ಆದುದರಿಂದ ಮುಂದಕ್ಕೆ ಏನೇ ಅಪಚಾರಗಳು ನಡೆಯದಂತೆ ಮಾಡಿಕೊಳ್ಳುವ ಸಂಕಲ್ಪವೇ, ಪ್ರತಿಜ್ಞೆಯೇ ನದೀಸ್ನಾನಗಳ ಭಾಗವಾಗಿರಬೇಕು. ಒಟ್ಟಿನಲ್ಲಿ ನಾವು ಗೈದ ಪಾಪಗಳು ಪ್ರಾಮಾಣಿಕವಾದ ಪಶ್ಚಾತ್ತಾಪದಿಂದ ಮತ್ತು ಮಹೋನ್ನತವಾದ ಸತ್-ಸಂಕಲ್ಪಗಳಿಂದ ನಿವಾರಣೆಗೊಳ್ಳಬೇಕೇ ಹೊರತು ಬರೀ ನದೀಸ್ನಾನಗಳಿಂದಲ್ಲ. ಅಂತೆಯೇ ಪುಣ್ಯವನ್ನು ಸತ್ಕಾರ್ಯಗಳಿಂದ ಸನ್ಮಾರ್ಗದಲ್ಲಿ ನಡೆಯುವುದರಿಂದ, ಸಮಾಜ ಸೇವೆಯಿಂದ ಪರೋಪಕಾರದಿಂದ ಪಡೆಯಬೇಕೇ ಹೊರತು ಬಡವರಿಗೆ ಎಸೆಯುವ ಭಿಕ್ಷೆಯಿಂದಲೂ ಅಲ್ಲ, ಪ್ರಚಾರಕ್ಕಾಗಿ ನಡೆಸುವ ದಾನ-ಧರ್ಮಗಳಿಂದಲೂ ಅಲ್ಲ, ಇಲ್ಲವೇ ನಡೆಸುವ ತೀರ್ಥಯಾತ್ರೆಗಳಿಂದಲೂ ಅಲ್ಲ. ತಾತ್ಪರ್ಯ ಇಷ್ಟೇ: ನದೀಸ್ನಾನಗಳು ಬಾಹ್ಯ ಶುದ್ಧಿಯ ಜತೆ ನಮ್ಮ ಅಂತರಂಗದ ಶುದ್ಧಿಗೂ ನೆರವಾಗಲಿ; ಅದರಲ್ಲಿ ನಮ್ಮ ಲೌಕಿಕ ಆಶಯಗಳೊಂದಿಗೆ ಧಾರ್ಮಿಕ ಭಕ್ತಿ-ಭಾವಗಳು, ನಂಬಿಕೆಗಳೂ ತುಂಬಿರಲಿ. ಆಗಲೇ ಅದು ಫಲಪ್ರದ. ಇದುವೇ ನಮ್ಮ ಸನಾತನ ಧರ್ಮದ ಸಂದೇಶ ಹಾಗೂ ಆಶಯ.

(ಲೇಖಕರು ಪ್ರಾಧ್ಯಾಪಕರು)

ಅಗಣಿತ ರಿಫ್ರೆಷರ್‌ಗಳ ನಡುವೆ ಕಂಗಾಲಾಗಿದ್ದಾರೆ ವಿದ್ಯಾರ್ಥಿಗಳು

ಕಳಕಳಿ
ಮಾಧುರಿ ಭಾವೆ
vveditoped@gmail.com

ಹೇಳಿ ಕೇಳಿ ಇದು ಪರೀಕ್ಷಾ ಸಮಯ. ಓದಿ ಓದಿ ಮಕ್ಕಳ ತಲೆಗೆ ಬಿಸಿಯೇರಿ ಬಿಡುವ ಕಾಲಘಟ್ಟವಿದು. ತರಹೇವಾರಿ ಪುಸ್ತಕಗಳು, ಪ್ರಶ್ನೆಪತ್ರಿಕೆಗಳು, ರಿಫ್ರೆಷರ್‌ಗಳು ಇತ್ಯಾದಿಗಳನ್ನು ಮುಂದೆ ಹರಡಿಕೊಂಡು, ಯಾವ ಯಾವ ಪುಸ್ತಕಗಳನ್ನು ಓದಬೇಕು ಎನ್ನುವ ಗೊಂದಲದಲ್ಲಿದ್ದಾರೆ ವಿದ್ಯಾರ್ಥಿಗಳು. ಈ ಪೈಕಿ ಕೆಲವರು ನೂರಕ್ಕೆ ನೂರು ಅಂಕಗಳನ್ನು ತೆಗೆಯಬೇಕೆಂಬ ದೃಢಸಂಕಲ್ಪ ಮಾಡಿದವರಾದರೆ, ಇನ್ನು ಕೆಲವರು ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿಸಲು ಮುಂದಾಗುವ ಜಾಯಮಾನದವರು. ಒಟ್ಟಿನಲ್ಲಿ, ಮಕ್ಕಳ ಮಸ್ತಕ ಮತ್ತು ಪುಸ್ತಕ ಗೊಂದಲದಲ್ಲಿ ಮುಳುಗಿವೆ. ಇಂಥ ಅತಂತ್ರ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ನೆನಪಾಗುವವರೇ ಅಧ್ಯಾಪಕ-ಅಧ್ಯಾಪಕಿಯರು.

''ಮೇಡಂ, ಯಾವ ರಿಫ್ರೆಷರ್ ರೆಫರ್ ಮಾಡಲಿ, ಅದನ್ನೋ ಅಥವಾ ಇದನ್ನೋ? ಕಳೆದ ಸಲ ಆ ರಿಫ್ರೆಷರ್‌ನಿಂದ ತುಂಬಾ ಪ್ರಶ್ನೆಗಳನ್ನು ಕೇಳಿದ್ದರು, ಅದರ ಹಿಂದಿನ ಸಲ ಈ ರಿಫ್ರೆಷರ್‌ನಿಂದ ಪ್ರಶ್ನೆಗಳನ್ನು ಕೇಳಿದ್ದರು; ಅವನು ಅದನ್ನ ಓದ್ತಾ ಇದ್ದಾನೆ, ಇವನು ಇದನ್ನ ಓದ್ತಾ ಇದ್ದಾನೆ. ಆ ಸ್ಕೂಲಿನವರು ಈ ಪುಸ್ತಕವನ್ನ ರೆಫರ್ ಮಾಡ್ತಾ ಇದ್ದಾರೆ. ನಾನೀಗ ಏನು ಮಾಡಲಿ?'' ಹೀಗೆ ಹತ್ತಾರು ಪ್ರಶ್ನೆಗಳ ಮೂಟೆಯನ್ನೇ ಹೊತ್ತು ತರುತ್ತಾರೆ ವಿದ್ಯಾರ್ಥಿಗಳು.

ಇಂಥ ವೇಳೆ ಶಿಕ್ಷಕರ ಅವಸ್ಥೆ ಹೇಳತೀರದು. ಏಕೆಂದರೆ, 'ಆ ಪುಸ್ತಕ ಓದಿ ಅಂತ ಹೇಳಿ, ಈ ಪುಸ್ತಕದಿಂದ ಪ್ರಶ್ನೆ ಬಂದರೆ? ಅದರಿಂದ ಮಕ್ಕಳಿಗೆ ತೊಂದರೆಯಾದರೆ?' ಎನ್ನುವ ಆಲೋಚನೆ ಅವರಿಗೆ. ನೂರಕ್ಕೆ ನೂರು ಅಂಕಗಳನ್ನು ತೆಗೆಯಬೇಕೆಂದುಕೊಂಡಿರುವ ಮಕ್ಕಳಿಗೆ ಸಲಹೆ ಕೊಡುವುದೂ ಕಷ್ಟ. ಅವರಿಗೆ ಯಾವ ರೀತಿಯ ಅನ್ಯಾಯವೂ ಆಗಬಾರದೆಂಬ ಕಳಕಳಿ. ಹೀಗೊಂದು ಗೊಂದಲದ ಗೂಡು ರೂಪುಗೊಂಡಿರುವಾಗ, ಯಾಕೆ ನೂರೆಂಟು ರಿಫ್ರೆಷರ್‌ಗಳನ್ನು ಮಾಡಿ ಮಕ್ಕಳ ಜೀವ ತಿಂತಾರೋ? ರಿಫ್ರೆಷರ್ ಎನ್ನುವುದೊಂದು ಮಾಫಿಯಾವೇ? ಶಿಕ್ಷಣ ಇಲಾಖೆಯವರೇ ಒಂದೆರಡು ಪುಸ್ತಕಗಳನ್ನು ಯಾಕೆ ಬಿಡುಗಡೆ ಮಾಡಬಾರದು? ಅದರಿಂದಲೇ ಕೆಲವು ಪ್ರಶ್ನೆಗಳನ್ನೇಕೆ ಕೇಳಬಾರದು? ಎಂಬುದು ಶಿಕ್ಷಕರ ಮನದಲ್ಲಿ ಸುಳಿದಾಡುವ ಪ್ರಶ್ನೆಗಳು.

ಶಿಕ್ಷಣ ಇಲಾಖೆಯು ಈ ವಿಷಯದ ಬಗ್ಗೆ ಗಮನಹರಿಸಬೇಕಿದೆ. ಈ ವಿಷಯವನ್ನು ಹಗುರವಾಗಿ ಪರಿಗಣಿಸದೇ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಹಲವು ಪುಸ್ತಕ ಪ್ರಕಾಶಕರು ಪೈಪೋಟಿಗೆ ಬಿದ್ದು, ಬಗೆಬಗೆಯ ಕ್ಲಿಷ್ಟ ಪ್ರಶ್ನೆಗಳನ್ನು ರಚಿಸಿ, ತಮ್ಮ ಪುಸ್ತಕವೇ ಶ್ರೇಷ್ಠವೆನ್ನುವ ಸಮರ್ಥನೆಗೆ ನಿಂತಿದ್ದಾರೆ. ಪ್ರಶ್ನೆಪತ್ರಿಕೆಗಳನ್ನು ಅನವಶ್ಯಕವಾಗಿ ಕಷ್ಟವಾಗಿಸಲು ಪ್ರೇರೇಪಿಸುತ್ತಿದ್ದಾರೆ. ಶಾಲೆಯಲ್ಲಿ ನಿಗದಿಪಡಿಸಿದ ಪುಸ್ತಕದಿಂದ ಪಾಠ-ಪ್ರವಚನ ಮಾಡಿ, ಅದೇ ಪುಸ್ತಕದಿಂದ

ಅಲ್ಲದಿದ್ದರೂ ಪಾಠದ ಆಧಾರದ ಮೇಲೆ ಕೆಲವು ಪ್ರಶ್ನೆಗಳನ್ನು ಪರೀಕ್ಷೆಯಲ್ಲಿ ಕೇಳಬಹುದು. ಅನವಶ್ಯಕವಾಗಿ ತರಹೇವಾರಿ ಪ್ರಶ್ನೆಗಳನ್ನು ಮಾಡಿ, ಎಲ್ಲ ಮಕ್ಕಳನ್ನೂ ಒಂದೇ ತಕ್ಕಡಿಯಲ್ಲಿ ಅಂದರೆ ಪ್ರಶ್ನೆಪತ್ರಿಕೆಯ ಆಧಾರದ ಮೇಲೆ ಅಳೆಯುವುದು ಮೂರ್ಖತನವೇ ಸರಿ. 10 ಮತ್ತು 12ನೇ ತರಗತಿಯ ಪ್ರಶ್ನೆಪತ್ರಿಕೆಗಳನ್ನು ಸ್ವಲ್ಪ ಸುಲಭ ಮಾಡಿ, ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಕಳೆದುಕೊಳ್ಳದೇ, ಬೋರ್ಡ್ ಪರೀಕ್ಷೆಗಳನ್ನು ಎದುರಿಸಿ ಮುಂದುವರಿಯುವಂತೆ ಮಾಡುವುದು ಶ್ರೇಯಸ್ಕರ. ಪ್ರೊಫೆಷನಲ್ ಕೋರ್ಸ್‌ಗಳನ್ನು ಮಾಡುವಾಗ, ಅವರವರ ವೃತ್ತಿಗೆ ಸಹಾಯಕವಾಗುವಂಥ ಪರೀಕ್ಷೆಗಳನ್ನು ಮಾಡಿದರೆ ಒಳ್ಳೆಯದು.

ಎಲ್ಲಾ ಖಾಸಗಿ ವಿದ್ಯಾಸಂಸ್ಥೆಗಳು ಮನಬಂದಂತೆ ವರ್ತಿಸುತ್ತಿವೆ. ಅಂದರೆ, ಬಹಳ ಬೇಗನೆ 10 ಮತ್ತು 12ನೇ ತರಗತಿಗಳಿಗೆ ಪಾಠಗಳನ್ನು ಶುರುಮಾಡುವುದು, ನಿಗದಿತ ಪಠ್ಯಕ್ರಮವನ್ನು ಬಹಳ ಬೇಗ ಮುಗಿಸುವುದು, ಹಲವು ಪೂರ್ವತಯಾರಿ ಪರೀಕ್ಷೆಗಳನ್ನು ಮಾಡುವುದು ಇತ್ಯಾದಿ. ಸರಕಾರಿ ಶಾಲೆಗಳ ಮಕ್ಕಳು ಇದರಿಂದ ವಂಚಿತರು. ಮತ್ತೊಂದು ಅತಿರೇಕದ ಸಂಗತಿಯೆಂದರೆ, 5-6ನೇ ತರಗತಿಯಲ್ಲಿಯೇ ಹೈಸ್ಕೂಲ್‌ನ ಪಾಠಗಳನ್ನು ಮಾಡಿ, ಅವರನ್ನು ಜೆಇಇ ಮತ್ತು ನೀಟ್ ಪರೀಕ್ಷೆಗಳಿಗೆ ತಯಾರು ಮಾಡುವುದು; ತುತ್ತು ಇಳಿಯದ ಗಂಟಲಲ್ಲಿ ಕಡುಬನ್ನು ತುರುಕುವ ಕೆಲಸ ಮಾಡುವುದು. ಈ ವಿಷಯದ ಬಗ್ಗೆ ಬರೆಯುತ್ತಾ ಹೋದರೆ ವಿಷಯ ದಾರಿ ತಪ್ಪುತ್ತದೆ. ಪೋಷಕರಲ್ಲಿ ಮಕ್ಕಳ ಮೇಲಿರುವ ಅತಿಯಾದ ನಿರೀಕ್ಷೆಯನ್ನು ಶಿಕ್ಷಣ ಸಂಸ್ಥೆಗಳು ನಗದು ಮಾಡಿಕೊಳ್ಳುತ್ತಿವೆ. ರಿಫ್ರೆಷರ್‌ಗಳನ್ನು ಪ್ರಕಟಿಸುವವರು ಚೆನ್ನಾಗಿ ದುಡ್ಡು ಮಾಡುತ್ತಿದ್ದಾರೆ. ಪೋಷಕರು ಬಗೆಬಗೆಯ ಪುಸ್ತಕಗಳನ್ನು ತಂದು ತಮ್ಮ ಮಕ್ಕಳ ಮುಂದೆ ಗುಡ್ಡದಂತೆ ಪೇರಿಸಿ ಇಡುತ್ತಾರೆ. ಅದನ್ನೆಲ್ಲಾ ಓದುವಷ್ಟು ಸಮಯವೇ ಮಕ್ಕಳಿಗೆ ಇರುವುದಿಲ್ಲ. 'ಎಲ್ಲಿಂದ ಶುರುಮಾಡಲಿ?' ಎನ್ನುವ ಗೊಂದಲವಷ್ಟೇ ಮಕ್ಕಳ ಪಾಲಿಗೆ ಗಟ್ಟಿ!

ಹೋ! ಸರಿ ಸರಿ. ಈಗ ವಿಷಯಕ್ಕೆ ಬರೋಣ. ಯಾವ ರಿಫ್ರೆಷರ್ ಓದಲಿ ಎಂದು ಕೇಳಿದ ವಿದ್ಯಾರ್ಥಿಗೆ, ''ಹಳೆಯ ಪ್ರಶ್ನೆಪತ್ರಿಕೆಗಳನ್ನು ಬಿಡಿಸು, ಅರ್ಥವಾಗದ ಪ್ರಶ್ನೆಗಳನ್ನು ನನ್ನ ಬಳಿ ಬಂದು ಕೇಳು'' ಎಂದು ಹೇಳಿಕಳುಹಿಸಿದೆ. ಪರೀಕ್ಷೆಗೆ ಕಮ್ಮಿ ಸಮಯವಿದ್ದಾಗ ಎಲ್ಲಾ ಪಾಠಗಳನ್ನೂ ಮೆಲುಕುಹಾಕಲು ಸಹಕಾರಿಯಾಗಿರುವುದು ಹಳೆಯ ಪ್ರಶ್ನೆಪತ್ರಿಕೆಗಳು. ಇಂಥ ಪ್ರಶ್ನೆಪತ್ರಿಕೆಗಳ ಗೊಂಚಲನ್ನು ತಯಾರು ಮಾಡಿಟ್ಟುಕೊಳ್ಳಿ ಮುಂದಿನ ವರ್ಷ ಪಬ್ಲಿಕ್ ಪರೀಕ್ಷೆ ಬರೆಯುವ ಮಕ್ಕಳೇ.... ನಿಮಗೆ ಶುಭವಾಗಲಿ.

(ಲೇಖಕಿ ಶಿಕ್ಷಕಿ)

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:48

ಸಮಾಚಾರ ಸಣ್ಣದಲ್ಲ

ಬಿಎಸ್ಪಿ ಹುದ್ದೆಗಳಿಂದ ಆಕಾಶ್ ಹೊರಕ್ಕೆ!

ಲಖನೌ: ಪ್ರೀತಿಯ ಸೋದರಳಿಯ ಆಕಾಶ್ ಆನಂದ್‌ರನ್ನು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಎಲ್ಲಾ ಹುದ್ದೆಗಳಿಂದಲೂ ತೆಗೆದುಹಾಕಿರುವ ಪಕ್ಷದ

ಅಧ್ಯಕ್ಷೆ, ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ ಮಾಯಾವತಿ, ನನ್ನ ಜೀವಿತಾವಧಿಯಲ್ಲಿ ಯಾವುದೇ ಉತ್ತರಾಧಿಕಾರಿ ಇರುವುದಿಲ್ಲ ಮತ್ತು ಪಕ್ಷದ ನಾಯಕತ್ವವನ್ನು ಸಂಘಟನೆಯ ಪ್ರಬಲ ನಾಯಕರು ವಹಿಸಿಕೊಳ್ಳುತ್ತಾರೆ ಎಂದು ಭಾನುವಾರ ಘೋಷಿಸಿದ್ದಾರೆ. ಈ ಹಿಂದೆ ಆಕಾಶ್ ಆನಂದ್ ಅವರ ಮಾವ ಅಶೋಕ್ ಸಿದ್ಧಾರ್ಥ್ ಅವರನ್ನು ಕೂಡಾ ಪಕ್ಷದಿಂದ ಉಚ್ಚಾಟಿಸಲಾಗಿತ್ತು. ಪಕ್ಷ ಮತ್ತು ಚಳವಳಿ ಹಿತಾಸಕ್ತಿಗಳಲ್ಲಿ ಸಂಬಂಧಗಳಿಗೆ ಯಾವುದೇ ಮಹತ್ವವಿಲ್ಲ. ನನಗೆ ಪಕ್ಷ ಮೊದಲು, ಉಳಿದೆಲ್ಲವೂ ನಂತರ ಎಂದು ಮಾಯಾವತಿ ಅವರು ಹೇಳಿದರು. ಮಾಯಾವತಿ ಅವರ ಈ ಕ್ರಮದೊಂದಿಗೆ ಉತ್ತರ ಪ್ರದೇಶದ ರಾಜಕೀಯ ಮತ್ತು ಬಿಎಸ್‌ಪಿ ರಾಜಕಾರಣದಲ್ಲಿ ಸಾಕಷ್ಟು ಬದಲಾವಣೆ ಕಾಣಬರುವ ನಿರೀಕ್ಷೆ ಇದೆ.

ಕೇಂದ್ರ ಸಚಿವೆ ಪುತ್ರಿಗೇ ಯುವಕರ ಕಿರುಕುಳ!

ಜಲಗಾಂವ್: ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯ ಕಾರ್ಯಕ್ರಮವೊಂದರಲ್ಲಿ ಯುವಕರ ಗುಂಪು ಕೇಂದ್ರ ಸಚಿವೆ ರಕ್ಷಾ ಖಾಡ್ಸೆ ಅವರ ಪುತ್ರಿ ಮತ್ತು ಗೆಳತಿಯರಿಗೆ ಕಿರುಕುಳ ನೀಡಿದ್ದು, ಭಾನುವಾರ ಜಲಗಾಂವ್ ಪೊಲೀಸರು ದೂರು ದಾಖಲಿಸಿಕೊಂಡು ಆರೋಪಿಗಳಿಗಾಗಿ ಶೋಧ ಆರಂಭಿಸಿದ್ದಾರೆ. ಶುಕ್ರವಾರ ರಾತ್ರಿ ಮುಕ್ತೈ ನಗರದ ಕೊಥಲಿ ಗ್ರಾಮದ ಸಂತ ಮುಕ್ತಾಯಿ ಯಾತ್ರೆಯಲ್ಲಿ ಸಚಿವೆ ಖಾಡ್ಸೆ ಅವರು ಪುತ್ರಿ ಮತ್ತು ಗೆಳತಿಯರಿಗೆ ಕಿರುಕುಳವಾಗಿದೆ. ಆರೋಪಿ ಯುವಕರು ರಾಜಕೀಯ ಪಕ್ಷವೊಂದಕ್ಕೆ ಸೇರಿದವರು. ಅವರಲ್ಲಿ ಕೆಲವರನ್ನು ಬಂಧಿಸಲಾಗಿದೆ. ಉಳಿದವರ ಬಂಧನಕ್ಕೆ ಪೊಲೀಸ್ ಕಾರ್ಯಾಚರಣೆ ಮುಂದುವರಿದಿದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಭಾನುವಾರ ಸುದ್ದಿಗಾರರಿಗೆ ವಿವರ ನೀಡಿದ್ದಾರೆ. ಯಾತ್ರೆಯಲ್ಲಿ ನನ್ನ ಮಗಳು ಮತ್ತು ಆಕೆಯ ಸ್ನೇಹಿತೆಯರನ್ನು ಹಿಂಬಾಲಿಸಿದ ಪುಂಡರ ಗುಂಪು, ತಡೆಯಲು ಬಂದ ಭದ್ರತಾ ಸಿಬ್ಬಂದಿಯನ್ನೂ ತಳ್ಳಿದೆ. ಪುಂಡ ಯುವಕರ ಫೋಟೊ, ವಿಡಿಯೋಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿಯಲಾಗಿದೆ ಎಂದು ಸಚಿವೆ ತಿಳಿಸಿದ್ದಾರೆ.

ಬೊಲಿವಿಯ 2 ಬಸ್ ಡಿಕ್ಕಿ: 37 ಜೀವಬಲಿ

ಬೊಲಿವಿಯ: ಅಮೆರಿಕದ ಬೊಲಿವಿಯದಲ್ಲಿ ಎರಡು ಪ್ರಯಾಣಿಕ ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿದ್ದು, ಪ್ರಯಾಣಿಕರು ಮತ್ತು ಚಾಲಕ ಸಿಬ್ಬಂದಿ ಸೇರಿದಂತೆ 37 ಮಂದಿ ಸಾವನ್ನಪ್ಪಿದ್ದಾರೆ. 39 ಮಂದಿ ಗಂಭೀರ ಗಾಯಗೊಂಡಿದ್ದಾರೆ. ಒಂದು ಬಸ್ ಲ್ಯಾಟಿನ್ ಅಮೆರಿಕದ ಪ್ರಮುಖ ಕಾರ್ನೀವಲ್ ಆಚರಣೆಯಾದ ಒರುರೊಗೆ ಜನರನ್ನು ಕರೆದೊಯ್ಯುತ್ತಿತ್ತು. ಸ್ಥಳೀಯ ಕಾಲಮಾನ ಶನಿವಾರ ಬೆಳಗ್ಗೆ 7ರ ವೇಳೆ ಉಯುನಿ ಮತ್ತು ಕೊಲ್ಚಾನಿ ನಗರಗಳ ನಡುವಿನ ಮಾರ್ಗದಲ್ಲಿ ಅಪಘಾತವಾಗಿದೆ. ಗಾಯಾಳುಗಳನ್ನು ಉಯುನಿ ಪಟ್ಟಣದ 4 ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಮೃತರನ್ನು ಗುರುತಿಸುವ ಕೆಲಸವಾಗುತ್ತಿದೆ ಎಂದು ಪೊಲೀಸ್ ಕಮಾಂಡ್ ವಕ್ತಾರ ತಿಳಿಸಿದ್ದಾರೆ.

ಹಿಮಪಾತ: ಉಳಿದ ಒಬ್ಬನಿಗೆ ರಕ್ಷಣಾಕಾರ್ಯ

ಡೆಹರಾಡೂನ್: ಉತ್ತರಾಖಂಡ ರಾಜ್ಯದಲ್ಲಿ ಭಾರೀ ಹಿಮಪಾತವಾಗಿ ಚಮೋಲಿ ಜಿಲ್ಲೆಯ ಮಾನಾದ ಗಡಿ ರಸ್ತೆ ಸಂಸ್ಥೆಯ ಶಿಬಿರ ಬಳಿ ಹಿಮಪಾತಕ್ಕೆ ಸಿಲುಕಿ ನಾಪತ್ತೆಯಾದವರಲ್ಲಿ ಈವರೆಗೆ 54 ಮಂದಿಯ ರಕ್ಷಣೆಯಾಗಿದೆ. ಅವರಲ್ಲಿ ತೀವ್ರ ಅಸ್ವಸ್ಥರಾಗಿದ್ದ 7

ಮಂದಿ ಕೊನೆಯುಸಿರೆಳೆದಿದ್ದಾರೆ. ಕಡೆಯದಾಗಿ ಹಿಮಪಾತ ಸ್ಥಳದಲ್ಲಿ ಸಂಕಷ್ಟದಲ್ಲಿರುವ ಇನ್ನೊಬ್ಬರನ್ನು ರಕ್ಷಿಸುವ ಕಾರ್ಯಾಚರಣೆ ಮುಂದುವರಿದಿದೆ. ಭಾರತೀಯ ವಾಯುಪಡೆಯ 17 ಎಂಐ ಮತ್ತೊಂದು ಹೆಲಿಕಾಪ್ಟರ್ ನೆರವು ಪಡೆದು ಶೋಧ ಕಾರ್ಯವನ್ನು ಭಾನುವಾರವೂ ಮುಂದುವರಿಸಲಾಗಿದೆ. ಸ್ನಿಫರ್ ಡಾಗ್‌ಗಳು(ವಾಸನೆ ಆಧರಿಸಿ ಹುಡುಕುವ ಶ್ವಾನಪಡೆ) ಮತ್ತು ಹೆಲಿಕಾಪ್ಟರ್ ಸಹಾಯದಿಂದ ರಕ್ಷಣಾ ಕಾರ್ಯಾಚರಣೆಯನ್ನು ಭಾನುವಾರ ಪುನಃ ಆರಂಭಿಸಲಾಗಿದೆ. ಜಿಪಿಆರ್ ವ್ಯವಸ್ಥೆಯನ್ನು ಹಿಮಪಾತ ಸಂಭವಿಸಿರುವ ಸ್ಥಳಕ್ಕೆ ಕೊಂಡೊಯ್ಯಲು ಡೆಹ್ರಾಡೂನ್ ನಲ್ಲಿ ಎಂಐ-17 ಹೆಲಿಕಾಪ್ಟರ್ ನೆರವು ಪಡೆಯಲಾಗಿದೆ ಎಂದು ಚಮೋಲಿ ಜಿಲ್ಲಾಧಿಕಾರಿ ಸಂದೀಪ್ ತಿವಾರಿ ತಿಳಿಸಿದ್ದಾರೆ.

{ಪ್ರಹ್ಲಾದ್ ಪಟೇಲ್} ಮ.ಪ್ರದೇಶ ಸಚಿವ

ಬಿಟ್ಟಿ ಯೋಜನೆಗಳ ಮೇಲಿನ ಅತಿ ಅವಲಂಬನೆ ಸಮಾಜವನ್ನು ಬಲಿಷ್ಠಗೊಳಿಸುವ ಬದಲು ದುರ್ಬಲಗೊಳಿಸುತ್ತದೆ. ಇದರಿಂದಾಗಿಯೇ ಜನರು ಸರಕಾರದ ಭಿಕ್ಷೆ ಬೇಡುವವರಾಗಿದ್ದಾರೆ. ಭಿಕ್ಷುಕರ ಸೈನ್ಯ ಸಮಾಜವನ್ನು ಬಲಿಷ್ಠಗೊಳಿಸುವುದಿಲ್ಲ, ದುರ್ಬಲಗೊಳಿಸುತ್ತಿದೆ. ನಾಯಕರು ಸಿಕ್ಕಾಗಲೆಲ್ಲ ಜನರು ಮನವಿಪತ್ರ ನೀಡುತ್ತಾರೆ. ವೇದಿಕೆಯಲ್ಲಿ ಹಾರ ಹಾಕಿ ಕೈಗೆ ಮನವಿಪತ್ರ ಕೊಡುತ್ತಾರೆ.

ಕ್ಯಾನ್ಸರ್ ರೋಗಗಳಿಂದ ಕೋಟ್ಯಂತರ ಸ್ತ್ರೀಯರ ರಕ್ಷಣೆಗೆ ಪಣ: ಮಹಾರಾಷ್ಟ್ರ ಸರಕಾರದಿಂದ ಮಹತ್ವದ ನಿರ್ಧಾರ

ಅರ್ಬುದ:14 ವರ್ಷವರೆಗಿನ ಬಾಲಕಿಯರಿಗೆ ಉಚಿತ ಲಸಿಕೆ

ಮುಂಬೈ: 0-14 ವರ್ಷದ ಹೆಣ್ಣುಮಕ್ಕಳಿಗೆ ಕ್ಯಾನ್ಸರ್ (ಅರ್ಬುದ) ತಡೆಯಬಲ್ಲ ಲಸಿಕೆಯನ್ನು ಉಚಿತವಾಗಿ ನೀಡುವ ಅಭಿಯಾನ ಆರಂಭಿಸಲು ಮಹಾರಾಷ್ಟ್ರದ 'ಮಹಾಯುತಿ' ಮೈತ್ರಿಕೂಟ ಸರಕಾರ ಮುಂದಾಗಿದೆ.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನೇತೃತ್ವದ 'ಮಹಾಯುತಿ 2.0' ಸರಕಾರ ನವಜಾತಾ ಶಿಶುವಿನಿಂದ ಆರಂಭಿಸಿ 14 ವರ್ಷದವರೆಗಿನ ಬಾಲೆಯರ ಆರೋಗ್ಯ ರಕ್ಷಣೆ ದೃಷ್ಟಿಯಿಂದ 'ಉಚಿತ ಲಸಿಕೆ'ಯ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ.

ಜೀವನಶೈಲಿಯಲ್ಲಿನ ಕ್ಷಿಪ್ರ ಬದಲಾವಣೆ, ಆಹಾರ ಪದ್ಧತಿ, ಅತಿಯಾದ ಪ್ಲಾಸ್ಟಿಕ್ ಬಳಕೆ ಮೊದಲಾದ ಕಾರಣಗಳಿಂದಾಗಿ ರಾಜ್ಯದಲ್ಲಿನ ಹೆಣ್ಣು ಮಕ್ಕಳಲ್ಲಿ ಮಾರಣಾಂತಿಕ ಕ್ಯಾನ್ಸರ್ ರೋಗ ಪ್ರಕರಣಗಳು ವೇಗವಾಗಿ ಹೆಚ್ಚುತ್ತಿವೆ. ಮಾರಣಾಂತಿಕವಾದ ಈ ರೋಗ ನಗರ-ಗ್ರಾಮೀಣ ಭಾಗದಲ್ಲಿನ ಎಲ್ಲಾ ವಯಸ್ಸಿನ ಮಹಿಳೆಯರನ್ನು ಬಾಧಿಸುತ್ತಿದೆ. ಈ ಗಂಭೀರ ಆರೋಗ್ಯ ಸಮಸ್ಯೆಗೆ ಪರಿಹಾರವಾಗಿ ರಾಜ್ಯ ಸರಕಾರ ಉಚಿತ ಕ್ಯಾನ್ಸರ್ ಲಸಿಕೆ ಅಭಿಯಾನವನ್ನು ಜಾರಿಗೆ ತರಲು ನಿರ್ಧರಿಸಿದೆ ಎಂದು ರಾಜ್ಯದ ಆರೋಗ್ಯ ಸಚಿವ ಪ್ರಕಾಶ್ ಅಬಿತ್ಕರ್ ಭಾನುವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.



ಬಾಲೆಯರಿಗೆ ಉಚಿತ: 0-14 ವರ್ಷ ವಯೋಮಿತಿಯಲ್ಲಿನ ಹೆಣ್ಣುಮಕ್ಕಳಿಗೆ ಉಚಿತ ಕ್ಯಾನ್ಸರ್ ಲಸಿಕೆಯನ್ನು ಸರಕಾರದಿಂದ ಒದಗಿಸಲು ಅವಕಾಶ ಮಾಡಿಕೊಡುವಂತೆ ಹಣಕಾಸು ಸಚಿವರೂ ಆದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅಜಿತ್ ಪವಾರ್ ಈ ಪ್ರಸ್ತಾಪವನ್ನು ಅನುಮೋದಿಸಿದ್ದಾರೆ. ರಾಜ್ಯ ಸರಕಾರ ಶೀಘ್ರದಲ್ಲೇ ಈ ಯೋಜನೆಯನ್ನು ಜಾರಿಗೆ ತರಲಿದೆ.

ಸರಕಾರದ ನಿರ್ಧಾರ: ಈ ಮೊದಲು ಕ್ಯಾನ್ಸರ್ ಕಾಯಿಲೆ ಬರುವುದಕ್ಕೆ ಮುಖ್ಯವಾಗಿ ಧೂಮಪಾನ, ಮದ್ಯಪಾನ ಮತ್ತು ಇತರೆ ಮಾದಕ ವ್ಯಸನಗಳು ಕಾರಣವೆಂದು ಪರಿಗಣಿಸಲಾಗುತ್ತಿತ್ತು, ಆದರೆ ಈಗ ಈ ರೋಗವು ಎಲ್ಲಾ ವಯಸ್ಸಿನ ಜನರನ್ನು ಬಾಧಿಸುತ್ತಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರಕಾರ ಹೆಣ್ಣು ಮಕ್ಕಳ ಸಂರಕ್ಷಣೆ ದೃಷ್ಟಿಯಿಂದ ಉಚಿತವಾಗಿಯೇ ಕ್ಯಾನ್ಸರ್ ತಡೆ ಲಸಿಕೆ ನೀಡುವುದಕ್ಕೆ ನಿರ್ಧರಿಸಿದೆ ಎಂದು ಅಬಿತ್ಕರ್ ಹೇಳಿದರು. ಈ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಯನ್ನು ಸರಕಾರದಿಂದಲೇ ನಿರ್ವಹಿಸಲು 'ಉಚಿತ ಲಸಿಕೆ ಅಭಿಯಾನ'ವನ್ನು ಶೀಘ್ರದಲ್ಲೇ ಆರಂಭಿಸಲು ನಿರ್ಧರಿಸಲಾಗಿದೆ ಎಂದರು.

ಕರ್ನಾಟಕ: ಕರ್ನಾಟಕದಲ್ಲಿಯೂ ಕೂಡಾ ಕ್ಯಾನ್ಸರ್ ತಡೆ ಲಸಿಕೆ ಇದೆ. ಆದರೆ ಕೆಲವು ಸಂಘಟನೆಗಳು ಹಿಂದುಳಿದ ಸಮುದಾಯದ ಬಡ ಹೆಣ್ಣು ಮಕ್ಕಳಿಗಾಗಿ ಕ್ಯಾನ್ಸರ್ ತಡೆ ಲಸಿಕೆಯನ್ನು ಉಚಿತವಾಗಿ ಪೂರೈಸುತ್ತಿವೆ. ಎಂದು ಮೂಲಗಳಿಂದ ತಿಳಿದುಬಂದಿದೆ.

ಮಾರಕ ಗರ್ಭಕಂಠ ಕ್ಯಾನ್ಸರ್

ವಿಶ್ವದ ಮಹಿಳೆಯರನ್ನು ಕಾಡುವ ಎರಡನೇ ಅತಿದೊಡ್ಡ ಕ್ಯಾನ್ಸರ್ ಸಮಸ್ಯೆ ಎಂದರೆ ಅದು ಗರ್ಭಕಂಠದ ಕ್ಯಾನ್ಸರ್. ಅಂತಹ ಗಂಭೀರ ಸ್ವರೂಪದ ಕಾಯಿಲೆಯಿಂದ ಹೆಣ್ಣು ಮಕ್ಕಳನ್ನು ಕಾಪಾಡುವ ಸಲುವಾಗಿ ಔಷಧಗಳನ್ನು ಕಂಡು ಹಿಡಿಯುವ ಪ್ರಕ್ರಿಯೆ ನಡೆಯುತ್ತಲೇ ಇವೆ.

ಭಾರತದಲ್ಲಿ ಕ್ಯಾನ್ಸರ್ ಹೆಚ್ಚಳ

ಭಾರತದಲ್ಲಿಯೂ ಕ್ಯಾನ್ಸರ್ ಅತ್ಯಧಿಕ ಸಂಖ್ಯೆಯ ಜನರ ಜೀವಕ್ಕೆ ಮಾರಕವಾಗಿದೆ. 2020ರಲ್ಲಿ ಭಾರತದಲ್ಲಿ 13.90 ಲಕ್ಷ ಕ್ಯಾನ್ಸರ್ ರೋಗಿಗಳಿದ್ದರು. ಈ ಸಂಖ್ಯೆ 2021ರಲ್ಲಿ 14.20 ಲಕ್ಷಕ್ಕೆ, 2022ರಲ್ಲಿ 14.60 ಲಕ್ಷಕ್ಕೆ ಏರಿಕೆಯಾಗಿದೆ. 2025ರಲ್ಲಿ ವಾರ್ಷಿಕ ಶೇ.12.8ರಷ್ಟು ಹೆಚ್ಚಳದೊಂದಿಗೆ 15.70 ಲಕ್ಷ ಕ್ಯಾನ್ಸರ್ ಪ್ರಕರಣಗಳಿಗೆ ಏರಿಕೆ ಆಗಲಿದೆ ಎಂಬ ಅಂಕಿ ಅಂಶವಿದೆ. 2023ರ ಅಂಕಿ ಅಂಶ ಪ್ರಕಾರ ವಿಶ್ವದಲ್ಲಿ ಕ್ಯಾನ್ಸರ್‌ನಿಂದಾಗಿ 1 ಕೋಟಿ ಸಾವು ಸಂಭವಿಸಿವೆ. ಅಂದರೆ ವಿಶ್ವಾದ್ಯಂತ ವಿವಿಧ ಬಗೆಯ ಕ್ಯಾನ್ಸರ್ ರೋಗದಿಂದಲೇ ಪ್ರತಿದಿನ 26,300 ಸಾವು ಸಂಭವಿಸುತ್ತಿದೆ.

ಕ್ಯಾನ್ಸರ್: ಮಹಾರಾಷ್ಟ್ರ ದೇಶದಲ್ಲೇ 2ನೇ ಸ್ಥಾನ

ಮಹಾರಾಷ್ಟ್ರದಲ್ಲಿ ಕ್ಯಾನ್ಸರ್ ಪೀಡಿತರ ಸಂಖ್ಯೆ ವೇಗವಾಗಿ ಏರುಮುಖವಾಗಿದೆ. ಹೊಸ ಕ್ಯಾನ್ಸರ್ ರೋಗಿಗಳ ಪ್ರಕರಣ ದಾಖಲಾಗುವುದರಲ್ಲಿ 2023ರಲ್ಲಿ ಭಾರತದಲ್ಲೇ ಮಹಾರಾಷ್ಟ್ರ 2ನೇ ಸ್ಥಾನದಲ್ಲಿತ್ತು. ಮಹಾರಾಷ್ಟ್ರದಲ್ಲಿ 2021ರಲ್ಲಿ 1.18 ಲಕ್ಷ ಕ್ಯಾನ್ಸರ್ ಪ್ರಕರಣಗಳು ದಾಖಲಾಗಿದ್ದರೆ, 2023ರಲ್ಲಿ ಪ್ರಕರಣಗಳ ಸಂಖ್ಯೆ 1.21 ಲಕ್ಷಕ್ಕೇರಿತ್ತು. ಕ್ಯಾನ್ಸರ್ ರೋಗದ ಪ್ರಕರಣಗಳು ಉತ್ತರ ಪ್ರದೇಶದಲ್ಲಿ ಹೆಚ್ಚಾಗಿ ದಾಖಲಾಗುತ್ತಿದ್ದು, ದೇಶದಲ್ಲೇ ನಂ.1 ಸ್ಥಾನದಲ್ಲಿದೆ. 2021ರಲ್ಲಿ ಉತ್ತರ ಪ್ರದೇಶದಲ್ಲಿ 2 ಲಕ್ಷ ಕ್ಯಾನ್ಸರ್ ರೋಗಿಗಳು ಕಂಡುಬಂದಿದ್ದರೆ, 2023ರಲ್ಲಿ ಈ ಸಂಖ್ಯೆ 2.10 ಲಕ್ಷಕ್ಕೇರಿತ್ತು. ಕ್ಯಾನ್ಸರ್ ರೋಗ ವಿಚಾರದಲ್ಲಿ ಪಶ್ಚಿಮ ಬಂಗಾಳ ದೇಶದಲ್ಲಿ 3ನೇ ಸ್ಥಾನದಲ್ಲಿದೆ. ಈ ರಾಜ್ಯದಲ್ಲಿ 2021ರಲ್ಲಿ 1.10 ಲಕ್ಷದಷ್ಟಿದ್ದ ಕ್ಯಾನ್ಸರ್ ಪೀಡಿತರ ಸಂಖ್ಯೆ 2023ರ ವೇಳೆಗೆ 1.13 ಲಕ್ಷಕ್ಕೇರಿತು. 2023ರ ಅಂಕಿ ಅಂಶ ಪ್ರಕಾರ ಬಿಹಾರದಲ್ಲಿ 1 ಲಕ್ಷ ಕ್ಯಾನ್ಸರ್ ರೋಗಿಗಳಿದ್ದರೆ, ತಮಿಳುನಾಡಿನಲ್ಲಿ 82 ಸಾವಿರ ಪೀಡಿತರಿದ್ದರು. ಕ್ಯಾನ್ಸರ್ ಸಮಸ್ಯೆಗಳಲ್ಲಿ ಭಾರತೀಯರನ್ನು ಅತಿ ಹೆಚ್ಚು ಕಾಡುತ್ತಿರುವುದು ಶ್ವಾಸಕೋಶ ಕ್ಯಾನ್ಸರ್ ಆಗಿದೆ. ಕೊಲೊರೆಕ್ಟಲ್ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಪ್ಯಾನಕ್ರಿಯಾಟಿಕ್, ನಂತರದಲ್ಲಿ ಉದರ ಕ್ಯಾನ್ಸರ್ ನಂತರದ ಸ್ಥಾನಗಳಲ್ಲಿವೆ.

ಮಣಿಪುರದಲ್ಲಿ ಮುಂದುವರಿದ ಶಸ್ತ್ರಾಸ್ತ್ರ ಶರಣಾಗತಿ ಕಾರ್ಯ

42 ಬಂದೂಕು ವಾಪಸ್, 5 ಬಂಕರ್ ನಾಶ

ಇಂಫಾಲ: ವರ್ಷದಿಂದ ಜನಾಂಗೀಯ ಸಂಘರ್ಷದಿಂದ ಬಸವಳಿದಿದ್ದ ಮಣಿಪುರ ರಾಜ್ಯದಲ್ಲಿ ಈಗ ಪೊಲೀಸ್ ಠಾಣೆಗಳಿಂದ ಬಂಡುಕೋರರು ಹೊತ್ತೊಯ್ದಿದ್ದ ಬಂದೂಕು, ಹ್ಯಾಂಡ್ ಗ್ರನೇಡ್ ಸೇರಿದಂತೆ ವಿವಿಧ ಸ್ಫೋಟಕಗಳು ಮೊದಲಾದ ಶಸ್ತ್ರಾಸ್ತ್ರಗಳನ್ನು ರಾಜ್ಯಪಾಲರ ಮನವಿ ಮೇರೆಗೆ ವಾಪಸ್ ಮಾಡುವ ಪ್ರಕ್ರಿಯೆ ಮುಂದುವರಿದಿದೆ. ರಾಜ್ಯದಲ್ಲಿ ಬಂಡುಕೋರರ ಪ್ರಾಬಲ್ಯದ ಐದು ಜಿಲ್ಲೆಗಳಲ್ಲಿ ಭಾನುವಾರ 42 ಬಂದೂಕುಗಳು ಮತ್ತು ಗುಂಡುಗಳನ್ನು ಬಂಡುಕೋರರು ಪೊಲೀಸರಿಗೆ ತಂದೊಪ್ಪಿಸಿದ್ದಾರೆ.

ಪೂರ್ವ ಮತ್ತು ಪಶ್ಚಿಮ ಇಂಫಾಲ, ಚುರಚಂದಾಪುರ, ಬಿಷ್ಣುಪುರ ಮತ್ತು ತಮೆಂಗ್‌ಲಾಂಗ್ ಹಾಗೂ ಸುತ್ತಲಿನ ಜಿಲ್ಲೆಗಳಲ್ಲಿ 42 ಬಂದೂಕುಗಳನ್ನು ತಂದೊಪ್ಪಿಸಲಾಗಿದೆ. ಬಿಷ್ಣುಪುರ ಜಿಲ್ಲೆಯಲ್ಲಿ ಎರಡು ಬಂದೂಕು, ಆರು ಗ್ರನೇಡ್‌ಗಳು ಮತ್ತು 75ಕ್ಕೂ ಹೆಚ್ಚು ಕಾಟ್ರಿಡ್ಜ್‌ಗಳು ಸೇರಿದಂತೆ ಐದು ಶಸ್ತ್ರಾಸ್ತ್ರಗಳನ್ನು ಪೊಲೀಸರ ವಶಕ್ಕೆ ತಂದೊಪ್ಪಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ತಮೆಂಗ್‌ಲಾಂಗ್ ಜಿಲ್ಲೆಯ ಕೈಮೈ ಪೊಲೀಸ್ ಠಾಣೆಯಲ್ಲಿ ಸ್ವದೇಶಿ ನಿರ್ಮಿತ 17 ಬಂದೂಕುಗಳು, 9 'ಪಾಂಪಿ' (ಸ್ಥಳೀಯವಾಗಿ ತಯಾರಿ) ಮತ್ತು ಕಾರ್ಟ್ರಿಡ್ಜ್‌ಗಳನ್ನು ವಾಪಸ್ ನೀಡಿದ್ದಾರೆ. ಯಂಗಂಗ್ಪೋಕ್ಪಿ, ಪೊರಂಪಾಟ್, ಚುರಾಚಂದ್ಪುರ ಮತ್ತು ಲಮ್ಸಾಂಗ್ ಪೊಲೀಸ್ ಠಾಣೆಗಳಲ್ಲಿ ಕನಿಷ್ಠ 10 ಬಂದೂಕುಗಳು ಮತ್ತು ಕಾರ್ಟ್ರಿಡ್ಜ್‌ಗಳನ್ನು ಒಪ್ಪಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ವಿವರ ನೀಡಿದ್ದಾರೆ.

ಇನ್ನೊಂದೆಡೆ, ಕಾಂಗ್ಪೋಕ್ಪಿ ಜಿಲ್ಲೆಯ ಥಿಂಗ್ಸಾಟ್ ಬೆಟ್ಟಶ್ರೇಣಿಯ ಮಾರ್ಕ್‌ಹಿಲ್‌ನಲ್ಲಿ ಎರಡು ಅಕ್ರಮ ಬಂಕರ್‌ಗಳನ್ನು ಭದ್ರತಾ ಪಡೆಗಳು ಧ್ವಂಸಗೊಳಿಸಿವೆ. ಇಂಫಾಲ ಪೂರ್ವ ಜಿಲ್ಲೆಯ ಪಕ್ಕದ ಪ್ರದೇಶದ ವಕನ್ ಬೆಟ್ಟಶ್ರೇಣಿಯಲ್ಲಿ 3 ಅಕ್ರಮ ಬಂಕರ್ ನಾಶಪಡಿಸಲಾಗಿದೆ.

ಉತ್ತರ ಪ್ರದೇಶದ ವೈದ್ಯಕೀಯ ಶಿಕ್ಷಣ ಸಚಿವ ಬ್ರಜೇಶ್ ಪಾಠಕ್

ಪುಣ್ಯಸ್ನಾನ: ಯಾರಿಗೂ ಚರ್ಮ ರೋಗ ಬಂದಿಲ್ಲ

ಲಖನೌ: ಪ್ರಯಾಗ್ ರಾಜ್ ಮಹಾ ಕುಂಭ ಮೇಳದಲ್ಲಿ ಭಾಗಿಯಾಗಿ ಪವಿತ್ರ ತ್ರಿವೇಣಿ

ಸಂಗಮದಲ್ಲಿ ಸ್ನಾನ ಮಾಡಿದವರಲ್ಲಿ ಯಾರಿಗೂ ಚರ್ಮ ರೋಗ ಬಂದಿಲ್ಲ ಎಂದು ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ, ಆರೋಗ್ಯ ಸಚಿವ ಬ್ರಜೇಶ್ ಪಾಠಕ್ ಹೇಳಿದ್ದಾರೆ.

ಗಂಗಾ-ಯಮುನಾ-ಸರಸ್ವತಿ ನದಿಗಳ ತ್ರಿವೇಣಿ ಸಂಗಮ ಸ್ಥಳದಲ್ಲಿ ಪುಣ್ಯಸ್ನಾನ ಮಾಡಿದ ನಂತರ ಹಲವು ಯಾತ್ರಿಕರು ಅಸ್ವಸ್ಥರಾಗಿದ್ದಾರೆ. ಕೆಲವರಲ್ಲಿ ಚರ್ಮರೋಗ ಸೇರಿದಂತೆ ಹಲವು ವ್ಯಾದಿ ಕಂಡುಬಂದಿದೆ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಸೇರಿದಂತೆ ಪ್ರತಿಪಕ್ಷ ನಾಯಕರು ಮಾಡುತ್ತಿರುವ ಆಪಾದನೆ ಗಳೆಲ್ಲವೂ ಸುಳ್ಳು ಎಂದು ಪಾಠಕ್ ಸ್ಪಷ್ಟಪಡಿಸಿದರು.

66.50 ಕೋಟಿಗೂ ಅಧಿಕ ಯಾತ್ರಾರ್ಥಿಗಳು ಭಾಗಿಯಾಗಿದ್ದರೂ ಯಾರಿಗೂ ಚರ್ಮ ರೋಗ ತಗುಲಿರುವ ಪ್ರಕರಣ ವರದಿಯಾಗಿಲ್ಲ. ಗಂಗಾ ನದಿ ಶುದ್ಧತೆ ಮತ್ತು ಕುಂಭ ಮೇಳದಲ್ಲಿ ಜಾರಿಗೆ ತರಲಾದ ನೈರ್ಮಲ್ಯ ಕಾರ್ಯಕ್ರಮಗಳು ಯಶಸ್ಸು ಕಂಡಿವೆ ಎಂದ ಪಾಠಕ್, ಮಹಾ ಕುಂಭಮೇಳದ ನಂತರ ನಡೆದ ಸ್ವಚ್ಛತಾ ಪ್ರಯತ್ನಗಳನ್ನು ಶ್ಲಾಘಿಸಿದರು. ಮಹಾ ಕುಂಭಮೇಳ ಭಾರತ-ಭಾರತೀಯತೆಯ ಜಾಗತಿಕ ಸಂಕೇತವಾಗಿದೆ. ಹಣವಂತ, ಬಡವ ಎಂಬ ಭೇದವಿಲ್ಲದೇ, ಜಾತಿಯ ಸೋಂಕಿಲ್ಲದೇ ಎಲ್ಲಾ ಸಮುದಾಯ, ವರ್ಗಗಳ ಜನರನ್ನು ಉತ್ಸವ ಒಂದುಗೂಡಿಸಿದೆ ಎಂದು ಬಣ್ಣಿಸಿದರು. ಭಾರತದ ಸಂಸ್ಕೃತಿಯಲ್ಲಿ ಮನುಷ್ಯ ಜನ್ಮ ಶ್ರೇಷ್ಠ ಎನ್ನಲಾಗುತ್ತದೆ. ಹಾಗಿದ್ದೂ ಪ್ರಾಣಿ-ಪಕ್ಷಿಗಳು ಮತ್ತು ಶಿಲೆ-ಮರಗಳನ್ನು ಸಹ ಭಾರತೀಯರು ಪೂಜಿಸುತ್ತಾರೆ. ಕುಟುಂಬದ ಭಾಗ ಎಂದೇ ಪರಿಗಣಿಸುತ್ತಾರೆ. ಇಡೀ ಸೃಷ್ಟಿ ನಮ್ಮ ಕುಟುಂಬ, ಇದು ಸನಾತನದ ಸಾರ ಎಂದು ಪಾಠಕ್ ವ್ಯಾಖ್ಯಾನಿಸಿದರು.

1.50 ಲಕ್ಷ ತಾತ್ಕಾಲಿಕ ಶೌಚಾಲಯ ತೆರವು

ಮಹಾ ಕುಂಭಮೇಳದ ಸಮಾರೋಪ ಫೆ.26ರಂದೇ ಜರುಗಿದ್ದು, ಮರುದಿನದಿಂದಲೇ ಉತ್ತರ ಪ್ರದೇಶ ಸರಕಾರ 15 ದಿನಗಳ ವಿಶೇಷ ಸ್ವಚ್ಛತಾ ಅಭಿಯಾನ ಪ್ರಾರಂಭಿಸಿದೆ. ಸ್ವಚ್ಛತಾ ಮಿತ್ರರು ಮತ್ತು ಗಂಗಾ ಸೇವಾ ದೂತರು ಸ್ವಚ್ಛತೆಯಲ್ಲಿ ಸಕ್ರಿಯರಾಗಿದ್ದಾರೆ. ಕುಂಭ ನಗರ ಪ್ರದೇಶದಲ್ಲಿ ಸ್ಥಾಪಿಸಲಾಗಿದ್ದ 1.50 ಲಕ್ಷ ತಾತ್ಕಾಲಿಕ ಶೌಚಾಲಯಗಳನ್ನು ತೆರವುಗೊಳಿಸಲಾಗುತ್ತಿದೆ. ನಗರ-ಗ್ರಾಮೀಣ ನೀರು ಸರಬರಾಜು ನಿಗಮ ಸ್ಥಾಪಿಸಿದ ತಾತ್ಕಾಲಿಕ ಪೈಪ್‌ಲೈನ್‌ಗಳು, ವಿದ್ಯುತ್ ಇಲಾಖೆ ಸ್ಥಾಪಿಸಿದ ಬೀದಿದೀಪ ಮತ್ತು ಸನ್ಯಾಸಿಗಳು, ಕಲ್ಪವಾಸಿಗಳು ಬಳಸುವ ಟೆಂಟ್‌ಗಳು ಮತ್ತು ಮಂಟಪಗಳನ್ನು ತೆರವುಗೊಳಿಸಲಾಗುತ್ತಿದೆ. ಮೇಳದ ಮೈದಾನದ ರಸ್ತೆಗಳು, ಶಾಶ್ವತ ಮತ್ತು ತಾತ್ಕಾಲಿಕ ಮೂಲಸೌಕರ್ಯ ಸ್ಥಳಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. 15 ಸಾವಿರಕ್ಕೂ ಹೆಚ್ಚು ಸ್ವಚ್ಛತಾ ಕಾರ್ಮಿಕರು ಮತ್ತು 2,000 ಗಂಗಾ ಸೇವಾ ಕಾರ್ಯಕರ್ತರು ಸ್ವಚ್ಛತೆ ಕಾಪಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ.

ಸೂಟ್‌ಕೇಸ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತೆ ಮೃತದೇಹ

ಚಂಡೀಗಢ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ವರ್ಷದ ಹಿಂದೆ ಕೈಗೊಂಡ 'ಭಾರತ್ ಜೋಡೊ ಯಾತ್ರೆ' ವೇಳೆ ರಾಹುಲ್ ಜತೆ ಹೆಜ್ಜೆ ಹಾಕಿದ್ದ ಹರಿಯಾಣ ಮೂಲದ ಕಾಂಗ್ರೆಸ್ ಕಾರ್ಯಕರ್ತೆ ಹಿಮಾನಿ ನರ್ವಾಲ್ (22) ಅವರ ಮೃತದೇಹ ಸೂಟ್‌ಕೇಸ್‌ನಲ್ಲಿ ಪತ್ತೆಯಾಗಿದೆ.

ಹಿಮಾನಿ ಸಾವಿನ ಬಗ್ಗೆ ಹಲವಾರು ಶಂಕೆಗಳು ವ್ಯಕ್ತವಾಗಿದ್ದು, ಉನ್ನತ ಮಟ್ಟದ ಸಂಸ್ಥೆಯಿಂದಲೇ ತನಿಖೆ ನಡೆಸಬೇಕು ಎಂದು ಹರಿಯಾಣ ಕಾಂಗ್ರೆಸ್ ಮುಖಂಡರು ಭಾನುವಾರ ಆಗ್ರಹಿಸಿದ್ದಾರೆ.

ಸಂಪ್ಲಾ ಬಸ್ ನಿಲ್ದಾಣದ ಬಳಿ ಇಡಲಾಗಿದ್ದ ಸೂಟ್‌ಕೇಸ್ ಅನ್ನು ಕಂಡ ದಾರಿಹೋಕರು ಅನುಮಾನಗೊಂಡು ಪೊಲೀಸರಿಗೆ ಕರೆ ಮಾಡಿದ್ದಾರೆ. ಸ್ಥಳಕ್ಕೆ ವಿಧಿವಿಜ್ಞಾನ ತಂಡದೊಂದಿಗೆ ಧಾವಿಸಿದ ನಗರ ಪೊಲೀಸರು, ಸೂಟ್‌ಕೇಸ್ ತೆರೆದು ನೋಡಿದಾಗ ಶಿರವಿಲ್ಲದ ನರ್ವಾಲ್ ಮೃತದೇಹವನ್ನು ದುಪಟ್ಟಾದಿಂದ ಸುತ್ತಿಟ್ಟಿರುವುದು ಕಂಡು ಬಂದಿದೆ.

ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಸಂಪ್ಲಾ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಬಿಜೇಂದರ್ ಸಿಂಗ್ ಹೇಳಿದ್ದಾರೆ. ಘಟನೆ ಬಗ್ಗೆ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಇಂಥ ಕೃತ್ಯದಿಂದ ರಾಜ್ಯದ ಕಾನೂನು-ಸುವ್ಯವಸ್ಥೆ ಬಗ್ಗೆ ಅನುಮಾನ ಪಡುವಂತಾಗಿದೆ. ಪ್ರಕರಣದ ಬಗ್ಗೆ ಉನ್ನತ ಮಟ್ಟದ, ನಿಷ್ಪಕ್ಷಪಾತ ತನಿಖೆ ನಡೆಯಬೇಕು ಎಂದು ಆಗ್ರಹಿಸಿದ್ದಾರೆ.

ಶ್ರೀಶೈಲ ಸುರಂಗ ಕುಸಿದು 9ನೇ ದಿನ | ಸ್ಥಳಕ್ಕೆ ಸಿಎಂ ಎ.ರೇವಂತ್ ರೆಡ್ಡಿ ಭೇಟಿ

ಸುರಂಗ ಸಂತ್ರಸ್ತರ ಸಾವಿನ ಶಂಕೆ

ಶ್ರೀಶೈಲಂ: ತೆಲಂಗಾಣದ ಶ್ರೀಶೈಲಂ ಎಡದಂಡೆ ಕಾಲುವೆಯ ಸುರಂಗ ಮಾರ್ಗ ಕಾಮಗಾರಿ ವೇಳೆ ಸುರಂಗದ ಪ್ರವೇಶ ದ್ವಾರದಿಂದ 14 ಕಿಮೀಗಳಷ್ಟು

ದೂರ ಒಳಭಾಗದಲ್ಲಿ ಸುರಂಗದ ಮೇಲ್ಭಾಗ ಫೆ.22ರಂದು ದಿಢೀರ್ ಕುಸಿದಿದ್ದರಿಂದ ಇಂಜಿನಿಯರ್‌ಗಳು, ಜಾರ್ಖಂಡ್‌ನ ಕಾರ್ಮಿಕರು ಸೇರಿದಂತೆ ಸೇರಿದಂತೆ ಒಟ್ಟು 8 ಮಂದಿ ಸಿಲುಕಿಕೊಂಡಿದ್ದು, ರಕ್ಷಣಾ ಕಾರ್ಯಾಚರಣೆ ಭಾನುವಾರ ಸಂಜೆಯೂ ಮುಂದುವರಿದಿತ್ತು. ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಸುರಂಗದ ಬಳಿ ಭಾನುವಾರ ಸಂಜೆ ತೆರಳಿದ್ದು, ರಕ್ಷಣಾ ಕಾರ್ಯಾಚರಣೆಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಸುರಂಗದೊಳಗೆ ಸಿಲುಕಿಕೊಂಡಿರುವವರಲ್ಲಿ ನಾಲ್ವರ ಇರುವಿಕೆ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿದೆ ಎಂದು ಶನಿವಾರ ಸಂಜೆ ರಾಜ್ಯ ಅಬಕಾರಿ ಸಚಿವ ಜೂಪಲ್ಲಿ ಕೃಷ್ಣ ರಾವ್ ಹೇಳಿದ್ದರು. ನಾಲ್ವರನ್ನು ಪತ್ತೆಹಚ್ಚಲಾಗಿದ್ದರೂ ಅವರು ಬದುಕುಳಿಯುವ ಸಾಧ್ಯತೆಗಳು ಬಹಳ ಕಡಿಮೆ ಎಂದರು. ಉಳಿದ ನಾಲ್ವರು ಸುರಂಗ ಕೊರೆಯುವ ಯಂತ್ರದಡಿ ಸಿಲುಕಿಕೊಂಡಿರುವ ಸಾಧ್ಯತೆ ಇದೆ. ಅವರನ್ನು ಹೊರತರಲು ಇನ್ನಷ್ಟು ಸಮಯ ಬೇಕಾಗಲಿದೆ ಎಂದು ತಿಳಿಸಿದ್ದರು.

ಮನೋಜ್ ಕುಮಾರ್ ಮತ್ತು ಶ್ರೀನಿವಾಸ್(ಉತ್ತರ ಪ್ರದೇಶ), ಸನ್ನಿ ಸಿಂಗ್ (ಜಮ್ಮು-ಕಾಶ್ಮೀರ), ಗುರುಪ್ರೀತ್ ಸಿಂಗ್ (ಪಂಜಾಬ್), ಮತ್ತು ಸಂದೀಪ್ ಸಾಹು, ಜೆಗ್ತಾ ಕ್ಸೆಸ್, ಸಂತೋಷ್ ಸಾಹು, ಅನುಜ್ ಸಾಹು(ಜಾರ್ಖಂಡ್) ಸುರಂಗದಲ್ಲಿ ಸಿಲುಕಿಕೊಂಡಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ(ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ(ಎಸ್‌ಡಿಆರ್‌ಎಫ್) ಸಿಬ್ಬಂದಿಗಳ ತಂಡ, ಸೇನಾಪಡೆ, ನೌಕಾಪಡೆ ಸೇರಿದಂತೆ ಒಟ್ಟು 18 ವಿವಿಧ ವಿಭಾಗಗಳು, ಘಟಕಗಳು, 54 ಅಧಿಕಾರಿಗಳು ಮತ್ತು 703 ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ.

ದುರ್ವಾಸನೆ ಹುಟ್ಟುಹಾಕಿದ ಭೀತಿ

ಸುರಂಗದಲ್ಲಿ ಮಣ್ಣು ಕುಸಿದಿರುವೆಡೆಯಿಂದ ಭಾನುವಾರ ದುರ್ವಾಸನೆ ಹೊರಬರುತ್ತಿದ್ದು, ಕಳವಳಕ್ಕೆ ಕಾರಣವಾಗಿದೆ. ಕುಸಿದ ಸುರಂಗದೊಳಗೆ ಸಿಲುಕಿಕೊಂಡಿರುವ 8 ಮಂದಿಯ ಜೀವಂತ ಇರುವಿಕೆ ಬಗೆಗೆ ಅನುಮಾನ ಪಡುವಂತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತೆಲಂಗಾಣ ಸಚಿವರೊಬ್ಬರು 8 ಮಂದಿಯೂ ಬದುಕುಳಿದಿರುವ ಸಾಧ್ಯತೆ ಕೇವಲ ಶೇ.1ರಷ್ಟಿದೆ ಎಂದು ಹೇಳಿರುವುದು ಆತಂಕವನ್ನು ಹೆಚ್ಚು ಮಾಡಿದೆ.

ವಿಶ್ವಸಂಸ್ಥೆ, ನ್ಯಾಟೊದಿಂದ ಅಮೆರಿಕ ಹೊರಕ್ಕೆ: ಮಸ್ಕ್

ನ್ಯೂಯಾರ್ಕ್: ಡೋನಾಲ್ಡ್ ಟ್ರಂಪ್ 2ನೇ ಬಾರಿಗೆ ಅಮೆರಿಕದ ಅಧ್ಯಕ್ಷರಾದ ಬಳಿಕ ಹಲವು ಕಠಿಣ-ಮಹತ್ವದ ನಿರ್ಧಾರಗಳನ್ನು ಕೈಗೊಂಡಿದ್ದಾರೆ. ಅವುಗಳಲ್ಲಿ ಮುಖ್ಯವಾದವು ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್‌ಒ) ಹಾಗೂ ಪ್ಯಾರಿಸ್ ಹವಾಮಾನ ಒಪ್ಪಂದದಿಂದ

ಹೊರಬಂದಿರುವುದು. ಈಗ ವಿಶ್ವಸಂಸ್ಥೆ ಮತ್ತು ನ್ಯಾಟೋ(ಎನ್‌ಎಟಿಒ)ದಿಂದಲೂ ಅಮೆರಿಕ ನಿರ್ಗಮಿಸಲಿದೆ ಎಂಬ ಸುಳಿವು ನೀಡಿದ್ದಾರೆ.

ಪೂರಕವಾಗಿ ವಿಶ್ವಸಂಸ್ಥೆ ಮತ್ತು ನ್ಯಾಟೋದಿಂದ ಅಮೆರಿಕ ಹೊರಬರುವುದಕ್ಕೆ ನನ್ನ ಪೂರ್ಣ ಬೆಂಬಲ ಇದೆ ಎಂದು ಅಮೆರಿಕದ ಆಡಳಿತದಲ್ಲಿ ಸುಧಾರಣೆ ತರುವುದಕ್ಕೆಂದೇ ನೇಮಕಗೊಂಡಿರುವ 'ದಕ್ಷತೆ ಇಲಾಖೆ'(ಡಿಒಜಿಇ) ಮುಖ್ಯಸ್ಥ ಎಲಾನ್ ಮಸ್ಕ್ ಪರೋಕ್ಷವಾಗಿ ಹೇಳಿದ್ದಾರೆ. ಅಮೆರಿಕನ್ ನಾಗರಿಕರೊಬ್ಬರು 'ಎಕ್ಸ್' ಖಾತೆಯಲ್ಲಿ ಅಮೆರಿಕ ಯುನೈಟೆಡ್ ನೇಷನ್ಸ್(ಯುಎನ್) ಮತ್ತು ನ್ಯಾಟೊ' ತೊರೆಯುವ ಸಮಯ ಬಂದಿದೆ ಎಂದು ಹೇಳಿದ್ದು, ಅದಕ್ಕೆ 'ಈ ಮಾತನ್ನು ನಾನೂ ಒಪ್ಪುವೆ' ಎಂದು ಮಸ್ಕ್ ಪ್ರತಿಕ್ರಿಯಿಸಿದ್ದಾರೆ.

ವಿಶ್ವದಲ್ಲಿ ಶಾಂತಿ ಸ್ಥಾಪನೆ-ಭದ್ರತೆ ಖಚಿತಪಡಿಸಿ ಭವಿಷ್ಯದ ತಲೆಮಾರುಗಳನ್ನು ಯುದ್ಧ ಭೀತಿಯಿಂದ ರಕ್ಷಿಸಲೆಂದೇ 1945ರ ಅ24ರಂದು 'ವಿಶ್ವಸಂಸ್ಥೆ' (ಯುಎನ್) ರಚಿಸಲಾಗಿದೆ. ಇದರ ರಚನೆ-ಕಾರ್ಯನಿರ್ವಹಣೆಯಲ್ಲಿ ಅಮೆರಿಕದ ಪಾತ್ರ ಮಹತ್ವದ್ದಾಗಿದೆ. ಒಂದು ವೇಳೆ ನ್ಯಾಟೊ ಸದಸ್ಯ ರಾಷ್ಟ್ರಗಳು ರಕ್ಷಣಾ ಬಜೆಟ್ ಹೆಚ್ಚಿಸಲು ವಿಫಲವಾದರೆ ನ್ಯಾಟೊದಿಂದ ಅಮೆರಿಕ ನಿರ್ಗಮಿಸುತ್ತದೆ ಎಂದು ಅಮೆರಿಕ ಅಧ್ಯಕ್ಷೀಯ ಚುನಾವಣೆಗೂ ಮುನ್ನವೇ, ಡಿಸೆಂಬರ್‌ನಲ್ಲೇ ಡೊನಾಲ್ಡ್ ಟ್ರಂಪ್ ಹೇಳಿದ್ದರು. 32 ಯುರೋಪ್ ದೇಶಗಳು ಒಟ್ಟುಗೂಡಿ ರಚಿಸಿಕೊಂಡಿರುವ ಅಂತಾರಾಷ್ಟ್ರೀಯ ಸಂಘಟನೆ 'ನ್ಯಾಟೊ'. ಉತ್ತರ ಅಟ್ಲಾಂಟಿಕ್ ಮೈತ್ರಿಕೂಟ(ಒಕ್ಕೂಟ) ಎಂದು ಕೂಡಾ ಕರೆಯಲಾಗುತ್ತದೆ. ಸದಸ್ಯ ರಾಷ್ಟ್ರಗಳ ಸ್ವಾತಂತ್ರ್ಯ, ಸಾರ್ವಭೌಮತೆ ಹಾಗೂ ಭದ್ರತೆ ಕಾಪಾಡುವುದು ಒಕ್ಕೂಟದ ಉದ್ದೇಶವಾಗಿದೆ.

ವಾಟ್ಸಾಪ್ ತಲಾಖ್, ಪ್ರಕರಣ ದಾಖಲು

ಕಾಸರಗೋಡು: ವಾಟ್ಸಾಪ್ ಮೂಲಕ ಪತ್ನಿಗೆ ತ್ರಿವಳಿ ತಲಾಖ್ ನೀಡಿದ ಆರೋಪದ ಮೇಲೆ ಕಾಸರಗೋಡು ಜಿಲ್ಲೆಯ ನೆಲ್ಲಿಕಟ್ಟೆಯ ಅಬ್ದುಲ್ ರಜಾಕ್ ಎಂಬಾತನ ವಿರುದ್ಧ ಹೊಸದುರ್ಗ ಪೊಲೀಸರು ಭಾನುವಾರ ಪ್ರಕರಣ ದಾಖಲಿಸಿದ್ದಾರೆ.

ಕಲ್ಲೂರವಿ ಗ್ರಾಮದ 21 ವರ್ಷದ ಮಹಿಳೆ ತ್ರಿವಳಿ ತಲಾಕ್ ನೀಡಿದ ಪತಿ ಅಬ್ದುಲ್ ರಜಾಕ್ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ. ಫೆ.21 ರಂದು ವಾಟ್ಸಾಪ್ ವಾಯ್ಸ್ ಸಂದೇಶ ಕಳುಹಿಸಿದ್ದಾರೆ. ಅದರಲ್ಲಿ 3 ಬಾರಿ ತಲಾಕ್ ಹೇಳಿದ್ದಾರೆ ಎಂದು ಆರೋಪಿಸಿದ್ದಾರೆ. ಗಲ್ಫ್(ಕೊಲ್ಲಿ ರಾಷ್ಟ್ರ) 'ಯುನೈಟೆಡ್ ಅರಬ್ ಎಮರೇಟ್ಸ್'(ಯುಎಇ)ನಲ್ಲಿ ಕೆಲಸ ಮಾಡುತ್ತಿರುವ ರಜಾಕ್, ಹೆಣ್ಣು ಕೊಟ್ಟ ಮಾವನ ಮೊಬೈಲ್ ಫೋನ್‌ಗೆ(ವಾಟ್ಸಾಪ್ ಸಂಖ್ಯೆ) ತ್ರಿವಳಿ ತಲಾಖ್ ಸಂದೇಶ ಕಳುಹಿಸಿದ್ದಾರೆ. ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 351 (4) ಅಡಿಯಲ್ಲಿ ಕ್ರಿಮಿನಲ್ ಬೆದರಿಕೆ ಹಾಗೂ ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ರಕ್ಷಣೆ) ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪತಿಯ ಕುಟುಂಬವರ್ಗದವರು ನಿರಂತರ ವರದಕ್ಷಿಣೆ ಕಿರುಕುಳ ನೀಡುತ್ತಿದ್ದರು ಎಂದೂ ಮಹಿಳೆ, ಸುದ್ದಿ ವಾಹಿನಿ ಬಳಿ ಅಳಲು ತೋಡಿಕೊಂಡಿದ್ದಾರೆ. ಅಳಿಯ ಅಬ್ದುಲ್ ರಜಾಕ್ 12 ಲಕ್ಷ ರು. ಪಡೆದು ವಂಚಿಸಿದ್ದಾನೆ ಎಂದೂ ಆಕೆಯ ತಂದೆ ಆರೋಪಿಸಿದ್ದಾರೆ.

ಇಡ್ಲಿಗೆ ಪ್ಲಾಸ್ಟಿಕ್ ಹಾಳೆ: ತನಿಖೆಗೆ ಸೂಚನೆ

ದೆಹಲಿ: ಕರ್ನಾಟಕದ ಕೆಲವು ಹೋಟೆಲ್‌ಗಳಲ್ಲಿ ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಹಾಳೆ ಬಳಸಲಾಗುತ್ತಿದೆ ಎಂಬ ವರದಿಯಾಗಿರುವ ಹಿನ್ನೆಲೆ ಆ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಕರ್ನಾಟಕ ಆಹಾರ ಸುರಕ್ಷತೆ ಇಲಾಖೆಗೆ 'ಆಹಾರ ಸುರಕ್ಷತೆ-ಗುಣಮಟ್ಟ ಭಾರತೀಯ ಪ್ರಾಧಿಕಾರ'(ಎಫ್‌ಎಸ್‌ಎಸ್‌ಎಐ) ನಿರ್ದೇಶಿಸಿದೆ. ತನಿಖೆ ಬಳಿಕ ವಿವರವಾದ ವರದಿ ಸಲ್ಲಿಸುವಂತೆಯೂ ಸೂಚನೆ ನೀಡಿದೆ.

ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಹಾಳೆ ಬಳಸುತ್ತಿರುವ ಪ್ರಸಂಗಗಳನ್ನು 'ಎಫ್‌ಎಸ್‌ಎಸ್‌ಎಐ' ಗಂಭೀರವಾಗಿ ಪರಿಗಣಿಸಿದೆ. ಪ್ಲಾಸ್ಟಿಕ್‌ನಿಂದ ಹಾನಿಕಾರಕ ರಾಸಾಯನಿಕಗಳು ಆಹಾರಕ್ಕೆ ಸೇರುತ್ತವೆ. ಪ್ಲಾಸ್ಟಿಕ್ ಹಾಳೆ ಬಳಕೆ ಆಹಾರದ ಸುರಕ್ಷತೆ ಬಗೆಗೇ ಕಳವಳ ಪಡುವಂತೆ ಮಾಡಿದೆ ಎಂದು ಹೇಳಿರುವ ಸಂಸ್ಥೆ, ಪ್ಲಾಸ್ಟಿಕ್ ಹಾಳೆ ಬಳಸಿ ಇಡ್ಲಿ ಬೇಯಿಸುತ್ತಿರುವ ಹೋಟೆಲ್‌ಗಳ ವಿರುದ್ಧ ತಕ್ಷಣ ಕ್ರಮ ತೆಗೆದುಕೊಳ್ಳುವಂತೆಯೂ ರಾಜ್ಯ ಆಹಾರ ಸುರಕ್ಷತಾ ಇಲಾಖೆಗೆ ಸೂಚಿಸಿದೆ. ಕಡಿಮೆ ಗುಣಮಟ್ಟದ, ಫುಡ್‌ಗ್ರೇಡ್‌ನಲ್ಲಿಲ್ಲದ ಪ್ಲಾಸ್ಟಿಕ್ ಹಾಳೆಗಳನ್ನು ಹೆಚ್ಚಿನ ಶಾಖಕ್ಕೆ ಒಡ್ಡಿದಾಗ 'ಬಿಸ್‌ಫೆನಾಲ್ ಎ' ಮತ್ತು 'ಥಾಲೇಟ್' ಎಂಬ ವಿಷಕಾರಿ ರಾಸಾಯನಿಕಗಳು ಬಿಡುಗಡೆಯಾಗುತ್ತವೆ. ಅವು ಆಹಾರಕ್ಕೆ ಸೇರಿಕೊಂಡು ಆಹಾರ ಸೇವಿಸುವವರ ಆರೋಗ್ಯದ ಮೇಲ ಗಂಭೀರ ಪರಿಣಾಮಗಳನ್ನು ಉಂಟು ಮಾಡುತ್ತವೆ ಎಂದು ಎಫ್‌ಎಸ್‌ಎಸ್‌ಎಐನ 'ಸಿಇಒ' ಜಿ.ಕಮಲಾ ವರ್ಧನರಾವ್ ಹೇಳಿದ್ದಾರೆ.

ವಿಶ್ವದ ಶೇ.40 ಜನರಿಗೆ ತಾಯ್ನುಡಿ ಶಿಕ್ಷಣ ಅಲಭ್ಯ

ದೆಹಲಿ: ಜಾಗತಿಕವಾಗಿ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುತ್ತಿರುವವರ ಸಂಖ್ಯೆ ಗಣನೀಯವಾಗಿ ಕುಸಿತ ಕಂಡಿದೆ ಎಂದು 'ವಿಶ್ವ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ'(ಯುನೆಸ್ಕೊ) ಸಂಸ್ಥೆಯ 'ಜಾಗತಿಕ ಶಿಕ್ಷಣ ಮಾನಿಟರಿಂಗ್' (ಜಿಇಎಂ) ತಂಡ ನಡೆಸಿದ ಮಹತ್ವದ ಅಧ್ಯಯನದಿಂದ ತಿಳಿದು ಬಂದಿದೆ.

ಯುನೆಸ್ಕೊ 'ಜಿಇಎಂ' ತಂಡದ ಅಧ್ಯಯನ ವರದಿ

ವಿಶ್ವದ ಜನಸಂಖ್ಯೆಯ ಶೇ. 40ರಷ್ಟು ಜನರು ಮಾತೃಭಾಷೆ ಅಥವಾ ತಾವು ನಿತ್ಯ ಮಾತನಾಡುವ-ಅರ್ಥಮಾಡಿಕೊಳ್ಳುವ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಕಡಿಮೆ ಮತ್ತು ಮಧ್ಯಮ ಆದಾಯ ಇರುವ ದೇಶಗಳಲ್ಲಿ ಈ ಅಂಕಿ ಅಂಶ ಶೇ.90ರಷ್ಟು ಹೆಚ್ಚಿನ ಪ್ರಮಾಣದ್ದಾಗಿದೆ. ವಿವಿಧ ದೇಶಗಳಲ್ಲಿ ಮನೆಬಳಕೆ ಭಾಷೆ, ಮಾತೃಭಾಷೆಯ ಪಾತ್ರದ ಬಗ್ಗೆ ಹೆಚ್ಚಿದ ತಿಳಿವಳಿಕೆ ಇದ್ದರೂ ಶಿಕ್ಷಣ ಮಾಧ್ಯಮ ವಿಚಾರದಲ್ಲಿ ಇಂತಹ ಬೆಳವಣಿಗೆ ಕಂಡುಬಂದಿರುವುದು ಗಮನಾರ್ಹ ಎಂದು 'ಭಾಷಾ ವಿಷಯ: ಬಹುಭಾಷಾ ಶಿಕ್ಷಣದ ಕುರಿತು ಜಾಗತಿಕ ಮಾರ್ಗದರ್ಶನ' ವರದಿ ಗಮನ ಸೆಳೆದಿದೆ. ಎಲ್ಲಾ ಕಲಿಯುವವರಿಗೆ ಅನುಕೂಲವಾಗುವ ಶಿಕ್ಷಣ ವ್ಯವಸ್ಥೆಯನ್ನು ರಚಿಸುವ ಉದ್ದೇಶದಿಂದ ರಾಷ್ಟ್ರಗಳು ಬಹು ಭಾಷಾ ಶಿಕ್ಷಣ ನೀತಿಗಳು ಮತ್ತು ಅಭ್ಯಾಸಗಳನ್ನು ಜಾರಿಗೆ ತರಬೇಕಿದೆ ಎಂದು 'ಯುನೆಸ್ಕೊ' ವರದಿಯಲ್ಲಿ ಶಿಫಾರಸು ಮಾಡಿದೆ. ಈ ವರದಿಯನ್ನು '25ನೇ ಅಂತಾರಾಷ್ಟ್ರೀಯ ಮಾತೃಭಾಷಾ ದಿನ' ಸಂದರ್ಭದಲ್ಲಿ ಸಂಗ್ರಹಿಸಲಾಗಿದೆ.

ಭಾರತ 90 ಗಂಟೆ ಶ್ರಮಿಸಬೇಕು: ಕಾಂತ್

ದೆಹಲಿ: ಭಾರತವನ್ನು 2047ರ ವೇಳೆಗೆ 30 ಲಕ್ಷ ಕೋಟಿ ಡಾಲರ್ ಆರ್ಥಿಕತೆಯ ದೇಶವನ್ನಾಗಿ ಮಾಡುವ ಬಹುದೊಡ್ಡ ಗುರಿಯನ್ನು ಮುಟ್ಟಲು ಭಾರತೀಯರು ಇನ್ನಷ್ಟು ಶ್ರಮಿಸಬೇಕಿದೆ ಎಂದು ನೀತಿ ಆಯೋಗದ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಸಿಇಒ) ಅಮಿತಾಬ್ ಕಾಂತ್ ಹೇಳಿದ್ದಾರೆ.

ಆಂಗ್ಲ ವಾಣಿಜ್ಯ ಸುದ್ದಿಪತ್ರಿಕೆ ಆಯೋಜಿಸಿದ್ದ 'ಮಂಥನ್' ಶೃಂಗಸಭೆಯಲ್ಲಿ ಅವರು ಭಾನುವಾರ ಮಾತನಾಡಿದರು. 'ಕಠಿಣ ಪರಿಶ್ರಮದ ಮೇಲೆ ನಾನು ನಂಬಿಕೆ ಇರಿಸಿದವನು. ವಾರಕ್ಕೆ 80 ಗಂಟೆ ಅಥವಾ 90 ಗಂಟೆ ಆಗಿರಲಿ ಭಾರತೀಯರು ಕಷ್ಟಪಟ್ಟು ಕೆಲಸ ಮಾಡಬೇಕು. ಭಾರತದ ಆರ್ಥಿಕತೆಯನ್ನು 30 ಲಕ್ಷ ಕೋಟಿ ಅಮೆರಿಕನ್ ಡಾಲರ್(2624 ಲಕ್ಷ ಕೋಟಿ ರು.) ಆರ್ಥಿಕತೆಯತ್ತ ಕೊಂಡೊಯ್ಯುವುದು ಸವಾಲಿನ ಕೆಲಸ. ಚಿತ್ರತಾರೆಯರ ಅಭಿಪ್ರಾಯ, ಹಾವಭಾವ ಅನುಸರಿಸಿದಷ್ಟು ಸರಳವಲ್ಲ. ಜಪಾನ್, ದಕ್ಷಿಣ ಕೊರಿಯ ಮತ್ತು ಚೀನಾ ಕಠಿಣವಾದ ಕೆಲಸದ ನೀತಿ ಮೂಲಕವೇ ಈ ಮಟ್ಟದ ಆರ್ಥಿಕ ಯಶಸ್ಸನ್ನು ಸಾಧಿಸಿವೆ ಮತ್ತು ವಿಶ್ವ ದರ್ಜೆಯ ಆರ್ಥಿಕತೆಯನ್ನು ನಿರ್ಮಿಸಲು ಭಾರತ ಕೂಡಾ ಇದೇ ರೀತಿಯ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಷ್ಟಪಟ್ಟು ಕೆಲಸ ಮಾಡದಿರುವ ಬಗ್ಗೆ ಮಾತನಾಡುವುದನ್ನು ಫ್ಯಾಶನ್ ಆಗಿಸಿಕೊಂಡಿದ್ದೇವೆ ಎಂದರು.

ಸಮಾಚಾರ ಸಣ್ಣದಲ್ಲ

ಬೈಕ್ ಕಳ್ಳನ ಸಹಿತ ನಾಲ್ವರ ಬಂಧನ

ಮಂಗಳೂರು: ಜಾತ್ರೆ, ಕಂಬಳ, ಮಾಲ್, ಬಸ್ಸು, ರೈಲ್ವೆ ನಿಲ್ದಾಣಗಳಲ್ಲಿ ಪಾರ್ಕ್ ಮಾಡಿದ್ದ ಬೈಕ್ ಗಳನ್ನು ಕದಿಯುತ್ತಿದ್ದ ಅಂತರ್ ಜಿಲ್ಲಾ ದ್ವಿಚಕ್ರ ವಾಹನ ಕಳ್ಳನನ್ನು ಕಂಕನಾಡಿ ನಗರ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.ಶಿವಮೊಗ್ಗ ಜಿಲ್ಲೆಯ ಸೊರಬದ ಮಣಿಕಂಠ ಗೌಡ ಬಂಧಿತ. ಬಂಧಿತನಿಂದ ಪೊಲೀಸರು 20ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳನ್ನು ಸ್ವಾಧೀನ ಪಡೆಸಿಕೊಂಡಿದ್ದಾರೆ. ಈತ ಕದ್ದ ಬೈಕ್‌ಗಳನ್ನು ಮಣಿಕಂಠನಿಂದ ಖರೀದಿ ಮಾಡುತ್ತಿದ್ದ ಕಾರ್ಕಳದ ಸತೀಶ್ ಬಂಗೇರ, ಮೂಡುಬಿದಿರೆಯ ದೀಕ್ಷಿತ್, ತಾಳಿಕೋಟೆಯ ಸಂಗಣ್ಣ ಹೊನ್ನಳ್ಳಿ ಎಂಬವರನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆರೋಪಿ ಮಣಿಕಂಠ ಸೊರಬ ಮೂಲದವನಾಗಿದ್ದರೂ, ಮೂರ್ನಾಲ್ಕು ವರ್ಷದಿಂದ ಕುಟುಂಬದೊಂದಿಗೆ ಮೂಡುಬಿದಿರೆಯಲ್ಲಿದ್ದ. ಮಂಗಳೂರಿನ ಬಂದರು, ಪಾಂಡೇಶ್ವರ, ಬಜಪೆ, ಮೂಲ್ಕಿ, ಉಳ್ಳಾಲ, ಕಂಕನಾಡಿ ನಗರ ಠಾಣೆ ವ್ಯಾಪ್ತಿಯ 15 ಪ್ರಕರಣ ಮತ್ತು ಬಂಟ್ವಾಳ ನಗರ, ಗ್ರಾಮಾಂತರ, ಉಪ್ಪಿನಂಗಡಿ ಠಾಣೆ ವ್ಯಾಪ್ತಿಯ 5 ಪ್ರಕರಣ ಸೇರಿ 20 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಸಂಖ್ಯೆ ಇಳಿಕೆ ಕಾಂಗ್ರೆಸ್ ಹೋರಾಟ:ಡಿಕೆಶಿ

ಮಂಗಳೂರು: ಸಂಸತ್ತಿನಲ್ಲಿ ದಕ್ಷಿಣ ರಾಜ್ಯಗಳ ಸಂಖ್ಯಾಬಲವನ್ನು ಕಡಿಮೆ ಮಾಡಲು ಬಿಜೆಪಿ ಸರ್ಕಾರ ಮುಂದಾಗಿದ್ದು, ಕಾಂಗ್ರೆಸ್ ಇದರ ವಿರುದ್ಧ ಹೋರಾಟ ಮಾಡಲಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.ಮಂಗಳೂರು ವಿಮಾನ ನಿಲ್ದಾಣದ ಬಳಿ ಶಿವಕುಮಾರ್ ಅವರು ಮಾಧ್ಯಮಗಳ ಪ್ರಶ್ನೆಗಳಿಗೆ ಭಾನುವಾರ ಪ್ರತಿಕ್ರಿಯಿಸಿದರು. ಕ್ಷೇತ್ರ ಪುನರ್ ವಿಂಗಡಣೆ ಮಾಡಲು ಮುಂದಾಗಿರುವ ಬಗ್ಗೆ ಕೇಳಿದಾಗ, ಕೇಂದ್ರ, ಸಂಸತ್ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಲು ಮುಂದಾಗಿರುವುದನ್ನು ಕಾಂಗ್ರೆಸ್ ಪಕ್ಷ ವಿರೋಧಿಸುತ್ತದೆ. ಇದು ಸರಿಯಲ್ಲ. ಇದರ ವಿರುದ್ಧ ಚುನಾವಣಾ ಆಯೋಗ, ನ್ಯಾಯಾಲಯಗಳ ಮೂಲಕ ನಾವು ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.

ಅಂಗಡಿ ಸಾಮಗ್ರಿ ಕಳ್ಳತನ: ದಾಖಲು

ಮಂಗಳೂರು: ನರಿಂಗಾನ ಗ್ರಾಮದ ತೌಡುಗೆಣೆ ಬಳಿ ಜಂಕ್ಷನ್ ನ ಅಂಗಡಿಯಲ್ಲಿ ನಗದು ಹಾಗೂ ಸಾಮಗ್ರಿಗಳನ್ನು ಕಳ್ಳತನದ ಘಟನೆ ಬೆಳಕಿಗೆ ಬಂದಿದೆ. ಅಂಗಡಿ ಬೀಗ ಮುರಿಯಲು ಸುಮಾರು ಅರ್ಧ ಗಂಟೆ ಒದ್ದಾಡಿದ್ದು ಕಳ್ಳನ ಕರಾಮತ್ತು ಸಿಸಿಟಿವಿಯಲ್ಲಿ ದಾಖಲಾಗಿದೆ. ಸುಮಾರು ಹತ್ತು ಸಾವಿರ ನಗದು, ಸುಮಾರು 40ಸಾವಿರ ರೂ. ಮೌಲ್ಯದ ಸಾಮಗ್ರಿಗಳನ್ನು ಕದ್ದಿದ್ದಾನೆ. ಅಂಗಡಿಯ ಮಾಲಿಕರು ಈ ಕುರಿತು ದೂರು ಪೊಲೀಸರಿಗೆ ನೀಡಿದ್ದಾರೆ.

ಬೆಂಗ್ರೆ ಕಸಬಾ ಗ್ಯಾರಂಟಿ ವಿಲೇವಾರಿ ಶಿಬಿರ

ಮಂಗಳೂರು: ಬೆಂಗ್ರೆ ಕಸಬಾದಲ್ಲಿ ಪಂಚ ಗ್ಯಾರಂಟಿ ಯೋಜನೆಯುಗಳ ವಿಲೇವಾರಿ ಶಿಬಿರವನ್ನು ವಿಧಾನ ಪರಿಷತ್ ಶಾಸಕ ಐವನ್ ಡಿ'ಸೋಜ ಉದ್ಘಾಟಿಸಿದರು. ಗ್ಯಾರಂಟಿ ಯೋಜನೆಗಳು ಬಹಳಷ್ಟು ಜನರಿಗೆ ತಮ್ಮ ಜೀವನದಲ್ಲಿ ನೆಮ್ಮದಿಯನ್ನು ತಂದುಕೊಟ್ಟಿದೆ ಮಾತ್ರವಲ್ಲದೇ ಜನರ ಜೀವನದಲ್ಲಿ ಸಂತಸವನ್ನು ಮೂಡಿಸಿದೆ ಎಂದು ಐವನ್ ಡಿಸೋಜ ನುಡಿದರು ಸುಮಾರು 2000ಕೋಟಿ ರೂಪಾಯಿ.ಗೂ ಅಧಿಕ ಮೊತ್ತ ದ.ಕ. ಜಿಲ್ಲೆಯಲ್ಲಿ ಇವತ್ತು ರಾಜ್ಯ ಸರ್ಕಾರ ವಿನಿಯೋಗ ಮಾಡಿದೆ. ಪ್ರತಿ ತಾಲೂಕುಗಳಲ್ಲಿ 200ಕೋಟಿ ರೂ.ಗಿಂತಲೂ ಹೆಚ್ಚು ಮೊತ್ತವನ್ನು ವಿನಿಯೋಗಿಸಿದೆ ಎಂದರು. ಯಾರಿಗೆ ಈ ಯೋಜನೆಯ ಪ್ರಯೋಜನ ದೊರಕಿರುವುದಿಲ್ಲ ಅಂತವರಿಗೆ ಪಂಚ ಗ್ಯಾರಂಟಿ ಶಿಬಿರದ ಮೂಲಕ ಸಮಿತಿಯನ್ನು ಮಾಡಿ ಸಿಗದೇ ಇರುವವರನ್ನು ಕರೆಯಿಸಿ ಅವರ ದಾಖಲೆಗಳನ್ನು ಸರಿಪಡಿಸಿ ಯೋಜನೆಯನ್ನು ಮುಟ್ಟುವಂತೆ ಮಾಡುತ್ತಿರುವುದು ಸರಕಾರದ ಪ್ರಮುಖ ಕೆಲಸ ಎಂದರು.ಗ್ಯಾರಂಟಿ ಸದಸ್ಯರುಗಳಾದ ಅಶ್ರಫ್ ಬೆಂಗ್ರೆ ಕ್ರಿಸ್ಟನ್ ಮೇನೆಜಸ್, ನೀತು , ವಿದ್ಯಾ ಉಪಸ್ಥಿತರಿದ್ದರು.

ಪಿಯುಸಿ ಪರೀಕ್ಷೆ: 164 ಮಂದಿ ಗೈರು

ಮಂಗಳೂರು: ಜಿಲ್ಲೆಯಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆಯ ಮೊದಲ ದಿನವಾದ ಇಂದು ಕನ್ನಡ ಪರೀಕ್ಷೆಗೆ ಒಟ್ಟು 2,1149 ವಿದ್ಯಾರ್ಥಿಗಳು ಹಾಜರಾಗಿದ್ದು, 164 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಅರೇಬಿಕ್ ಪರೀಕ್ಷೆಗೆ ಒಟ್ಟು 227 ವಿದ್ಯಾರ್ಥಿಗಳು ಹಾಜರಾಗಿದ್ದು, ಒಬ್ಬ ವಿದ್ಯಾರ್ಥಿ ಗೈರು ಹಾಜರಾಗಿದ್ದರು ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

{ ಡಿ.ಕೆ.ಶಿವಕುಮಾರ್ } ಡಿಸಿಎಂ

ಮಾರಿಗುಡಿ ದೇವಸ್ಥಾನದ ಶಿಲ್ಪಕಲೆ ಚೆನ್ನಾಗಿ ಮೂಡಿಬಂದಿದೆ. ಕೆತ್ತನೆ ಕೆಲಸ ಅಚ್ಚುಕಟ್ಟಾಗಿದೆ. ಇಳಕಲ್ಲಿನ ಕೆಂಪು ಕಲ್ಲನ್ನು ಬಳಸಲಾಗಿದೆ. ನಾನಾ ಭಾಗದ ಜನರು ಕೈ ಜೋಡಿಸಿ ತಾಯಿಯ ಆಶೀರ್ವಾದಕ್ಕೆ ಭಾಜನರಾಗಿದ್ದಾರೆ. ದೇವಸ್ಥಾನ ಇನ್ನೂ ಬೆಳೆಯಲಿ ಎಂದು ಆಶಿಸುತ್ತೇನೆ.

ಶ್ರೀಹೊಸಮಾರಿಗುಡಿ ಬ್ರಹ್ಮಕಲಶೋತ್ಸವ | ಡಿಸಿಎಂ ಡಿ.ಕೆ. ಶಿವಕುಮಾರ್

ನಮ್ಮ ಧರ್ಮದಲ್ಲಿ ನಾವು ಬದುಕಬೇಕು

ಉಡುಪಿ: ನಾವೆಲ್ಲರೂ ಮಾನವೀಯತೆಗೆ ತಲೆಬಾಗಬೇಕು. ಮಾನವ ಧರ್ಮವನ್ನು ಉಳಿಸಬೇಕು. ಯಾರಿಗೂ ತೊಂದರೆ ಕೊಡದಂತೆ ನಮ್ಮ ಧರ್ಮದ ದಾರಿಯಲ್ಲಿ ನಾವು ಬದುಕಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಅವರು ಕಾಪುವಿನಲ್ಲಿ ಭಾನುವಾರ ಇತಿಹಾಸ ಪ್ರಸಿದ್ಧ ಶ್ರೀಹೊಸಮಾರಿಗುಡಿ ಬ್ರಹ್ಮಕಲಶೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು. ಮಾರಿಯಮ್ಮ ಎಲ್ಲರೂ ನೀಡುವ ಹಣ್ಣು, ಹೂವು ಜೊತೆಗೆ ಕೋಳಿಯನ್ನು ಸಹ ಅರ್ಪಿಸಿಕೊಳ್ಳುತ್ತಾಳೆ ಎಂದು ಪುರೋಹಿತರು ಹೇಳಿದರು. ಏಕೆಂದರೆ ಭಕ್ತರು ಭಕ್ತಿಯಿಂದ ನೀಡಿದ್ದನ್ನು ತಾಯಿ ಬೇಡ ಎನ್ನುವುದಿಲ್ಲ. ಭಕ್ತಿಗೆ ದೊಡ್ಡ ಶಕ್ತಿಯಿದೆ ಎಂದರು.

ಸರಕಾರದ ನೆರವಿಲ್ಲದೇ ಭಕ್ತರ ಸಣ್ಣ ಹಾಗೂ ದೊಡ್ಡ ಮಟ್ಟದ ನೆರವಿನಿಂದ ಅತ್ಯದ್ಭುತವಾಗಿ ಮಾರಿಗುಡಿಯನ್ನು ನಿರ್ಮಾಣ ಮಾಡಲಾಗಿದೆ. ನಮ್ಮ ಸಂಸ್ಕೃತಿಯಲ್ಲಿ ದೇವತೆಗಳಿಗೆ ಮೊದಲ ಪ್ರಾಶಸ್ತ್ಯ ನೀಡಲಾಗಿದೆ. ಪ್ರತಿ ಊರಿಗೆ ಹೋದಾಗಲೂ ಮೊದಲು ಕೇಳುವುದು ಇಲ್ಲಿನ ಗ್ರಾಮ ದೇವತೆ ಯಾವುದು ಎಂದು? ಪ್ರತಿ ದೇವರ ಹೆಸರಿನ ಮುಂಭಾಗ ಪತ್ನಿಯರ ಹೆಸರನ್ನು ಸೇರಿಸಿ ಕರೆಯಲಾಗುತ್ತದೆ. ಉದಾಹರಣೆಗೆ ಲಕ್ಷ್ಮೀ ವೆಂಕಟೇಶ್ವರ, ಶಿವ ಪಾರ್ವತಿ ಎಂದು ಹೇಳುತ್ತೇವೆ. ನಾವು ಹುಟ್ಟಿದ ದೇಶವನ್ನು ಮಾತೃಭೂಮಿ ಎಂದರೆ, ಮಾತಾಡುವ ಭಾಷೆಯನ್ನು ಮಾತೃಭಾಷೆ ಎನ್ನುತ್ತಾರೆ ಎಂದರು.

ಭಕ್ತ ಹಾಗೂ ಭಗವಂತನಿಗೆ ವ್ಯವಹಾರ ನಡೆಯುವ ಸ್ಥಳ ದೇವಸ್ಥಾನ. ಮನುಷ್ಯನಿಗೆ ಕಷ್ಟಗಳು ಬಂದಾಗ, ದುಃಖ ಉಂಟಾದಾಗ ದೂರ ಮಾಡುವವಳು ದುರ್ಗಾ ದೇವಿ. ಧರ್ಮ ಯಾವುದಾದರೂ ತತ್ವವೊಂದೇ, ನಾಮ ನೂರಾದರೂ ದೈವವೊಂದೇ, ಪೂಜೆ ಯಾವುದಾದರೂ ಭಕ್ತಿಯೊಂದೇ, ಕರ್ಮ ಹಲವಾದರೂ ನಿಷ್ಠೆಯೊಂದೇ, ದೇವನೊಬ್ಬ ನಾಮಹಲವು. ಮಾರಿಯಮ್ಮ ದೇವಿಯ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನನ್ನ ಜೀವನದ ಪುಣ್ಯದ ಘಳಿಗೆ ಎಂದರು.

ಮಾಜಿ ಎಂಎಲ್‌ಸಿ ಪ್ರತಾಪ್ ಅವರು ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಕಾರ್ಯಕ್ರಮಕ್ಕೆ ಬರಮಾಡಿಕೊಂಡರು.

99 ಕೋಟಿ ರೂ. ವೆಚ್ಚದಲ್ಲಿ ದೇಗುಲ ಅಭಿವೃದ್ಧಿ

ದೇವರು ವರ, ಶಾಪ ಎರಡೂ ಕೊಡುವುದಿಲ್ಲ. ಆದರೆ ಅವಕಾಶವನ್ನು ಕೊಡುತ್ತಾನೆ. ನಾನೂ ಸೇರಿದಂತೆ ಅನೇಕ ಭಕ್ತರಿಗೆ ದೇವಿಯ ಸೇವೆ ಮಾಡಲು ಅವಕಾಶ ಸಿಕ್ಕಿರುವುದು ನಮ್ಮ ಭಾಗ್ಯ. ಭಕ್ತರ ನೆರವಿನಿಂದ ಇಡೀ ದೇವಸ್ಥಾನವನ್ನು ಸುಮಾರು 99 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗಿದೆ ಎಂದು ತಿಳಿದು ಸಂತೋಷವಾಯಿತು ಎಂದು ಡಿಕೆಶಿ ಹೇಳಿದರು.

ಮಾನಸಿಕ ಒತ್ತಡಗಳ ನಿವಾರಣೆಗೆ ಕ್ರೀಡೆ ಸುಲಭ

ಉಡುಪಿ: ವಕೀಲರು ಹಾಗು ನ್ಯಾಯಾಧೀಶರು ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಕಾನೂನು ವ್ಯವಸ್ಥೆಯಲ್ಲಿ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಕಾಮೇಶ್ವರ್ ರಾವ್ ಅಭಿಪ್ರಾಯ ಪಟ್ಟರು.

ಉಡುಪಿ ವಕೀಲರ ಸಂಘ ಮತ್ತು ನ್ಯಾಯಾಲಯದ 125 ನೇ ವರ್ಷದ ಶತಮಾನೋತ್ತರ ರಜತ ಮಹೋತ್ಸವದ ಭಾಗವಾಗಿ ಎಮ್‌ಜಿಎಮ್ ಮೈದಾನದಲ್ಲಿ ನಡೆಯುತ್ತಿರುವ ಎರಡು ದಿನದ ರಾಜ್ಯ ಮಟ್ಟದ ಹೊನಲು ಬೆಳಕಿನ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ನ್ಯಾಯವಾದಿಗಳು ಪ್ರಕರಣಗಳನ್ನು ಜಯಿಸಲು ಸಾಕಷ್ಟು ಅಧ್ಯಯನ, ಚಿಂತನೆ ನಡೆಸಬೇಕಾಗುತ್ತದೆ. ಅಂತೆಯೇ ನ್ಯಾಯಧೀಶರು ಉತ್ತಮವಾದ ತೀರ್ಪು ನೀಡಲು ಅಧ್ಯಯನ ನಡೆಸಬೇಕಾಗುತ್ತದೆ. ಇದರಿಂದ ಹೆಚ್ಚು ಒತ್ತಡಕ್ಕೆ ಒಳಗಾಗುತ್ತಾರೆ. ಇದನ್ನು ನಿವಾರಿಸಲು ಸುಲಭ ಮಾರ್ಗ ಎಂದರೇ ಕ್ರೀಡೆ. ವಕೀಲರ ಸಂಘ ಕ್ರೀಡಾ ಪಂದ್ಯಾಟಗಳನ್ನು ನಿರಂತರವಾಗಿ ನಡೆಸುತ್ತಿರಬೇಕು ಎಂದರು. ಹೈಕೋರ್ಟಿನ ನ್ಯಾಯಮೂರ್ತಿ ರಾಜೇಶ್ ರೈ.ಕೆ ಮಾತನಾಡಿ, ಕ್ರೀಡೆ ಮತ್ತು ನ್ಯಾಯಾಂಗ ವ್ಯವಸ್ಥೆ ಒಂದಕ್ಕೊಂದು ನೇರ ಸಂಬಂಧ ಹೊಂದಿದೆ. ವಕೀಲರು ಕ್ರೀಡೆಯಲ್ಲಿ ತೊಡಗಿಸಿಕೊಂಡಲ್ಲಿ ಅವರಲ್ಲಿನ ಕ್ರಿಯಾಶೀಲತೆ ಹೆಚ್ಚಾಗುತ್ತದೆ ಎಂದರು.

ಉಡುಪಿ ಜಿಲ್ಲಾ ಆಡಳಿತಾತ್ಮಕ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಮಾತನಾಡಿ, ನಿತ್ಯವು ಕನಿಷ್ಠ ವ್ಯಾಯಾಮ ಮಾಡಬೇಕಾಗುತ್ತದೆ. ಅದು ಆರೋಗ್ಯಕ್ಕೂ ಉತ್ತಮ ಮತ್ತು ವಕೀಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಹಕಾರಿಯಾಗುತ್ತದೆ ಎಂದವರು ನುಡಿದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಮ್.ಎಲ್. ರಘುನಾಥ್, ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್, ಉಡುಪಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಕಿರಣ್ ಎಸ್. ಗಂಗಣ್ಣವರ್, ವಕೀಲರ ಸಂಘದ ಉಪಾಧ್ಯಕ್ಷ, ಕ್ರೀಡಾಕೂಟದ ಸಂಚಾಲಕ ಮಿತ್ರಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

ಎಂಸಿಸಿ ಬ್ಯಾಂಕ್ 19ನೇ ಶಾಖೆ ಬೆಳ್ಮಣ್ ನಲ್ಲಿ ಲೋಕಾರ್ಪಣೆ

ಮಂಗಳೂರು: ಎಂಸಿಸಿ ಬ್ಯಾಂಕ್ ನ 19ನೇ ಶಾಖೆ ಬೆಳ್ಮಣ್ ನಲ್ಲಿ ಆದಿತ್ಯವಾರ ಲೋಕಾರ್ಪಣೆಗೊಂಡಿತು. ಬೆಳ್ಮಣ್ ಚರ್ಚ್ ಧರ್ಮಗುರು ಫೆಡ್ರಿಕ್ ಮಸ್ಕರೇನಸ್ ನೂತನ ಬ್ಯಾಂಕ್ ಉದ್ಘಾಟಿಸಿ ಶುಭ ಹಾರೈಸಿದರು.

ಬಳಿಕ ಆಶೀರ್ವಚನದ ನುಡಿಗಳನ್ನಾಡಿದ ಅವರು, ಎಂಸಿಸಿ ಬ್ಯಾಂಕ್ ನ 19ನೇ ಶಾಖೆ ಇಂದು ಉದ್ಘಾಟನೆಗೊಂಡಿದೆ. ಗ್ರಾಹಕರ ಸಹಕಾರದಿಂದ ಬ್ಯಾಂಕ್ ಈ ಮಟ್ಟಕ್ಕೆ ತಲುಪಿದೆ. ಅನಿಲ್ ಲೋಬೋ ಮುಂದಾಳತ್ವದಲ್ಲಿ ಹಾಗೂ ನಿರ್ದೇಶಕರ ಅಹರ್ನಿಶಿ ದುಡಿಮೆ ಮತ್ತು ಸಿಬ್ಬಂದಿಯ ಕಾರ್ಯ ದಕ್ಷತೆಯಿಂದ ಎಂಸಿಸಿ ಬ್ಯಾಂಕ್ ಮನೆಮಾತಾಗಿದೆ ಎಂದರು.

ವಿಧಾನ ಪರಿಷತ್ ಶಾಸಕ ಐವನ್ ಡಿಸೋಜ ಮಾತನಾಡಿ, ವಿಶ್ವಾಸಾರ್ಹತೆಗೆ ಇನ್ನೊಂದು ಹೆಸರೇ ಎಂಸಿಸಿ ಬ್ಯಾಂಕ್. ಈ ಕಾರಣದಿಂದ 113 ವರ್ಷಗಳಿಂದ ಬ್ಯಾಂಕ್ ಗ್ರಾಹಕ ಸೇವೆಯಲ್ಲಿ ಹೆಸರು ಪಡೆದಿದೆ. ಕಳೆದ 10 ವರ್ಷಗಳಲ್ಲಿ ಬ್ಯಾಂಕ್ ರಾಷ್ಟ್ರೀಕೃತ ಬ್ಯಾಂಕ್ ಗೆ ಸರಿಸಮಾನವಾಗಿ ಬೆಳೆದಿದೆ. ಒಂದು ಊರಿಗೆ ಬ್ಯಾಂಕ್ ಬಂತು ಎಂದರೆ ಅದು ಪ್ರಗತಿಗೆ ದಾರಿಯಾಗುತ್ತದೆ ಎಂದರು.

ಬೆಳ್ಮಣ್ ಚರ್ಚ್ ಧರ್ಮಗುರು ಫೆಡ್ರಿಕ್ ಮಸ್ಕರೇನಸ್ ನೂತನ ಬ್ಯಾಂಕ್ ಉದ್ಘಾಟಿಸಿ ಶುಭ ಹಾರೈಸಿದರು.

ದೈಜಿ ವರ್ಲ್ಡ್ ಸಂಸ್ಥಾಪಕ ವಾಲ್ಟರ್ ನಂದಳಿಕೆ ಮಾತಾಡಿ, ಎಂಸಿಸಿ ಬ್ಯಾಂಕ್ ಅನ್ನು ಹಿಂದೆ ಕ್ಯಾಥೋಲಿಕ್ ಸಮುದಾಯದವರು ಅಮ್ಚೆ ಬ್ಯಾಂಕ್ ಎಂದು ಕರೆಯುತ್ತಿದ್ದರು. ಆದರೆ ಇಂದು ಇದು ನಮ್ಮೆಲ್ಲರ ಬ್ಯಾಂಕ್ ಆಗಿದೆ. ಇದಕ್ಕೆ ಕಾರಣ ಬ್ಯಾಂಕ್ ನ ಗ್ರಾಹಕ ಸ್ನೇಹಿ ನಿರ್ದೇಶಕರು ಮತ್ತು ಸಿಬ್ಬಂದಿ ಎಂದರು.

ಬ್ಯಾಂಕ್ ಅಧ್ಯಕ್ಷ ಅನಿಲ್ ಲೋಬೊ ಮಾತಾಡಿ, ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಬ್ಯಾಂಕ್ ನಲ್ಲಿ ಖಾತೆ ತೆರೆಯುತ್ತಿದ್ದಾರೆ. ನಮ್ಮ ಧ್ಯೇಯ ಬ್ಯಾಂಕ್ ಶಾಖೆಗಳನ್ನು ಹೆಚ್ಚಿಸಿ ಗ್ರಾಹಕರಿಗೆ ನೆರವಾಗುವುದು ಎಂದರು.

ವೇದಿಕೆಯಲ್ಲಿ ಬೆಳ್ಮಣ್ ಗ್ರಾಮ ಪಂಚಾಯತ್ ರಾಮೇಶ್ವರಿ ಎಂ. ಶೆಟ್ಟಿ, ಜನರಲ್ ಮೆನೇಜರ್ ಸುನಿಲ್, ಅನಿವಾಸಿ ಉದ್ಯಮಿ ರೋಹನ್ ರಾಡ್ರಿಗಸ್ ಲಂಡನ್, ಬ್ರಾಂಚ್ ಮೆನೇಜರ್ ಶೈನಿ ಲಸ್ರಾದೋ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರಿಗೆ ಡಿಕೆಶಿ ಕರೆ

ಜಾತಿ ರಾಜಕಾರಣ ಬಿಟ್ಟು ಪಕ್ಷ ಸಂಘಟಿಸಿ

ಉಡುಪಿ: ಜಾತಿ ರಾಜಕಾರಣ ಮಾಡುವುದನ್ನು ಬಿಟ್ಟು, ಪಕ್ಷವನ್ನು ಬಲಪಡಿಸಬೇಕು. ಡಿ.ಕೆ. ಶಿವಕುಮಾರ್ ಬಣ ಅಥವಾ ಇನ್ನ್ಯಾವುದೋ ನಾಯಕರ ಬಣ ಮಾಡಬೇಡಿ. ಎಲ್ಲರದ್ದೂ ಒಂದೇ ಬಣ ಅದು ಕಾಂಗ್ರೆಸ್ ಬಣ ಎಂದು ಕೈ ನಾಯಕರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಾರ್ನಿಂಗ್ ನೀಡಿದ್ದಾರೆ.

ಭಾನುವಾರ ಉಡುಪಿಯ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಮುಂದಿನ ಮೂರು ತಿಂಗಳಲ್ಲಿ ಜಿಲ್ಲಾ ಕಾಂಗ್ರೆಸ್ ಸರಿ ಆಗಬೇಕು. ನಾಯಕರು ಪಕ್ಷ ಸಂಘಟನೆ ಮಾಡಬೇಕು, ಇಲ್ಲವಾದರೆ ಎಲ್ಲವನ್ನು ಬದಲಾವಣೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ತತ್ವದಡಿ ಕೆಲಸ ಮಾಡಿ, ಕೆಲ ಸಚಿವರ ನೇತೃತ್ವದಲ್ಲಿ ಒಂದು ಕೋರ್ ಟೀಮ್ ರಚನೆ ಮಾಡಲಾಗಿದೆ. ಸರ್ಕಾರ ಮತ್ತು ಪಕ್ಷ ಜೊತೆಯಾಗಿ ಕೆಲಸ ಮಾಡುವ ಟೀಮ್ ಅದಾಗಿದ್ದು, ಸರ್ಕಾರದ ಯೋಜನೆಗಳನ್ನು ಜನತೆಗೆ ಮುಟ್ಟಿಸುವ ಕೆಲಸ ಮಾಡುತ್ತೇವೆ ಎಂದರು.

ಕೆಪಿಸಿಸಿ ಹೆಸರಲ್ಲೇ ಆರ್‌ಟಿಸಿ

ರಾಜ್ಯದಲ್ಲಿ ವಿಧಾನಸಭಾವಾರು ನೂರು ಹೊಸ ಕಾಂಗ್ರೆಸ್ ಕಚೇರಿ ತೆರೆದು ಸೇವೆ ಕೊಡಬೇಕು ಎಂಬ ಯೋಜನೆ ಹಮ್ಮಿಕೊಳ್ಳಲಾಗಿದೆ. ಮುಂದಿನ ತಿಂಗಳು ಬೆಂಗಳೂರಲ್ಲಿ ರಾಹುಲ್ ಗಾಂಧಿಯವರು ವರ್ಚ್ಯುವಲ್ ಆಗಿ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಬೆಂಗಳೂರಿನಲ್ಲಿ 3 ಹೊಸ ಕಚೇರಿ ಪ್ರಾರಂಭವಾಗಲಿದೆ. ಹೊಸ ಕಚೇರಿಯ ಜಾಗ ಕೆಪಿಸಿಸಿಯ ಹೆಸರಲ್ಲೇ ನೊಂದಣಿ ಆಗಿರುವುದು ಕಡ್ಡಾಯ, ವೈಯಕ್ತಿಕ ಹೆಸರಿನಲ್ಲಿರುವ ಜಾಗದಲ್ಲಿ ಕಚೇರಿ ಪ್ರಾರಂಭಿಸಲು ಅವಕಾಶವಿಲ್ಲ ಎಂದರು.

ಪಕ್ಷ ಪೂಜೆ ಮಾಡಿ

ಶಿಳ್ಳೆ ಹೊಡೆಯೋದನ್ನ ಬಿಡಿ

ಸಭೆಯಲ್ಲಿ ಡಿ. ಕೆ. ಶಿವಕುಮಾರ್ ಅವರ ಮಾತಿಗೆ ಮುನ್ನ ಶಿಳ್ಳೆ ಹೊಡೆದ ಕಾಂಗ್ರೆಸ್ ಕಾರ್ಯಕರ್ತರಿಗೆ, ಶಿಳ್ಳೆ ಹೊಡೆಯೋದನ್ನ ಬಿಡಿ, ಕಾಂಗ್ರೆಸ್ ಕಚೇರಿ ದೇವಸ್ಥಾನ ಇದ್ದಂತೆ. ಪಕ್ಷಕ್ಕೆ, ಕಚೇರಿಗೆ ಗೌರವ ಕೊಡಬೇಕು ಎಂದು ಡಿಕೆಶಿ ಕಿವಿಮಾತು ಹೇಳಿದರು.

ಯೂತ್ ಕಾಂಗ್ರೆಸ್ ಎಲೆಕ್ಷನ್ ಆಗಿದ್ದು, ಹಲವು ಜನ ಗೆದ್ದಿದ್ದೀರಿ. ನೀವು ಗೆದ್ದಿರೋದು ಬಿಜೆಪಿ ವಿರುದ್ಧ ಅಲ್ಲ, ಕಾಂಗ್ರೆಸ್ ಪಕ್ಷದ ಒಳಗೆ. ಗೆದ್ದವರು, ಸೋತವರನ್ನು ವಿಶ್ವಾಸಕ್ಕೆ ಪಡೆದು ಒಟ್ಟಿಗೆ ಪಕ್ಷದ ಕಾರ್ಯ ನಿರ್ವಹಿಸಬೇಕು. ಪಕ್ಷದೊಳಗೆ ಗುಂಪುಗಾರಿಕೆ ಮಾಡಬೇಡಿ, ಪಕ್ಷದಲ್ಲಿ ವ್ಯಕ್ತಿ ಪೂಜೆ ಮಾಡುವುದನ್ನು ಬಿಟ್ಟು, ಪಕ್ಷ ಪೂಜೆ ಮಾಡಿ ಎಂದರು.

ಗುಂಪುಗಾರಿಕೆ ಮಾಡಿದ ಹೀರೋಗಳು ಜೀರೋ ಆಗಿದ್ದಾರೆ, ಜೀರೋಗಳು ಹೀರೋ ಆಗಿದ್ದಾರೆ. ಜಿ.ಪಂ, ತಾ.ಪಂ. ಚುನಾವಣೆ ಬರ್ತಾ ಇದೆ. ದಕ್ಷಿಣ-ಕನ್ನಡ ಉಡುಪಿ ಜಿಲ್ಲೆಯಲ್ಲಿ ಕನಿಷ್ಠ 9 ಸೀಟ್ ಗೆಲ್ಲಬೇಕು ಎಂಬ ಗುರಿ ಇಟ್ಟುಕೊಳ್ಳಲಾಗಿದೆ ಎಂದರು.

ಸಭೆಯಲ್ಲಿ ಮಾಜಿ ಸಚಿವರಾದ ಜಯಪ್ರಕಾಶ್ ಹೆಗ್ಡೆ, ವಿನಯ್ ಕುಮಾರ್ ಸೊರಕೆ, ಜಿಲ್ಲಾಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ವಿಧಾನ ಪರಿಷತ್ ಸದಸ್ಯರಾದ ಮಂಜುನಾಥ್ ಭಂಡಾರಿ, ಐವಾನ್ ಡಿಸೋಜಾ, ಮಾಜಿ ಶಾಸಕ ಗೋಪಾಲ್ ಪೂಜಾರಿ, ಕೆಪಿಸಿಸಿ ಪ್ರ. ಕಾರ್ಯದರ್ಶಿ ಮಿಥುನ್ ರೈ, ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಕಿಶನ್ ಹೆಗ್ಡೆ ಕೊಳ್ಕೆಬೈಲು, ಉಡುಪಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಕಾಂಚನ್, ಮುಖಂಡರಾದ ಮುನಿಯಾಲು ಉದಯ್ ಕುಮಾರ್ ಶೆಟ್ಟಿ, ದಿನೇಶ್ ಹೆಗ್ಡೆ ಮೊಳಹಳ್ಳಿ ಸೇರಿದಂತೆ ವ'ೂದ'ಲಾದ'ವ'ರ'ು ಉಪಸ್ಥಿತರಿದ್ದರು.

ಕಾಂಗ್ರೆಸ್ ಕುಟುಂಬೋತ್ಸವ ಕಾರ್ಯಕ್ರಮ | ಡಾ. ಎಂ. ವೀರಪ್ಪ ಮೊಯ್ಲಿ ಘೋಷಣೆ

ಡಿಕೆಶಿ ಸಿಎಂ ಆಗುವುದನ್ನ ತಪ್ಪಿಸಲು ಸಾಧ್ಯವಿಲ್ಲ

ಉಡುಪಿ: ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್ ಉತ್ತಮ ನಾಯಕತ್ವದೊಂದಿಗೆ ಪಕ್ಷ ಸಂಘಟನೆಗೆ ವಿಶೇಷ ಆದ್ಯತೆ ನೀಡಿದ್ದಾರೆ. ಹಾಗಾಗಿ ಡಿ. ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಟೀಕೆ ಮಾಡುವವರಿದ್ದರೆ ಅವರ ವೈಯಕ್ತಿಕ ತೃಪ್ತಿಗೆ ಮಾಡಬೇಕೇ ಹೊರತು ಮತ್ತೇನಲ್ಲ. ಡಿ.ಕೆ. ಅವರಿಗೆ ಮುಖ್ಯಮಂತ್ರಿ ಪದವಿ ವರ ಅಲ್ಲ. ಅವರ ಶಕ್ತಿ. ಮುಖ್ಯಮಂತ್ರಿ ವಿಚಾರವಾಗಿ ನೀವೇನೂ ಪ್ರತಿಯಿಸಬೇಡಿ. ಇಟ್ ಈಸ್ ಸೆಟ್ಲ್ಡ್ ಮ್ಯಾಟರ್.

ಹೀಗೆಂದವರು ಮಾಜಿ ಸಿಎಂ, ಕಾಂಗ್ರೆಸ್‌ನ ಹಿರಿಯ ಮುಖಂಡ ಡಾ. ಎಂ. ವೀರಪ್ಪ ಮೊಯ್ಲಿ. ಅವರು ಕಾರ್ಕಳದ ಗಾಂಧಿಮೈದಾನದಲ್ಲಿ ನಡೆದ ಕಾಂಗ್ರೆಸ್ ಕುಟುಂಬೋತ್ಸವ ಕಾರ್ಯಕ್ರಮದಲ್ಲಿ ಡಿಕೆ. ಶಿವಕುಮಾರ್ ಸಮ್ಮುಖದಲ್ಲಿ ಮಾತನಾಡಿದರು.

ಡಿಕೆಶಿಗೆ ಮೊದಲು ಟಿಕೆಟ್ ಕೊಡಿಸಿದವ ನಾನು. ಇಂದು ಅವರು ರಾಜ್ಯದ ಉಪಮುಖ್ಯಮಂತ್ರಿಯಾಗಿರುವುದು ಹೆಮ್ಮೆಯ ವಿಷಯ. ಅಂತೆಯೇ ಎಂ.ಎನ್. ರಾಜೇಂದ್ರ ಕುಮಾರ್ ಅವರನ್ನು ಮೊದಲ ಬಾರಿಗೆ ಡಿಸಿಸಿ ಅಧ್ಯಕ್ಷನನ್ನಾಗಿ ಮಾಡಿದವ ನಾನೇ. ಇವರಿಬ್ಬರ ಆಯ್ಕೆಯೂ ಸಮರ್ಥನೀಯವೆಂದು ಸಾಧಿಸಿ ತೋರಿದ್ದಾರೆ ಎಂದರು.

ಬಿಜೆಪಿಗೆ ಸವಾಲು:

ಬಿಜೆಪಿಯವರು ಗೃಹಲಕ್ಷ್ಮೀ, ಗೃಹಜ್ಯೋತಿ ಯೋಜನೆಗಳನ್ನು ತ್ಯಜಿಸಿ ಬದ್ಧತೆ ತೋರಲಿ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಎಸೆದರು. ಬಿಜೆಪಿಯವರು ಗ್ಯಾರಂಟಿ ಯೋಜನೆ ಕುರಿತು ಮಾತನಾಡುತ್ತಿದ್ದಾರೆ. ಅವರಿಗೆ ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ಬೇಡವೆಂದಾದರೆ ಘೋಷಣೆ ಮಾಡಬೇಕು ಎಂದರು.

ಮಾಜಿ ಸಿಎಂ, ಕಾಂಗ್ರೆಸ್‌ನ ಹಿರಿಯ ಮುಖಂಡ ಡಾ. ಎಂ. ವೀರಪ್ಪ ಮೊಯ್ಲಿ ಅವರನ್ನು ಸನ್ಮಾನಿಸಲಾಯಿತು.

ಮೊಯ್ಲಿಯವರ ಶಿಷ್ಯ :

ನಾನು ವೀರಪ್ಪ ಮೊಯ್ಲಿ ಅವರ ಶಿಷ್ಯ. ಇಂದು ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ನಿಂತು ಅವರನ್ನೇ ಅಭಿನಂದಿಸುವ ಅವಕಾಶ ಒದಗಿದೆ. ಅವರನ್ನು ತುಂಬುಹೃದಯದಿಂದ ಸನ್ಮಾನಿಸಿದರು.

ಸುನಿಲ್ ಕುಮಾರ್ ತನಗೆ ಸ್ವಾಗತ ಕೋರಿ ಮಾಡಿರುವ ಟ್ವೀಟ್ ಗೆ ಪ್ರತಿಕ್ರಿಯಿಸಿರುವ ಡಿ. ಕೆ. ಶಿವಕುಮಾರ್ ಮೊದಲು ಸುನಿಲ್ ಕುಮಾರ್ ಅವರು ಬಿಜೆಪಿಯಲ್ಲಿನ ಗೊಂದಲಗಳನ್ನು ಸರಿಪಡಿಸಲಿ. ಅವರು ತಮ್ಮ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ಸಲ್ಲಿಸಲು ಯಾಕೆ ಮುಂದಾಗಿದ್ದಾರೆ ಎಂಬುದನ್ನು ಕ್ಷೇತ್ರದ ಜನತೆಗೆ ತಿಳಿಸಲಿ ಎಂದರು.

ಕಮಲ ಕೆರೆಯಲ್ಲಿದ್ದರೆ ಚಂದ:

ಕಮಲ ಕೆರೆಯಲ್ಲಿದ್ದರೆ ಚಂದ, ತೆನೆ ಹೊತ್ತ ಮಹಿಳೆ ಹೊಲದಲ್ಲಿದ್ದರೆ ಚಂದ. ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚಂದ ಎಂದು ಡಿಕೆಶಿ ಮಾರ್ಮಿಕವಾಗಿ ನುಡಿದರು.

ಕಾಂಗ್ರೆಸ್ ಮುಖಂಡ ಉದಯ ಕುಮಾರ್ ಶೆಟ್ಟಿ ಮುನಿಯಾಲು ಮಾತನಾಡಿ, ಒಂದು ಕಾಲದಲ್ಲಿ ಉಡುಪಿ, ದ.ಕ. ಕಾಂಗ್ರೆಸ್ ನ ಭದ್ರಕೋಟೆಯಾಗಿತ್ತು. ಇದೀಗ ಇವೆರಡು ಜಿಲ್ಲೆಗಳು ನಮ್ಮ ಕೈಯಲ್ಲಿ ಇಲ್ಲ. ಡಿ.ಕೆ. ಶಿವಕುಮಾರ್ ಭೇಟಿಯಿಂದ ಇಲ್ಲಿ ಮತ್ತೊಮ್ಮೆ ನಮ್ಮ ಅಸ್ತಿತ್ವವನ್ನು ಮರುಸ್ಥಾಪಿಸುವ ಕಾರ್ಯವಾಗಲಿ ಎಂದರು.

ಮಲೆನಾಡು ಮತ್ತು ಕರಾವಳಿಯನ್ನು ಸಂಪರ್ಕಿಸುವ ಆಗುಂಬೆ, ಶಿರಾಡಿ, ಚಾರ್ಮಾಡಿ ಘಾಟಿ ರಸ್ತೆ ಅಭಿವೃದ್ಧಿ, ಗ್ರಾಮೀಣ ರಸ್ತೆ ಉನ್ನತೀಕರಣ ನಿಟ್ಟಿನಲ್ಲಿ ಡಿಕೆಶಿಯವರಿಗೆ ಮನವಿ ಮಾಡಿಕೊಂಡರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸುಧೀರ್ ಕುಮಾರ್ ಮರೋಳಿ ಮಾತನಾಡಿ, ಕಾರ್ಕಳ ಶಾಸಕ ಸುನಿಲ್ ಕುಮಾರ್ ಅವರಿಗೆ ಕುಹಕದ ಹೊರಗೆ ಬದುಕಲು ಸಾಧ್ಯವಿಲ್ಲ. ಹಿಂದುತ್ವದ ನಾಡಿಗೆ ಸ್ವಾಗತ ಎಂದು ಪೋಸ್ಟ್ ಮಾಡಿರುವ ಮಿಸ್ಟರ್ ಸುನಿಲ್ ಕುಮಾರ್ ಇಲ್ಲಿಗೆ ಡಿಸಿಎಂ ಆಗಮಿಸಲು ನಿಮ್ಮ ಸರ್ಟಿಫಿಕೇಟ್ ಬೇಕಾಗಿಲ್ಲ ಎಂದರು.

ನಾಲ್ಕು ಕಡೆ ಸರ್ವಿಸ್ ರಸ್ತೆಗಳಿಗೆ ಸಿದ್ಧತೆ

ಮಂಗಳೂರು: ಮುಲ್ಕಿಯಿಂದ ತಲಪಾಡಿವರೆಗಿನ ರಾ. ಹೆದ್ದಾರಿ 66ರ ನಾಲ್ಕು ಕಡೆ ಸರ್ವಿಸ್ ರಸ್ತೆಗಳನ್ನು ನಿರ್ಮಿಸಲು ಅಗತ್ಯ ಪ್ರಕ್ರಿಯಗಳನ್ನು ನಡೆಸಲಾಗಿದ್ದು, ಮಳೆಗಾಲದ ಬಳಿಕ ಕಾಮಗಾರಿ ಆರಂಭಗೊಳ್ಳುವುದಾಗಿ ರಾ.ಹೆದ್ದಾರಿ ಅಧಿಕಾರಿಗಳು ದ.ಕ. ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ (ದಿಶಾ) ಸಮಿತಿ ಸಭೆಯಲ್ಲಿ ಮಾಹಿತಿ ನೀಡಿದ್ದಾರೆ.

ಜಿ.ಪಂ.ನ ನೇತ್ರಾವತಿ ಸಭಾಂಗಣದಲ್ಲಿ ನಡೆದ ದಿಶಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಸದ ಬ್ರಿಜೇಶ್ ಚೌಟರವರು, ರಾಷ್ಟ್ರೀಯ ಹೆದ್ದಾರಿ 66ರ ಸರ್ವಿಸ್ ರಸ್ತೆಗಳ ನಿರ್ಮಾಣದ ಬಗ್ಗೆ ವಿಚಾರಿಸಿದಾಗ, ಪ್ರತಿಕ್ರಿಯಿಸಿದ ಎನ್‌ಎಚ್‌ಎಐನ ಯೋಜನಾ ಅಧಿಕಾರಿ ಅಬ್ದುಲ್ಲಾ ಜಾವೇದ್ ಅಝ್ಮಿ ಈ ಪ್ರತಿಕ್ರಿಯೆ ನೀಡಿದರು.

ಹೆದ್ದಾರಿ 66ರ ಮುಲ್ಕಿ, ಪಡುಪಣಂಬೂರು, ಹಳೆಯಂಗಡಿ ಮತ್ತು ಬೀರಿಯಲ್ಲಿ ಸರ್ವಿಸ್ ರಸ್ತೆಗಳನ್ನು ನಿರ್ಮಿಸ ಲಾಗುತ್ತಿದೆ. ಮುಲ್ಕಿಯ ಬಪ್ಪನಾಡುವಿನಲ್ಲಿ 500 ಮೀಟರ್, ಪಡುಪಣಂಬೂರಿನಲ್ಲಿ 380 ಮೀಟರ್, ಹಳೆಯಂಗಡಿಯಲ್ಲಿ 550 ಮೀಟರ್ ಹಾಗೂ ಬೀರಿಯಲ್ಲಿ 700 ಮೀಟರ್ ಉದ್ದದ ಸರ್ವಿಸ್ ರಸ್ತೆಗಳಿಗೆ ಬಿಡ್ಡಿಂಗ್ ಪ್ರಕ್ರಿಯೆ ನಡೆದು ಏಜೆನ್ಸಿಗಳನ್ನು ನಿಗದಿಪಡಿಸಲಾಗಿದೆ. ಮಳೆಗಾಲದ ಬಳಿಕ ಕಾಮಗಾರಿ ಆರಂಭಿಸಲಾಗುವುದು ಎಂದು ಅಬ್ದುಲ್ಲಾ ಜಾವೇದ್ ಅಝ್ಮಿ ತಿಳಿಸಿದರು.

ಜಿಪಂ ನೇತ್ರಾವತಿ ಸಭಾಂಗಣದಲ್ಲಿ ದಿಶಾ ಸಮಿತಿ ಸಭೆ ನಡೆಯಿತು.

ಪಂಪ್‌ವೆಲ್‌ನಿಂದ ಗೋರಿಗುಡ್ಡ ಹೋಗುವ ಇಕ್ಕೆಲಗಳ ಸರ್ವಿಸ್ ರಸ್ತೆಯ ಅಗಲೀಕರಣ, ಒಳಚರಂಡಿ, ಫುಟಪಾತ್ ಕಾಮಗಾರಿಯು 4 ಕೋಟಿ ರೂ. ವೆಚ್ಚದಲ್ಲಿ ಮುಂದಿನ ವಾರದಿಂದ ಆರಂಭವಾಗಲಿದೆ ಎಂದು ಮಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಚರ್ಚೆಯ ವೇಳೆ ಸಭೆಗೆ ಮಾಹಿತಿ ನೀಡಿದರು.

ಉಡುಪಿಯಲ್ಲಿ ಈಗಾಗಲೇ ಸ್ಥಳೀಯರಿಗೆ ಟೋಲ್ ಮುಕ್ತಗೊಳಿಸುವ ಕಾರ್ಯ ನಡೆದಿದ್ದು, ಹೆಜಮಾಡಿ ಟೋಲ್‌ನಲ್ಲಿಯೂ ಹೆಜಮಾಡಿ ಗ್ರಾ.ಪಂ. ಹಾಗೂ ಮುಲ್ಕಿ ನಗರ ಪಂಚಾಯತ್ ನಿವಾಸಿಗಳಿಗೆ ಟೋಲ್ ಮುಕ್ತಗೊಳಿಸಬೇಕು ಎಂದು ಶಾಸಕ ಉಮಾನಾಥ ಕೋಟ್ಯಾನ್ ಒತ್ತಾಯಿಸಿದರು.

ಫಿಸಿಯೋ ಕನೆಕ್ಟ್ ವಿಚಾರ ಸಂಕಿರಣ

ಮೂಡುಬಿದಿರೆ: ಆಳ್ವಾಸ್ ಫಿಸಿಯೋಥೆರಪಿ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ವತಿಯಿಂದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಫಿಸಿಯೋ ಕನೆಕ್ಟ್ - 2025 ವಿದ್ಯಾಗಿರಿಯ ವಿ. ಎಸ್ ಆಚಾರ್ಯ ಸಭಾಂಗಣದಲ್ಲಿ ಶನಿವಾರ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತೇಜಸ್ವಿನಿ ಆಸ್ಪತ್ರೆಯ ಆರ್ಥೋಸ್ಕೊಪಿ ಹಾಗೂ ಸ್ಪೋರ್ಟ್ಸ್ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಸುಮಂತ್ ನಾಯಕ್, ಶಸ್ತ್ರಚಿಕಿತ್ಸೆಯು ಆರೋಗ್ಯದ ಸಮಸ್ಯೆಗೆ ಪರಿಹಾರ ನೀಡಬಲ್ಲದು ಆದರೆ ನಿಜವಾದ ಸವಾಲು ರೋಗಿಯ ಚೇತರಿಕೆಯಲ್ಲಿ ಕಂಡುಬರುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಹೆಲ್ತ್ ಸೆಂಟರ್‌ನ ಪ್ರಸೂತಿ ತಜ್ಞೆ ಡಾ. ಹನಾ ಶೆಟ್ಟಿ ಮಾತನಾಡಿ, ಕಲಿಯುವಿಕೆಯು ಒಂದು ನಿರಂತರ ಪ್ರಕ್ರಿಯೆ. ಈ ವಿಚಾರ ಸಂಕಿರಣದ ಮೂಲಕ ಪ್ರತಿಯೊಬ್ಬರು ಸವಾಲನ್ನು ಅರಿಯುವ ಜೊತೆಗೆ, ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿ. ಜ್ಞಾನದ ವಿನಿಮಯವಾಗುವುದು ಅಗತ್ಯ ಎಂದರು. ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್‌ನ ಪ್ರಾಧ್ಯಪಕ ಡಾ. ಪ್ರಭು ರಾಜ ಗಾಯಗಳ ಚೇತರಿಕೆಯಲ್ಲಿ ಉಂಟಾಗುವ ತೋರಕೊಲಂಬರ್ ಫಾಸಿಯ ಕುರಿತು ಮಾಹಿತಿ ನೀಡಿದರು. ವಿಚಾರ ಸಂಕಿರಣದಲ್ಲಿ ಭಾರತದ ವಿವಿಧ ಕಾಲೇಜುಗಳಿಂದ 420 ವಿದ್ಯಾರ್ಥಿಗಳು ಭಾಗವಹಿಸಿದ್ದರು.ಕಾಲೇಜಿನ ಪ್ರಾಂಶುಪಾಲೆ ಪ್ರೊ. ಕ್ಷಮಾ ಶೆಟ್ಟಿ ಉಪಸ್ಥಿತರಿದ್ದರು.

ಉಚಿತ ಶಿಕ್ಷಣ ಸೌಲಭ್ಯಕ್ಕೆ ಪ್ರವೇಶ ಪರೀಕ್ಷೆ

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಂಗ ಸಂಸ್ಥೆ, ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ 2025-26ನೇ ಸಾಲಿನ, 6 ರಿಂದ 9ನೇ ತರಗತಿಯ ಸಂಪೂರ್ಣ ಉಚಿತ ಶಿಕ್ಷಣ ಸೌಲಭ್ಯಕ್ಕೆ ನಡೆಸುವ ಪ್ರವೇಶ ಪರೀಕ್ಷೆ ವಿದ್ಯಾಗಿರಿ ಹಾಗೂ ಪುತ್ತಿಗೆ ಆವರಣದಲ್ಲಿ ಭಾನುವಾರ ನಡೆಯಿತು.

ರಾಜ್ಯಾದ್ಯಾಂತ 32 ಶೈಕ್ಷಣಿಕ ಜಿಲ್ಲೆಗಳು ಸೇರಿದಂತೆ ಗಡಿಭಾಗದ ಜಿಲ್ಲೆಯಾದ ಕಾಸರಗೋಡು ಹಾಗೂ ಮಹಾರಾಷ್ಟ್ರದ ಗಡಿಜಿಲ್ಲೆಗಳಿಂದ 20134 ವಿದ್ಯಾರ್ಥಿಗಳು ಆನ್ಲೈನ್ ಮೂಲಕ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿದ್ದು, ಅವುಗಳಲ್ಲಿ 18634 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನಂತರ ಮಾತನಾಡಿದ ಅವರು ಈ ಕನ್ನಡನಾಡಿನಲ್ಲಿ ಜನ್ಮತಾಳಿ, ಬದುಕನ್ನ ನಡೆಸಿ, ಸಂಪಾದನೆಯನ್ನು ಗಳಿಸಿದ ನಮಗೆ ಈ ಕನ್ನಡ ನಾಡಿನ ಋಣ ಎಷ್ಟಿದೆ ಎಂಬುದನ್ನು ನಾವೆಲ್ಲ ಅರಿಯಬೇಕಿದೆ. ನಮ್ಮೆಲ್ಲರ ಕನ್ನಡದ ಬಗೆಗಿನ ಪ್ರೀತಿ ವೇದಿಕೆಯಲ್ಲಿ ಭಾಷಣ ಮಾಡಲು ಮಾತ್ರ ಸೀಮಿತವಾಗಿದೆ. ರಾಜಕಾರಣಿಗಳು ಅಥವಾ ಕನ್ನಡದ ಸಂಘ ಸಂಸ್ಥೆಗಳು ಕನ್ನಡಕ್ಕೆ ಕಿಂಚಿತ್ತು ಸಮಸ್ಯೆಯಾದರೂ ಗಂಭೀರವಾಗಿ ಮಾತನಾಡಲು, ಹೋರಾಟ ಮಾಡಲು ಮುಂದೆ ಬಂದರೂ, ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿಗತಿಯನ್ನು ಸುಧಾರಿಸಲು ಅವರ ಕೂಡುಗೆ ಸಾಲದು.

35ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಆಗಮಿಸಿದ್ದರೂ ಬಹಳ ಅಚ್ಚುಕಟ್ಟಿನ ವ್ಯವಸ್ಥೆಯೊಂದಿಗೆ ಪರೀಕ್ಷೆ ನಡೆಯಿತು. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಿಗೆ ಆಳ್ವಾಸ್ ಸಂಸ್ಥೆಯ ವತಿಯಿಂದ ವ್ಯವಸ್ಥಿತ ಶೌಚಾಲಯದೊಂದಿಗೆ ಉಚಿತ ತಂಗುವ ವ್ಯವಸ್ಥೆ ಕಲ್ಪಿಸಲಾಗಿತ್ತು. ಸದ್ಯ ಇಡೀ ಕನ್ನಡ ಮಾಧ್ಯಮ ಶಾಲೆಯಲ್ಲಿ 6ರಿಂದ 9ನೇ ತರಗತಿಯವರೆಗೆ 640ಕ್ಕೂ ಅಧಿಕ ಮಕ್ಕಳಿದ್ದು, ಉಚಿತ ಊಟ, ವಸತಿ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ ಎಂದರು.

ಸಂಪೂರ್ಣ ಉಚಿತ ಶಿಕ್ಷಣ

ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯನ್ನು 15 ವರ್ಷಗಳ ಹಿಂದೆ ಪ್ರಾರಂಭಿಸಿ ಸದ್ಯ 640 ವಿದ್ಯಾರ್ಥಿಗಳು ಸಂಪೂರ್ಣ ಉಚಿತ ಶಿಕ್ಷಣದಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ಶಾಲೆಗಾಗಿ ನಮ್ಮ ಪ್ರತಿಷ್ಠಾನ ಪ್ರತಿ ವಿದ್ಯಾರ್ಥಿಯ ಮೇಲೆ 1.30 ಲಕ್ಷದಂತೆ ಸುಮಾರು 8ಕೋಟಿಯಷ್ಟು ಹಣವನ್ನು ವಿನಿಯೋಗಿಸುತ್ತಿದೆ. ಸರಕಾರ, ಇಲಾಖೆ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯನ್ನು ಮಾದರಿಯಾಗಿ ಪರಿಗಣಿಸಿ, ಇದೇ ರೀತಿಯ ಗುಣಾತ್ಮಕ ಶಿಕ್ಷಣವನ್ನು ನೀಡಿದರೆ ಕನ್ನಡ ಮಾಧ್ಯಮ ಶಾಲೆಗಳಿಗೆ ಎಂದು ಸೋಲಾಗದು ಎಂದು ಡಾ ಎಂ ಮೋಹನ್ ಆಳ್ವ ಹೇಳಿದರು.

ಕಂಬಳಕ್ಕೆ ತೋರಿಸುವ ಆಸಕ್ತಿ ಗದ್ದೆ ತೋರಿಸಿ

ಮಂಗಳೂರು: ನಾಡಿನ ಕೋಟ್ಯಂತರ ಜನರ ಆಹಾರವಾದ ಅನ್ನದ ಮೂಲನೆಲೆಯಾದ ಗದ್ದೆಗಳು ದಿನದಿಂದ ದಿನಕ್ಕೆ ಕಣ್ಮರೆಯಾಗುತ್ತಿದೆ. ಅವುಗಳನ್ನು ಉಳಿಸುವ ಆಸಕ್ತಿಯನ್ನು ಯಾರೂ ತೋರುತ್ತಿಲ್ಲ. ಬದಲಾಗಿ ಕಂಬಳ ಕ್ರೀಡೆಗೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಲೇಖಕ ನರೇಂದ್ರ ರೈ ದೇರ್ಲ ಹೇಳಿದರು.ನಟ ಪ್ರಕಾಶ್ ರಾಜ್ ನೇತೃತ್ವದಲ್ಲಿ ನಗರದ ಸಂತ ಅಲೋಶಿಯಸ್ ಕಾಲೇಜಿನಲ್ಲಿ 'ನಿರ್ದಿಂಗತ ಉತ್ಸವ 2025'ದಲ್ಲಿ ರವಿವಾರ ನಡೆದ ಜೀವ ಸಂರಕ್ಷಣೆ ಮತ್ತು ಆಚರಣಾ ಲೋಕ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ದಿನದಿಂದ ದಿನಕ್ಕೆ ಕರಾವಳಿಯ ಭತ್ತದ ಕೃಷಿ ನಾಶವಾಗುತ್ತಿದೆ. ಗದ್ದೆಗಳು ಕಣ್ಮರೆಯಾಗುತ್ತಿವೆ. ಕಂಬಳಕ್ಕಾಗಿ ಬೀದಿಗಿಳಿಯುವ ರಾಜಧಾನಿಯಲ್ಲೂ ಕಂಬಳ ಆಯೋಜಿಸುವ ನಾವು ಗದ್ದೆಯ ನಾಶದ ಬಗ್ಗೆ ಗಮನ ಹರಿಸುತ್ತಿಲ್ಲ. ಗದ್ದೆ ಉಳಿದರಷ್ಟೇ ಕಂಬಳ ಕ್ರೀಡೆ ಉಳಿಯಬಹುದು ಎಂಬ ಪ್ರಜ್ಞೆ ಇಲ್ಲವಾಗಿದೆ ಎಂದರು.

ಜೀವನಾನುಭವದ ಮೂಲಕ ಪಾಠ ಕಲಿತ ಬಯಲು ವಿಶ್ವವಿದ್ಯಾನಿಲಯದ ರೈತರ ಬಗ್ಗೆ ನಿರ್ಲಕ್ಷ್ಯ ವಹಿಸುತ್ತೇವೆ. ಮನುಷ್ಯರನ್ನು ಬೆಸೆಯುವ ಕೃಷಿ ಸ್ಥಾನಪಲ್ಲಟವಾಗುತ್ತಿದೆ. ಭೂಮಿಯ ಧಾರಣಾಶಕ್ತಿಗಿಂತಲೂ ಅಧಿಕವಾಗಿ ನಾವು ಭೂಮಿಯ ಮೇಲೆ ದಬ್ಬಾಳಿಕೆ ಮಾಡುತ್ತಿದ್ದೇವೆ. ಭೂಮಿ ಇರುವುದು ನಮ್ಮ ಅಗತ್ಯ ಪೂರೈಸಲೇ ವಿನಃ ನಮ್ಮ ದುರಾಸೆ ಈಡೇರಿಸಲು ಅಲ್ಲ ಎಂದು ನುಡಿದರು.

ಆರಾಮ

ಚಿತ್ತವಿಹಾರ

ಏಕಾಂತವು ಒಂಟಿತನವಲ್ಲ

ನಾವು ಒಬ್ಬರೇ ಇರುವಾಗ ಸಂತೋಷದಿಂದಿರಲು ಸಾಧ್ಯವಾದರೆ, ಎಲ್ಲರೊಂದಿಗೆ ಇರುವಾಗಲೂ ಅದೇ ಮನಸ್ಥಿತಿಯನ್ನು ಕಾಪಾಡಿಕೊಳ್ಳಲು ಸಾಧ್ಯ. ಏಕಾಂತವೆಂದರೆ ನಾವು ಸಂಪೂರ್ಣವಾಗಿ ನಮ್ಮೊಂದಿಗೆ ಮಾತ್ರ ಇರುವುದು. ಇದು ಭೌತಿಕವಾಗಿಯೂ ಹೌದು, ಮಾನಸಿಕವಾಗಿಯೂ ಹೌದು. ಅಂತರ್ಜಾಲದ ಸಂಪರ್ಕವೂ ಇಲ್ಲದೆ, ನಮ್ಮ ಹೊರತಾಗಿ ಬೇರಾರೊಂದಿಗೂ ಸಂಪರ್ಕ ರಹಿತರಾಗಿರುವುದು ನಿಜವಾದ ಏಕಾಂತ. ಈ ಏಕಾಂತ ಅನ್ನುವುದು ನಮ್ಮೊಂದಿಗೆ ನಾವು ಮಾತನಾಡಿಕೊಳ್ಳಲು ಮೀಸಲಿಡುವ ಸಮಯ.

ನಮ್ಮೊಂದಿಗೆ ನಾವು ಕೆಲವು ಸಮಯವನ್ನಾದರೂ ಕಳೆದರೆ ನಮ್ಮಲ್ಲಿರುವ ಆಸಕ್ತಿಕರ ವಿಚಾರಗಳೆಡೆಗೆ ನಾವು ಗಮನ ಹರಿಸಲು ಸಾಧ್ಯ. ಇಲ್ಲಿ ಒಂಟಿತನದ ಬೇಸರವಿಲ್ಲ. ಒಂಟಿತನಕ್ಕೂ, ಏಕಾಂತವಾಗಿರುವುದಕ್ಕೂ ವ್ಯತ್ಯಾಸವಿದೆ. ನಮ್ಮ ಮನಸ್ಸು ಯಾರೊಂದಿಗಾದರೂ ಮಾತನಾಡಲು ಬಯಸಿದ್ದು, ಯಾರೂ ಮಾತಿಗೆ ಸಿಗದೆ, ಅನಿವಾರ್ಯವಾಗಿ ಒಬ್ಬರೇ ಉಳಿಯುವ ಸಂದರ್ಭ ಬಂದರೆ ಆಗ ಮನಸ್ಸಿಗೆ ಒಂಟಿತನದ ಭಾವ ಕಾಡಲಾರಂಭಿಸುತ್ತದೆ. ಬೇಸರ ಮೂಡುತ್ತದೆ. ಅಸಹಾಯಕತೆಯಿಂದ ನಕಾರಾತ್ಮಕ ಆಲೋಚನೆಗಳು ಮನಸ್ಸನ್ನು ಆವರಿಸುತ್ತವೆ.



ಇದು ಒಂಟಿತನದ ಕಸಿವಿಸಿಯಾದರೆ, ಏಕಾಂತ ವಾಸದ ಅನುಭವವೇ ಬೇರೆ. ನಮ್ಮೊಂದಿಗೆ ಬೆರೆಯಲು, ಮಾತನಾಡಲು ಸಾಕಷ್ಟು ಜನರಿದ್ದರೂ, ಅಲ್ಲಿಯೂ ಸಹ ನಾವು ಸಂತೋಷವಾಗಿರಬಲ್ಲೆವಾಗಿದ್ದರೂ, ಯಾವುದೇ ಅನಿವಾರ್ಯತೆ, ಖಿನ್ನತೆ ಇಲ್ಲದೆ, ನಮ್ಮ ಒಳಗನ್ನು ಅರಿಯುವ ಸಲುವಾಗಿ, ಕೇವಲ ನಮ್ಮೊಂದಿಗೆ ನಾವಿರುವುದು ಏಕಾಂತ. ಇಲ್ಲಿ ಅಸಹಾಯಕತೆ ಇಲ್ಲ. ದುಃಖ ದುಮ್ಮಾನಗಳಿಲ್ಲ, ನಮ್ಮೊಂದಿಗೆ ನಾವೇ ಸಂಭಾಷಿಸುತ್ತಾ, ನಮ್ಮನ್ನು ನಾವು ಅರ್ಥ ಮಾಡಿಕೊಳ್ಳುತ್ತಾ ಹೋದಂತೆ, ಸಮಸ್ಯೆ ಎಂದುಕೊಂಡ ಅನೇಕ ವಿಚಾರಗಳು ಸಮಸ್ಯೆಯೇ ಅಲ್ಲ ಎನ್ನುವ ಭಾವ ಮನಸ್ಸನ್ನು ಹಗುರ ಮಾಡಿಬಿಡುತ್ತದೆ. ಬಾಂಧವ್ಯಗಳೆಲ್ಲವೂ ಸುಂದರವಾಗಿ ಕಾಣಲಾರಂಭಿಸುತ್ತವೆ. ಜಗತ್ತಿನೊಂದಿಗೆ ನಮ್ಮ ಸಂಬಂಧವು ಮಧುರ ಎನಿಸಿಬಿಡುತ್ತದೆ.

ಮನೋದೈಹಿಕ ಕಾಯಿಲೆಗಳನ್ನು ಸಹ ಹೀಗೆಯೇ ಅರ್ಥೈಸುತ್ತಾ ಹೋಗಬಹುದು. ಅವುಗಳ ಕಾರಣ ತಿಳಿಯುತ್ತಾ, ಚಿಕಿತ್ಸಾತ್ಮಕ ಒಳನೋಟ ಬೀರುತ್ತಾ ಹೋದಾಗ, ಇಂತಹ ಸ್ವ ಅವಲೋಕನವು ಸ್ವಸ್ಥ ಮನಸ್ಸು ಹಾಗೂ ಶರೀರಕ್ಕೆ ದಾರಿ ಮಾಡಿಕೊಡುತ್ತದೆ. ಇಂತಹ ಸಕಾರಾತ್ಮಕ ಪರಿಣಾಮಗಳನ್ನು ಬೀರಬಲ್ಲ ಏಕಾಂತತೆ, ಮನಸ್ಸಿನ ಶಾಂತಿ ಹಾಗೂ ನೆಮ್ಮದಿಗಾಗಿ, ಎಲ್ಲರಿಗೂ ಕಾಲಕಾಲಕ್ಕೆ ಅವಶ್ಯ ಹಾಗೂ ಅನಿವಾರ್ಯ.

• ಮಾಯಾ ಬಾಲಚಂದ್ರ

ಹನಿಮಳೆ

ಧ್ರುವೀಕರಣ?

ಎಲ್ಲೆಡೆ ಚರ್ಚೆಯ ವಿಷಯ
ಬರಬಹುದಂತೆ ರಾಜ್ಯ
ರಾಜಕೀಯದಲ್ಲಿಯೂ
ಒಬ್ಬರು ಶಿಂಧೆ, ಇನ್ನೊಬ್ಬ ಪವಾರ!
ಬಣ ಬಡಿದಾಟದಲ್ಲಿ
ತೆರೆಯಬಹುದೇ ಧ್ರುವೀಕರಣದ ದ್ವಾರ?

• ಮಹಾಂತೇಶ ಮಾಗನೂರ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್
vishwavanimagazine@gmail.com

ತೊಗಲುಗೊಂಬೆ ಕಲೆಗೆ ಪದ್ಮಶ್ರೀ ಪ್ರಶಸ್ತಿ

ಇವತ್ತು ಗ್ರಾಮೀಣ ಭಾರತದ ಮೂಲ ಜಾನಪದ ಕಲೆಗಳು ಸಂಕಷ್ಟದಲ್ಲಿವೆ. ಇತ್ತೀಚೆಗೆ ತೊಗಲುಗೊಂಬೆಯಾಟದ ಕಲಾವಿದೆ, ಹಳ್ಳಿಗಾಡಿನ ಮಹಿಳೆ ಭೀಮಮ್ಮ ಅವರಿಗೆ ಪದ್ಮಶ್ರೀ ಪ್ರಶಸ್ತಿ ದೊರಕಿದೆ. ಈ ಪ್ರಶಸ್ತಿಯ ಮೂಲಕ ತೊಗಲುಗೊಂಬೆಯಾಟಕ್ಕೆ ಸರಕಾರವು ಬಹು ದೊಡ್ಡ ಗೌರವವನ್ನು ನೀಡಿದಂತಾಗಿದೆ.



• ರಮೇಶ ಸಿ ಬನ್ನಿಕೊಪ್ಪ ಹಲಗೇರಿ

ನಮ್ಮ ಮೂಲ ಜಾನಪದ ಕಲೆಗಳು ಉಳಿದಿರುವುದೇ ಗ್ರಾಮೀಣ ಭಾಗದ ಜಾನಪದ ಕಲಾವಿದರಿಂದ. ಈಗಾಗಲೇ ಹಲವಾರು ಜಾನಪದ ಕಲೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಅನೇಕ ಕಲಾವಿದರು ತಮ್ಮ ಬದುಕಿಗೆ ಮೂಲ ಸೌಕರ್ಯವಿಲ್ಲದೆ, ವತ್ತಿಯ ಭದ್ರತೆ ಇಲ್ಲದೆ ಬೇರೆ ಬೇರೆ ವೃತ್ತಿಯಲ್ಲಿ ತೊಡಗಿಕೊಂಡಿರುವುದನ್ನು ನಾವು ಕಾಣುತ್ತೇವೆ. ಇಂತಹ ಅನೇಕ ಸಮಸ್ಯೆಗಳ ಮಧ್ಯೆಯೂ ಬಾಲ್ಯದಿಂದಲೇ ನಮ್ಮ ಗ್ರಾಮೀಣ ಭಾಗದ ಮೂಲ ಜಾನಪದ ಕಲೆಯಾದ ತೊಗಲುಗೊಂಬೆಯಾಟವನ್ನು ನೆಚ್ಚಿಕೊಂಡಿರುವ, ಈ ವರ್ಷ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಕಲಾವಿದೆ ಭೀಮವ್ವ ಸಿಳ್ಳೆಕ್ಯಾತರ್ ಅವರು.

ಕುಗ್ರಾಮದಂತಿರುವ ಮೋರನಹಳ್ಳಿಯಲ್ಲಿಯೇ ಕಲಾ ಬದುಕು ಕಟ್ಟಿಕೊಂಡಿರುವುದು ಅತ್ಯಂತ ವಿಸ್ಮಯಕಾರಿ. ಬಹುತೇಕ ಗ್ರಾಮೀಣ ಭಾಗದ ಕಲೆಗಳಿಗೆ ಹಿಂದೆ ಇದ್ದ ಪ್ರೋತ್ಸಾಹ ಇಂದು ಗ್ರಾಮೀಣ ಜನಸಮುದಾಯಗಳಿಂದಲೂ ಸಿಗುತ್ತಿಲ್ಲ ಎಂದು ಹೇಳಬಹುದು. ಇವತ್ತಿನ ತಾಂತ್ರಿಕ ಯುಗದಲ್ಲಿ ಸ್ಮಾರ್ಟ್‌ಫೋನ್‌ಗಳ ಹಾವಳಿಯಿಂದಾಗಿ, ಟಿ.ವಿ, ಸಿನಿಮಾ.. ಮುಂತಾದ ಸಂಪರ್ಕ ಸಾಧನಗಳ ಕ್ರಾಂತಿಯಿಂದಾಗಿ ಜನರು ತಮ್ಮ ಮನರಂಜನೆಯನ್ನು ಅಂಗೈಯಲ್ಲಿಯೇ ದೊರಕಿಸಿಕೊಂಡು ನಮ್ಮ ಮೂಲ ಜಾನಪದ ಕಲೆಗಳನ್ನು ಮರೆತಿದ್ದಾರೆ.

ಇದರ ಮಧ್ಯೆದಲ್ಲಿಯೇ ಕೊಪ್ಪಳ ಜಿಲ್ಲೆಯ ಮೋರನಹಳ್ಳಿ ಗ್ರಾಮದ ದೊಡ್ಡಬಾಳಪ್ಪ ಸಿಳ್ಳೆಕ್ಯಾತರವರ ಮಡದಿ ಎಂಭತ್ತು ವಯಸ್ಸಿನ ಭೀಮಮ್ಮ ಸಿಳ್ಳೆಕ್ಯಾತರ ಬಾಲ್ಯದಿಂದಲೇ ಕಲಾ ಕುಟುಂಬದಿಂದ ಬಂದವರು. ಅನಕ್ಷರಸ್ಥೆಯಾದರೂ ಕುಟುಂಬದಿಂದ ಬಳುವಳಿಯಾಗಿ ಬಂದ ಮೂಲ ಜಾನಪದ ಕಲೆಯನ್ನು ತಮ್ಮ ಬದುಕಿರುದ್ದಕ್ಕೂ ಅಳವಡಿಸಿಕೊಂಡವರು.

ಕುಟುಂಬದ ಹಿನ್ನೆಲೆ

ಸಿಳ್ಳೆಕ್ಯಾತರ ಈ ಕುಟುಂಬವು ಮೋರನಹಳ್ಳಿಯಲ್ಲಿ ನೆಲೆಸಿದ್ದು, ತವರು ಮನೆಯೂ ಕೂಡ ಇದೇ ಗ್ರಾಮವಾಗಿತ್ತು. ಕಲೆಯನ್ನು ಅರಸಿಕೊಂಡು ಅಲೆಮಾರಿಯಾಗಿ ತಿರುಗುತ್ತಿದ್ದ ತವರು ಮನೆಯ ಭೀಮಮ್ಮನ ತಂದೆ ತಾಯಿಗಳು ಕೂಡ ಕಲಾವಿದ ದಂಪತಿಗಳು. ಅವರು ಇರಕಲಗಡಾದ ಹತ್ತಿರವಿರುವ ಹನುಮನ ಹಟ್ಟಿ ಗ್ರಾಮದಲ್ಲಿ ಒಂದೆರಡು ವರ್ಷ ಮಾತ್ರ ನೆಲೆ ನಿಂತಾಗಲೇ ಅದೇ ಸಂದರ್ಭದಲ್ಲಿ ಭೀಮಮ್ಮನ ಸೋದರ ಮಾವನಾದ ದೊಡ್ಡ ಬಾಳಪ್ಪ ಸುಳ್ಳಿಕ್ಯಾತರವರಿಗೆ ಮದುವೆ ಮಾಡಿಕೊಡುತ್ತಾರೆ. ಆಗ ಭೀಮಮ್ಮನಿಗೆ ಕೇವಲ 8 ವರ್ಷ ವಯಸ್ಸು. ನಂತರ ಅದೇ ತವರು ಮನೆಯವರು ಮತ್ತೆ ಮೋರನಹಳ್ಳಿಗೆ ಬಂದು ನೆಲೆಸುತ್ತಾರೆ.

ಅಪರೂಪದ ಸಾಮಗ್ರಿ ಅಗತ್ಯ

ತೊಗಲು ಗೊಂಬೆಗಳನ್ನು ತಯಾರಿಸಲು ತುಸು ಅಪರೂಪ ಎನಿಸುವ ಸಾಮಗ್ರಿಗಳು ಅಗತ್ಯ. ಮೇಕೆ ಚರ್ಮ, ಬಿದಿರು ಕಡ್ಡಿಗಳು, ಅಂಟು, ಬಣ್ಣ, ಬೆಲೆ ಬಾಳುವ ಪರದೆ, ಇನ್ನೂ ಅನೇಕ ಬೆಲೆಬಾಳುವ ವಸ್ತುಗಳು ಬೇಕಾಗುತ್ತವೆ. ಆ ಚರ್ಮದಿಂದ ಗೊಂಬೆಗಳನ್ನು ತಯಾರಿಸುವ ಕೆಲಸವೂ ಇದೆ; ಇದಕ್ಕೆ ಕೌಶಲ ಅಗತ್ಯ. ಚರ್ಮದಿಂದ ಗೊಂಬೆಗಳನ್ನು ತಯಾರಿಸಿದ ನಂತರ, ಅದಕ್ಕೆ ಸೂಕ್ತ ಬಣ್ಣಗಳನ್ನು ತುಂಬಬೇಕು! ಇವುಗಳನ್ನು ತಯಾರಿಸುವ ಜವಾಬ್ದಾರಿಯು ಕುಟುಂಬದ ಸದಸ್ಯರ ಮೇಲಿರುತ್ತದೆ.

ಭೀಮಮ್ಮನ ಕಲಾ ಬದುಕು

ಭೀಮಮ್ಮನ ಮಕ್ಕಳು, ಸೊಸೆ, ಮೊಮ್ಮಕ್ಕಳು ಎಲ್ಲರೂ ತೊಗಲುಗೊಂಬೆ ಆಟಕ್ಕೆ ತೆರೆದುಕೊಂಡವರೇ. ಎಲ್ಲರೂ ಸೇರಿ ಮೇಳ ಮಾಡಿದಾಗಲೇ ತೊಗಲು ಗೊಂಬೆಯಾಟ ಆಡಲು ಸಾಧ್ಯವಾಗುತ್ತದೆ. ತೊಗಲುಗೊಂಬೆಯಾಟಕ್ಕೆ ಮೇಕೆ ಚರ್ಮ, ಬಿದಿರು ಕಡ್ಡಿಗಳು, ಅಂಟು, ಬಣ್ಣ, ಬೆಲೆಬಾಳುವ ಪರದೆ, ಇನ್ನೂ ಅನೇಕ ವಸ್ತುಗಳು ಬೇಕಾಗುತ್ತವೆ. ಇವುಗಳನ್ನು ತಯಾರಿಸುವ ಜವಾಬ್ದಾರಿಯು ಇವರ ಮೇಲಿರುತ್ತದೆ.

ವಿವಿಧ ಕಥೆಗಳಾದ ರಾಮಾಯಣ, ಮಹಾಭಾರತ, ಪ್ರಸ್ತುತ ಸಮಾಜಿಕ, ರಾಜಕೀಯ ವಿಡಂಬನೆ ಅಲ್ಲದೆ ಅನೇಕ ನೈತಿಕ ಮೌಲ್ಯಗಳ ಕಥೆಗಳಿಗೆ, ಸೂಕ್ತ ಪಾತ್ರಗಳ ತೊಗಲುಗಂಬೆಗಳನ್ನು ತಯಾರಿಸಬೇಕಾದರೆ ಅದಕ್ಕೆ ತುಂಬಾ ಹಣ ಖರ್ಚಾಗುತ್ತದೆ. ಅದಕ್ಕಾಗಿ ಕೂಲಿಯ ದುಡಿಮೆಯ ಹಣದಿಂದಲೇ ಸಂಗ್ರಹಿಸ ಬೇಕಾಗಿದೆ.

ತೊಗಲುಗೊಂಬೆಯಾಟದ ಬಗ್ಗೆ ಭೀಮಮ್ಮನ ಮೊಮ್ಮಗ ಪಾಂಡುರಂಗ ಸಿಳ್ಳೆಕ್ಯಾತರನ್ನು ಕೇಳಿದಾಗ ಹಲವು ಸ್ವಾರಸ್ಯಕರ ವಿಚಾರಗಳನ್ನು ಹೇಳಿದರು.

'ನಮ್ಮದು ಕಲಾವಿದರ ಕುಟುಂಬ. ಹಿಂದಿನ ದಿನಗಳಲ್ಲಿ ವಿವಿಧ ಗ್ರಾಮದ ಜನರು ನಮ್ಮನ್ನು ಕರೆದು ತೊಗಲುಗೊಂಬೆಯಾಟವನ್ನು ಆಡಿಸುತ್ತಿದ್ದರು. ಈಗ ಆಡಿಸುವುದು ತುಂಬಾ ಕಡಿಮೆ. ನಾವು ಏನಿದ್ದರೂ ಸರ್ಕಾರದಿಂದ ನಡೆಯುವ ವರ್ಷಕ್ಕೆ ಒಂದೋ ಎರಡೋ ಕಾರ್ಯಕ್ರಮಗಳಲ್ಲಿ ಮಾತ್ರ ಭಾಗವಹಿಸಿ, ನಮ್ಮ ಉಪಜೀವನವನ್ನು ನಡೆಸಿಕೊಳ್ಳಬೇಕಾಗುತ್ತದೆ, ಎಷ್ಟೋ ಸಲ ಈ ಕಲೆಯನ್ನು ಬಿಟ್ಟುಬಿಡಬೇಕು ಅನಿಸುತ್ತದೆ..

ನಮಗೊಂದು ನೆಲೆ ಇಲ್ಲ. ಸರ್ಕಾರ ನಮಗೆ ಮನೆ, ಜಮೀನು ಮತ್ತು ನಮ್ಮ ಕಲೆಗೆ ಬೇಕಾದ ವಿವಿಧ ಸಾಮಾಗ್ರಿಗಳನ್ನು , ಮೂಲ ಸೌಕರ್ಯ ಕಲ್ಪಿಸಿ, ಈ ಕಲೆಯನ್ನು ಬೆಳೆಸಿದರೆ ತುಂಬಾ ಅನುಕೂಲವಾಗುತ್ತದೆ. ಇಲ್ಲವಾದರೆ ಈ ಕಲೆ ಹೀಗೆ ನಶಿಸಿ ಹೋಗುತ್ತದೆ' ಎಂದು ನೊಂದು ನುಡಿಯುತ್ತಾರೆ.

ಅನೇಕ ಸಂಕಷ್ಟಗಳ ನಡುವೆ ತೊಗಲುಗೊಂಬೆ ಆಟಕ್ಕೆ ಯಾವತ್ತಿಗೂ ಬೆನ್ನು ತೋರಿಸಿದವರಲ್ಲ. ಇರಲು ಚಿಕ್ಕಮನೆಯಿದ್ದರೂ, ಬದುಕಿಗಾಗಿ ಯಾವುದೇ ಒಂದು ಜಮೀನು ಇತ್ಯಾದಿ ಇಲ್ಲ. ತೊಗಲುಗೊಂಬೆಯಾಟದ ಕಾರ್ಯಕ್ರಮ ಇದ್ದಾಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತನ್ನ ಕಲೆಯನ್ನು ಪ್ರದರ್ಶಿಸುತ್ತಿದ್ದ ಭೀಮಮ್ಮನವರ ಕುಟುಂಬ ಅದರಿಂದ ಬಂದ ದವಸ ಧಾನ್ಯಗಳಿಂದಲೇ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದರು. ಅಂದು ಅನೇಕ ಗ್ರಾಮಸ್ಥರು ಇವರನ್ನು ಕರೆಯಿಸಿ ತೊಗಲು ಗೊಂಬೆಯಾಟವನ್ನು ಆಡಿಸುತ್ತಿದ್ದರು.

ಮೊದಲಿನ ಆ ವಾತಾವರಣ ಈಗ ಉಳಿದುಕೊಂಡಿಲ್ಲ. ಉಳಿದ ಸಮಯದಲ್ಲಿ ಮೋರನಹಳ್ಳಿ ಗ್ರಾಮದ ರೈತರ ಹೊಲಗಳಲ್ಲಿ ಕಳೆ ತೆಗೆಯುವದು, ಬೀಜ ಊರುವುದು, ಅಕ್ಕಡಿ ಹಾಕುವುದು ಮಾಡುತ್ತಿದ್ದಳು ಭೀಮಮ್ಮಜ್ಜಿ. ಹೀಗೆ ಮುಂತಾದ ಕಷಿ ಕೂಲಿಯನ್ನೇ ಮಾಡಿಕೊಂಡು ಬದುಕು ಕಟ್ಟಿಕೊಂಡ ಭೀಮ್ಮನಿಗೆ ಈಗ ಮುಪ್ಪಿನಾವಸ್ಥೆ ಕಾಡುತ್ತಿದೆ. ದುಡಿಯಲು ಆಗಲಾರದ ನಿಶ್ಯಕ್ತಿ. ಇಂತಹ ಸಂದರ್ಭಗಳಲ್ಲಿಯೂ ನೆಲಮೂಲದ ವತ್ತಿಯಿಂದ ಮತ್ತು ಪ್ರವತ್ತಿಯಿಂದ ದೂರ ಸರಿದವರಲ್ಲ.

ವಿದೇಶದಲ್ಲಿ ಜನಪದಕಲೆ ಪ್ರದರ್ಶನ

ಈಗಾಗಲೇ ಇವರು ಹಲವಾರು ದೇಶಗಳಿಗೆ ಹೋಗಿ ತೊಗಲು ಗೊಂಬೆಯಾಟದ ತಮ್ಮ ಕಲೆಯನ್ನು ಪ್ರದರ್ಶಿಸಿ ಬಂದಿರುವುದು ಕೊಪ್ಪಳ ಜಿಲ್ಲೆಯ ಹೆಮ್ಮೆ ತಂದಿದ್ದಾರೆ. ಇವರ ಮಗನಾದ ಕೇಶಪ್ಪ ಸಿಳ್ಳೆಕ್ಯಾತರವರು ತೊಗಲು ಗೊಂಬೆಯಾಟದ ಕಲಾವಿದ. ಇವರೂ ಸಹ, ತಮ್ಮ ತಾಯಿಯಂತೆ, ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದಿದ್ದಾರೆ.

ಪ್ರಸ್ತುತ ವರ್ಷ 2020-21 ನೇ ಸಾಲಿಗೆ ಪದ್ಮಶ್ರೀ ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ಭೀಮಮ್ಮ ಸಿಳ್ಳೆಕ್ಯಾತರವರು ನಮ್ಮ ರಾಜ್ಯದ ಹೆಮ್ಮೆಯ ಜಾನಪದ ಕಲಾವಿದರು. ಇಷ್ಟರಲ್ಲಿಯೇ ದೆಹಲಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಭಾಗವಹಿಸಿ, ಪದ್ಮಶ್ರೀ ಪ್ರಶಸ್ತಿಯನ್ನು ಪಡೆಯಲಿರುವ ನೆಲಮೂಲದ ತೊಗಲು ಗೊಂಬೆಯಾಟದ ಹಿರಿಯ ಕಲಾವಿದೆ ಭೀಮಮ್ಮ ಸಿಳ್ಳೆಕ್ಯಾತರ್ ಅವರಿಗೆ ಕನ್ನಡಿಗರೆಲ್ಲರೂ ಶುಭ ಹಾರೈಸೋಣ.

ಆಧುನಿಕ ಜೀವನದಲ್ಲಿ ಸಂತೃಪ್ತಿಗೆ ದ್ವೈತ ವೇದಾಂತದ ಮಾರ್ಗದರ್ಶನ

ನಮ್ಮ ಬಗ್ಗೆ ಅನಾವಶ್ಯಕ ಯೋಚಿಸುವ ಬದಲು ನಾವು ಜೀವನದಲ್ಲಿ ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಕರ್ಮ ಮಾಡುತ್ತ, ನಮಗೆ ಏನು ಬೇಕೆಂದು ನಾವು ಯೋಜನೆ ಮಾಡುವ ಬದಲು, ನಮಗೆ ನಿಜವಾಗಿ ಬೇಕಾಗಿದ್ದನ್ನು, ನಮ್ಮ ನಿರೀಕ್ಷೆ ಮೀರಿದ್ದನ್ನು ಆ ದಿವ್ಯಚೇತನವೇ ನೀಡುತ್ತದೆ ಎಂದು ಯೋಚಿಸಬೇಕು.



• ಪದ್ಮಿನಿ ರಿತ್ತಿ

ಇಂದಿನ ರೀಲ್ ಮಾಯಾಲೋಕದ ಯುಗದಲ್ಲಿ ಬೇರೆಯವರು ನಮಗಿಂತ ಚೆನ್ನಾಗಿ ಇದ್ದಾರೆ ಎಂಬ ಭಾವನೆ ಬರೋದು ಸಹಜ. ವೃತ್ತಿನಿರತ ಮಹಿಳೆಯರು, ಅಂದರೆ ಮನೆಯಿಂದ ಹೊರಗೆ ಕೆಲಸಕ್ಕೆ ಹೋಗಿ ಸಂಪಾದಿಸುವ, ಟ್ರಾವೆಲ್ ಮಾಡುವ, ಮಾಡರ್ನ್ ಲುಕ್ ಹೊಂದಿರುವ ಮಹಿಳೆಯರು, ಬೇರೆಯವರಿಗಿಂತ ಹೆಚ್ಚು ಸಮರ್ಥರು, ಯೋಗ್ಯರು ಎಂಬ ಭಾವನೆ ಬರುವಂತೆ ಮಾಡುತ್ತದೆ. ಆದರೆ, ಅಲ್ಲೂ ದ್ವಂದವಿದೆ. ಹೊರಗೆ ಹೋಗಿ ಸಂಪಾದಿಸುವ ಮಹಿಳೆಯರಿಗೆ ಮನೆಯೊಳಗೇ ಇದ್ದು ಮನೆಯನ್ನು ಚೆನ್ನಾಗಿ ನಿಭಾಯಿಸುವ ಮಹಿಳೆ ಮಾದರಿ ಎನ್ನಿಸಬಹುದು.

ಆದರೆ, ಮನೆಯಲ್ಲಿ ಕೆಲಸ ಮಾಡಿಕೊಂಡು ಗೃಹಿಣಿ ಎನ್ನಿಸಿಕೊಂಡಿರುವ ಮಹಿಳೆಗೆ, ಕೆಲಸಕ್ಕೆ ಹೋಗುವ ಮಹಿಳೆ ಸ್ವಾವಲಂಬಿ ಎನ್ನಿಸಬಹುದು. ಒಬ್ಬರಿಗೆ ತಮ್ಮ ಗೆಳತಿಯ ಸ್ವಾವಲಂಬಿ ಸೊಸೆ, ಹೊಂದಿಕೊಂಡು ಹೋಗುವ ಹೆಂಡತಿ, ವಿದೇಶದಲ್ಲಿ ಓದುತ್ತಿರುವ ಮಕ್ಕಳು, ಅಥವಾ ಉನ್ನತ ಸ್ಕೂಲು-ಕಾಲೇಜುಗಳಲ್ಲಿ ಓದುವ ಮಕ್ಕಳು ಗ್ರೇಟ್ ಎನ್ನಿಸುತ್ತಿದ್ದರೆ, ಮತ್ತೊಬ್ಬರಿಗೆ ಮನೆಯಲ್ಲಿ ಇದ್ದು ಎಲ್ಲರ ಜೊತೆ ಬೆರೆತು ಬಾಳುತ್ತಿರುವ ಕುಟುಂಬ ಗ್ರೇಟ್ ಎನ್ನಿಸಬಹುದು.ಈ ಹೋಲಿಕೆ ಮಾಡಿಕೊಂಡು ಬದುಕುವವರಿಗೆ ಎಲ್ಲೋ ಒಮದು ಕಡೆ ತಾವು ನಿಂತ ನೀರಾಗಿರುವ, ಪ್ರಯೋಜನಕ್ಕೆ ಬಾರದ ಹಾಗೂ ಅಸಂತೃಪ್ತ ಜೀವನ ನಡೆಸುತ್ತಿರುವ ಭಾವ ಬಲವಾಗಿರಬಹುದು. ಆದರೆ, ಹೋಲಿಕೆಯ ಜಗತ್ತಿನಲ್ಲಿ ಮನಸ್ಸಿನ ಶಾಂತಿ, ನೆಮ್ಮದಿ ಕಾಪಾಡಿಕೊಳ್ಳಬೇಕು ಎಂದರೆ ಸರಳ ಹಾಗೂ ಜೀವನಕ್ಕೆ ಅರ್ಥ ಕೊಡುವ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು ಅನಿವಾರ್ಯ.

ನಮ್ಮೊಳಗೇ ಒಂದು ಮೌಲ್ಯಯುತ ಬದಲಾವಣೆ ತರುವಂಥ, ಜೀವನಕ್ಕೆ ಅರ್ಥ ಕೊಡುವಂಥ ಇಂಥ ಯೋಗ್ಯ ಅಭ್ಯಾಸವೇ ದ್ವೈತ ವೇದಾಂತ. ಇಂಥ ಉನ್ನತ ತತ್ವ ಅಡಗಿರುವ ಅಭ್ಯಾಸಗಳು ಹಾಗೂ ಆಚರಣೆಗಳ ಮೂಲಕ ನಾವು ಜೀವನಕ್ಕೆ ಒಂದು ತಾಳ ಮೇಳ ಕಲ್ಪಿಸುವ ಗುರಿ, ಏಕದೃಷ್ಟಿ ಹಾಗೂ ಸಂತೃಪ್ತ ಭಾವ ಹೊಂದುವ ಅವಕಾಶ ಕಲ್ಪಿಸಿಕೊಡಬಹುದು.

ಕ್ಷಣಿಕ ಸತ್ಯ

ಈ ದ್ವೈತ ವೇದಾಂತವು ನಾವು ನಮ್ಮ ದಿನನಿತ್ಯ ಜೀವನದಲ್ಲಿ ತಕ್ಕಮಟ್ಟಿಗೆ ನಿಜವೆಂದು ಭ್ರಮಿಸುವ, ಅನುಭವಿಸುವ ಜೀವನಕ್ಕಿಂತ ಹೆಚ್ಚಿನ ಕಾಲಾತೀತ ಜ್ಞಾನವನ್ನು ನಮಗೆ ನೀಡಬಲ್ಲದು. ನಾವು ದಿನನಿತ್ಯ ನೋಡುವ ಸಂತೋಷ, ಯಶಸ್ಸು ಹಾಗೂ ಪರಿಪೂರ್ಣತೆ ಎಲ್ಲವೂ ಆ ಕ್ಷಣಕ್ಕೆ ಶಾಶ್ವತ ಎನ್ನಿಸಿದರೂ, ಕಾಲಾನಂತರದಲ್ಲಿ ಎಲ್ಲವೂ ಕ್ಷಣಿಕ ಎಂಬ ಸತ್ಯ ನಮಗೆ ಗೋಚರವಾಗುವುದು. ಈ ಎಲ್ಲವೂ ಕ್ಷಣಿಕ ಎಂಬಸತ್ಯ ಅರಿವಾದಾಗ ನಮಗೆ ಇದಕ್ಕಿಂತ ಹೆಚ್ಚಿನ ಹಾಗೂ ಆಳವಾದ ಜ್ಞಾನವನ್ನು ನಾವು ಸಂಪಾದಿಸಿಬೇಕು ಎಂಬ ಜಿಜ್ಞಾಸೆ ಮೂಡುವುದು ಸಹಜ. ಆಗಲೇ ನಮಗೆ ಸಾಮಾಜಿಕ ಕಳಕಳಿ ಹಾಗು ದಾನ-ಧರ್ಮದ ಮಹತ್ವ ಅರಿವಾಗುವುದು.

ಉದಾಹರಣೆಗೆ, ನೀವು ಬಯಸುವ ವಿಶ್ವವಿದ್ಯಾಲಯ, ಉನ್ನತ ಸ್ಥಾನಮಾನ ಎಲ್ಲವನ್ನೂ ಯಾರೋ ಒಬ್ಬರು ತಮ್ಮ ಜೀವನದಲ್ಲಿ ಹೊಂದಿದ್ದರೂ ಅವರಿಗೆ ನಿಮ್ಮಂತೆ ಯಾವುದೇ ಮಹತ್ವಾಕಾಂಕ್ಷೆ ಹಾಗೂ ಯೋಗ್ಯತೆ ಇಲ್ಲದಿರುವುದನ್ನು ನೀವು ದಿನನಿತ್ಯ ಗಮನಿಸಬಹುದು. ಅವರಿಗೆ ಆ ಅರ್ಹತೆ ಇಲ್ಲದಿದ್ದರೂ ಅವರಿಗೆ ಅದು ದಕ್ಕಿದೆ, ಆದರೆ ಅವರು ತಮಗೆ ಬಂದ ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಲು ಸಾಧ್ಯವಾಗದೇ ಇರಬಹುದು. ಇಂಥ ಸಂಗತಿಗಳನ್ನು ನಾವು ಸರಿಯಾಗಿ ಅರ್ಥೈಸಿ ಕೊಳ್ಳಬೇಕು ಎಂದರೆ, ನಮ್ಮ ಯೊಚನೆಗಳಲ್ಲಿ ಬರುವ ಭಾವನೆ ಹಾಗೂ ನಂಬಿಕೆಗಳ ಬಗ್ಗೆ ನಾವು ಕಣ್ಣಿಡಬೇಕು. ನಮ್ಮ ಅಪರಿಮಿತ ಹಾಗೂ ಅನಾವಶ್ಯಕ ನಿರೀಕ್ಷೆ ಗಳಿಂದಲೇ ನಮಗೆ ಈ ಹೋಲಿಕೆಯ ಭಾವ ಬರುತ್ತದೆ. ಆದರೆ, ಇವೆಲ್ಲವುಗಳಿಗಿಂತ ಮಿಗಿಲಾದ ಗುರುತರವಾದ ಸಾಧನೆ ಮಾಡಬೇಕು ಎಂಬ ಮಹತ್ವಾಕಾಂಕ್ಷೆ ನಮ್ಮಲ್ಲಿರಬೇಕು.

ಯಾರೊ ಒಬ್ಬರು ಏನನ್ನೋ ಸಾಧಿಸಿದ್ದಾರೆ, ದೊಡ್ಡ ಯಶಸ್ಸು ಪಡೆದಿದ್ದಾರೆ ಎಂದರೆ, ಅವರು ತಮ್ಮ ಜೀವನದಲ್ಲಿ ಸಾಮಾನ್ಯ ಜನರು ಹೊಂದುವ ಅನೇಕ ಸಂಗತಿಗಳನ್ನು ತ್ಯಾಗ ಮಾಡಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇಲ್ಲಿ, ಬೇರೆ ಎಲ್ಲದಕ್ಕಿಂತ ಹೆಚ್ಚಾಗಿ ಸಮಯ, ವೈಯಕ್ತಿಕ ಬೆಳವಣಿಗೆ ನಮ್ಮ ಹಿಡಿತದಲ್ಲಿ, ನಮ್ಮ ಇಷ್ಟದಂತೆ ಆಗಬೇಕಾಗಿದೆ.

ಕೃತಜ್ಞತೆ

ನಮ್ಮ ಬಳಿ ಏನಿದೆಯೋ ಅದರ ಬಗ್ಗೆ ನಮಗೆ ಕೃತಜ್ಞತೆ ಇರಬೇಕು. ಆ ಮೂಲಕ ನಾವು ಈ ಹೋಲಿಕೆ ಜಗತ್ತಿನಿಂದ ನಮ್ಮ ಸುಧಾರಣೆ ಕಡೆಗೆ ಬಲಗಾಲಿಟ್ಟು ಬರಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ, ದ್ವೈತ ವೇದಾಂತವು ತುಂಬಾ ಸಹಕಾರಿಯಾಗಿದ್ದು, ಇದು ನಮ್ಮ ಕರ್ಮದ ಮೇಲೆ ನಾವು ಹೆಚ್ಚು ಕೇಂದ್ರೀಕರಿಸಿ ಅದರ ಫಲಿತಾಂಶದ ಬಗ್ಗೆ ಕಡಿಮೆ ಯೋಚಿಸುವಂತೆ ಮಾಡುತ್ತದೆ. ಈ ಮೂಲಕ ನಾವು ಕ್ಲಾರಿಟಿ, ನೆಮ್ಮದಿ ಹಾಗೂ ಜೀವನದ ಅರ್ಥ ಹುಡುಕಿಕೊಂಡು ನಮ್ಮ ಸರ್ವತೋಮುಖ ಬೆಳವಣಿಗೆ ಕಡೆಗೆ ಹೆಜ್ಜೆ ಇಡಬಹುದು.

ನಾನೊಬ್ಬಳು ಮಹಿಳೆಯಾಗಿ ನನ್ನೊಳಗೆ ಈ ಭಾವನೆಯನ್ನು ಸಾಕಷ್ಟು ಅನುಭವಿಸಿದ್ದೇನೆ. ದ್ವೈತ ವೇದಾಂತದಲ್ಲಿ ಬೇರುಬಿಟ್ಟಿರುವ ಸರಳ ಸಾಂಪ್ರದಾಯಿಕ ಪದ್ಧತಿಗಳ ಆಚರಣೆ ಮೂಲಕ ನನ್ನ ಮನಸ್ಸಿನ ಮೇಲೆ ಸಹಜ ನಿಯಂತ್ರಣ ಹಾಗೂ ಶಾಂತಿ ಕಂಡುಕೊಂಡಿದ್ದೇನೆ. ತುಳಸಿ ಗಿಡಕ್ಕೆ ನೀರು ಹಾಕುವುದು, ಗುರು ಮಂತ್ರವನ್ನು ದಿನನಿತ್ಯ ಪಠಿಸುವುದು, ನಮಸ್ಕಾರ ಸೇವೆ, ಅಲ್ಲದೇ ದಿನನಿತ್ಯ ಮಾಡುವ ಅಡುಗೆ, ಕ್ಲೀನಿಂಗ್ ಹಾಗೂ ಮಕ್ಕಳನ್ನು ನೋಡಿಕೊಳ್ಳು ವುದು ಇವೇ ಮುಂತಾದ ಸರಳ ಕೆಲಸಗಳೂ ಕೂಡ ನಮ್ಮ ಮನಸ್ಸಿನ ನಿಯಂತ್ರಣಕ್ಕೆ ಸಹಕಾರಿ ಆಗಬಲ್ಲದು. ಇವೆಲ್ಲವೂ ಸಾಮಾನ್ಯ ಎನ್ನಿಸಿದರೂ ಇವು ಜೀವನಕ್ಕೆ ಸರಿಯಾದ ತಾಳಮೇಳ ಇಡುತ್ತವೆ. ಜೊತೆಗೆ, ಮನೆಯ ಮುಂದೆ ಶುಚಿ ಗೊಳಿಸಿ ರಂಗೋಲಿ ಇಡುವುದು ಸಿಂಪಲ್ ಕೆಲಸ ಎನ್ನಿಸಿದರೂ, ದಿನನಿತ್ಯ ನಾವು ಮಾಡುವ ಇಂತಹ ಕೆಲಸ ನಮಗೆ ಜೀವನದ ಒಳನೋಟ, ನಮ್ಮ ಶಕ್ತಿ-ಸಾಮರ್ಥ್ಯಗಳ ಆಳವಾದ ಅನುಭವ ನೀಡುತ್ತವೆ.



ಈ ದ್ವೈತ ವೇದಾಂತುವು ನಮಗೆ ಜೀವನದ ಆಳವಾದ ಜ್ಞಾನ, ಕಣ್ಣಿಗೆ ಕಾಣುವುದೆಲ್ಲವೂ ಅಸತ್ಯ ಹಾಗೂ ಕ್ಷಣಿಕ, ಇವೆಲ್ಲವೂ ನಮ್ಮ ಕಲ್ಪನೆ ಹಾಗೂ ಕೆಲವು ಕಾಲಗಳು ಇರಬಲ್ಲಂಥವು ಎಂಬುದು ಅರ್ಥವಾಗುತ್ತದೆ. ನಮ್ಮ ಸಂತೃಪ್ತಿ ಬೇರೆಯವರಲ್ಲಿ ಏನಿದೆ ಎಂದು ನಾವು ನೋಡುವುದರಿಂದ ಬರುವುದಿಲ್ಲ, ಅದು ನಮ್ಮಲ್ಲಿ ಏನಿದೆಯೋ ಅದನ್ನು ಅರ್ಥಮಾಡಿಕೊಂಡು ಖುಷಿಯಾಗಿದ್ದಾಗ ಸಿಗುತ್ತದೆ ಎಂಬುದು ಅರ್ಥವಾಗುತ್ತದೆ. ಈ ಅರಿವು ಬಂದಾಗ ನಮಗೆ ನಮ್ಮನಮ್ಮ ಕೆಲಸದಲ್ಲಿ ಶ್ರದ್ಧೆ, ಪ್ರಾಮಾಣಿಕತೆ, ಮನೆಯಲ್ಲಿನ ಕೆಲಸ, ಹೊರಗಡೆ ಕೆಲಸ ಎಲ್ಲದರಲ್ಲೂ ಒಂದಾಗುವಿಕೆ ಹಾಗೂ ತೊಡಗಿಸಿಕೊಳ್ಳುವಿಕೆಗೆ ಒಂದು ಸರಿಯಾದ ಅರ್ಥ ನೀಡುತ್ತದೆ. ಜತೆಗೆ, ನಮ್ಮ ವೈಯಕ್ತಿಕ ಬೆಳವಣಿಗೆಗೆ ನಾವು ಪ್ರವಾಸ ಮಾಡಬೇಕಿಲ್ಲ, ಎಲ್ಲೋ ಹುಡುಕಬೇಕಿಲ್ಲ, ಹೊರಗಡೆಯೇ ದುಡಿಯಬೇಕಿಲ್ಲ, ನಮ್ಮೊಳಗೆ ಇರುವ ಅದನ್ನು ನಾವು ನಮ್ಮ ಮನೆಯಲ್ಲೇ ಇದ್ದೂ ಪಡೆಯಬಹುದು ಎಂದು ಅರ್ಥವಾಗುತ್ತದೆ.

ಕರ್ಮ ಯೋಗ ಸಿದ್ಧಾಂತವು ಭಗವದ್ಗೀತೆಯಲ್ಲಿ ಚೆನ್ನಾಗಿ ಹೇಳಲ್ಪಟ್ಟಿದೆ. ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ। ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂತೋಸ್ತ್ವಕರ್ಮಣಿ॥ ನಿನಗೆ ನಿನ್ನ ಕರ್ಮವನ್ನು ಮಾಡುವ ಎಲ್ಲಾ ಅವಕಾಶ ಇದೆ. ಆದರೆ ಫಲಿತಾಂಶವನ್ನು ಕೊಡುವುದು ಆ ದೈವಶಕ್ತಿಯ ಕೈನಲ್ಲಿದೆ. ನಮಗೆ ಕರ್ಮದ ಕೊಡುಗೆ ಬೇಕು ಎಂಬ ಆಸೆ ಇದ್ದರೂ ಅದೇನು ಎಂಬುದು ನಮಗೆ ಸರಿಯಾಗಿ ತಿಳಿದಿಲ್ಲ. ಆದರೆ, ನಾವು ನಮ್ಮ ಕರ್ಮವನ್ನು ಮಾಡಿ ಅದಕ್ಕೆ ಬರಬೇಕಾದ ಫಲಿತಾಂಶವನ್ನು ದೇವರಿಗೇ ಬಿಟ್ಟರೆ ನಾವು ಅಂದುಕೊಂಡಿದ್ದಕ್ಕಿಂತ ಹೆಚ್ಚಿನದು ನಮಗೆ ಸಿಗಬಹುದು.

ಕೃಷ್ಣನ ಸಂದೇಶ

ನಮಗೆಲ್ಲರಿಗೂ ಗೊತ್ತಿರುವಂತೆ, ಮಹಾಭಾರತದಲ್ಲಿ ಬರುವ ಅರ್ಜುನ- ಸಂಬಂಧಗಳು ಹಾಗೂ ಮಮತೆಯ ಮೇಲಿನ ವ್ಯಾಮೋಹಕ್ಕೆ ಕಟ್ಟುಬಿದ್ದು, ಹೇಗೆಲ್ಲಾ ರಣರಂಗದಲ್ಲಿ ಆಡುತ್ತಾನೆ, ಕೃಷ್ಣನಿಗೆ ತಲೆನೋವು ತಂದಿಡುತ್ತಾನೆ ಎಂಬುದನ್ನು ನೋಡಿದ್ದೇವೆ. ಆದರೆ, 'ನಿನ್ನ ಕರ್ಮವನ್ನು ನೀನು ಫಲಾಪೇಕ್ಷೆಯಿಲ್ಲದೇ ಮಾಡು, ಪರಿಣಾಮದ ಚಿಂತೆ ನಿನಗೆ ಬೇಡ' ಎಂಬ ಸೂಕ್ತ ಜ್ಞಾನವನ್ನು ಸರಿಯಾದ ಸಮಯಕ್ಕೆ ನೀಡುವ ಮೂಲಕ ಕೃಷ್ಣ ಪರಮಾತ್ಮ ಅರ್ಜುನನನ್ನು ಸಂದಿಗ್ಧತೆಯಿಂದ ಪಾರುಮಾಡುತ್ತಾನೆ. ಫಲಾಪೇಕ್ಷೆಯಿಲ್ಲದೇ ನಾವು ಕರ್ಮ ಮಾಡಿದಾಗ ನಮಗೆ ಸಹಜವಾಗಿಯೇ ಅದರಲ್ಲಿ ಆಸಕ್ತಿಯಾಗಲೀ, ಆಸೆಯಾಗಲೀ ಇಲ್ಲದೇ ನಾವು ಸಹಜ ಸಂತೃಪ್ತಿಯನ್ನು ಹೊಂದುತ್ತೇವೆ.

ಈ ಬಗ್ಗೆ ವ್ಯಾಸರಾಜರು ಚೆಂದದ ಪದ್ಯ (ಪದ) ಬರೆದಿದ್ದಾರೆ. 'ಓಲಗ ಸುಲಭ.. ದೂರ ಹೋಗಲು ಬೇಡ.. ತೊಡೆಯ ಗುದ್ದಲಿ ಬೇಡ.. ನೀರ ನೆರೆಯ ಬೇಡ.. ನಿಗದಲ್ಲಿರಬೇಡ.. ' ಈ ಸಾಲುಗಳು ನಮಗೆ ದಿವ್ಯಜ್ಞಾನ ನೀಡಬಲ್ಲದು. ಈ ಮೂಲಕ ನಾವು ಹೆಚ್ಚಿನ ನಿರೀಕ್ಷೆಗೆ ಬೀಳದೇ ಸಂತೃಪ್ತಿಯ ಜೀವನ ನಮ್ಮದಾಗುವುದು. ಜೀವನದಲ್ಲಿ ಏನೇ ಬಂದರೂ ಎಲ್ಲವೂ ಕ್ಷಣಿಕ ಸುಖ ಹಾಗೂ ಕ್ಷಣಿಕ ದುಃಖ ನೀಡಬಲ್ಲದು ಎಂಬ ಅರಿವು ಬಂದು, ಆಳವಾದ ತತ್ವಜ್ಞಾನ ಮೈದಾಳುವುದು. ಇದು ನಮ್ಮ ದಿನನಿತ್ಯದ ಜೀವನದಲ್ಲಿ ಅನಾವಶ್ಯಕ ಹೋರಾಟ ಹಾಗೂ ಜಂಜಾಟಗಳನ್ನು ತಡೆದು, ಸತ್ಯದ ಕಡೆಗೆ ನಮ್ಮನ್ನು ಕರೆದುಕೊಂಡು ಹೋಗುವುದು.

ಅಗತ್ಯವಿದ್ದಷ್ಟು ಬಳಸಿ

ಎಲ್ಲವನ್ನೂ ಅಗತ್ಯವಿರುವಷ್ಟು ಬಳಸಿ, ಜಾಣ್ಮೆಯನ್ನು ಬಳಸಿಕೊಂಡು, ನಮ್ಮ ದೇಹ, ಬುದ್ಧಿ, ಮನಸ್ಸು ಹಾಗು ಭಾವನೆಗಳನ್ನು ಕೂಡ ಅಗತ್ಯವಿದ್ದಷ್ಟು ಮಾತ್ರ ಬಳಸಿಕೊಂಡು, ಎಲ್ಲದರ ಬಳಕೆಯ ಮಹತ್ವ ಅರಿತುಕೊಂಡು ನಡೆದರೆ, ಜೀವನದಲ್ಲಿ ಯಾವುದೂ ಕಷ್ಟವೇನಲ್ಲ. ಅತಿಯಾದ ಯೋಚನೆ, ಅತಿಯಾದ ಭಾವನೆ, ಮಿತಿಮೀರಿದ ಚಿಂತೆ ಎಲ್ಲವನ್ನೂ ಬದಿಗೊತ್ತಿ, ಅಗತ್ಯವಿರುವಷ್ಟು ಮಾತ್ರ ಎಲ್ಲವನ್ನೂ ಮಾಡಿದರೆ ಜೀವನದಲ್ಲಿ ಸಮತೋಲನ ಸಹಜವಾಗಿಯೇ ಸಿದ್ಧಿಸುತ್ತದೆ. ಜೀವನದಲ್ಲಿ ಸರಳತೆ, ಖುಷಿಯ ಭಾವವನ್ನು ಅಳವಡಿಸಿಕೊಂಡರೆ ಸಹಜವಾಗಿಯೇ ಸಂತೃಪ್ತಿ ಎಂಬುದು ನಮ್ಮನ್ನು ಹಿಂಬಾಲಿಸುತ್ತದೆ. ಈ ಅರಿವು ನಮ್ಮನ್ನು ಆಳವಾದ ಜೀವನದ ಕಡೆಗೆ ಕರೆದುಕೊಂಡು ಹೋಗುತ್ತದೆ.

ನಮಗೆ ಜೀವನ ಕಷ್ಟ, ಅನ್ಯಾಯ ಬಗೆದಿದೆ ಎಂದು ಅನ್ನಿಸಿದಾಗ, ನಾವು ಆಳವಾಗಿ ಚಿಂತನೆಯಲ್ಲಿ ಮುಳುಗಬೇಕು. ಆಗ ನಮಗೆ ನಾವ್ಯಾರೂ ಒಬ್ಬಂಟಿಗಳಲ್ಲ, ಅನಾವಶ್ಯಕ ಹೋಲಿಕೆಯಲ್ಲಿ ಜೀವನ ನಡೆಸುತ್ತ ದುಃಖದಲ್ಲಿ ಜೀವಿಸುತ್ತಿದ್ದೇವೆ ಅಷ್ಟೇ ಎಂಬುದು ಅರಿವಾಗುತ್ತದೆ. ನಮ್ಮ ಬಗ್ಗೆ ಅನಾವಶ್ಯಕ ಯೋಚಿಸುವ ಬದಲು ನಾವು ಜೀವನದಲ್ಲಿ ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಕರ್ಮ ಮಾಡುತ್ತ, ನಮಗೆ ಏನು ಬೇಕೆಂದು ನಾವು ಯೋಜನೆ ಮಾಡುವ ಬದಲು, ನಮಗೆ ನಿಜವಾಗಿ ಬೇಕಾಗಿದ್ದನ್ನು, ನಮ್ಮ ನಿರೀಕ್ಷೆ ಮೀರಿದ್ದನ್ನು ಆ ದಿವ್ಯಚೇತನವೇ ನೀಡುತ್ತದೆ ಎಂದು ಯೋಚಿಸಬೇಕು. ಈ ನಂಬಿಕೆ ನಿಮ್ಮನ್ನು ಹೋಲಿಕೆ ಹಾಗೂ ಚಿಂತೆಯ ಪ್ರಪಂಚದಿಂದ ಬಹುದೂರ ಕರೆದುಕೊಂಡು ಹೋಗುತ್ತದೆ. ಇದು ನಮ್ಮನ್ನು ಜೀವನದಲ್ಲಿ ಹೆಚ್ಚಿನ ಅಭ್ಯುದಯ ಹಾಗೂ ಆಳವಾದ ಅರಿವಿನ ಕಡೆ ಕರೆದುಕೊಂಡು ಹೋಗುತ್ತದೆ, ತನ್ಮೂಲಕ ನಾವು ಈಗ ಇರುವುದಕ್ಕಿಂತ ಹೆಚ್ಚಿನ ಉತ್ಕೃಷ್ಟ ಜೀವನ ನಡೆಸಬಹುದು.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
03.03.2025 ಸೋಮವಾರ
vishwavani.news

ದಿನ ಭವಿಷ್ಯ

ಮೇಷ ತೆಳುಹಳದಿ ಇಂದು ನಿಮಗೆ ಶುಭತರುವ ಬಣ್ಣ. ಈ ಬಣ್ಣದ ಉಡುಪನ್ನು ಧರಿಸಿದರೆ, ನಿಮ್ಮ ಮನವಿಂದು ಅಕ್ಷರಶಃ ಗಾಳಿಪಟ!

ವೃಷಭ ಕಚೇರಿಯ ಕೆಲಸದ ಜತೆಜತೆಗೆ ಮನೆಯಲ್ಲಿ ಮಕ್ಕಳ ವಿದ್ಯಾಭ್ಯಾಸದ ಕಡೆಗೂ ಗಮನ ನೀಡಿ. ಅವರಿಗೆ ನಿಮ್ಮ ಅಗತ್ಯವಿದೆ.

ಮಿಥುನ ಬಾಳಸಂಗಾತಿಯ ಸಲಹೆ-ಸೂಚನೆಯನ್ನು ನಿರ್ಲಕ್ಷಿಸದಿರಿ; ನಿಮ್ಮ ಶ್ರೇಯೋಭಿವೃದ್ಧಿಗೆ ಅವರು ಶ್ರಮಿಸುತ್ತಿದ್ದಾರೆ, ನೆನಪಿಡಿ.

ಕಟಕ ಮತ್ತೊಬ್ಬರು ನಿಮಗೆ ಕೇಡು ಬಗೆದರೆಂಬ ಕಾರಣಕ್ಕೆ ನೀವು ಅವರನ್ನೇ ಅನುಸರಿಬೇಕಿಲ್ಲ. ಸ್ವಂತಿಕೆಯನ್ನು ಬಿಟ್ಟುಕೊಡದಿರಿ.

ಸಿಂಹ ದಪ್ಪಗಾಗಿಬಿಟ್ಟರೆ ಅದೇನೂ ತಪ್ಪಲ್ಲ. ಅದನ್ನೇ ಮನಸ್ಸಿಗೆ ಹಚ್ಚಿಕೊಳ್ಳುವುದರಲ್ಲಿ ಅರ್ಥವಿಲ್ಲ. ಆಹಾರ-ವಿಹಾರದ ನಿರ್ಲಕ್ಷ್ಯ ಸಲ್ಲ.

ಕನ್ಯಾ ವಾಡಿಕೆಯ ಶಿಕ್ಷಣದ ಜತೆಗೆ, ಯಾವುದಾದರೂ ಲಲಿತಕಲೆಯಲ್ಲೂ ತೊಡಗಿ. ದ್ವಂದ್ವಗಳಿಂದ ಹೊರಬನ್ನಿ, ಸ್ಪಷ್ಟತೆಯಿರಲಿ.

ತುಲಾ ಯಾವ ವಿಷಯವನ್ನೂ ಮನೆಯವರಿಂದ ಮುಚ್ಚಿಡುವುದು ತರವಲ್ಲ, ಹಿತೈಷಿಗಳನ್ನು ನಿರ್ಲಕ್ಷಿಸಬೇಡಿ. ಬಿಳಿಬಟ್ಟೆ ಶುಭಕರ.

ವೃಶ್ಚಿಕ ನಿಮ್ಮ ಒಳ್ಳೆಯತನವೇ ನಿಮ್ಮ ಆಸ್ತಿ, ವಿದ್ಯೆಯೇ ನಿಮ್ಮ ಆಭರಣ. ಸ್ವಾರ್ಥಿಗಳ ಮಾತಿಗೆ ಮರುಳಾಗಬೇಡಿ. ಕಿತ್ತಳೆಬಣ್ಣ ಶುಭಕರ.

ಧನು ನಿಮ್ಮ ದೇಹ-ಮನಸ್ಸಿಗೆ ಒಪ್ಪುವ, ಒಗ್ಗುವ ಉಡುಪನ್ನು ಧರಿಸಬೇಕೇ ವಿನಾ, ಪರರ ನಿರೀಕ್ಷೆಯಂತೆ ಅಲ್ಲ. ಕೆನೆಬಣ್ಣ ಶುಭಕರ.

ಮಕರ ಹಾಲಿನಂಥ ನಿಮ್ಮ ಮನಸ್ಸು ಹಾಲಾಹಲ ಆಗದಿರಲಿ. ದುರ್ಜನರ ಸಂಗದಿಂದ ದೂರವಿದ್ದರೆ ಒಳಿತು. ಗಣೇಶನನ್ನು ಪ್ರಾರ್ಥಿಸಿ.

ಕುಂಭ ಸರಕಾರಿ ವೃತ್ತಿಯ ನಿರೀಕ್ಷೆಯಲ್ಲಿರುವವರು ಇಂದು ಶುಭಸುದ್ದಿಯನ್ನು ಕೇಳಲಿದ್ದೀರಿ. ಗುರುಪೀಠಕ್ಕೆ ತೆರಳಿ ನಮಸ್ಕಾರ ಹಾಕಿ.

ಮೀನ ಹಣ್ಣು-ತರಕಾರಿ ವ್ಯಾಪಾರಿಗಳಿಗೆ, ಹೋಟೆಲ್ ಉದ್ಯಮಿಗಳಿಗೆ ಇಂದು ಶುಭದಿನ, ಒಳ್ಳೆಯ ವ್ಯಾಪಾರದ ದಿನ. ಖುಷಿಪಡಿ.

● ಕೆ.ಬಿ.ಸಂತೋಷ್ ಗುರೂಜಿ

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಫಾಲ್ಗುಣ ಮಾಸ, ಶುಕ್ಲ ಪಕ್ಷ, ಚೌತಿ ತಿಥಿ, ರೇವತಿ ನಕ್ಷತ್ರ, ಶುಕ್ಲ ಯೋಗ, ರಾಹುಕಾಲ ಬೆಳಗ್ಗೆ 8.04ರಿಂದ 9.33ರವರೆಗೆ, ಅಭಿಜಿತ್ ಮುಹೂರ್ತ: ಮಧ್ಯಾಹ್ನ 12.08ರಿಂದ 12.55ರವರೆಗೆ.

ಮನೆಮದ್ದು

ಔಷಧೀಯ ಗುಣಗಳ ಆಗರ ತುಳಸಿ. ಇದರ ನೀರನ್ನು ಕುಡಿಯುವುದರಿಂದ ರಕ್ತವು ಶುದ್ಧವಾಗುತ್ತದೆ. ತುಳಸಿಯಲ್ಲಿರುವ 'ಆ್ಯಂಟಿ-ಬ್ಯಾಕ್ಟೀರಿಯಲ್' ಮತ್ತು 'ಆ್ಯಂಟಿ-ಫಂಗಲ್' ಗುಣವಿಶೇಷಗಳು ಚರ್ಮವನ್ನು ಮೃದುವಾಗಿಸುತ್ತವೆ, ಕಾಂತಿಯುತವಾಗಿಸುತ್ತವೆ.

ಸೌಂದರ್ಯ ಸೂತ್ರ

ನಿಂಬೆರಸದಲ್ಲಿ ವಿಟಮಿನ್ 'ಸಿ' ದಂಡಿಯಾಗಿದ್ದು ಇದು ಉಗುರುಗಳ ಆರೋಗ್ಯಕರ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ನಿಂಬೆ ಹೋಳಿನಿಂದ ಕೈ ಮತ್ತು ಕಾಲಿನ ಬೆರಳುಗಳ ಉಗುರುಗಳಿಗೆ ಪ್ರತಿನಿತ್ಯ ಉಜ್ಜುತ್ತಿದ್ದರೆ ಅವು ಸದೃಢವಾಗಿ ಬೆಳೆಯುತ್ತವೆ ಹಾಗೂ ಉಗುರಿನೊಳಗಿನ ಕೊಳೆಯೂ ದೂರವಾಗುತ್ತದೆ.



ಮಧುರ ಸ್ಮೃತಿ

ನಾಯಕ, ಖಳನಾಯಕ, ಹಾಸ್ಯನಟರ ಸಂಗಮ! ಚಲನಚಿತ್ರವೊಂದರ ಮುಹೂರ್ತದ ಸಂದರ್ಭದಲ್ಲಿ ಮೇಕಪ್‌ಧಾರಿ ತೂಗುದೀಪ ಶ್ರೀನಿವಾಸ್ ಕ್ಯಾಮೆರಾ ಎದುರಿಸಲು ತವಕಿಸುತ್ತಿದ್ದರೆ, 'ಕ್ಲಾಪ್' ಮಾಡುವ ಮೂಲಕ ದೃಶ್ಯದ ಚಿತ್ರೀಕರಣಕ್ಕೆ ಚಾಲನೆ ನೀಡಲು ದ್ವಾರಕೀಶ್ ಸಜ್ಜಾಗಿದ್ದಾರೆ. ಈ ಸಂದರ್ಭಕ್ಕೆ ಕಲಶವಿಟ್ಟಂತೆ ಡಾ.ರಾಜ್‌ಕುಮಾರ್ ಅವರಿಂದ ದ್ವಾರಕೀಶ್‌ರಿಗೆ ಹೂವಿನಹಾರದಿಂದ ಗೌರವಾರ್ಪಣೆ. ಈ ಮೂವರೂ ಈಗ ನಮ್ಮೊಂದಿಗಿಲ್ಲ, ಆದರೆ ಇವರ ನೆನಪು ಅಜರಾಮರ...

ತಂದೆ-ತಾಯಿಯರನ್ನು ನಿರ್ಲಕ್ಷಿಸಬೇಡಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ವೇದವ್ಯಾಸರು ತಮ್ಮ ಶಿಷ್ಯರಿಗೆ, "ಪ್ರತಿದಿನದ ಪೂಜೆಯಲ್ಲಿ ಯಾರಿಗೆ ಅಗ್ರಸ್ಥಾನ ನೀಡಬೇಕು ಎಂಬುದನ್ನು ಹೇಳುವೆನು ಕೇಳಿರಿ. ವಿಪತ್ತುಗಳನ್ನು ದೂರ ಮಾಡಲು ಸರ್ವಪ್ರಥಮವಾಗಿ ಗಣೇಶನನ್ನು ಪೂಜಿಸಬೇಕು. ಗಣೇಶ ಮತ್ತು ಷಣ್ಮುಖರು ಶಿವ-ಪಾರ್ವತಿಯರ ಇಬ್ಬರು ಪುತ್ರರು. ಒಮ್ಮೆ ದೇವತೆಗಳು ಅಮೃತದಷ್ಟು ರುಚಿಯಾದ ದಿವ್ಯಮೋದಕವನ್ನು ಪಾರ್ವತಿಗೆ ಅರ್ಪಿಸಿದರು. ಅದು ತಮಗೆ ಬೇಕೆಂದು ಇಬ್ಬರು ಬಾಲಕರೂ ತಾಯಿಯನ್ನು ಪೀಡಿಸತೊಡಗಿದರು. ಆಗ ಪಾರ್ವತಿಯು ಮಕ್ಕಳಿಗೆ, 'ಈ ಮೋದಕವನ್ನು ತಿನ್ನುವವನು ಜ್ಞಾನಿಯೂ, ಸಕಲವಿದ್ಯಾ ಪ್ರವೀಣನೂ ಆಗಿರಬೇಕು. ಆದ್ದರಿಂದ, ನಿಮ್ಮಿಬ್ಬರಲ್ಲಿ ಧರ್ಮಾಚರಣೆಯಿಂದ ಶ್ರೇಷ್ಠನಾಗಿ ಯಾರು ಮೊದಲು ಬರುವಿರೋ, ಅವರಿಗೆ ಈ ಮೋದಕವನ್ನು ನೀಡುವೆ' ಎಂದಳು. ತಾಯಿಯ ಮಾತನ್ನು ಕೇಳುತ್ತಿದ್ದಂತೆ ಚತುರ ಷಣ್ಮುಖನು ತನ್ನ ವಾಹನವಾದ ನವಿಲಿನ ಮೇಲೆ ಕುಳಿತು ತ್ರಿಲೋಕಗಳ ತೀರ್ಥಕ್ಷೇತ್ರಗಳ ದರ್ಶನಕ್ಕೆ ಹೊರಟನು, ಎಲ್ಲಾ ಕ್ಷೇತ್ರಗಳಲ್ಲೂ ಸ್ನಾನ ಮಾಡಿದನು. ಆದರೆ ಗಣೇಶ ಮಾತ್ರ ಷಣ್ಮುಖನಿಗಿಂತಲೂ ಬುದ್ಧಿವಂತನಾಗಿ, ತಂದೆ-ತಾಯಿಯರಿಗೆ ಮೂರು ಪ್ರದಕ್ಷಿಣೆ ಹಾಕಿ, ದೀರ್ಘದಂಡ ಪ್ರಣಾಮ ಮಾಡಿ, ಅವರೆದುರಿಗೆ ಕರ ಜೋಡಿಸಿ ನಿಂತನು. ಅಷ್ಟೊತ್ತಿಗೆ ಅಲ್ಲಿಗೆ ಬಂದ ಷಣ್ಮುಖನು ತನಗೆ ಮೋದಕ ಕೊಡಬೇಕೆಂದು ಆಗ್ರಹಿಸಿದನು. ಆಗ ಪಾರ್ವತಿಯು, 'ಸಂಪೂರ್ಣ ಪುಣ್ಯನದಿ ಸ್ನಾನ, ಸಕಲ ದೇವತೆಗಳಿಗೂ ಮಾಡಿದ ನಮಸ್ಕಾರ, ವ್ರತ, ಜಪ-ತಪಾದಿಗಳು ಈ ಯಾವುದೂ ಮಾತಾ-ಪಿತರಿಗೆ ನಮಸ್ಕರಿಸಿದಾಗ ದಕ್ಕುವ ಪುಣ್ಯಫಲಕ್ಕೆ ಸರಿಸಾಟಿಯಾಗಲಾರದು. ಆದ್ದರಿಂದ ಗಣೇಶನಿಗೇ ಈ ಮೋದಕ ಸಲ್ಲಬೇಕು ಹಾಗೂ ಮುಂದೆ ಎಲ್ಲಾ ಪೂಜಾಕಾರ್ಯಗಳಲ್ಲೂ ಗಣೇಶನಿಗೇ ಮೊದಲ ಪೂಜೆ' ಎಂದು ಹೇಳಿ ಅವನಿಗೆ ಮೋದಕವನ್ನು ನೀಡಿದಳು.

ಆದ್ದರಿಂದಲೇ, ಯಜ್ಞ-ಯಾಗಾದಿಗಳು, ಪೂಜೆ-ಪುನಸ್ಕಾರಗಳು ಯಾವ ದೇವರಿಗೇ ಸಂಬಂಧಪಟ್ಟಿರಲಿ, ಮೊದಲು ಗಣೇಶನನ್ನು ಪೂಜಿಸಬೇಕು. ಅದರಿಂದ ಫಲವೂ ಹೆಚ್ಚು ಹಾಗೂ ಆ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು. ಗಣೇಶ ಚತುರ್ಥಿಯಂದು ಬೆಳಗ್ಗೆ ಉಪವಾಸವಿದ್ದು ಅವನ ಪೂಜೆಯ ನಂತರವಷ್ಟೇ ಊಟ ಮಾಡಬೇಕು. ಗಣೇಶನನ್ನು ನಾನಾ ವಿಧದ ಸ್ತೋತ್ರಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಬೇಕು. ಗಣಪತಿ, ವಿಘ್ನರಾಜ, ಲಂಬೋದರ, ವಕ್ರತುಂಡ, ಗಜಾನನ, ದ್ವಯಮಾತುರ, ಹೇರಂಬ, ಏಕದಂತ, ಗಣಾಧಿಪ, ವಿನಾಯಕ, ಚಾರುಕರ್ಣ ಮತ್ತು ಭವಾತ್ಮಜ

ಈ ಹನ್ನೆರಡು ನಾಮಗಳನ್ನು ಪ್ರಾತಃಕಾಲದಲ್ಲೇ ಜಪಿಸಿದರೆ, ಜೀವನದಲ್ಲಿ ಯಾವ ವಿಘ್ನಗಳೂ ಬಾಧಿಸುವುದಿಲ್ಲ. ಉಪನಯನ, ವಿವಾಹಾದಿ ಮಂಗಳಕಾರ್ಯಗಳಲ್ಲಿ ಗಣೇಶನನ್ನು ಪೂಜಿಸಿದರೆ ಅವು ನಿರ್ವಿಘ್ನವಾಗಿ ನೆರವೇರಿ, ಅಕ್ಷಯಪುಣ್ಯ ಪ್ರಾಪ್ತಿಯಾಗುವುದು. ಪೂಜಾ ಕಲಶಗಳಲ್ಲಿ 'ಗಣಾನಾಂ ತ್ವಾಂ' ಎಂಬ ಮಂತ್ರದಿಂದ ಗಣೇಶನನ್ನು ಆವಾಹನೆ ಮಾಡಿ ಪೂಜಿಸಿದರೆ, ಕಾರ್ಯದಲ್ಲಿ ಸಂಪೂರ್ಣ ಸಿದ್ಧಿ ದೊರೆಯುವುದು, ಇದರಿಂದ ಸದ್ಗತಿಯೂ ಪ್ರಾಪ್ತಿಯಾಗುವುದು" ಎಂದು ಗಣೇಶನ ಮಹಿಮೆಯನ್ನು ವಿವರಿಸಿದರಂತೆ.

ತಂದೆ-ತಾಯಿಯರಿಗೆ ಮೂರು ಪ್ರದಕ್ಷಿಣೆ ಹಾಕಿ, ಅವರಲ್ಲೇ ಪ್ರಪಂಚವನ್ನೂ ಅದರ ಎಲ್ಲ ಒಳಿತನ್ನೂ ಕಂಡ ಗಣೇಶನ ಗುಣವು ಅವನನ್ನು 'ಪ್ರಥಮ ಪೂಜಿತ'ನನ್ನಾಗಿಸಿತು. ನಾವು ಜೀವನದಲ್ಲಿ ಏನೇ ಸಾಧನೆ ಮಾಡಲಿ, ತಾಯಿ-ತಂದೆಯರಿಗೆ ಗೌರವ ನೀಡದಿದ್ದರೆ, ಆ ಸಾಧನೆ ಎಲ್ಲಾ ಶೂನ್ಯ. ಆಧುನಿಕ ಮಕ್ಕಳು ಬೆಳೆಯುತ್ತಾ ವಿದ್ಯಾವಂತರಾಗುತ್ತಾ, ತಂದೆ-ತಾಯಿಯರ ಬಗ್ಗೆ ಒಂದು ರೀತಿಯ ವಿಲಕ್ಷಣ ಧೋರಣೆಯನ್ನು ಬೆಳೆಸಿಕೊಂಡುಬಿಡುತ್ತಾರೆ. ತಮಗೇ ಹೆಚ್ಚು ಗೊತ್ತಿರುವುದು, ತಂದೆ-ತಾಯಿಯರ ರೀತಿ-ನೀತಿಗಳು ಹಳೆಯ ಕಾಲದವು, ಅವರು ನಮ್ಮಂತೆ ಬದಲಾಗಬೇಕು, ಇಲ್ಲದಿದ್ದರೆ ಪ್ರಪಂಚ ಅವರನ್ನು ಒಪ್ಪಿಕೊಳ್ಳುವುದಿಲ್ಲ ಎಂಬ ನಿಲುವಿಗೆ ಅವರು ಬಂದುಬಿಡುತ್ತಾರೆ. ಆದರೆ, ನಮಗಿನ್ನೂ ನಿಲ್ಲಲುಬಾರದ, ಒಂದಗುಳು ತಿನ್ನಲೂ ಆಗದ ಸ್ಥಿತಿಯಿಂದ ನಮ್ಮನ್ನು ಸಾಕಿ-ಸಲಹಿ-ಬೆಳೆಸಿದ ತಂದೆ-ತಾಯಿಯರು ನಮಗೆ ಏನೆಲ್ಲಾ ಸೌಲಭ್ಯಗಳನ್ನು ಕೊಟ್ಟು, ಸ್ವತಂತ್ರವಾಗಿ ನಮ್ಮ ಕಾಲ ಮೇಲೆ ನಾವು ನಿಲ್ಲುವಂತೆ ಮಾಡಲಿಲ್ಲವೇ? ಹತ್ತಿದ ಮೇಲೆ ಏಣಿಯನ್ನು ತಳ್ಳಿದಂತೆ, ತಂದೆ ತಾಯಿಯರನ್ನು ಉಪೇಕ್ಷಿಸಬೇಡಿ. ಹೀಗೆ ಮಾಡಿದ ಯಾರೂ ಜೀವನದಲ್ಲಿ ಉದ್ಧಾರವಾಗಿಲ್ಲ.

ಇಲ್ಲೊಂಚೂರು ಕೇಳ್ರೀ...

- ಸೂರ್ಯ ಹುಟ್ಟುವ ಮೊದಲೇ ಹಾಸಿಗೆಯಿಂದ ಎದ್ದುಬಿಡಿ. ಇದರಿಂದಾಗಿ ನೀವು ದಿನವಿಡೀ ಉಲ್ಲಾಸದಿಂದಿರಲು ಸಾಧ್ಯವಾಗುತ್ತದೆ. ನಂತರ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು ವ್ಯಾಯಾಮ ಮಾಡಿ. ನಂತರ ಸ್ನಾನ ಮಾಡಿ ಉಪಾಹಾರ ಸೇವಿಸಿಬಿಡಿ. ಇದು ದೇಹದ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.
- ಶರೀರದ ಅಂಗಾಂಗಗಳು ಸಮರ್ಪಕ ರೀತಿಯಲ್ಲಿ ಕಾರ್ಯನಿರ್ವಹಿಸಲು ಬೇಕಿರುವ 'ಡಿ' ಜೀವಸತ್ವವನ್ನು ದಕ್ಕಿಸಿಕೊಳ್ಳಲು ಪ್ರತಿದಿನ ಮುಂಜಾನೆ ಸೂರ್ಯನ ಕಿರಣಗಳಿಗೆ ಮೈ ಒಡ್ಡಿಕೊಳ್ಳುವುದು ಒಳಿತು.
- ಕೊಬ್ಬಿನ ಅಂಶ ಹೆಚ್ಚು ಪ್ರಮಾಣದಲ್ಲಿ ಇರುವಂಥ ಆಹಾರ ಪದಾರ್ಥಗಳನ್ನು ಬೆಳಗ್ಗೆ ಹೊತ್ತು ಸೇವಿಸಿದಲ್ಲಿ, ದೇಹಕ್ಕೆ ದಕ್ಕುವ ಕೊಬ್ಬನ್ನು ದಿನವಿಡೀ ಕರಗಿಸಬಹುದು. ದಿನದ ಮೊದಲ ಆಹಾರವನ್ನು ಸೇವಿಸಿದ 4-5 ಗಂಟೆಯ ಬಳಿಕ ಮಧ್ಯಾಹ್ನದ ಊಟವನ್ನು ಮಾಡಬೇಕು.

ಪದಬಂಧ

1			2	■	3			4
	■	■		■		■	■	
	■	■	5	6		■	■	
7	8		■		■	9	10	
■		■	■	11	■	■		■
12			■		■	13		14
	■	■	15		16	■	■	
	■	■		■		■	■	
17				■	18			

ಎಡದಿಂದ ಬಲಕ್ಕೆ

1. ಶಿವನ ಪತ್ನಿ ಪಾರ್ವತಿಗೆ ಮತ್ತೊಂದು ಹೆಸರು (4)
3. ನಿಜವಾದುದು ಎನ್ನುವುದರಲ್ಲಿ ಕೊನೆಗೆ ಕವನ ಬರೆಯುವವನು ತಿರುಗಿದ್ದಾನೆ (4)
5. ಆಗಸಕ್ಕೆ ಮತ್ತೊಂದು ಹೆಸರು (3)
7. ಭಾರವನ್ನು ಹೊರುವ ಕೂಲಿಯಾಳು (3)
9. ತೆಳುವಾಗಿರುವ ಲೋಹದ ಹಾಳೆ (3)
11. ಅವಶ್ಯಕತೆಗೆ ಇನ್ನೊಂದು ಹೆಸರು (3)
12. ಕೆಲಸ ಮಾಡುವುದರಲ್ಲಿ ಸೋಮಾರಿ (3)
13. ಆಯುಧದ ಅಂಚು (3)
15. ತಮಾಷೆಗೆ ಮತ್ತೊಂದು ಹೆಸರು (3)
17. ಇವನೊಬ್ಬ ಪೊಲೀಸು ಸಿಬ್ಬಂದಿ (4)
18. ಎರಡೂ ಕೈಮುಗಿದು ಮಾಡುವ ವಂದನೆ (4)

ಮೇಲಿನಿಂದ ಕೆಳಕ್ಕೆ

1. ಸೆರೆಮನೆಗೆ ಮತ್ತೊಂದು ಹೆಸರು (4)
2. ಕೆಲಸಕ್ಕೆ ನಿಯೋಜಿಸಿದ ಅಧಿಕಾರಿಗಳ ಸಮಿತಿ (3)
3. ವಾದ್ಯವನ್ನು ಬಾರಿಸುವಿಕೆ (3)
4. ಮತ್ತೊಂದು ನಿಯಮ (4)
6. ಆನೆಯಂತೆ ನಿಧಾನವಾಗಿ ಮತ್ತು ಗಾಂಭೀರ್ಯದಿಂದ ನಡೆಯುವುದನ್ನು ಹೀಗೆನ್ನಬಹುದು (5)
8. ಮಾಯಾಜಾಲದಲ್ಲಿ ಸಿಲುಕಿತೇ ಬೆಕ್ಕು (3)
10. ತುಂಬಾ ಜನರಿರುವ ಕಡೆ ಆಗುವ ಗಲಾಟೆ (3)
12. ಭಾರತದ ಪುರಾತನ ವೈದ್ಯ ಪದ್ಧತಿ (4)
14. ಮಹತ್ತರವಾದ ಎಂದರ್ಥ (4)
15. ರಣರಂಗದ ಬಳಿಯಿರುವ ಶಿಬಿರಕ್ಕೆ ಈ ಹೆಸರು (3)
16. ಮನಸ್ಸಿದ್ದರೆ ಹತೋಟಿ ಇದೆ (3)

ಸರಿಯುತ್ತರಗಳು

[illegible]

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕಾರ್ಟೂನ್ ಕಚಗುಳಿ

ವ್ಯಂಗ್ಯಚಿತ್ರ ಕೃಪೆ: ಮಂಜುಲ್

ಆ ಫೋಟೋವನ್ನ ಅಲ್ಲಿಂದ ತೆಗೆದುಹಾಕೋದು ಒಳ್ಳೆಯ ಐಡಿಯಾ ಅಲ್ಲ ಸರ್! ಬೇಕಿದ್ದರೆ, ವ್ಯವಸ್ಥೆಯಲ್ಲಿ ಏನೇ ತಪ್ಪಾದರೂ 'ಇದಕ್ಕೆ ಅವರೇ ಕಾರಣ' ಅಂತ ಗೂಬೆ ಕೂರಿಸೋಣ ಬಿಡಿ..!!

ಮುದ್ರಾ ವಿಶ್ವ

ಡಾ. ಪತಂಜಲಿ ಆಚಾರ್ಯ

ಇಂದ್ರಿಯಗಳು ಚುರುಕಾಗಲು ಪ್ರಾಣಮುದ್ರೆ ಅಭ್ಯಾಸ ಮಾಡಿ

'ಪ್ರಾಣ' ಎಂದರೆ ಜೀವದ ಚೈತನ್ಯ ಅಥವಾ ಶಕ್ತಿ. ಪ್ರಾಣಮುದ್ರೆಯ ಅಭ್ಯಾಸಕ್ಕೆ ಇಂಥದೇ ಎಂಬ ನಿಗದಿತ ಸಮಯವೇನಿಲ್ಲ; ಆದರೆ ಇದನ್ನು ಏಕಾಂತದಲ್ಲಿ ನಿರ್ವಹಿಸಿದರೆ ಒಳಿತು. ಪ್ರಶಾಂತವಾಗಿರುವ ನೆಲೆಯೊಂದರಲ್ಲಿ ಕುಳಿತು ಪ್ರಾಣಮುದ್ರೆಯನ್ನು ಅಭ್ಯಾಸ ಮಾಡುವುದರಿಂದ ಇಂದ್ರಿಯಗಳು ಚುರುಕಾಗುತ್ತವೆ

- **ಅಭ್ಯಾಸಕ್ರಮ:** ಪದ್ಮಾಸನ, ಸುಖಾಸನದಂಥ ನಿರಾಳ ಭಂಗಿಯಲ್ಲಿ ಕುಳಿತುಕೊಳ್ಳಿ. ಅಥವಾ ಕುರ್ಚಿಯ ಮೇಲೆ ಕುಳಿತೂ ಈ ಅಭ್ಯಾಸ ಮಾಡಬಹುದು. ಕಣ್ಣುಗಳನ್ನು ನಿಧಾನವಾಗಿ ಮುಚ್ಚಿ, ಇಡೀ ದೇಹವನ್ನು ವಿಶ್ರಾಂತ ಸ್ಥಿತಿಗೆ ತಂದುಕೊಳ್ಳಿ. ಚಿತ್ರದಲ್ಲಿ ತೋರಿಸಿರುವಂತೆ ಹೆಬ್ಬೆರಳಿನ ತುದಿಯನ್ನು ಉಂಗುರದ ಬೆರಳು ಮತ್ತು ಕಿರುಬೆರಳಿನ ತುದಿಗಳಿಗೆ ಜೋಡಿಸಿಟ್ಟುಕೊಳ್ಳಿ. ಮಿಕ್ಕೆರಡು ಬೆರಳುಗಳು ನೇರವಾಗಿ ಚಾಚಿಕೊಂಡಿರಬೇಕು. ಒಮ್ಮೆ ದೀರ್ಘವಾಗಿ ಉಸಿರನ್ನು ಒಳಗೆಳೆದುಕೊಂಡು ನಿಧಾನವಾಗಿ ಹೊರಗೆ ಬಿಡಿ. ಈ ಅಭ್ಯಾಸವನ್ನು ಶುರುವಿನಲ್ಲಿ 2-3 ನಿಮಿಷದವರೆಗೆ ಮಾಡಿ, ಕ್ರಮೇಣ 15 ನಿಮಿಷದವರೆಗೂ ವಿಸ್ತರಿಸಬಹುದು.
- **ಪ್ರಯೋಜನಗಳು:** ಪ್ರಾಣಮುದ್ರೆಯ ಆಚರಣೆಯಿಂದ ಎದೆಯುರಿ ಸೇರಿದಂತೆ ಜೀರ್ಣಾಂಗ ವ್ಯೂಹಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳು ಇಲ್ಲವಾಗುತ್ತವೆ. ಆತಂಕ, ಒತ್ತಡ, ಖಿನ್ನತೆ ಇತ್ಯಾದಿ ಸಮಸ್ಯೆಗಳು ತಹಬಂದಿಗೆ ಬರುತ್ತವೆ. ದೇಹದ ಇಂದ್ರಿಯಗಳು ಚುರುಕುಗೊಂಡು, ಉತ್ಸಾಹ-ಉಲ್ಲಾಸ ಆವರಿಸುತ್ತವೆ.

ಒಮ್ಮೊಮ್ಮೆ ಹೀಗೂ ಆಗುವುದೂ...

ಹೀಗೊಬ್ಬ ಜೀನಿಯಸ್..!!

ಯಗಟಿ ರಘು ನಾಡಿಗ್

ನಮ್ಮ ಕಥಾನಾಯಕ ಆಲೂಪ್ರಸಾದ್ ಜಾಧವ್ ತಮಗಿದ್ದ ಇನ್‌ಫ್ಲುಯೆನ್ಸ್ ಬಳಸಿಕೊಂಡು ಒಮ್ಮೆ 'ಕನ್ನಡದ ಲಕ್ಷಾಧಿಪತಿ' ಕಾರ್ಯಕ್ರಮಕ್ಕೆ ನುಗ್ಗಿಬಿಟ್ಟರು. "ನಮಗೂ ಒಂದ್ ಚೇರು ಮಡಗ್ರೀ... ಈ ಆಟದಾಗೆ ನಾವು ಆಡಬಾರ್ದಾ?" ಎಂದು ಗತ್ತಿನಲ್ಲಿ ಕೇಳಿದ್ದಕ್ಕೆ ನಖಶಿಖಾಂತವಾಗಿ ಬೆವರಿ ಪ್ಯಾಂಟ್ ಒದ್ದೆ ಮಾಡಿಕೊಂಡ ಕಾರ್ಯಕ್ರಮದ ನಿರ್ದೇಶಕರು, ಹಾಟ್ ಸೀಟ್‌ನಲ್ಲಿ ಅದಾಗಲೇ ಕೂತಿದ್ದ ಸ್ಪರ್ಧಿಗೆ ಲಾಲಿಪಾಪ್ ಕೊಟ್ಟು ಸಂತೈಸಿ ಎಬ್ಬಿಸಿದರು. ಆಲೂಪ್ರಸಾದ್ ಸಾಕಷ್ಟು ಪ್ರಭಾವಿ ಪುಢಾರಿ ಆಗಿದ್ದರಿಂದ ಹಾಗೂ ಸ್ಪರ್ಧೆಯಿಂದ ಗೆದ್ದ ಹಣವನ್ನು 'ಮೇವು ಸಂಗ್ರಹಣೆ' ಕಾರ್ಯಕ್ಕೆ ಒಡ್ಡಿಕೊಂಡಿರುವ ಚಾರಿಟಿ ಸಂಸ್ಥೆಯೊಂದಕ್ಕೆ ನೀಡುವುದಾಗಿ 'ಆಶ್ವಾಸನೆ' ನೀಡಿದ್ದರಿಂದ, ಈ ಸಮಾಜಸೇವೆಗೆ ಪೂರಕವಾಗಿರಲಿ ಅಂತ ಸ್ಪರ್ಧೆಯ ನಿಯಮಗಳನ್ನು ಸಡಿಲಿಸಲಾಯಿತು. ಆಲೂಪ್ರಸಾದ್‌ಗೆ ಕೇಳಲಾದ ಪ್ರಶ್ನೆಗಳು, ಆಯ್ಕೆಗೆ ಇದ್ದ ಉತ್ತರಗಳು ಹಾಗೂ ಆಲೂಪ್ರಸಾದ್ ಉತ್ತರಿಸಿದ ಪರಿ ಇವಿಷ್ಟನ್ನೂ ಮುಂದೆ ನೀಡಲಾಗಿದೆ, ಕಣ್ತುಂಬಿಕೊಳ್ಳಿ!!

1) ನೂರು ವರ್ಷಗಳ ಯುದ್ಧವು ಎಷ್ಟು ದೀರ್ಘವಾಗಿ ನಡೆಯಿತು?

ಅ) 116 ಆ) 99
ಇ) 100 ಈ) 150

(ಈ ಪ್ರಶ್ನೆನೇ ಎಗರಿಸಿಬಿಡ್ರೀ ಅಂದರು ನಮ್ಮ ಆಲೂ! ಈ ಕಾರಣದಿಂದ ಅವರಿಗೆ ಅಂಕ ಸಿಗಲಿಲ್ಲ).

2) 'ಪನಾಮಾ' ಟೋಪಿಗಳನ್ನು ಯಾವ ದೇಶದಲ್ಲಿ ತಯಾರಿಸಲಾಗುತ್ತದೆ?

ಅ) ಬ್ರೆಜಿಲ್ ಆ) ಚಿಲಿ
ಇ) ಪನಾಮಾ ಈ) ಈಕ್ವೆಡಾರ್

(ಈ ಪ್ರಶ್ನೆಗೆ ಉತ್ತರ ಪಡೆಯಲೆಂದು 'ಫೋನ್-ಎ-ಫ್ರೆಂಡ್' ಹೆಲ್ಪ್‌ಲೈನ್ ಪಡೆದು ತಮ್ಮ ಪತ್ನಿಗೆ ಆಲೂ ಪ್ರಸಾದ್ ಫೋನ್ ಮಾಡಿದರಾದರೂ, ಆಕೆ ಉತ್ತರಿ ಸುವುದರೊಳಗೆ 30 ಸೆಕೆಂಡ್ ಮುಗಿದೇಹೋ ಯಿ ತು. ಹೀಗಾಗಿ ಉತ್ತರಿಸುವ ಭಾಗ್ಯ ಮಿಸ್ಸಾಯಿತು).

3) ಪೆಸಿಫಿಕ್ ಸಾಗರದಲ್ಲಿರುವ ಕ್ಯಾನರಿ ದ್ವೀಪಗಳನ್ನು ಯಾವ ಪ್ರಾಣಿಯ ಹೆಸರನ್ನು ಆಧರಿಸಿ ಇಡಲಾಗಿದೆ?

ಅ) ಕ್ಯಾನರಿ ಪಕ್ಷಿ ಆ) ಕಾಂಗರೂ
ಇ) ನಾಯಿಮರಿ ಈ) ಇಲಿ

(ಈ ಪ್ರಶ್ನೆಗೆ 'ಆಡಿಯೆನ್ಸ್ ಪೋಲ್' ಹೆಲ್ಪ್‌ಲೈನ್ ಪಡೆದ ಆಲೂ, ಸ್ಟುಡಿಯೋದಲ್ಲಿ ಹಾಜರಿದ್ದ ಪ್ರೇಕ್ಷಕರ ನೆರವನ್ನು ಕೇಳಿದರಾದರೂ, ಅಲ್ಲಿ ಸೇರಿದ್ದವರೆಲ್ಲಾ ಆಲೂಪ್ರಸಾದರ ವಿರೋಧಿಗಳೇ ಆಗಿದ್ದರಿಂದ 'ವೋಟಿಂಗ್ ಮೀಟರ್' ಅನ್ನು ಯದ್ವಾತದ್ವಾ ಒತ್ತಿದರು. ಹೀಗಾಗಿ ಆಲೂಪ್ರಸಾದ್‌ಗೆ ಸರಿಯುತ್ತರ ಗೊತ್ತಾಗದೆ ಉತ್ತರಿಸಲಾಗಲಿಲ್ಲ).

4) ಈ ಕೆಳಗಿನವುಗಳಲ್ಲಿ ರಾಜ 4ನೇ ಜಾರ್ಜ್‌ನ ಮೊದಲ ಹೆಸರು ಯಾವುದು?

ಅ) ಈಡರ್ ಆ) ಜಾರ್ಜ್
ಇ) ಆಲ್ಬರ್ಟ್ ಈ) ಮನೋಯೆಲ್

(ಈ ಪ್ರಶ್ನೆನಾ 'ಫ್ಲಿಪ್' ಮಾಡ್ರೀ ಸಾಕು ಎಂದು ಅಬ್ಬರಿಸಿದರು ಆಲೂಪ್ರಸಾದ್. ಇಷ್ಟಾಗಿಯೂ ಮತ್ತೊಂದಕ್ಕೆ ಅವರಿಗೆ ಉತ್ತರ ಗೊತ್ತಾಗಲಿಲ್ಲ).

5) 'ಅಕ್ಟೋಬರ್ ಕ್ರಾಂತಿ'ಯ ಆಚರಣೆಯನ್ನು ರಷ್ಯನ್ನರು ಯಾವ ತಿಂಗಳಲ್ಲಿ ಮಾಡುತ್ತಾರೆ?

ಅ) ಜನವರಿ ಆ) ಫೆಬ್ರವರಿ
ಇ) ಅಕ್ಟೋಬರ್ ಈ) ನವೆಂಬರ್

(ಇದ್ಯಾಕೋ ತೀರಾ ಅತಿಯಾಯ್ತು. ನನ್ನ 'Generator Knowledge'ಗೆ ಇದು ಹೊಂದುವುದಿಲ್ಲ ಎಂದು ಗೊಣಗಿಕೊಂಡೇ ಆಲೂಪ್ರಸಾದ್ ಸದರಿ ಸ್ಪರ್ಧೆಯಿಂದ 'ಕ್ವಿಟ್' ಮಾಡಿಬಿಟ್ಟರು..!!).

ಓಹೋಹೋ, ನಿಮ್ಮ ಬುದ್ಧಿವಂತಿಕೆಗೆ ನೀವೇ ಬೆನ್ನು ತಟ್ಟಿಕೊಳ್ಳುತ್ತಾ, ಮೇಲಿನ ಪ್ರಶ್ನೆಗಳಿಗೆ ಉತ್ತರಿಸಲಾಗದ ನಮ್ಮ ಆಲೂ ಪ್ರಸಾದರನ್ನು ಗೇಲಿ ಮಾಡುತ್ತಿದ್ದೀರಾ? ಈ ಐದೂ ಪ್ರಶ್ನೆಗಳ ಸರಿಯಾದ ಉತ್ತರಗಳನ್ನು ಒಮ್ಮೆ ನೋಡಿ:

1) ನೂರು ವರ್ಷಗಳ ಯುದ್ಧವು 1337ರಿಂದ 1453ರವರೆಗೆ ಒಟ್ಟು 116 ವರ್ಷಗಳ ಕಾಲ ನಡೆಯಿತು.
2) ಪನಾಮಾ ಟೋಪಿಗಳನ್ನು ಈಕ್ವೆಡಾರ್‌ನಲ್ಲಿ ತಯಾರಿಸಲಾಗುತ್ತದೆ.
3) ಕ್ಯಾನರಿ ದ್ವೀಪಗಳಿಗೆ ನಾಯಿಮರಿ ಹೆಸರನ್ನು ಆಧರಿಸಿ ಇಡಲಾಗಿದೆ. 'ಇನ್‌ಸುಲೇರಿಯಾ ಕ್ಯಾನರಿಯಾ' ಎಂಬ ಲ್ಯಾಟಿನ್ ಹೆಸರಿನ ಅರ್ಥ 'ಗಂಡು ನಾಯಿಮರಿಗಳ ದ್ವೀಪಗಳು' ಅಂತ..!
4) ರಾಜ 4ನೇ ಜಾರ್ಜ್‌ನ ಮೊದಲ ಹೆಸರು- 'ಆಲ್ಬರ್ಟ್'. ಇದನ್ನು ಆತ 1936ರಲ್ಲಿ ಬದಲಿಸಿಕೊಂಡ.
5) ಅಕ್ಟೋಬರ್ ಕ್ರಾಂತಿಯ ಆಚರಣೆಯನ್ನು ನವೆಂಬರ್‌ನಲ್ಲಿ ಮಾಡಲಾಗುತ್ತದೆ.

ಇನ್ಮೇಲೆ ನಮ್ ಆಲೂಪ್ರಸಾದ್ ಜಾಧವ್ ಜಿಯನ್ನು ಯಾರಾದ್ರೂ ರೇಗಿಸಿದ್ರೆ.. ಹುಷಾರ್.!!

ವಿವಿಧ ವಿನೋದಾವಳಿ...

ಇವರು ಕಾಣೆಯಾಗಿದ್ದಾರೆ...!

ಈ ಚಿತ್ರದಲ್ಲಿ ಇರುವವರು ಕಳೆದ ಕೆಲವು ದಿನಗಳಿಂದ ನಮ್ಮ ಮನೆಯಿಂದ ಕಾಣೆ ಯಾಗಿದ್ದಾರೆ. ಯಾವಾಗಲೂ ಮನೆಯೊಳಗೇ ಆಟವಾಡಿಕೊಂಡಿರುತ್ತಾ, ಮನೆಯ ಗೇಟಿನ ಬಳಿ ಬಂದವರನ್ನೆಲ್ಲಾ ತಮಾಷೆಗಾಗಿ ಬೆದರಿಸಿ ಕೊಂಡು ಇರುತ್ತಿದ್ದ ಇವರ ಹುಟ್ಟಿದ ಹಬ್ಬಕ್ಕೆ ಹೊಸ 'ಚೈನಿನ' ಬದಲಿಗೆ ಮತ್ತೊಮ್ಮೆ 'ಬೆಲ್ಟ್' ಅನ್ನು ಪ್ರೆಸೆಂಟ್ ಮಾಡಿದ್ದರಿಂದ ಇವರು ತೀವ್ರ ಅಸಮಾಧಾನಗೊಂಡು ಮನೆಬಿಟ್ಟು ಹೋಗಿದ್ದಾರೆ ಎಂದು ನಾವು ಭಾವಿಸಿದ್ದೇವೆ.

ಇತರ 'ಬೀದಿ ಸ್ನೇಹಿತರು' ತಮ್ಮೊಂದಿಗೆ ಬೀದಿಜಗಳ ಮಾಡಿಕೊಂಡ ಕಾರಣದಿಂದಾಗಿ ಪ್ರಾಯಶಃ ಇವರು ಬೇಸತ್ತು, ಯಾರದ್ದಾದರೂ ಮನೆಯ ಕಾಂಪೌಂಡು, ಕಾರು-ಬೈಕಿನ ಚಕ್ರಗಳನ್ನು ವಿಪರೀತ ಒದ್ದೆಮಾಡಿ ಹಾಳುಮಾಡಿರಬಹುದೇ? ಹೀಗೆ ತೊಂದರೆಗೆ ಒಳಗಾದವರು ಕಾರ್ಪೊರೇಷನ್‌ಗೆ ದೂರು ನೀಡಿ ಇವರನ್ನು ಅವರು ಎತ್ತಾಕ್ಕೊಂಡು ಹೋಗುವಂತೆ ಮಾಡಿರಬಹುದೇ? ಎಂಬ ಸಂಶಯ ನಮ್ಮನ್ನು ಕಾಡಿತ್ತು. ಆದರೆ ನಂತರ ಬೇರೊಂದು ಮಾಹಿತಿ ಸಿಕ್ಕಿತು. ಅದೆಂದರೆ, ನಮ್ಮ ಮನೆಯ ಹತ್ತಿರದ ಕಲ್ಯಾಣ ಮಂಟಪದಲ್ಲಿ ಮದುವೆ ನಡೆಯುತ್ತಿರುವಾಗ ಇವರು ಒಳನುಗ್ಗಲು ಯತ್ನಿಸಿದ್ದರಿಂದ, ಅಲ್ಲಿನ ಪರಿಚಾರಕರು ಇವರಿಗೆ ಹಿಗ್ಗಾಮುಗ್ಗ ಹೊಡೆ ದರೆಂದೂ, ಆಗ ಇವರು 'ಕುಂಯ್ಯೋ -ಮರ್‍ರ್ರೋ' ಎಂದು ಕಿರಿಚುತ್ತಾ ಹೊರಬಂದ ರೆಂದೂ ಪ್ರತ್ಯಕ್ಷದರ್ಶಿಗಳು ನಮಗೆ ತಿಳಿಸಿ ದರು. ಇದರಿಂದಾಗಿ ನಮ್ಮ ಸಂಶಯ ತಪ್ಪೆಂದು ಗೊತ್ತಾಗಿ, ಇವರು ಇದೇ ಬಡಾವಣೆಯಲ್ಲಿ ಎಲ್ಲೋ ತಿರುಗಾಡುತ್ತಿರಬಹುದು ಎನಿಸಿದೆ.

ಆದ್ದರಿಂದ ಇವರು ನಿಮ್ಮ ಕಣ್ಣಿಗೇನಾದರೂ ಬಿದ್ದರೆ, ನೀವಾಗಿಯೇ ಇವರನ್ನು ನಮ್ಮ ಮನೆಗೆ ಕರೆದುಕೊಂಡು ಬರುವ ದುಸ್ಸಾಹಸವನ್ನು ಮಾತ್ರ ಮಾಡಬಾರದಾಗಿ ಕೋರುತ್ತೇವೆ. ಏಕೆಂದರೆ ಇವರು ಈಗಾಗಲೇ ಅವಮಾನದಿಂದಲೂ, ಹಸಿವಿನಿಂದಲೂ ಸಾಕಷ್ಟು ನೊಂದಿರುವ/ಬಳಲಿರುವ ಸಾಧ್ಯತೆಯಿರುವುದರಿಂದ, ಆ ನೋವೇ ಆಕ್ರೋಶವಾಗಿ ಪರಿವರ್ತನೆಗೊಳ್ಳಬಹುದು ಹಾಗೂ ಕರೆದೊಯ್ಯಲು ಬಂದ ನಿಮ್ಮನ್ನೇ ತಮ್ಮ ದಂತಪಂಕ್ತಿಗಳಿಂದ ಘಾಸಿಗೊಳಿಸಿ, ಅದಕ್ಕೆ ಪರಿಹಾರಾರ್ಥವಾಗಿ ನೀವು ವಿನಾಕಾರಣ ಹೊಕ್ಕಳಿನ ಸುತ್ತ ಇಂಜೆಕ್ಷನ್ ತೆಗೆದುಕೊಳ್ಳುವ ಪರಿಸ್ಥಿತಿ ಬರಬಹುದು.... ಆದ್ದರಿಂದ, ಇವರು ಸಿಕ್ಕಿರುವ ಕುರಿತು ಪತ್ರಿಕೆಯಲ್ಲಿ ನೀವು ಮಾಹಿತಿ ನೀಡಿದಲ್ಲಿ, ನಾವೇ ಮುದ್ದಾಂ ಬಂದು ಅವರನ್ನು ಮನೆಗೆ ಕರೆತಂದು, ಅವರು ಬಯಸಿದಂತೆ ಹುಟ್ಟುಹಬ್ಬಕ್ಕೆ ಹೊಸ ಚೈನನ್ನು ಬಳುವಳಿಯಾಗಿ ನೀಡುತ್ತೇವೆ ಹಾಗೂ ಅದು ಯಾವಾಗಲೂ ಅವರ ಕೊರಳಲ್ಲಿಯೇ ಇರುವಂಥ ವ್ಯವಸ್ಥೆ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಈ ಮೂಲಕ ನೀಡುತ್ತಿದ್ದೇವೆ. ಅಷ್ಟೇ ಅಲ್ಲ, ಇವರಿಂದಾಗಿ ಈಗಾಗಲೇ ನಿಮ್ಮಲ್ಲಿ ಯಾರಿಗಾದರೂ ತೊಂದರೆಯಾಗಿದ್ದರೆ ಅಥವಾ ನಿಮ್ಮ ವಾಹನ, ಕಾಂಪೌಂಡ್‌ಗಳು ಇವರಿಂದಾಗಿ ಒದ್ದೆಯಾಗಿದ್ದರೆ ಕ್ಷಮೆಯನ್ನೂ ಕೋರುತ್ತೇವೆ...

ಇಂತಿ,
ದುಃಖತಪ್ತ ಪಾಲಕರು...!!

ಅತ್ಯಾಧುನಿಕ ಅಪಾರ್ಥಕೋಶ...

ಅಪಾರ್ಥಸಾರಥಿ
naadigru@gmail.com

- **ಹಂಚಿಕಡ್ಡಿ:** ಐದೂ ಮಂದಿಯು ತಮ್ಮ ಬಾಯಲ್ಲಿ ಬೀಡಿಯನ್ನು ಕಚ್ಚಿಕೊಂಡಿದ್ದರೂ ಬೆಂಕಿಪೊಟ್ಟಣ ಇಲ್ಲದಿರುವಾಗ, ಒಬ್ಬಾತ ತಾನು ಹಚ್ಚಿಕೊಂಡ ಬೆಂಕಿಕಡ್ಡಿಯನ್ನು ಮಿಕ್ಕ ಐವರೊಂದಿಗೂ ಹಂಚಿಕೊಳ್ಳಬೇಕು ಎಂಬ ಸದಾಶಯ.
- **ಬಂಡೆ:** ಇದು ಬೇರೆ ಊರಿನದ್ದು ಎಂದಾದರೆ ಅದೇ ಗಾತ್ರದಲ್ಲಿ 'ಉಳಿಯುತ್ತೆ', ಒಂದೊಮ್ಮೆ ಕನಕಪುರದ್ದು ಎಂದಾದರೆ ರಾಜಕೀಯದಲ್ಲಿ 'ಬೆಳೆಯುತ್ತೆ'.
- **ಚುನಾವಣೋತ್ತರ ಕಾಲ:** ವಿವಿಧ ರಾಜಕೀಯ ಪಕ್ಷಗಳ ಬಟ್ಟೆಯ ಬ್ಯಾನರುಗಳಿಗೆ, ಒಂದಷ್ಟು ಮಂದಿಯ ಅಂಗಿ-ಚಡ್ಡಿಯಾಗುವ ಭಾಗ್ಯ ಒದಗುವ ಪರ್ವಕಾಲ.
- **ಅರಿಶಿನ-ಕುಂಕುಮಕ್ಕೆ ಕರೆಯುವಿಕೆ:** ಮನೆಗೆ ಹೊಸದಾಗಿ ತಂದ ಫ್ರಿಜ್ಜು, ಏರ್ ಕಂಡೀಷನರ್ ಹಾಗೂ ತನಗೆಂದು ಖರೀದಿಸಿದ ಡೈಮಂಡ್ ನೆಕ್ಲೆಸ್, ರೇಷ್ಮೆ ಸೀರೆ, ಆ್ಯಪಲ್ ಐಫೋನ್ ಇತ್ಯಾದಿಗಳ ಪ್ರದರ್ಶನಕ್ಕೆ ಮನೆಯಾಕೆ ಹಮ್ಮಿಕೊಳ್ಳುವ ಕಾರ್ಯಕ್ರಮ. ಈ ಪ್ರದರ್ಶನದ ನಂತರ, ಕೋಸಂಬರಿ-ಪಾನಕ, ಚಿಗಳಿ-ತಂಬಿಟ್ಟು ಇತ್ಯಾದಿಗಳ ವಿನಿಯೋಗವಾಗುವುದಿದೆ!
- **ಹುಂಜ:** ಬೆಳ್ಳಂಬೆಳಗ್ಗೆ ಕೂಗುವುದು ತಾನೇ ಆದರೂ, 'ಕೋಳಿ ಕೂಗಿತು' ಎಂಬ ಜನರ ತಪ್ಪುಗ್ರಹಿಕೆಯನ್ನು ದೂರಮಾಡಲು ಬಯಸದೆ ಆ ಕೀರ್ತಿಯನ್ನು ಕೋಳಿಗೆ ಬಿಟ್ಟುಕೊಟ್ಟಿರುವ ತ್ಯಾಗಜೀವಿ.
- **ತ್ಯಾಗರಾಜ:** ಸಿನಿಮಾದಲ್ಲಿ ಇನ್ನೊಬ್ಬರ ಬದುಕನ್ನು ಹಸನುಮಾಡಲೆಂದೇ ಹುಟ್ಟಿರುವ ಮತ್ತು ನಂತರ ಬಾಗಿಲ ಮೂಲೆಯಲ್ಲಿ ಮೌನವಾಗಿ ಕಣ್ಣೀರು ಸುರಿಸುವ 'ಪುರುಷರೂಪಿ ಪಂಢರಿಬಾಯಿ'. ಇಂಥವರಿಗೆ 'ರಮೇಶ್ ಅರವಿಂದ್' ಎಂಬ ಪ್ರೀತಿಪೂರ್ವಕ ಪರ್ಯಾಯ ಹೆಸರೂ ಉಂಟು!
- **ಸೈಕಲ್ಲು:** ಮನೆಯಲ್ಲಿ ದುಬಾರಿ ಬೆಲೆಯ 'ರೋಲ್ಸ್ ರಾಯ್ಸ್' ಕಾರು ಇದ್ದರೂ, ಅದು ಒಮ್ಮೊಮ್ಮೆ ಕೈಕೊಟ್ಟಾಗ ಆದಷ್ಟು ಬೇಗ ದುರಸ್ತಿ ಮಾಡಿಸಲು ಮಾಲೀಕನು ಇದನ್ನು ಹೊಡೆಯಬೇಕಾಗಿ/ತುಳಿಯಬೇಕಾಗಿ ಬರುತ್ತದೆ!

ಸಮಾಚಾರ ಸಣ್ಣದಲ್ಲ

ವಾರಿಯರ್ಸ್‌ಗೆ ಇಂದು ಜೈಂಟ್ಸ್ ಸವಾಲು

ಲಕ್ನೋ: ಆಲ್‌ರೌಂಡರ್ ದೀಪ್ತಿ ಶರ್ಮಾ ನಾಯಕತ್ವದ ಯು.ಪಿ.ವಾರಿಯರ್ಸ್ ತಂಡವು ತನ್ನ ತವರಿನಂಗಳದಲ್ಲಿ ಸೋಮವಾರ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ವಡೋದರಾದಲ್ಲಿ ನಡೆದ ಟೂರ್ನಿಯ ಮೊದಲ ಸುತ್ತಿನಲ್ಲಿ ಉಭಯ ತಂಡಗಳೂ ಮುಖಾಮುಖಿಯಾಗಿದ್ದವು. ಅದರಲ್ಲಿ ಗುಜರಾತ್ ತಂಡವು 6 ವಿಕೆಟ್‌ಗಳಿಂದ ಜಯ ಗಳಿಸಿತ್ತು. ಅದರ ನಂತರದ ಪಂದ್ಯಗಳಲ್ಲಿ ಗುಜರಾತ್ ತಂಡವು ಸತತ ಸೋಲು ಅನುಭವಿಸಿತ್ತು. ಇದೀಗ ವಾರಿಯರ್ಸ್ ತಂಡಕ್ಕೆ ಗುಜರಾತ್ ಎದುರು ಮುಯ್ಯಿ ತೀರಿಸಿಕೊಳ್ಳುವ ಅವಕಾಶ ಒದಗಿ ಬಂದಿಗೆ. ಗುಜರಾತ್ ತಂಡವು ಕಳೆದ ವಾರ ಬೆಂಗಳೂರಿನಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿಯನ್ನು ಸೋಲಿಸುವ ಮೂಲಕ ತನ್ನ ನಾಕೌಟ್ ಪ್ರವೇಶದ ಆಸೆಗೆ ಮರುಜೀವ ನೀಡಿತ್ತು. ಸದ್ಯ ಪಾಯಿಂಟ್ಸ್ ಪಟ್ಟಿಯ ಕೊನೆಯ ಸ್ಥಾನದಲ್ಲಿರುವ ಆ್ಯಷ್ಲೆ ಗಾರ್ಡನರ್ ಬಳಗವು ತನ್ನ ಪಾಲಿನಲ್ಲಿ ಉಳಿದಿರುವ ಮೂರು ಪಂದ್ಯಗಳಲ್ಲಿಯೂ ಗೆದ್ದರೆ ನಾಕೌಟ್ ಅವಕಾಶ ಒಲಿಯುವ ಸಾಧ್ಯತೆ ಇದೆ. ಅಂಕಪಟ್ಟಿಯಲ್ಲಿ ವಾರಿಯರ್ಸ್, ಆರ್‌ಸಿಬಿ ಮತ್ತು ಗುಜರಾತ್ ತಂಡಗಳು ತಲಾ 4 ಅಂಕಗಳನ್ನು ಪಡೆದಿವೆ. ಇದರಿಂದಾಗಿ ಸೋಮವಾರ ನಡೆಯಲಿರುವ ಪಂದ್ಯವು ಮಹತ್ವ ಪಡೆದುಕೊಂಡಿದೆ.

ಬೆಂಗಳೂರು ಟೆನಿಸ್: ಶಿಂಟಾರೊ ಫೈನಲ್‌ಗೆ

ಬೆಂಗಳೂರು: ಏಳನೇ ಶ್ರೇಯಾಂಕದ ಶಿಂಟಾರೊ ಮೊಚಿಝುಕಿ ಅವರು 6-1, 3-6, 6-4ರಿಂದ ಶ್ರೇಯಾಂಕರಹಿತ ಆಟಗಾರ ಜೇಮ್ಸ್ ಮೆಕ್‌ಕ್ಯಾಬ್ ಅವರನ್ನು ಸೋಲಿಸಿ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದರು. ಜಪಾನ್‌ಗ ಶಿಂಟಾರೊ ಅವರು ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಬ್ರಾಂಡನ್ ಹೋಲ್ಟ್ ಅವರನ್ನು ಎದುರಿಸಲಿದ್ದಾರೆ.

ಕೇರಳ-ವಿದರ್ಭ ಫೈನಲ್ ಪಂದ್ಯ ಡ್ರಾ | ಆತಿಥೇಯರ ಮುನ್ನಡೆಗೆ ಸಂದ ಜಯ

ವಿದರ್ಭಕ್ಕೆ ರಣಜಿ ಕಿರೀಟ

ನಾಗ್ಪುರ: ವಿದರ್ಭ ಹಾಗೂ ಕೇರಳ ನಡುವಿನ 2024-25ರ ಸಾಲಿನ ರಣಜಿ ಟ್ರೋಫಿ ಪಂದ್ಯವು ಭಾನುವಾರ ಡ್ರಾದಲ್ಲಿ ಮುಕ್ತಾಯ ಕಂಡರೂ, ಪ್ರಥಮ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಅಕ್ಷಯ್ ವಾಡ್ಕರ್ ನಾಯಕತ್ವದ ವಿದರ್ಭ ತಂಡವು ಮೂರನೇ ಬಾರಿ ರಣಜಿ ಟ್ರೋಫಿಯನ್ನು ತನ್ನ ಮುಡಿಗೇರಿಸಿಕೊಂಡಿತು. ಪ್ರಥಮ ಇನಿಂಗ್ಸ್‌ನ ನಿರ್ಣಾಯಕ ಸಮಯದಲ್ಲಿ 153 ರನ್ ಹಾಗೂ ದ್ವಿತೀಯ ಇನಿಂಗ್ಸ್‌ನಲ್ಲಿ 73 ರನ್‌ಗಳನ್ನು ಕಲೆ ಹಾಕಿದ್ದ ವಿದರ್ಭ ಬ್ಯಾಟ್ಸ್‌ಮನ್ ದಾನಿಶ್ ಮಾಲೆವಾರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ವಿದರ್ಭ ತಂಡದ ಮತ್ತೊಬ್ಬ ಆಟಗಾರ ದರ್ಶನ್ ನಲ್ಕಂಡೆ ಕೊನೆಯ ಹಂತದಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿ 98 ಎಸೆತಗಳಲ್ಲಿ ಅಜೇಯ 51 ರನ್‌ಗಳನ್ನು ದಾಖಲಿಸಿದ್ದರು. ಅಂತಿಮವಾಗಿ ವಿದರ್ಭ ತಂಡ, ದ್ವಿತೀಯ ಇನಿಂಗ್ಸ್‌ನಲ್ಲಿ 143.5 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 375 ರನ್‌ಗಳನ್ನು ಕಲೆ ಹಾಕಿ 413 ರನ್‌ಗಳ ಗುರಿಯನ್ನು ಕೇರಳ ತಂಡಕ್ಕೆ ನೀಡಿತು, ಆದರೆ ಭಾನುವಾರ ಫೈನಲ್ ಪಂದ್ಯದ ಅಂತಿಮ ದಿನವಾಗಿದ್ದ ಕಾರಣ ಡ್ರಾ ಘೋಷಿಸಲಾಯಿತು.

ಇಲ್ಲಿನ ವಿದರ್ಭ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆದಿದ್ದ ಫೈನಲ್ ಹಣಾಹಣಿಯ ಪ್ರಥಮ ಇನಿಂಗ್ಸ್‌ನಲ್ಲಿ 37 ರನ್ ಮುನ್ನಡೆ ಪಡೆದ ಬಳಿಕ ವಿದರ್ಭ ತಂಡ, ದ್ವಿತೀಯ ಇನಿಂಗ್ಸ್‌ನಲ್ಲಿ ಕೇವಲ 7 ರನ್‌ಗಳಿಗೆ ಪ್ರಮುಖ ಎರಡು ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆ ವೇಳೆ ನಿರ್ಣಾಯಕ ಬ್ಯಾಟಿಂಗ್ ಪ್ರದರ್ಶನ ತೋರಿದ್ದ ಕರುಣ್ ನಾಯರ್ (135) ಶತಕ ಸಿಡಿಸಿದ್ದರು, ಅಲ್ಲದೇ ದಾನಿಶ್ ಮಾಲೆವರ್ ಅವರ ಜೊತೆ 182 ರನ್‌ಗಳ ಅತ್ಯಮೂಲ್ಯ ಜತೆಯಾಟ ಆಡಿ, ವಿದರ್ಭ ತಂಡ ಎರಡನೇ ಇನಿಂಗ್ಸ್‌ನಲ್ಲಿ 375 ರನ್‌ಗಳನ್ನು ಕಲೆ ಹಾಕಲು ನೆರವು ನೀಡಿದ್ದರು. ದ್ವಿತೀಯ ಇನಿಂಗ್ಸ್‌ನಲ್ಲಿ ಕೂಡಾ ದಾನಿಶ್ ಮಾಲೆವರ್ 73 ರನ್‌ಗಳ ಕೊಡುಗೆ ನೀಡಿದ್ದರು.

342 ರನ್ ಕಲೆ ಹಾಕಿದ್ದ ಕೇರಳ: ಇದಕ್ಕೂ ಮುನ್ನ ಪ್ರಥಮ ಇನ್ನಿಂಗ್ಸ್ ಆಡಿದ್ದ ಕೇರಳ ತಂಡ ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿತ್ತು. ಆದಿತ್ಯ ಸರವಾಟೆ (79 ರನ್) ಹಾಗೂ ನಾಯಕ ಸಚಿನ್ ಬೇಬಿ (98 ರನ್) ಅವರ ಬ್ಯಾಟಿಂಗ್ ಬಲದಿಂದ ಕೇರಳ ತಂಡ 125 ಓವರ್‌ಗಳಿಗೆ 342 ರನ್‌ಗಳಿಗೆ ಆಲ್ ಔಟ್ ಆಯಿತು. ಆ ಮೂಲಕ ಪ್ರಥಮ ಇನಿಂಗ್ಸ್‌ನಲ್ಲಿ 37 ರನ್‌ಗಳ ಅಲ್ಪ ಹಿನ್ನಡೆಯನ್ನು ಅನುಭವಿಸಿತ್ತು. ವಿದರ್ಭ ಪರ ದರ್ಶನ್ ನಲ್ಕಂಡೆ, ಹರ್ಷ್ ದುಬೆ ಮತ್ತು ಪಾರ್ಥ್ ರೇಖಡೆ ತಲಾ ಮೂರು ವಿಕೆಟ್‌ಗಳನ್ನು ಪಡೆದಿದ್ದರು. ಪ್ರಸಕ್ತ ಟ್ರೋಫಿ ಟೂರ್ನಿಯಲ್ಲಿ ಆಡಿದ 10 ಪಂದ್ಯಗಳಿಂದ ಒಟ್ಟು 68 ವಿಕೆಟ್‌ಗಳನ್ನು ಕಬಳಿಸಿದ ವಿದರ್ಭ ತಂಡದ ಎಡಗೈ ಸ್ಪಿನ್ನರ್ ಹರ್ಷ್ ದುಬೆ ಟೂರ್ನಿಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

3ನೇ ಸಲ ರಣಜಿ ಟ್ರೋಫಿ ಗೆದ್ದ ಸಂಭ್ರಮದಲ್ಲಿ ವಿದರ್ಭ ತಂಡ

3ನೇ ಸಲ ಒಲಿದ ಪ್ರಶಸ್ತಿ

ರಣಜಿ ಟ್ರೋಫಿ ಇತಿಹಾಸದಲ್ಲಿ ವಿದರ್ಭ ತಂಡವು ಚಾಂಪಿಯನ್ ಆಗುತ್ತಿರುವುದು ಇದು ಮೂರನೇ ಸಲ. ಈ ಹಿಂದೆ 2017-18 ಹಾಗೂ 2018-19ರ ರಣಜಿ ಕ್ರಿಕೆಟ್ ಋತುವಿನಲ್ಲೂ ವಿದರ್ಭ ತಂಡ ಚಾಂಪಿಯನ್ ಆಗಿತ್ತು. ರಣಜಿ ಟ್ರೋಫಿಯ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಕೇರಳ ತಂಡ ಫೈನಲ್ ಪ್ರವೇಶಿಸಿತ್ತು.

ಕಪ್ ಎತ್ತಲು ನೆರವಾದ ಕನ್ನಡಿಗ: ಕರುಣ್ ಅಮೋಘ ಆಟ

ಕರ್ನಾಟಕದಿಂದ ವಿದರ್ಭ ತಂಡಕ್ಕೆ ವಲಸೆ ಹೋದ ಕರುಣ್ ನಾಯರ್ ಈ ಬಾರಿ ವಿದರ್ಭ ತಂಡ ರಣಜಿ ಟ್ರೋಫಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದವರು. 2024-25ರ ಈ ರಣಜಿ ಟ್ರೋಫಿ ಆವೃತ್ತಿಯಲ್ಲಿ ಕರುಣ್ ನಾಯರ್ 800 ಕ್ಕೂ ಅಧಿಕ ರನ್ ಕಲೆ ಹಾಕಿದ ನಾಲ್ಕನೇ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಈ ಸೀಸನ್‌ನಲ್ಲಿ ಆಡಿರುವ 16 ಇನ್ನಿಂಗ್ಸ್‌ಗಳಲ್ಲಿ ಕರುಣ್ 55ರ ಸರಾಸರಿಯಲ್ಲಿ ರನ್ ಕಲೆ ಹಾಕಿದ್ದಾರೆ. ಇಲ್ಲಿಯವರೆಗೆ ಎಂಟು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ್ದಾರೆ.

ವರುಣ್‌ಗೆ 5 ವಿಕೆಟ್ | ಭಾರತ-ಆಸೀಸ್ ಸೆಮಿ ಕದನ

ಕಿವಿ ಹಿಂಡಿದ ಭಾರತ

ದುಬೈ: ನ್ಯೂಜಿಲೆಂಡ್ ವಿರುದ್ಧ ಇಲ್ಲಿ ನಡೆದ ಚಾಂಪಿಯನ್‌ಶಿಪ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಟೀಮ್ ಇಂಡಿಯಾ, ನ್ಯೂಜಿಲೆಂಡ್ ಅನ್ನು 44 ರನ್‌ಗಳಿಂದ ಸೋಲಿಸಿದ್ದು, ಮಂಗಳವಾರದಂದು ನಡೆಯುವ ಸೆಮಿಫೈನಲ್ ಪಂದ್ಯದಲ್ಲಿ ಭಾರತವು ಆಸ್ಟ್ರೇಲಿಯಾವನ್ನು ಎದುರಿಸಲಿದೆ.

ಮೊದಲು ಬ್ಯಾಟ್ ಮಾಡಿದ ಭಾರತ ತಂಡದ ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 22 ತಲುಪುವಷ್ಟರಲ್ಲಿ ರೋಹಿತ್ ಶರ್ಮಾ (15) ಹಾಗೂ ಶುಭ್‌ಮನ್ ಗಿಲ್ (2) ವಿಕೆಟ್ ನಷ್ಟವಾಯಿತು. ತಮ್ಮ 300ನೇ ಪಂದ್ಯದಲ್ಲಿ ಕೊಹ್ಲಿ ಕೇವಲ 11 ರನ್ ಗಳಿಸಿ ಔಟ್ ಆದರು, ಮ್ಯಾಟ್ ಹೆನ್ರಿ ಬೌಲಿಂಗ್‌ನಲ್ಲಿ ಗ್ಲೆನ್ ಫಿಲಿಪ್ಸ್ ಅದ್ಭುತ ಕ್ಯಾಚ್ ಹಿಡಿದರು. ಈ ಹಂತದಲ್ಲಿ ಜತೆಗೂಡಿದ ಶ್ರೇಯಸ್ ಅಯ್ಯರ್ ಹಾಗೂ ಅಕ್ಷರ್ ಪಟೇಲ್ ತಂಡವನ್ನು ನಿಧಾನಗತಿಯಲ್ಲಿ ಮುನ್ನಡೆಸಿ ನಾಲ್ಕನೇ ವಿಕೆಟ್‌ಗೆ 98 ರನ್ ಗಳಿಸಿದರು. ಅಕ್ಷರ್ ಪಟೇಲ್ 42 ರನ್ ಗಳಿಸಿದರೆ, ಶ್ರೇಯಸ್ ಅಯ್ಯರ್ 79 ರನ್ ಗಳಿಸಿದರು. ಕೆಳಕ್ರಮಾಂಕದಲ್ಲಿ ಹಾರ್ದಿಕ್ ಪಾಂಡ್ಯ (45) ಕೆ.ಎಲ್. ರಾಹುಲ್ (23) ಹಾಗೂ ರವೀಂದ್ರ ಜಡೇಜಾ ಉಪಯುಕ್ತ ಇನ್ನಿಂಗ್ಸ್ ಕಟ್ಟಿದರು. ಟೀಮ್ ಇಂಡಿಯಾ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 249 ರನ್ ಪೇರಿಸಿತು. ಕೀವಿಸ್ ಪರ ಹೆನ್ರಿ 42 ರನ್ ನೀಡಿ 5 ವಿಕೆಟ್ ಗಳಿಸಿದರು.

250 ರನ್‌ಗಳ ಗುರಿ ಪಡೆದ ನ್ಯೂಜಿಲೆಂಡ್‌ನ ಆರಂಭವೂ ಉತ್ತಮವಾಗಿರಲಿಲ್ಲ. ರಚಿತ್ ರವೀಂದ್ರ 6 ರನ್ ಗಳಿಸಿ ಹಾರ್ದಿಕ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. ವಿಲ್ ಯಂಗ್ 22 ರನ್ ಗಳಿಸಿ ವರುಣ್ ಚಕ್ರವರ್ತಿಗೆ ವಿಕೆಟ್ ಒಪ್ಪಿಸಿದರು. ಬಳಿಕ ಟಾಮ್ ಲಾಥಮ್ 14 ರನ್ ಹಾಗೂ ಗ್ಲೆನ್ ಫಿಲಿಪ್ಸ್ 12 ರನ್ ಗಳಿಸಿ ಪೆವಿಲಿಯನ್ ಸೇರಿದರು. ಆದರೆ ಮತ್ತೊಂದೆಡೆ ಕೇನ್ ವಿಲಿಯಮ್ಸ್-ಸ್ಯಾಟ್ನರ್ ಜೊತೆಯಾಟ ಮುಂದುವರಿಯಿತು. ವಿಲಿಯಮ್ಸ್ 81 ರನ್‌ಗಳನ್ನು ಹಾಗೂ ಸ್ಯಾಟ್ನರ್ 28 ರನ್ ಗಳಿಸಿದರು. ಉಳಿದಂತೆ ಮ್ಯಾಟ್ ಹೆನ್ರಿ 2 ರನ್ ಹಾಗೂ ವಿಲ್ ಒರೂಕ್ 1 ರನ್ ಗಳಿಸಿದರು. ನ್ಯೂಜಿಲೆಂಡ್ 45.3 ಓವರ್‌ಗಳಲ್ಲಿ 205 ರನ್‌ಗಳಿಸಿ ಆಲೌಟ್ ಆಯಿತು.

ಭಾರತದ ಪರ ವರುಣ್ ಚಕ್ರವರ್ತಿ 42 ರನ್ ನೀಡಿ ನ್ಯೂಜಿಲೆಂಡ್‌ನ 5 ವಿಕೆಟ್ ಪಡೆದು ಟೀಮ್ ಇಂಡಿಯಾದ ಗೆಲುವಿನ ರೂವಾರಿಯಾದರು. ಕುಲ್‌ದೀಪ್ ಯಾದವ್ 2 ವಿಕೆಟ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್ ಹಾಗೂ ಜಡೇಜಾ ತಲಾ ಒಂದು ವಿಕೆಟ್ ಪಡೆದರು.

ಆರ್‌ಸಿಬಿ ಅಭಿಮಾನಿಗಳಿಗೆ ಕ್ಷಮೆ ಕೇಳಿದ ಮಂದಾನ

ಬೆಂಗಳೂರು: ತವರಿನಂಗಳದಲ್ಲಿ ಆಡಿದ ಎಲ್ಲ ನಾಲ್ಕೂ ಪಂದ್ಯಗಳಲ್ಲಿ ಹೀನಾಯ ಸೋಲು ಕಂಡ ಹಾಲಿ ಚಾಂಪಿಯನ್ ಆರ್‌ಸಿಬಿಯ ನಾಯಕಿ ಸ್ಮೃತಿ ಮಂಧಾನ ತಂಡದ ಅಭಿಮಾನಿಗಳಲ್ಲಿ ಕ್ಷಮೆ ಕೇಳಿದ್ದಾರೆ. ಶನಿವಾರ'ದ' ನಿರ್ಣಾಯಕ ಮುಖಾಮುಖಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 9 ವಿಕೆಟ್‌ಗಳಿಂದ ಸೋತ ಕಾರಣ ತಂಡದ ನಾಕೌಟ್ ಹಾದಿ ದುರ್ಗಮವಾಗಿದೆ. ಉಳಿದಿರುವ ಎರಡು ಪಂದ್ಯಗಳಲ್ಲಿ ದೊಡ್ಡ ಅಂತರದಿಂದ ಗೆದ್ದರೆ ಮಾತ್ರ ಆರ್‌ಸಿಬಿಗೆ ನಾಕೌಟ್ ಅವಕಾಶವೊಂದಿದೆ. 'ನಮ್ಮನ್ನು ಕ್ಷಮಿಸಿ ಎಂದು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಬೆಂಗಳೂರಿನಲ್ಲಿ ನಿಮಗಾಗಿ ಒಂದೇ ಒಂದು ಪಂದ್ಯವನ್ನು ಗೆಲ್ಲಲು ನಮ್ಮಿಂದ ಸಾಧ್ಯವಾಗಲಿಲ್ಲ. ಅಪಾರ ಸಂಖ್ಯೆಯಲ್ಲಿ ಬಂದು ನೀವು ನಮ್ಮನ್ನು ಬೆಂಬಲಿಸಿದ್ದೀರಿ. ಆದರೆ ಕ್ರಿಕೆಟ್‌ನಲ್ಲಿ ಹಿಂದಿನ ಫಲಿತಾಂಶ ಬದಿಗಿಡಬೇಕು, ನಾವು ಅದನ್ನು ಮರೆತುಬಿಡಬೇಕು ಮತ್ತು ಮುಂದೆ ಸಾಗಬೇಕು. ಸೋತರೂ ಕೂಡ ನಿಮ್ಮ ಬೆಂಬಲ ಮಾತ್ರ ಎಂದೆಂದಿಗೂ ಹೀಗೆ ಇರುತ್ತದೆ ಎಂದು ನನಗೆ ತಿಳಿದಿದೆ. ಅದಕ್ಕಾಗಿಯೇ ನೀವು ವಿಶ್ವದ ಅತ್ಯುತ್ತಮ ಅಭಿಮಾನಿಗಳು. ನಾವೆಲ್ಲರೂ ಒಂದು ವಾರದ ರಜೆಯನ್ನು ಹೊಂದಿದ್ದೇವೆ, ಆದ್ದರಿಂದ ಖಚಿತವಾಗಿ ಎಲ್ಲಾ ತಪ್ಪುಗಳನ್ನು ತಿದ್ದಿಕೊಂಡು ಮತ್ತೆ ಗೆಲುವಿನ ಹಳಿಗೆ ಮರಳುತ್ತೇವೆ' ಎಂದು ಮಂದಾನ ಹೇಳಿದ್ದಾರೆ.

ವಿರಾಟ್ ಕೊಹ್ಲಿ ದಂತಕತೆ: ವಿವಿಯನ್ ರಿಚರ್ಡ್ಸ್ ಶ್ಲಾಘನೆ

ದುಬೈ: ಭಾರತೀಯ ಕ್ರಿಕೆಟ್‌ನ ಸಾರ್ವಕಾಲಿಕ ಶ್ರೇಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿರುವ ವಿರಾಟ್ ಕೊಹ್ಲಿಯನ್ನು ಈಗಾಗಲೇ ಸಾಕಷ್ಟು ಮಾಜಿ ಕ್ರಿಕೆಟಿಗರು ಶ್ಲಾಘಿಸಿದ್ದಾರೆ. ಇದೀಗ ಈ ಪಟ್ಟಿಗೆ ವೆಸ್ಟ್ ಇಂಡೀಸ್ ಮಾಜಿ ನಾಯಕ ವಿವಿಯನ್ ರಿಚರ್ಡ್ಸ್ ಸೇರ್ಪಡೆಯಾಗಿದ್ದಾರೆ. ಕ್ರೀಡಾ ಹೋರಾಟದ ಮನೋಭಾವದಿಂದಾಗಿ ವಿರಾಟ್ ಕೊಹ್ಲಿ ಕ್ರಿಕೆಟ್ ದಂತಕತೆಯಾಗಿದ್ದಾರೆಂದು ಅವರು ಬಣ್ಣಿಸಿದ್ದಾರೆ. ಇಂಟರ್‌ನ್ಯಾಷನಲ್ ಮಾಸ್ಟರ್ ಲೀಗ್ ಪಂದ್ಯದ ವೇಳೆ ಮಾಧ್ಯಮ ಸಂಭಾಷಣೆಯಲ್ಲಿ ಮಾತನಾಡಿದ ವಿವಿಯನ್ ರಿಚರ್ಡ್ಸ್, 'ನಿರ್ಣಾಯಕ ಸನ್ನಿವೇಶಗಳಲ್ಲಿ ಇತರೆ ಕ್ರಿಕೆಟಿಗರಿಗಿಂತ ವಿರಾಟ್ ಕೊಹ್ಲಿ ಅತ್ಯುತ್ತಮ ಸಾಮರ್ಥ್ಯವನ್ನು ಹೊಂದಿದ್ದಾರೆ, ಅವರ ಗುಣಮಟ್ಟದಿಂದ ನಾವು ದಂತಕತೆ ಎಂದು ಕರೆಯಬಹುದು' ಎಂದು ಶ್ಲಾಘಿಸಿದ್ದಾರೆ.

'ಎಲ್ಲಾ ಸಮಯದಲ್ಲಿಯೂ ಒಬ್ಬ ಆಟಗಾರ ಉತ್ತಮವಾಗಿ ಆಡಲು ಸಾಧ್ಯವಾಗುವುದಿಲ್ಲ. ಆಟಗಾರ ಎಂದ ಮೇಲೆ ಏರಿಳಿತಗಳು ಇದ್ದೇ ಇರುತ್ತವೆ ಹಾಗೂ ಕಮ್‌ಬ್ಯಾಕ್ ಮಾಡುತ್ತಾರೆ. ಇದು ಕೇವಲ ಹೋರಾಟದ ಮನೋಭಾವವಾಗಿರುತ್ತದೆ. ಶಕ್ತಿ, ಉತ್ಸಾಹ, ಉತ್ಸುಕತೆಯಿಂದಾಗಿಯೇ ವಿರಾಟ್ ಕೊಹ್ಲಿಯನ್ನು ನಾವು ಅಗ್ರ ದರ್ಜೆಯಲ್ಲಿ ಇರಿಸಿದ್ದೇವೆ. ಅವರು ಕೆಟ್ಟ ಸಮಯಗಳನ್ನು ಎದುರಿಸಬೇಕಾಗುತ್ತದೆ. ಅದನ್ನು ಮಟ್ಟಿನಿಂತು ಬರುವ ಮೂಲಕ ಅವರು ದಿಗ್ಗಜ ಎನಿಸಿಕೊಂಡಿದ್ದಾರೆ' ಎಂದು ಅವರು ವಿವಿಯನ್ ರಿಚರ್ಡ್ಸ್ ಕೊಹ್ಲಿಯನ್ನು ವರ್ಣಿಸಿದ್ದಾರೆ.



ಇಂಗ್ಲೆಂಡ್ ಕ್ರಿಕೆಟಿಗರ ಟೀಕೆ: ತಿರುಗೇಟು ಕೊಟ್ಟ ಗವಾಸ್ಕರ್

ದೆಹಲಿ: ಚಾಂಪಿಯನ್ ಟ್ರೋಫಿಯಲ್ಲಿ ಉಳಿದ ತಂಡಗಳಿಗೆ ಮೂರು ಕಡೆ ಆಡಿಸಿ, ಭಾರತಕ್ಕೆ ಎಲ್ಲಾ ಪಂದ್ಯಗಳನ್ನು ದುಬೈನಲ್ಲೇ ಆಡಿಸುವುದರಿಂದ ಟೀಮ್ ಇಂಡಿಯಾ ತಂಡಕ್ಕೆ ಹೆಚ್ಚಿನ ಅನುಕೂಲ ಸಿಕ್ಕಿದೆ ಎಂದು ಹೇಳಿದ್ದ ಇಂಗ್ಲೆಂಡ್ ತಂಡದ ಮಾಜಿ ನಾಯಕರಾದ ಮೈಕೆಲ್ ಆಥರ್ಟನ್ ಮತ್ತು ನಾಸಿರ್ ಹುಸೇನ್‌ಗೆ ಭಾರತ ತಂಡದ ದಿಗ್ಗಜ ಆಟಗಾರ ಸುನೀಲ್ ಗವಾಸ್ಕರ್ ತಕ್ಕ ತಿರುಗೇಟನ್ನು ನೀಡಿದ್ದಾರೆ.

'ಭಾರತ ತಂಡದ ಪ್ರದರ್ಶನದ ಬಗ್ಗೆ ಚಿಂತಿಸುವುದಕ್ಕಿಂತ ನಿಮ್ಮ ತಂಡದ ಸ್ಥಿತಿ-ಗತಿಯ ಬಗ್ಗೆ ನೀವು ಕೊಂಚ ಗಮನಹರಿಸಿದರೆ ಉತ್ತಮ. ನಿಮ್ಮ ಇಂಗ್ಲೆಂಡ್ ತಂಡ ಇತ್ತೀಚೆಗಷ್ಟೇ ಕ್ರಿಕೆಟ್ ಲೋಕಕ್ಕೆ ಕಾಲಿಟ್ಟ ಅಫಘಾನಿಸ್ತಾನ ವಿರುದ್ಧವೂ ಸೋತಿರುವಾಗ ನೀವು ಏಕೆ ಆ ಬಗ್ಗೆ ಚಿಂತಿಸಬಾರದು. ನಿಮ್ಮ ತಂಡವು ಏಕೆ ಅರ್ಹತೆ ಪಡೆದಿಲ್ಲ ಎಂದು ನೀವು ಏಕೆ ಯೋಚಿಸಬಾರದು?' ಎಂದು ಗವಾಸ್ಕರ್ ಟೀಕಾ ಪ್ರಹಾರ ನಡೆಸಿದ್ದಾರೆ.

ಚಾಂಪಿಯನ್‌ಶಿಪ್ ಟೂರ್ನಿಯ ಆತಿಥ್ಯ ವಹಿಸಿದ್ದ ಪಾಕಿಸ್ತಾನಕ್ಕೆ ತೆರಳಲು ಭದ್ರತೆ ಮತ್ತು ರಾಜಕೀಯ ಉದ್ವಿಗ್ನತೆಯ ಕಾರಣ ನೀಡಿ ಬಿಸಿಸಿಐ ಟೀಮ್ ಇಮಡಿಯಾವನ್ನು ಪಾಕಿಸ್ತಾನಕ್ಕೆ ಕಳುಹಿಸಲು ನಿರಾಕರಿಸಿತ್ತು, ಹಾಗಾಗಿ ಭಾರತ ತಂಡಕ್ಕೆ ಹೈಬ್ರಿಡ್ ಮಾದರಿಯಲ್ಲಿ ಆಡಲು ಅವಕಾಶ ನೀಡಲಾಗಿತ್ತು.

ಜೀವನಶ್ರೇಷ್ಠ ಮೂರನೇ ಸ್ಥಾನಕ್ಕೇರಿದ ಗುಕೇಶ್

ದೆಹಲಿ: ನೂತನ ಫಿಡೆ ರ್‍ಯಾಂಕಿಂಗ್‌ನಲ್ಲಿ ಹಾಲಿ ವಿಶ್ವ ಚಾಂಪಿಯನ್ ಭಾರತದ ಡಿ. ಗುಕೇಶ್ ಜೀವನಶ್ರೇಷ್ಠ 3ನೇ ಸ್ಥಾನಕ್ಕೇರಿದ್ದಾರೆ. ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಗುಕೇಶ್ ವಿರುದ್ಧ ಟೈ-ಬ್ರೇಕರ್‌ನಲ್ಲಿ ಟಾಟಾ ಸ್ಟೀಲ್ ಮಾಸ್ಟರ್ಸ್ ಪ್ರಶಸ್ತಿಯನ್ನು ಜಯಿಸಿದ ಹಿನ್ನೆಲೆಯಲ್ಲಿ 8 ಸ್ಥಾನ ಜಿಗಿತ ಕಂಡಿದ್ದು ಟಾಪ್-10ಕ್ಕೆ ಮರಳಿದ್ದಾರೆ. ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅಗ್ರಸ್ಥಾನ ಪಡೆದರೆ, ಅಮೆರಿಕದ ಹಿಕಾರು ನಕಮುರ ದ್ವಿತೀಯ ಸ್ಥಾನದಲ್ಲಿದ್ದಾರೆ.

ವಿಶ್ವ ಚಾಂಪಿಯನ್ ಪಟ್ಟಕ್ಕೇರಿದ ನಂತರ ಮೊದಲ ಪ್ರಮುಖ ಟೂರ್ನಿಯಾದ ಟಾಟಾ ಸ್ಟೀಲ್ ಮಾಸ್ಟರ್ ಲೀಗ್‌ನಲ್ಲಿ ಆಡಿದ್ದ ಗುಕೇಶ್ ಕೊನೆಯ ಸುತ್ತಿನಲ್ಲಿ ಸೋಲನುಭವಿಸಿ ಟ್ರೋಫಿ ಗೆಲ್ಲುವಲ್ಲಿ ವಿಫಲರಾಗಿದ್ದರು.

ಇತ್ತೀಚೆಗೆ ನಡೆದಿದ್ದ ಫ್ರೀಸ್ಟೈಲ್ ಗ್ರ್ಯಾಂಡ್‌ಸ್ಲಾವ ಚೆಸ್ ಟೂರ್ನಿಯಲ್ಲಿಯೂ ಗುಕೇಶ್ ನಿರಾಸೆ ಮೂಡಿಸಿದ್ದರು. ಸತತ ಎರಡು ಸೋಲುಗಳಿಂದ ಪ್ರಶಸ್ತಿ ಸುತ್ತಿನಿಂದ ಹೊರಬಿದ್ದಿದ್ದರು.

ಕ್ವಾರ್ಟರ್ ಫೈನಲ್‌ನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನಾ ವಿರುದ್ಧ ಸತತ ಎರಡನೇ ಬಾರಿ ಸೋಲು ಕಂಡಿದ್ದರು. ಗುಕೇಶ್ ಕೇವಲ 17ನೇ ವಯಸ್ಸಿನಲ್ಲಿ ವಿಶ್ವದ ಅತ್ಯಂತ ಕಿರಿಯ ಚೆಸ್ ಗ್ರ್ಯಾಂಡ್ ಮಾಸ್ಟರ್ ಎನಿಸಿಕೊಂಡಿದ್ದರು.

ಡಿಕೆಶಿಗೆ ತಿರುಗೇಟು ನೀಡಿದ ಜಗ್ಗಣ್ಣ

ಚಿತ್ರರಂಗದವರ ನಟ್ಟು ಬೋಲ್ಟ್ ಟೈಟ್ ಮಾಡಬೇಕಾಗುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ನವರಸ ನಾಯಕ ಜಗ್ಗೇಶ್ ತಿರುಗೇಟು ನೀಡಿದ್ದಾರೆ. ಸಾವಿನ ಅಂಚಿನ ಚಿತ್ರರಂಗಕ್ಕೆ ಬೋಲ್ಟೇ ಇಲ್ಲ. ಕಲಾವಿದರು ಒಟ್ಟುಗೂಡಲೆಂದೇ ಡಾ.ರಾಜ್?ಕುಮಾರ್? ಅವರು ಕಲಾವಿದರ ಸಂಘ ಮಾಡಿದ್ದರು. ದೌರ್ಭಾಗ್ಯ ಅದು ಇಂದು ನಿಷ್ಕ್ರಿಯಗೊಂಡಿದೆ. ಕೂಡಲೇ ನಿಮ್ಮ ಅಧಿಕಾರಿಗಳಿಗೆ ಸೂಚಿಸಿ ಎಲೆಕ್ಷನ್ ಮಾಡಿಸಿ. ಕಲಾವಿದರು ಒಂದೆಡೆ ಕೂರುವಂತೆ ಮಾಡಿ. ಒಗ್ಗಟ್ಟು ಇರುವ ಮನೆ ಹಾಳಾದ ನಿದರ್ಶನವಿಲ್ಲ. ಚಿತ್ರರಂಗದ ಸಮಸ್ಯೆ ಅನೇಕ. ನಿಮ್ಮ ಗಮನಕ್ಕಾಗಿ ತಂದಿರುವೆ ಎಂದು ಜಗ್ಗೇಶ್ ಹೇಳಿದ್ದಾರೆ.

ಒಂದು ಕಮಿಟಿ ಮಾಡಿ, ಅದರಲ್ಲಿ ಹಿರಿಯ ನಟರು, ನಿರ್ಮಾಪಕರು, ನಿರ್ದೇಶಕರು, ಪತ್ರಕರ್ತರು ಇರುವಂತೆ ರಚಿಸಿ. ಈಗಿನ ಚಿತ್ರರಂಗದ ವಾಸ್ತವ ಅರಿತು ಕನ್ನಡ ಚಿತ್ರರಂಗ ಉಳಿಯುವಂತೆ ಬೆಳೆಯುವಂತೆ ಒಗ್ಗಟ್ಟಿನಿಂದ ಒಟ್ಟುಗೂಡುವಂತೆ ಚಿಂತನೆಯ ಚಾವಡಿ ರಚನೆಯಾಗಲಿ. ನಿಮಗೆ ದಿನ ಸಿಗುವ ಕೆಲವರು ಮಾತ್ರ ಚಿತ್ರರಂಗವಲ್ಲ. ಅನೇಕರಿದ್ದಾರೆ ಎಂದು ಜಗ್ಗೇಶ್ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿದ್ದಾರೆ.

ಚಿತ್ರರಂಗಕ್ಕೆ ಆಕಾಶ್ ಜಗನ್ನಾಥ್

ಟಾಲಿವುಡ್ ನಿರ್ದೇಶಕ ಪುರಿ ಜಗನ್ನಾಥ್ ಒಂದೇ ಭಾಷೆಗೆ ಸೀಮಿತವಾದ ನಿರ್ದೇಶಕರಲ್ಲ. ಭಾರತೀಯ ಚಿತ್ರರಂಗದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಇದೀಗ ಇದೇ ಪುರಿ ಜಗನ್ನಾಥ್ ಅವರ ಮಗ ಆಕಾಶ್ ಜಗನ್ನಾಥ್, ಅಪ್ಪನಂತೆ ಬಣ್ಣದ ಲೋಕದಲ್ಲಿ ಹೆಸರು ಮಾಡುವ ನಿಟ್ಟಿನಲ್ಲಿ ಮುಂದುವರಿಯುತ್ತಿದ್ದಾರೆ. ಬಾಲ ಕಲಾವಿದನಾಗಿ ನಟನಾ ಪ್ರಯಾಣ ಆರಂಭಿಸಿದ ಆಕಾಶ್, ನಾಯಕನಾಗಿಯೂ ಗುರುತಿಸಿಕೊಂಡಿದ್ದಾರೆ. ಇದೀಗ ತಲ್ವಾರ್ ಚಿತ್ರದಲ್ಲಿ ಆಕ್ಷನ್-ಪ್ಯಾಕ್ಡ್ ಅವತಾರದ ಮೂಲಕ ಅಭಿಮಾನಿಗಳನ್ನು ಮೋಡಿ ಮಾಡಲು ಸಜ್ಜಾಗಿದ್ದಾರೆ. ಇಎಲ್‌ವಿ ಗ್ರೂಪ್ ಆಫ್ ಕಂಪನಿಸ್ ಮತ್ತು ವಾರ್ನಿಕ್ ಸ್ಟುಡಿಯೋಸ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ. ಕಾಸಿ ಪರಸುರಾಮ್ ನಿರ್ದೇಶನ ಮಾಡುತ್ತಿದ್ದಾರೆ. ತಲ್ವಾರ್ ಪ್ಯಾನ್-ಇಂಡಿಯನ್ ಚಿತ್ರವಾಗಿ ನಿರ್ಮಾಣವಾಗುತ್ತಿದೆ. ಜೂನ್ ವೇಳೆಗೆ ಶೂಟಿಂಗ್ ಮುಗಿಸಿಕೊಂಡು, ಸೆಪ್ಟೆಂಬರ್-ಅಕ್ಟೋಬರ್ ವೇಳೆಗೆ ಆಡಿಯೋ ಬಿಡುಗಡೆ ಆಗಲಿದೆ. ಈ ವರ್ಷದ ಅಂತ್ಯಕ್ಕೆ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆ ಆಗಲಿದೆ. ತಲ್ವಾರ್ ಪಕ್ಕಾ ಆಕ್ಷನ್ ಸಿನಿಮಾ ಆಗಿದ್ದು, ಬೇರೆ ಬೇರೆ ಕಡೆಗಳಲ್ಲಿ ಸಿನಿಮಾ ಶೂಟಿಂಗ್ ನಡೆಯಲಿದೆ.

ಆಕಾಶ್ ಜಗನ್ನಾಥ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಪ್ರಕಾಶ್ ರಾಜ್, ಪುರಿ ಜಗನ್ನಾಥ್, ಅನಸೂಯಾ ಭಾರದ್ವಾಜ್, ಶೈನ್ ಟಾಮ್ ಚಾಕೊ, ಅಜಯ್ ಪ್ರಮುಖ ಪ್ರಮುಖ ಪಾತ್ರದಲ್ಲಿ ನಟಿಸಲಿದ್ದಾರೆ.

ಶಸ್ತ್ರ ಚಿಕಿತ್ಸೆ ಕುರಿತ ಮಿಸ್ಲೆ

ವೈದ್ಯಕೀಯ ಲೋಕದಲ್ಲಿ ಆಗಾಗ ಅಚ್ಚರಿಗಳು ನಡೆಯುತ್ತವೆ ಇಂತಹ ಘಟನೆಗಳನ್ನು ಮುಂದಿಟ್ಟುಕೊಂಡು ನಿರ್ದೇಶಕ ಎ.ಪರಮೇಶ್ ಮಿಸ್ಲೆ ಸಾಕ್ಷ್ಯಚಿತ್ರ ನಿರ್ದೇಶನ ಮಾಡಿದ್ದು ಮನಮುಟ್ಟುವ ರೀತಿ ಕಟ್ಟಿಕೊಟ್ಟಿದ್ದಾರೆ. ವೈದ್ಯಕೀಯ ಕ್ಷೇತ್ರಕ್ಕೆ ಸವಾಲಾಗಿದ್ದ ಕಾಯಿಲೆಯಿಂದ ಡಾಕ್ಟರ್ ಹೇಗೆ ರೋಗಿಯನ್ನು ಪಾರುಮಾಡಿದರು ಎಂಬುದನ್ನು ಮಿಸ್ಲೆಯಲ್ಲಿ

ಕಟ್ಟಿಕೊಡಲಾಗಿದೆ. ಆಂಧ್ರಪ್ರದೇಶದ ಅನಂತಪುರದ ರೋಗಿಯೊಬ್ಬರು ಕೋವಿಡ್ ಸೋಂಕು ತಗುಲಿ ಅದರಿಂದ ಪಾರಾಗುವುದರೊಳಗೆ ಇನ್ನೊಂದು ಕಾಯಿಲೆಗೆ ತುತ್ತಾಗಿದ್ದ ಘಟನೆಯು ಜೀವನ್ ಮರಣದ ಹೋರಾಟ ಮಾಡುವಂತೆ ಮಾಡಿತ್ತು.

ಈ ಸಮಸ್ಯೆಯಿಂದ ಚೇತರಿಸಿಕೊಳ್ಳಲು ಕುಟುಂಬವು ಎದುರಿಸಿದ ಸಮಸ್ಯೆಗಳು ರೋಗಿಯ ಪತ್ನಿ ಮತ್ತು ಸಹೋದರ ಬೆನ್ನಿಗೆ ನಿಂತ ಮನ ಮಿಡಿಯುವ ನೈಜ ಘಟನೆಯನ್ನು ನಲವತ್ತೆಂಟು ನಿಮಿಷಗಳ ಅವಧಿಯಲ್ಲಿ ಚಿತ್ರೀಕರಿಸಿ ತೋರಿಸಲಾಗಿದೆ. ಮೂಳೆ ರೋಗ ತಜ್ಞರಾದ ಡಾ. ಗೋಪಾಲ ಕೃಷ್ಣ ಅವರು ವೃತ್ತಿಯಲ್ಲಿ ರಿಸ್ಕ್ ತೆಗೆದುಕೊಂಡು ಶಸ್ತ್ರ ಚಿಕಿತ್ಸೆ ಮಾಡುವ ಮೂಲಕ ಆಂಧ್ರಪ್ರದೇಶದ ರೋಗಿಗೆ ಪುನರ್ ಜನ್ಮ ನೀಡಿದ ಕಥೆಯನ್ನು ಮಿಸ್ಲೆ ಸಾಕ್ಷ್ಯಚಿತ್ರದ ಮೂಲಕ ಚಿತ್ರೀಕರಿಸಿದೆ.

ಸ್ವತಃ ಡಾಕ್ಟರ್ ಆಗಿರುವ ಸುಜಾತಾ

ವೈದ್ಯಕೀಯ ಕ್ಷೇತ್ರದಲ್ಲಿ ತಮ್ಮ ಪತಿಯ ಸಾಧನೆಯನ್ನು ಸಮಾಜಕ್ಕೆ ಸಾಮಾಜಿಕ ಜಾಗೃತಿಯನ್ನು ಮೂಡಿಸಲು, ಡಾ.ಸುಜಾತಕೃಷ್ಣ ಪ್ರೊಡಕ್ಷನ್ ಹೌಸ್ ಬ್ಯಾನರ್ ನಲ್ಲಿ ಈ ಸಾಕ್ಷ್ಯಚಿತ್ರ ನಿರ್ಮಾಣವಾಗಿದೆ. ಡಾಕ್ಯುಮೆಂಟರಿ ಚಿತ್ರದಲ್ಲಿ ಮಹೇಶ್ ರಾಜ್, ಶ್ರೀಪರಿಣಿತಿ ಮತ್ತು ನಾಗರಾಜ್ ಶೆಟ್ಟಿ ಅಭಿನಯಿಸಿದ್ದಾರೆ.

ವೈದ್ಯೋ ನಾರಾಯಣೊ ಹರಿ ಎಂಬ ಮಾತು ಸಾವಿರ ಪಟ್ಟು ನಿಜ. ಏಕೆಂದರೆ ನಾವು ಯಾವುದಾದರೂ ಆರೋಗ್ಯದ ಸಮಸ್ಯೆಗೆ ಸಿಲುಕಿದಾಗ ನಮ್ಮನ್ನು ಆಪದ್ಬಾಂಧವನಂತೆ ಕಾಪಾಡುವುದು ವೈದ್ಯರು ಮಾತ್ರ. ನಮ್ಮನ್ನೇ ನಂಬಿಕೊಂಡಿರುವ ಅನೇಕ ಜೀವಗಳೊಂದಿಗೆ ನಾವು ಸುಖವಾಗಿರಲು ಇವರೆ ಪ್ರಮುಖರು. ಇಂತಹ ವೈದ್ಯರ ಕುರಿತು ಎಷ್ಟು ಹೇಳಿದರು ಕಡಿಮೆ. ನಮ್ಮ ಕರ್ನಾಟಕದ ವೈದ್ಯರಾದ ಡಾ.ಗೋಪಾಲಕೃಷ್ಣ ಈವರೆಗೂ ಯಾರು ಮಾಡದ ಸಾಧನೆ ಮಾಡಿ ಇಡೀ ವೈದ್ಯಕೀಯ ರಂಗಕ್ಕೆ ಮಾದರಿಯಾಗಿದ್ದಾರೆ.

ಅನಂತಪುರದ ವ್ಯಕ್ತಿಯೊಬ್ಬರಿಗೆ ಕೋವಿಡ್ ನಂತರ ಮೂರು ಜಾಯಿಂಟ್ ಗಳಲ್ಲಿ ಸಮಸ್ಯೆ ಕಾಣಿಸಿಕೊಂಡು ನಡೆಯದ ಪರಿಸ್ಥಿತಿ ನಿರ್ಮಾಣವಾಗಿತ್ತು. ಅವರು ಡಾ ಗೋಪಾಲಕೃಷ್ಣ ಅವರನ್ನು ಸಂಪರ್ಕಿಸಿದಾಗ ಮೂರು ಜಾಯಿಂಟ್ ಗಳನ್ನು ಆಪರೇಷನ್ ಮಾಡಿಯೇ ಸರಿ ಮಾಡಬೇಕಿತ್ತು. ಯಾರು ತೆಗೆದುಕೊಳ್ಳದ ರಿಸ್ಕ್ ತೆಗೆದುಕೊಂಡ ಗೋಪಾಲಕೃಷ್ಣ ಅವರು ಒಂದೇ ದಿನ ಸತತ ಎಂಟು ಗಂಟೆಗಳ ಕಾಲ ನುರಿತ ತಂಡದ ಸಹಕಾರದೊಂದಿಗೆ ಮೂರು ಆಪರೇಷನ್ ಗಳನ್ನು ಮಾಡಿದರು. ರೋಗಿ ಈಗ ಕುಟುಂಬದವರ ಜೊತೆಗೆ ಆರೋಗ್ಯವಾಗಿದ್ದಾರೆ. ಎಂದು ನಿರ್ದೇಶಕ ಎ.ಪರಮೇಶ್ ಹೇಳಿದರು.

ಕೂಲಿಯಲ್ಲಿ ಪೂಜಾ ಹೆಗ್ಡೆ



ವೆಟ್ಟೈಯನ್ ಚಿತ್ರದ ಬಳಿಕ ರಜನಿಕಾಂತ್, ಕೂಲಿ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಲೋಕೇಶ್ ಕನಕ ರಾಜ್ ನಿರ್ದೇಶನದ ಈ ಚಿತ್ರ ಅದ್ದೂರಿಯಾಗಿ ಮೂಡಿಬರುತ್ತಿದೆ. ಜೈಲರ್ ಸಿನಿಮಾದಲ್ಲಿ ವಿಶೇಷ ಸಾಂಗ್ ಒಂದಿತ್ತು. ಈ ಹಾಡಿನಲ್ಲಿ ತಮನ್ನಾ ಬಾಟಿಯಾ ಭರ್ಜರಿಯಾಗಿ ಹೆಜ್ಜೆ ಹಾಕಿದ್ದರು. ಈಗ ಕೂಲಿ ಚಿತ್ರದಲ್ಲಿಯೂ ಐಟಂ ಸಾಂಗ್ ಇದೆ. ಈ ಹಾಡಿನಲ್ಲಿ ಪೂಜಾ ಹೆಗ್ಡೆ ಹೆಜ್ಜೆ ಹಾಕಲಿದ್ದಾರೆ. ಈ ಹಾಡಿಗಾಗಿ ಬರೋಬ್ಬರಿ ಐದು ಕೋಟಿ ಸಂಭಾವನೆ ಪಡೆಯಲಿದ್ದಾರಂತೆ. ಕೂಲಿ ಸಾಹಸ ಪ್ರಧಾನ ಕಥೆಯ ಜತೆಗೆ ಸೆಂಟಿಮೆಂಟ್ ಸ್ಟೋರಿಯನ್ನು ಒಳಗೊಂಡಿದೆ. ಅದನ್ನು ಅದ್ದೂರಿಯಾಗಿ ಕಮರ್ಷಿಯಲ್ ಚೌಕಟ್ಟಿನಲ್ಲಿ ಕಟ್ಟಿಕೊಡಲಾಗಿದೆ. ರಿಯಲ್ ಸ್ಟಾರ್ ಉಪೇಂದ್ರ ಕೂಡ ಸಿನಿಮಾದಲ್ಲಿ ನಟಿಸಿದ್ದು, ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕೂಲಿ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದ್ದು, ಎಲ್ಲವೂ ಅಂದುಕೊಂಡಂತೆ ಆದರೆ ಈ ವರ್ಷಾಂತ್ಯದಲ್ಲಿ ಅಥವಾ ಸಂಕ್ರಾಂತಿಯ ಸಮಯಕ್ಕೆ ಚಿತ್ರ ತೆರೆಗೆ ಬರಲಿದೆ.